
ಭಾನುವಾರ, ಆಗಸ್ಟ್ 20, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ಕಿಯಾರಾ ಅಡ್ವಾಣಿ ಪಾಲ್ಗೊಂಡಿದ್ದರು



ಕಾಂಗ್ರೆಸ್ ಪಕ್ಷ ಸಮುದ್ರ ಇದ್ದಂತೆ, ಏನು ಬೇಕೋ ಅದು ಕಾಲ, ಕಾಲಕ್ಕೆ ನಡೆಯುತ್ತದೆ: ಡಿ.ಕೆ. ಶಿವಕುಮಾರ್

'ಬಿಜೆಪಿ ಮಾಡಿದ್ರೆ ಸರಿ, ನಾವು ಮಾಡಿದ್ರೆ ತಪ್ಪೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯವರು ಮಾಡಿದರೆ ಸರಿ, ನಾವು ಮಾಡಿದರೆ ತಪ್ಪೇ? 'ತಾನು ಕಳ್ಳ, ಪರರನ್ನು ನಂಬ' ಎನ್ನುವಂಥ ಸ್ಥಿತಿ ಆ ಪಕ್ಷದ್ದು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಕರ್ನಾಟಕವೂ ಸೇರಿದಂತೆ ಮಧ್ಯಪ್ರದೇಶ, ಮಹಾರಾಷ್ಟ್ರ ಇಲ್ಲೆಲ್ಲಾ ಬಿಜೆಪಿ ಏನು ಮಾಡಿತ್ತು? ಆಯಾಯ ಪರಿಸ್ಥಿತಿ ಏನು ಬೇಕೋ ಅದು ಕಾಲ, ಕಾಲಕ್ಕೆ ನಡೆಯುತ್ತದೆ. ಕಾಂಗ್ರೆಸ್ ಪಕ್ಷ ಸಮುದ್ರ ಇದ್ದಂತೆ' ಎಂದು ತಿಳಿಸಿದರು.

'ಕಾಂಗ್ರೆಸ್ ತನ್ನ ತಪ್ಪುಗಳನ್ನು ಮುಚ್ಚಿ ಹಾಕಲು ಆಪರೇಷನ್ ಹಸ್ತ ನಡೆಸುತ್ತಿದೆ' ಎನ್ನುವ ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಈ ದೇಶಕ್ಕೆ, ರಾಜ್ಯಕ್ಕೆ ಉತ್ತಮ ಸೇವೆ ಸಲ್ಲಿಸಬೇಕು ಎಂಬುದು ಯಾರ್‍ಯಾರಿಗೆ ಇದೆಯೋ ಅಂತಹ ನಾಯಕರು ವೈಯಕ್ತಿಕ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅದನ್ನು ನಿರ್ಬಂಧಿಸಲು ಆಗುತ್ತದೆಯೇ? ವಿರೋಧ ಪಕ್ಷಗಳು ಏನು ಬೇಕಾದರೂ ಆರೋಪ ಮಾಡಲಿ ನಮಗೆ ತೊಂದರೆ ಇಲ್ಲ' ಎಂದು ಅವರು ಹೇಳಿದರು.

ಬಿಜೆಪಿ ಇದೇ 23ರಂದು ಪ್ರತಿಭಟನೆ ಹಮ್ಮಿಕೊಂಡಿರುವ ಬಗ್ಗೆ ಕೇಳಿದಾಗ, 'ಅವರು ಮೊದಲು ತಮ್ಮ ನಾಯಕರು ಯಾರು ಎಂದು ತೀರ್ಮಾನಿಸಲಿ. ಬಳಿಕ ಹೋರಾಟ ಮಾಡಲಿ' ಎಂದು ವ್ಯಂಗ್ಯವಾಡಿದರು.

'ಹಸ್ತಕ್ಕೆ ಆಪರೇಷನ್ ಮಾಡುವುದು ಗೊತ್ತು'

ರಾಜ್ಯ ಸರ್ಕಾರ ಅತಿಯಾಗಿ ವರ್ತಿಸಿದರೆ ಹಸ್ತಕ್ಕೆ ಆಪರೇಷನ್ ಮಾಡುವುದು ಗೊತ್ತಿದೆ. ಅತಿ ಮಾಡಲು ಹೋದರೆ ಪರಿಸ್ಥಿತಿ ಕೆಟ್ಟದ್ದಾಗಲಿದೆ ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಹೇಳಿದರು.

ಶನಿವಾರ ಮಾತನಾಡಿದ ಅವರು, 'ನಾವು ಹಸ್ತಕ್ಕೆ ಆಪರೇಷನ್ ಮಾಡಿದರೆ ಪರಿಣಾಮ ಗಂಭೀರವಾಗಿರುತ್ತದೆ. 2018ರ ಚುನಾವಣೆಯಲ್ಲಿ ಬಿಜೆಪಿ 104 ಕ್ಷೇತ್ರಗಳಲ್ಲಿ ಗೆದ್ದಿತ್ತು, ಕಾಂಗ್ರೆಸ್–ಜೆಡಿಎಸ್ ಸರ್ಕಾರ ಅನಾಯಾಸವಾಗಿ ಮೂರೇ ತಿಂಗಳಿಗೆ ಬಿದ್ದುಹೋಗಿ ಬಿಡಿತ್ತು. ಲೋಕಸಭಾ ಚುನಾವಣೆಯಲ್ಲಿ ಎರಡು ಪಕ್ಷಗಳು ಹೊಂದಾಣಿಕೆ ಮಾಡಿಕೊಂಡರೂ ಹೀನಾಯ ಸೋಲು ಕಂಡಿದ್ದವು. ರಾಜಕೀಯ ಅನಿಶ್ಚಿತತೆ ಎದುರಾದಾಗ ಶಾಸಕರಿಗೆ ಬಿಜೆಪಿಯೇ ಪರ್ಯಾಯ ಎನಿಸಿತ್ತು' ಎಂದು 2019ರ 'ಆಪರೇಷನ್ ಕಮಲ' ಸಮರ್ಥಿಸಿಕೊಂಡರು.

'ಈಗ ಕಾಂಗ್ರೆಸ್‌ಗೆ ಪೂರ್ಣ ಬಹುಮತ ಇದೆ. ಒಳ್ಳೆಯ ಆಡಳಿತ ನಡೆಸುವ ಗುರಿ ಇಟ್ಟುಕೊಳ್ಳಬೇಕು. ನಮಗೆ ಪಕ್ಷ ಕಟ್ಟುವುದೂ ಗೊತ್ತು. ಅದನ್ನು ಉಳಿಸಿಕೊಳ್ಳುವುದೂ ಗೊತ್ತು. ಅಡ್ಡ ಬಂದವರಿಗೆ ಹೇಗೆ ಉತ್ತರ ಕೊಡಬೇಕು ಎಂಬೂದೂ ಗೊತ್ತಿದೆ' ಎಂದು ಹೇಳಿದರು.

ಘರ್ ವಾಪ್ಸಿಯಾದರೆ ಅರ್ಧ ಬಿಜೆಪಿ, ಜೆಡಿಎಸ್ ಖಾಲಿ: ಪ್ರಿಯಾಂಕ್ ಖರ್ಗೆ

'ನಾವು 'ಘರ್ ವಾಪ್ಸಿ' ಎಂದು ಮಾಡಿದರೆ ಅರ್ಧ ಬಿಜೆಪಿ, ಅರ್ಧ ಜೆಡಿಎಸ್ ಖಾಲಿ ಆಗಲಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶನಿವಾರ ಮಾತನಾಡಿದ ಅವರು, 'ನಾವು ಆಪರೇಷನ್ ಹಸ್ತ ಮಾಡಲು ಹೊರಟಿಲ್ಲ. ಬಿಜೆಪಿ, ಜೆಡಿಎಸ್ ಒಡೆಯಲು ಹೋಗುತ್ತಿಲ್ಲ. ಆದರೆ, ನಮ್ಮ ಪಕ್ಷದ (ಕಾಂಗ್ರೆಸ್) ತತ್ವ ಸಿದ್ಧಾಂತ ಒಪ್ಪಿ, ಷರತ್ತು ಇಲ್ಲದೆ ಯಾರು ಬಂದರೂ ಸ್ವಾಗತ. ಸಚಿವ ಚಲುವರಾಯಸ್ವಾಮಿ ಜೊತೆ ಕೆಲವರು ಸಂಪರ್ಕದಲ್ಲಿ ಇರಬಹುದು. ಕಲ್ಯಾಣ ಕರ್ನಾಟಕ ಭಾಗದ ಕೆಲವರು ನನ್ನ ಜೊತೆ ಸಂಪರ್ಕದಲ್ಲಿದ್ದಾರೆ' ಎಂದರು.

ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಶಾಸಕರ ಸಭೆ ನಡೆಸಿರುವ ಕುರಿತು ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಬಿಜೆಪಿಯವರು ಯಡಿಯೂರಪ್ಪ ಅವರನ್ನು ಹೇಗೆ ನಡೆಸಿಕೊಂಡರೆಂದು ಎಲ್ಲರಿಗೂ ಗೊತ್ತಿದೆ. ಈಗ ಅಲ್ಲಿ (ಬಿಜೆಪಿ) ನಾಯಕ ಆಗಲು ಯಾರೂ ಸಿದ್ಧರಿಲ್ಲ. ಯಡಿಯೂರಪ್ಪ ಅವರ ಮಾತು ಈಗ ಬಿಜೆಪಿಯಲ್ಲಿ ನಡೆಯುತ್ತದೆಯೇ' ಎಂದರು.

'ಪಕ್ಷ ಬಿಟ್ಟುವರನ್ನು ಕರೆತರಲು ಯತ್ನ'

'ದೇಶ ಮತ್ತು ವಿಶ್ವದ ಹಿತಕ್ಕಾಗಿ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕಿದೆ. ಆದ್ದರಿಂದ ಬಿಜೆಪಿಯಿಂದ ಹೋದವರನ್ನು ಮತ್ತೆ ಕರೆತರುವ ಪ್ರಯತ್ನ ನಡೆದಿದೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

'ಜಗದೀಶ ಶೆಟ್ಟರ ಮತ್ತು ಲಕ್ಷ್ಮಣ ಸವದಿ ಮಾತ್ರವಲ್ಲ, ಯಾರೆಲ್ಲಾ ಪಕ್ಷ ಬಿಟ್ಟಿದ್ದಾರೋ ಎಲ್ಲರನ್ನೂ ಮರಳಿ ಕರೆ ತರುವ ಪ್ರಯತ್ನ ನಡೆಯುತ್ತಿದೆ. ಯಾರೊಂದಿಗೂ ಇನ್ನೂ ಮಾತುಕತೆ ನಡೆದಿಲ್ಲ' ಎಂದು ಸ್ಪಷ್ಟಪಡಿಸಿದರು.

'ನರೇಂದ್ರ ಮೋದಿ ರೀತಿಯ ನಾಯಕ ಈ ದೇಶಕ್ಕೆ ಮತ್ತೊಮ್ಮೆ ಸಿಗುವುದಿಲ್ಲ. ಪ್ರಪಂಚಕ್ಕೆ ಮೋದಿ ಬೇಕಾಗಿದೆ, ಮುಂದಿನ ಪೀಳಿಗೆಗೆ ದೇಶ ಉಳಿಸುವ ಸಲುವಾಗಿ ಮೋದಿ ಬೇಕಾಗಿದೆ' ಎಂದು ಅವರು ಹೇಳಿದರು.

ಬಿಜೆಪಿ ಬಿಡುವ ಅನಿವಾರ್ಯ ಸೃಷ್ಟಿ: ಶಿವರಾಮ ಹೆಬ್ಬಾರ್



ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ್ ಅವರು ಶಿರಸಿಯಲ್ಲಿ ಬಿಜೆಪಿ ಮುಖಂಡ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಭೇಟಿಯಾದರು

ಶಿರಸಿ (ಉತ್ತರ ಕನ್ನಡ ಜಿಲ್ಲೆ): ಯಲ್ಲಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ್ ಅವರು ಮುಂದಿನ ರಾಜಕೀಯ ನಡೆಯನ್ನು ನಿರ್ಧರಿಸುವ ಬಗ್ಗೆ ಶನಿವಾರ ಬನವಾಸಿ ಹೋಬಳಿಯ ಬಿಜೆಪಿ ಬೆಂಬಲಿತ ಗ್ರಾಮ ಪಂಚಾಯಿತಿಗಳ ಜನಪ್ರತಿನಿಧಿಗಳ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ಬಿಜೆಪಿಯ ಪ್ರಮುಖ ಪದಾಧಿಕಾರಿಗಳು ವಿಧಾನಸಭೆ ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಬಹಿರಂಗವಾಗಿ ಪಕ್ಷ ವಿರೋಧಿ ಕೆಲಸ ಮಾಡಿದರು. ಅವರ ವಿರುದ್ಧ ಪಕ್ಷದ ಶಿಸ್ತು ಸಮಿತಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಪಕ್ಷದ ವಿರುದ್ಧ ಕೆಲಸ ಮಾಡಿದವರೇ ಪಕ್ಷದ ವೇದಿಕೆ ಮೇಲೆ ಬಹಿರಂಗ ಭಾಷಣ ಮಾಡುತ್ತಿದ್ದಾರೆ' ಎಂದರು.

'ಪಕ್ಷ ವಿರೋಧಿಗಳ ವಿರುದ್ಧ ಶಿಸ್ತು ಸಮಿತಿ ಕ್ರಮ ಕೈಗೊಳ್ಳದಿದ್ದರೆ ಪಕ್ಷ ಸಂಘಟಿಸುವುದು ಹೇಗೆ? ಬಿಜೆಪಿ ಮತ್ತೊಮ್ಮೆ ತೊರೆಯುವ ಅನಿವಾರ್ಯತೆ ಸೃಷ್ಟಿಯಾಗುತ್ತಿದೆ' ಎಂದು ಬಹಿರಂಗವಾಗಿ ಹೇಳಿದರು.

ನಂತರ ಶಿರಸಿಯಲ್ಲಿ ಕಚೇರಿಯಲ್ಲಿ ಬಿಜೆಪಿ ಮುಖಂಡ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಭೇಟಿಯಾಗಿ, ಒಂದು ಗಂಟೆ ಮಾತುಕತೆ ನಡೆಸಿದರು. ಬಳಿಕ ಪ್ರತಿಕ್ರಿಯಿಸಿದ ಕಾಗೇರಿ, 'ಪಕ್ಷನಿಷ್ಠರಿಗೆ ದ್ರೋಹ ಮಾಡಿದವರಿಗೆ ಶಿಸ್ತು ಸಮಿತಿ ಕ್ರಮ ಕೈಗೊಳ್ಳದ ಬಗ್ಗೆ ಬೇಸರವಿದೆ. ಈ ವಿಷಯದಲ್ಲಿ ಹೆಬ್ಬಾರ್ ಹಾಗೂ ನಾನು ಸಮಾನ ಮನಸ್ಕರು' ಎಂದರು.

'ಬಿಜೆಪಿ ತೊರೆದು ಕಾಂಗ್ರೆಸ್ ಸೇರಲು ಬಯಸಿರುವುದಾಗಿ ಹೆಬ್ಬಾರ್ ತಮ್ಮ ಆಪ್ತರಿಗೆ ತಿಳಿಸಿದ್ದಾರೆ. ಅಲ್ಲದೇ, ಭಾನುವಾರವೂ ಗ್ರಾಮ ಪಂಚಾಯಿತಿ ಪ್ರಮುಖ ಆಪ್ತರ ಸಭೆ ಕರೆದಿದ್ದಾರೆ. ಇಲ್ಲಿ ಬಿಜೆಪಿ ತೊರೆಯುವ ಅಧಿಕೃತ ಘೋಷಣೆಯಗುವ ಸಾಧ್ಯತೆ ಇದೆ' ಎಂದು ಹೆಬ್ಬಾರ ಅವರ ಆಪ್ತರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಅಧಿಕಾರ–ಹಣಕ್ಕೆ ಹೋದವರು, ಮರಳುವುದು ಸರಿಯಲ್ಲ'

ಶಿರಸಿ: 'ಅಧಿಕಾರ, ಹಣಕ್ಕಾಗಿ ಓಡಿಹೋದವರು ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ವಾಪಸ್ ಓಡಿ ಬರುವುದು ಯಾವ ರೀತಿಯ ಭಂಡ ರಾಜಕೀಯ' ಎಂದು ಶಾಸಕ ಭೀಮಣ್ಣ ನಾಯ್ಕ ಟೀಕಿಸಿದರು.



ಭೀಮಣ್ಣ ನಾಯ್ಕ

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಣ, ಅಧಿಕಾರಕ್ಕಾಗಿ ಪಕ್ಷಾಂತರಿಗಳಾದವರು ಅಲ್ಲಿಂದ ಮತ್ತೆ ಅಧಿಕಾರ, ಹಣದ ಉದ್ದೇಶಕ್ಕಾಗಿ ಕಾಂಗ್ರೆಸ್‌ಗೆ ಬರುವುದರಲ್ಲಿ ಯಾವುದೇ ಅರ್ಥವಿಲ್ಲ' ಎಂದರು.

'ನಾನು ಯಲ್ಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಶಿವರಾಮ ಹೆಬ್ಬಾರ ವಿರುದ್ಧ ಚುನಾವಣೆಗೆ ನಿಂತಿದ್ದೆ. ಆಗ ಅವರು ಯಾರ ಬೆಂಬಲ ಪಡೆದರು, ಯಾರ ಸಹಕಾರದಿಂದ ಗೆದ್ದು ಬಂದರು ಎಂಬುದನ್ನು ವಿಶ್ಲೇಷಿಸಬೇಕಿದೆ. ಅವರು ಬಿಜೆಪಿಯಿಂದ ಹೊರನಡೆಯುವಾಗ ಅಲ್ಲಿನ ಮತದಾರರಿಗೆ, ಪಕ್ಷದ ಕಾರ್ಯಕರ್ತರಿಗೆ ವಲಸೆಗೆ ನೈಜ ಕಾರಣ ಹೇಳಬೇಕು. ಅವರು ಕಾಂಗ್ರೆಸ್‌ಗೆ ವಾಪಸ್ ಬರುವುದಕ್ಕೆ ನನ್ನ ವಿರೋಧವಿದೆ' ಎಂದರು.

'ಬನವಾಸಿ ಏತ ನೀರಾವರಿ ಯಾವ ಹಂತದಲ್ಲಿದೆ? ಏಕೆ ಪೂರ್ಣವಾಗಿಲ್ಲ? ಸಚಿವರಾಗಿ ಏಕೆ ಮುಗಿಸಲಾಗಿಲ್ಲ? ಕ್ಷೇತ್ರದ ಅಭಿವೃದ್ಧಿಗೆ ಏಕೆ ಹಿನ್ನಡೆಯಾಗಿದೆ? ಎಂಬೆಲ್ಲ ವಿಷಯಗಳ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಕೂಲಂಕಷವಾಗಿ ವಿಚಾರಿಸಿ ಮುಂದಿನ ಹೆಜ್ಜೆಯಿಡುತ್ತದೆ ಎಂಬ ವಿಶ್ವಾಸವಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

'ಪರಮೇಶ್ವರ ಹೇಳಿಕೆ ಬಾಲಿಶ'

ಮೈಸೂರು: 'ಸೌಜನ್ಯಾ ಕೊಲೆ ಪ್ರಕರಣ ಮುಗಿದುಹೋದ ಅಧ್ಯಾಯವೆಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಬಾಲಿಶ ಹೇಳಿಕೆ ನೀಡಿದ್ದಾರೆ' ಎಂದು ಒಡನಾಡಿ ಸೇವಾ ಸಂಸ್ಥೆಯ ಸಂಚಾಲಕ ಸ್ಟ್ಯಾನ್ಲಿ ಕಿಡಿಕಾರಿದರು.

'ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ' ಶನಿವಾರ ಇಲ್ಲಿ ಆಯೋಜಿಸಿದ್ದ 'ಸೌಜನ್ಯಾ ಪ್ರಕರಣ– ಮುಂದಿನ ಹೆಜ್ಜೆಗಳು' ಸಂವಾದದಲ್ಲಿ ಮಾತನಾಡಿದ ಅವರು, 'ಜನರು ಮತ ನೀಡಿರುವುದು ಸೌಜನ್ಯಾಳಂಥ ವರಿಗೆ ನ್ಯಾಯ ಕೊಡಿಸಲು. ಪ್ರಕರಣದ ಬಗ್ಗೆ ಗೊತ್ತಿಲ್ಲದಿದ್ದರೆ ತಜ್ಞರನ್ನು ಕೇಳಿ ತಿಳಿದುಕೊಳ್ಳಲಿ' ಎಂದು ಹೇಳಿದರು.



'ಪ್ರಕರಣದಲ್ಲಿ ನ್ಯಾಯಕ್ಕೆ ಆಗ್ರಹಿಸಿ ರಾಜ್ಯವ್ಯಾಪಿ ಚಳವಳಿ ನಡೆಯುತ್ತಿದೆ. ತಜ್ಞರೊಂದಿಗೆ ಚರ್ಚಿಸಿ ಕ್ರಮ ವಹಿಸುವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದು ಹೋರಾಟಗಾರರಲ್ಲಿ ಆಶಾಭಾವನೆ ಮೂಡಿಸಿದೆ. ಮಾನವ ಹಕ್ಕು ಆಯೋಗಕ್ಕೆ ಒಡನಾಡಿ ಪತ್ರ ಬರೆದಿದ್ದು, ಅದೂ ಪ್ರಕರಣ ದಾಖಲಿಸಿಕೊಂಡಿದೆ. ಗೃಹ ಸಚಿವರಿಗೆ ಈ ಮಾಹಿತಿ ಇಲ್ಲವೇ? ಅಡ್ವೊಕೇಟ್ ಜನರಲ್ ಅವರಲ್ಲಿ ಕೇಳಿ ತಿಳಿದುಕೊಳ್ಳಲಿ, ಇಲ್ಲದಿದ್ದರೆ ಸುಮ್ಮನಾದರೂ ಇರಲಿ' ಎಂದರು.

'ಲೋಕಸಭಾ ಚುನಾವಣೆ ಇರುವುದರಿಂದ ಮತ ಬ್ಯಾಂಕ್ ಕಳೆದುಕೊಳ್ಳುವ ಭಯ ಇದ್ದಂತಿದೆ. ಹೀಗಾಗಿ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಆದರೆ, ಸೌಜನ್ಯಾ ಪರ ಜನರು ನ್ಯಾಯಕ್ಕಾಗಿ ಹೋರಾಡುತ್ತಿದ್ದಾರೆ. ಜನರ ಭಾವನೆ ಪರಿಗಣಿಸಿ ಮರು ತನಿಖೆ ನಡೆಸಬೇಕು' ಎಂದು ವರುಸರ್ಕಾರವನ್ನು ಒತ್ತಾಯಿಸಿದರು.

ಅಂಗನವಾಡಿಗೆ ಅನುದಾನ

ಬೆಳಗಾವಿ: 'ರಾಜ್ಯದ 204 ಅಂಗನವಾಡಿ ಕೇಂದ್ರಗಳ ಬಾಡಿಗೆ ಪಾವತಿಸಲು ಮತ್ತು ಇತರೆ ಆಡಳಿತ ವೆಚ್ಚ ಭರಿಸಲು ₹20 ಕೋಟಿ ಬಿಡುಗಡೆ ಮಾಡಲಾಗಿದ್ದು, ಸಮಸ್ಯೆ ಬಗೆಹರಿಸಲಾಗಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ಅರ್ಚನಾ ತಿಳಿಸಿದ್ದಾರೆ.

'ಅಂಗನವಾಡಿ ಬಾಡಿಗೆ ಕಟ್ಟಲು ಮಾಂಗಲ್ಯ ಅಡ' ಶೀರ್ಷಿಕೆಯಡಿ ಆಗಸ್ಟ್ 11ರ 'ಪ್ರಜಾವಾಣಿ' ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಗೊಂಡ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, 'ಬೆಳಗಾವಿ ಜಿಲ್ಲೆಯ ಅಂಗನವಾಡಿ ಕೇಂದ್ರವೊಂದರ ಬಾಡಿಗೆ ಕಟ್ಟಲು ಕಾರ್ಯಕರ್ತೆ ಮಾಂಗಲ್ಯ ಅಡ ಇಟ್ಟಿದ್ದರು. ₹ 22 ಸಾವಿರ ಬಾಡಿಗೆ ನೀಡಿ ಅವರ ಮಾಂಗಲ್ಯ ಬಿಡುಗಡೆ ಮಾಡಿಸಿಕೊಡಲಾಗಿದೆ' ಎಂದು ತಿಳಿಸಿದ್ದಾರೆ.

'ಪೂರಕ ಪೌಷ್ಟಿಕ ಆಹಾರ ಪೂರೈಕೆ ಕಾರ್ಯಕ್ರಮದಡಿ ಕ್ಷೀರಭಾಗ್ಯ, ಸೃಷ್ಟಿ ಮತ್ತು ಮಾತೃಪೂರ್ಣ ಯೋಜನೆಗಳ ಅನುಷ್ಠಾನಕ್ಕೆ ಏಪ್ರಿಲ್ ಹಾಗೂ ಜುಲೈ ತಿಂಗಳಲ್ಲಿ ₹277 ಕೋಟಿ ಅನುದಾನ ಆಯಾ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಮೊತ್ತದಲ್ಲೇ ಕೋಳಿಮೊಟ್ಟೆ ಖರೀದಿಯ ವೆಚ್ಚ ಭರಿಸಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ಕ್ರಿಸ್ಪಿ ಫ್ರೈಡ್: ₹ 234 ಕೋಟಿ ಠೇವಣಿಗೆ ಸಂಪುಟ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿಗಳಿಗೆ ಪೌಷ್ಟಿಕ ಆಹಾರ ಪೂರೈಕೆಗೆ ಸಂಬಂಧಿಸಿದ ಒಪ್ಪಂದಗಳನ್ನು ರದ್ದು ಮಾಡಿರುವುದಕ್ಕೆ ಕ್ರಿಸ್ಪಿ ಫ್ರೈಡ್ ಗ್ರಾಂ ಇಂಡಸ್ಟ್ರೀಸ್‌ಗೆ ಸರ್ಕಾರವು ₹ 234 ಕೋಟಿ ಮೊತ್ತ ಪಾವತಿಸಬೇಕೆಂಬ ಮಧ್ಯಸ್ಥಿಕೆ ನ್ಯಾಯಾಲಯದ ತೀರ್ಮಾನದ ವಿರುದ್ಧ ಸಲ್ಲಿರುವ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಅಂಗೀಕರಿಸುವುದಕ್ಕೆ ಪೂರಕವಾಗಿ ಅಷ್ಟೇ ಮೊತ್ತದ ಠೇವಣಿ ಇರಿಸುವ ನಿರ್ಧಾರವನ್ನು ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಸಂಪುಟ ಸಭೆ ಬಳಿಕ ವಿವರ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, 'ಕ್ರಿಸ್ಪಿ ಫ್ರೈಡ್ ಗ್ರಾಂ ಕಂಪನಿ ಜತೆಗಿನ ಎಲ್ಲ ಒಪ್ಪಂದಗಳನ್ನು 2012ರ ಮೇ 31ರಿಂದ ರದ್ದುಗೊಳಿಸಲಾಗಿತ್ತು. ಕಂಪನಿಯು ಮಧ್ಯಸ್ಥಿಕೆ ನ್ಯಾಯಾಲಯದಲ್ಲಿ ಪ್ರಶ್ನಿಸಿತ್ತು. ₹ 171.47 ಕೋಟಿ ಮೊತ್ತವನ್ನು ಶೇಕಡ 12 ರಿಂದ 14ರಷ್ಟು ಬಡ್ಡಿಯೊಂದಿಗೆ ಪಾವತಿಸುವಂತೆ ಮಧ್ಯಸ್ಥಿಕೆ ನ್ಯಾಯಾಲಯ ಆದೇಶಿಸಿತ್ತು. ಈ ರೀತಿ ಒಟ್ಟು ₹ 324 ಕೋಟಿ ಪಾವತಿಸಬೇಕಿತ್ತು' ಎಂದರು.

ಮಧ್ಯಸ್ಥಿಕೆ ನ್ಯಾಯಾಲಯದ ಐ ತೀರ್ಪಿನ ವಿರುದ್ಧ ಸಲ್ಲಿಸಲಾದ ಮೇಲ್ಮನವಿಗಳನ್ನು ಸಿವಿಲ್ ನ್ಯಾಯಾಲಯ ಹಾಗೂ ಹೈಕೋರ್ಟ್ ತಿರಸ್ಕರಿಸಿವೆ. ಹೈಕೋರ್ಟ್ ತೀರ್ಪು ಪ್ರಶ್ನಿಸಿ 240 ದಿನಗಳ ವಿಳಂಬದ ಬಳಿಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ವಿಳಂಬದ ಕಾರಣಕ್ಕಾಗಿ ₹ 234 ಕೋಟಿಯನ್ನು ಬ್ಯಾಂಕ್‌ನಲ್ಲಿ ಠೇವಣಿ ಇರಿಸಿದರೆ ಅರ್ಜಿಯನ್ನು ವಿಚಾರಣೆ ಅಂಗೀಕರಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ. ಆ ಪ್ರಕಾರ ಠೇವಣಿ ಇರಿಸಲು ಸಂಪುಟ ತೀರ್ಮಾನಿಸಿದೆ ಎಂದು ತಿಳಿಸಿದರು.

ಈ ಪ್ರಕರಣದಲ್ಲಿ ಇಲಾಖೆಗೆ ಸಲಹೆ ನೀಡಲು ನಿವೃತ್ತ ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಎಚ್‌. ಜಿ. ನಾಗರತ್ನಾ ಅವರನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಪ್ರಸ್ತಾವಕ್ಕೂ ಅನುಮೋದನೆ ನೀಡಲಾಗಿದೆ.

ಅಂದಾಜು ಪಟ್ಟಿ ಪರಿಷ್ಕರಣೆಗೆ ಸೂಚನೆ: ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್‌ನಿಂದ ಸಿಂಧನೂರು ಬಳಿಯ ಬಳ್ಳಾರಿ– ಲಿಂಗಸಗೂರು ರಸ್ತೆ ವೃತ್ತದವರೆಗಿನ 78.45 ಕಿ.ಮೀ. ರಸ್ತೆಯನ್ನು ₹ 1,695.85 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜು ಪಟ್ಟಿ ಪರಿಷ್ಕರಿಸುವಂತೆ ಸಂಪುಟ ಸಭೆ ಲೋಕೋಪಯೋಗಿ ಇಲಾಖೆಗೆ ಸೂಚಿಸಿದೆ.

'ಕಾಮಗಾರಿಗೆ ನಿಗದಿಪಡಿಸಿರುವ ವೆಚ್ಚ ದುಬಾರಿ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು. ಈ ಕಾರಣದಿಂದ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿಲ್ಲ. ಪರಿಷ್ಕರಿಸಿ ಮುಂದಿನ ಸಭೆಗೆ ಮಂಡಿಸಲು ಸೂಚಿಸಲಾಗಿದೆ' ಎಂದು ಪಾಟೀಲ ತಿಳಿಸಿದರು.

ಇತರ ತೀರ್ಮಾನಗಳು

- ರಾಜ್ಯ ಬ್ಯಾಸ್ಕೆಟ್ ಬಾಲ್ ಅಸೋಸಿಯೇಷನ್‌ಗೆ ದೇವನಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿಯ ಗೊಬ್ಬರಗುಂಟೆ ಗ್ರಾಮದಲ್ಲಿ 5 ಎಕರೆ ಜಮೀನು ಮಂಜೂರು.
- ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಸಂಗಮ ಗ್ರಾಮದ ಹೆಸರನ್ನು 'ಕೂಡಲ ಸಂಗಮ' ಎಂದು ಬದಲಿಸಲು ಒಪ್ಪಿಗೆ.
- ಒಂದರಿಂದ ಒಂಬತ್ತನೇ ತರಗತಿವರೆಗಿನ ಎಲ್ಲ ಮಾಧ್ಯಮಗಳ ವಿದ್ಯಾರ್ಥಿಗಳಿಗೆ 'ಕಲಿಕಾ ಬಲವರ್ಧನೆ ಕಾರ್ಯಕ್ರಮ'ಕ್ಕೆ ₹ 78.13 ಕೋಟಿ.
- ನಬಾರ್ಡ್ ನೆರವಿನ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಆರ್‌ಐಡಿಎಫ್) ಅಡಿಯಲ್ಲಿ ₹ 146 ಕೋಟಿ ವೆಚ್ಚದಲ್ಲಿ ರಾಯಚೂರು ತಾಲ್ಲೂಕಿನ ಗುಂಜಳ್ಳಿ ಗ್ರಾಮದ ಬಸಪ್ಪ ಕೆರೆ ಮತ್ತು ಇತರ ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆಗೆ ಒಪ್ಪಿಗೆ.

ಲಂಚ: ಕಡ್ಡಾಯ ನಿವೃತ್ತಿ ಶಿಕ್ಷೆ ವಾಪಸ್!

ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದ ಪ್ರಕರಣದಲ್ಲಿ ಆರೋಪ ಸಾಬೀತಾಗಿರುವ ಕಾರಣಕ್ಕಾಗಿ ಸಿ.ವಿ. ರಾಮನ್ ನಗರ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಎಸ್‌.ಡಿ. ನಾಗಮಣಿ ಅವರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲು ಆಗಸ್ಟ್ 10ರಂದು ನಡೆದ ಸಂಪುಟ ಸಭೆಯಲ್ಲಿ ಕೈಗೊಂಡಿದ್ದ ತೀರ್ಮಾನವನ್ನು ಶನಿವಾರದ ಸಂಪುಟ ಸಭೆಯಲ್ಲಿ ಹಿಂಪಡೆಯಲಾಗಿದೆ.

'ವೈದ್ಯೆಯು ತಪ್ಪಿತಸ್ಥರಲ್ಲ ಎಂಬ ತೀರ್ಮಾನ ನ್ಯಾಯಾಲಯದಿಂದ ಬಂದಿದೆ ಎಂಬ ದಾಖಲೆ ಲಭ್ಯವಾಗಿದೆ. ಈ ಕಾರಣಕ್ಕಾಗಿ ಹಿಂದಿನ ಸಂಪುಟ ಸಭೆಯ ನಿರ್ಣಯವನ್ನು ಸ್ಥಿರೀಕರಿಸಿಲ್ಲ' ಎಂದು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಸೇವೆಯಿಂದ ವಜಾ: ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಸುಳ್ಳು ಭರವಸೆ ನೀಡಿ ಖಾಸಗಿ ವ್ಯಕ್ತಿಯಿಂದ ಹಣ ಪಡೆದಿದ್ದ ಸಚಿವಾಲಯದ ಅಧೀನ ಕಾರ್ಯದರ್ಶಿ ಪಾಪಣ್ಣ ಅವರನ್ನು ಸೇವೆಯಿಂದ ವಜಾಗೊಳಿಸುವ ತೀರ್ಮಾನವನ್ನು ಸಂಪುಟ ಸಭೆ ಕೈಗೊಂಡಿದೆ ಎಂದು ಅವರು ತಿಳಿಸಿದರು.

'2 ವರ್ಷದ ಬಳಿಕ ಸಚಿವರ ಬದಲಾವಣೆ'

ಪ್ರಜಾವಾಣಿ ವಾರ್ತೆ



ನಾರಾಯಣ ಸ್ವಾಮಿ

ಕೋಲಾರ: 'ಎರಡು ವರ್ಷಗಳ ಬಳಿಕ ಹೊಸಬರಿಗೆ ಸಚಿವಸ್ಥಾನ ಬಿಟ್ಟು ಕೊಡುವ ಬಗ್ಗೆ ಮೊದಲೇ ಮಾತುಕತೆ ಆಗಿದೆ. ಪಕ್ಷಕ್ಕೆದುಡಿದ ಉಳಿದ ವರಿಗೂ ಅವಕಾಶ ಸಿಗಬೇಕಲ್ಲ' ಎಂದು ಬಂಗಾರಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಸ್‌.ಎನ್‌.ನಾರಾಯಣಸ್ವಾಮಿ ಹೇಳಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರ ರೊಂದಿಗೆ ಮಾತನಾಡಿ, 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿ.ಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದಾಗಲೂ ನಮಗೆ ಇದೇ ಭರವಸೆ ಸಿಕ್ಕಿದೆ. ಎರಡು ವರ್ಷ ಕಾಯಿರಿ, ಮುಂದಿನ ದಿನಗಳಲ್ಲಿ ಅವಕಾಶ ಮಾಡಿ ಕೊಡುವುದಾಗಿ ಹೇಳಿದ್ದಾರೆ. 'ಎರಡೂವರೆ ವರ್ಷದ ಬಳಿಕ ಹಿರಿಯರು ಸಚಿವ ಸ್ಥಾನ ಬಿಟ್ಟುಕೊಡಬೇಕು ಎಂಬ ಸಚಿವ ಕೆ.ಎಚ್‌.ಮುನಿಯಪ್ಪ ಅವರ ಮಾತು ಸರಿ. ಅದನ್ನು ನಾನು ಒಪ್ಪುತ್ತೇನೆ' ಎಂದು ಹೇಳಿದರು.

'ಕೋಲಾರ ಲೋಕಸಭೆ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿದ್ದೇವೆ. ಈವರೆಗೆ ಅವರು ಯಾವುದೇ ನಿರ್ಧಾರ ಕೈಗೊಂಡಿಲ್ಲ. ಒಮ್ಮತದ ಅಭ್ಯರ್ಥಿ ಕಣಕ್ಕಿಳಿಸುತ್ತೇವೆ' ಎಂದರು.

'ಮುನಿಯಪ್ಪ ಹೇಳಿಕೆಯಿಂದ ಸಂತಸ'



ವಿನಯ ಕುಲಕರ್ಣಿ

ವಿಜಯಪುರ: 'ಮುಂದಿನ ಎರಡೂವರೆ ವರ್ಷದ ಬಳಿಕ ರಾಜ್ಯ ಸರ್ಕಾರದಲ್ಲಿ ಸಂಪೂರ್ಣ ಬದಲಾವಣೆ ಆಗಲಿದೆ' ಎಂದು ಧಾರವಾಡ ಗ್ರಾಮೀಣ ಶಾಸಕ ವಿನಯ ಕುಲಕರ್ಣಿ ತಿಳಿಸಿದರು.

'ಎರಡೂವರೆ ವರ್ಷದ ಬಳಿಕ ಸಚಿವ ಸ್ಥಾನ ಬಿಟ್ಟುಕೊಡೋಣ. ಹೊಸಬರಿಗೆ ಅವಕಾಶ ನೀಡೋಣ ಎಂದು ಸಚಿವ ಮುನಿಯಪ್ಪ ಅವರು ಹೇಳಿದ್ದು ಸಂತಸ ತರಿಸಿದೆ' ಎಂದು ವಿನಯ ಕುಲಕರ್ಣಿ ತಿಳಿಸಿದರು.

'ನಿಗಮ ಮಂಡಳಿಗಳಿಗೆ 30 ಶಾಸಕರಂತೆ ಎರಡು ಬಾರಿ ಬದಲಾವಣೆ ಮಾಡಿದಂತೆ ಎರಡು ಬಾರಿ ಸಚಿವರು ಬದಲಾವಣೆಯಾದರೆ, ನಮ್ಮ ಎಲ್ಲ ಶಾಸಕರಿಗೂ ಅಧಿಕಾರ ದೊರಕುತ್ತದೆ. ಸಂಪೂರ್ಣ ತಂಡ ಬದಲಾಗಬೇಕು. ಮುಖ್ಯಮಂತ್ರಿ ಸ್ಥಾನದ ಬಗ್ಗೆ ಹೈಕಮಾಂಡ್ ತೀರ್ಮಾನಿಸುತ್ತದೆ' ಎಂದು ಅವರು ಹೇಳಿದರು.

'ಬಿಜೆಪಿ ವಲಯದಲ್ಲಿ ಹಲವು ಹಾಲಿ ಮತ್ತು ಮಾಜಿ ಶಾಸಕರಿಗೆ ಅಸಮಾಧಾನವಿದೆ. ಕಳೆದ ಬಾರಿ ಸೋತ ಬಿಜೆಪಿ ಅಭ್ಯರ್ಥಿಗಳು ಕಾಂಗ್ರೆಸ್ ಸೇರಲು ತುದಿಗಾಲಲ್ಲಿದ್ದಾರೆ. ಸಾಕಷ್ಟು ಮಂದಿ ಬಿಜೆಪಿಯಿಂದ ಬರುವ ಸಾಧ್ಯತೆಯಿದೆ. 13 ರಿಂದ 14 ಮಾಜಿ ಶಾಸಕರು ಬರುವ ನಿರೀಕ್ಷೆ ಇದೆ. ಆದರೆ, ಹಾಲಿ ಶಾಸಕರ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದರು.

107 ಅಡಿಗೆ ಕೆಆರ್‌ಎಸ್ ನೀರಿನ ಮಟ್ಟ

ಪ್ರಜಾವಾಣಿ ವಾರ್ತೆ

ಮಂಡ್ಯ: ತಮಿಳುನಾಡಿಗೆ ನಿತ್ಯ 13ಸಾವಿರ ಕ್ಯುಸೆಕ್‌ನಷ್ಟು ನೀರು ಹರಿಸುತ್ತಿರುವ ಕಾರಣ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 107 ಅಡಿಗೆ ಕುಸಿದಿದೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಕೊರತೆಯಾಗಿದ್ದು 2,200 ಕ್ಯುಸೆಕ್‌ನಷ್ಟು ನೀರು ಹರಿದು ಬರುತ್ತಿದೆ. ಆದರೆ, 15ಸಾವಿರ ಕ್ಯುಸೆಕ್ ಹೊರ ಹರಿವು ಇರುವ ಕಾರಣ ಜಲಾಶಯದ ನೀರಿನ ಮಟ್ಟ ಇಳಿಯುತ್ತಾ ಸಾಗುತ್ತಿದೆ. 2 ಸಾವಿರ ಕ್ಯುಸೆಕ್‌ನಷ್ಟು ನೀರನ್ನು ನಾಲೆಗಳಿಗೆ ಹರಿಸುತ್ತಿದ್ದು 13ಸಾವಿರ ಕ್ಯುಸೆಕ್ ನೀರು ನದಿಗೆ ಹರಿಯುತ್ತಿದೆ. ಇಷ್ಟೂ ನೀರು ತಮಿಳುನಾಡು ಸೇರುತ್ತಿದೆ.

ಕಳೆದ ತಿಂಗಳು ಕೊಡಗು ಜಿಲ್ಲೆಯಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಜುಲೈ 31ರಂದೇ ನೀರಿನ ಮಟ್ಟ 113 ಅಡಿ ದಾಟಿತ್ತು. ಕ್ರಮೇಣ ನದಿಗೆ ಹೆಚ್ಚುವರಿ ನೀರು ಹರಿಸುತ್ತಿರುವ ಕಾರಣ ಜಲಾಶಯದ ಮಟ್ಟ ಇಳಿಯುತ್ತಿದೆ. ಮಳೆಯೂ ಕಡಿಮೆಯಾದ್ದರಿಂದ ಜಲಾಶಯದ ನೀರಿನ ಮಟ್ಟವೂ ಇಳಿಯುತ್ತಿದೆ.

ಆ.10ರಂದು ಕಾವೇರಿ ನೀರಾವರಿ ನಿಗಮ ಹೊರಹರಿವನ್ನು 8 ಸಾವಿರ ಕ್ಯುಸೆಕ್‌ಗೆ ಹೆಚ್ಚಿಸಿತು. ದಿನೇ ದಿನೇ ಏರುತ್ತಾ ಸಾಗಿದ ಹೊರಹರಿವು ಈಗ 15,600 ಕ್ಯುಸೆಕ್‌ಗೆ ತಲುಪಿದೆ.

'ರಾಜಕೀಯ ಕಾರಣಕ್ಕೆ ಹರಿದ ನೀರು'

ಚಿಕ್ಕಮಗಳೂರು: 'ನಮ್ಮ ಜಲಾಶಯ ಗಳಲ್ಲಿ ಕಡಿಮೆ ನೀರಿ ದ್ದರೂ ರಾಜ್ಯದ ಜನರ ಹಿತ ಬಲಿ ಕೊಟ್ಟು ರಾಜಕೀಯ ಕಾರಣಕ್ಕೆ ತಮಿಳು ನಾಡಿಗೆ ಅನುಕೂಲ ಮಾಡಲು ರಾಜ್ಯ ಸರ್ಕಾರ ಹೊರಟಿದೆ' ಎಂದು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಮಳೆ ಕಡಿಮೆಯಾಗಿದೆ. ಜಲಾಶಯಗಳಲ್ಲಿ ನೀರಿಲ್ಲ ಎಂಬುದನ್ನು ತಮಿಳುನಾಡಿಗೆ ಮನವರಿಕೆ ಮಾಡಿಕೊಡುವ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. ತಮಿಳುನಾಡಿನ ಮುಖ್ಯಮಂತ್ರಿ 'ಇಂಡಿಯಾ' ಮೈತ್ರಿಕೂಟದಲ್ಲಿ ಇರುವ ಕಾರಣಕ್ಕೆ ಒತ್ತಡಕ್ಕೆ ಸಿಲುಕಿ ನೀರು ಹರಿಸಲು ಹೊರಟಿದೆ. ಒಳ ರಾಜಕೀಯಕ್ಕೆ ರಾಜ್ಯದ ಜನರನ್ನು ಬಲಿ ಕೊಡುವುದು ಸರಿಯಲ್ಲ. ಜಲಾಶಯಗಳ ನೀರಿನ ಮಟ್ಟ ಪರಿಶೀಲಿಸಲು ತಂಡ ಕಳಿಸಿಕೊಡಿ ಎಂದು ತಮಿಳುನಾಡಿಗೆ ಹೇಳುವಷ್ಟು ಗಟ್ಟಿಧ್ವನಿಯೂ ಈ ಸರ್ಕಾರದಲ್ಲಿ ಇಲ್ಲ' ಎಂದರು.

ನಟ ಚೇತನ್ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆಗೆ ಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್ ಪ್ರಕರಣದಲ್ಲಿ ತೀರ್ಪು ನೀಡಿದ್ದ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧ ಆಕ್ಷೇಪಾರ್ಹ ಟ್ವೀಟ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಚಿತ್ರನಟ ಚೇತನ್ ಕುಮಾರ್ ಹಾಗೂ ನ್ಯಾಯಮೂರ್ತಿಗಳಿಗೆ ಕೊಲೆ ಬೆದರಿಕೆ ಹಾಕಿದ ಆರೋಪದಡಿ ತಮಿಳುನಾಡಿನ 'ತೌಹೀದ್ ಜಮಾತ್' ಅಧ್ಯಕ್ಷ ಆರ್. ರಹಮತ್ ಉಲ್ಲಾ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ಕರ್ನಾಟಕದ ಅಡ್ವೊಕೇಟ್ ಜನರಲ್ (ಎ.ಜಿ) ಕೆ. ಶಶಿಕಿರಣ್ ಶೆಟ್ಟಿ ಒಪ್ಪಿಗೆ ಸೂಚಿಸಿದ್ದಾರೆ.

'ನ್ಯಾಯಾಂಗ, ನ್ಯಾಯಮೂರ್ತಿಗಳ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದಡಿ ಚೇತನ್, ರಹಮತ್ ಉಲ್ಲಾ, ಸಿಪಿಎಂ ನಾಯಕ ಸೀತಾರಾಂ ಯೆಚೂರಿ ಹಾಗೂ 'ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ' (ಸಿಎಫ್‌ಐ) ಅಧ್ಯಕ್ಷ ಅತ್ತಾವುಲ್ಲಾ ಪುಂಜಾಲಕಟ್ಟೆ ವಿರುದ್ಧ ನ್ಯಾಯಾಂಗ ನಿಂದನೆ ಕಾಯ್ದೆಯ ಕಲಂ 15(1)(ಬಿ) ಅಡಿ ಕ್ರಮ ಕೈಗೊಳ್ಳಲು ಅನುಮತಿಸಬೇಕು' ಎಂದು ಗಿರೀಶ್ ಭಾರದ್ವಾಜ್ ಮನವಿ ಮಾಡಿದ್ದರು.

ಚೇತನ್ ಟ್ವೀಟ್ ಏನಿತ್ತು?: 'ಅತ್ಯಾಚಾರ ಪ್ರಕರಣ ಒಂದರಲ್ಲಿ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಆರೋಪಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ, ತೀರ್ಪಿನಲ್ಲಿ ಆಘಾತಕಾರಿ ಹೇಳಿಕೆಯೊಂದನ್ನು ಉಲ್ಲೇಖಿಸಿದ್ದಾರೆ. ಈಗ ಅದೇ ನ್ಯಾಯಮೂರ್ತಿ ಶಾಲೆ ಗಳಲ್ಲಿ ಹಿಜಾಬ್ ಧರಿಸಬಹುದೇ ಅಥವಾ ಇಲ್ಲವೇ ಎಂಬುದನ್ನು ತೀರ್ಮಾನಿಸಲಿದ್ದಾರೆ. ಅವರಿಗೆ ಅಗತ್ಯವಾದ ಸ್ಪಷ್ಟತೆ ಇದೆಯೇ' ಎಂದು ಚೇತನ್ ಟ್ವೀಟ್ ನಲ್ಲಿ ಪ್ರಶ್ನೆ ಮಾಡಿದ್ದರು.

'ಇದು ದುರುದ್ದೇಶಪೂರಿತ ಮತ್ತು ವಿವಾದಾತ್ಮಕ ಹೇಳಿಕೆಯಾಗಿದೆ. ನ್ಯಾಯಮೂರ್ತಿಯೊಬ್ಬರ ಮೇಲಿನ ನಿಷ್ಪಕ್ಷಪಾತದ ಬಗ್ಗೆ ಸಾರ್ವಜನಿಕರಿಗೆ ಸಂಶಯ ಮೂಡಿಸುವಂತಿದೆ. ಹೀಗಾಗಿ, ನಟ ಚೇತನ್ ಮಾಡಿರುವ ಟ್ವೀಟ್, ಕ್ರಿಮಿನಲ್ ನ್ಯಾಯಾಂಗ ನಿಂದನೆಗೆ ಸಮನಾಗಿದೆ. ಹೀಗಾಗಿ, ಚೇತನ್ ವಿರುದ್ಧ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಲು ಅನುಮತಿಸಿದ್ದೇನೆ' ಎಂದು ಎ.ಜಿ ವಿವರಿಸಿದ್ದಾರೆ.

ರಹಮತ್ ಉಲ್ಲಾ ಹೇಳಿಕೆ: ಹಿಜಾಬ್ ತೀರ್ಪಿಗೆ ಸಂಬಂಧಿಸಿದಂತೆ, 'ತೌಹೀದ್ ಜಮಾತ್'ನ ರಹಮತ್ ಉಲ್ಲಾ, 'ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚನೆಯಂತೆ ಹೈಕೋರ್ಟ್ ಹಿಜಾಬ್ ತೀರ್ಪು ನೀಡಿದೆ. ಒಂದು ವೇಳೆ ನ್ಯಾಯಮೂರ್ತಿಗಳು ಕೊಲೆಯಾದರೆ ಅವರ ಸಾವಿಗೆ ಅವರೇ ಜವಾಬ್ದಾರಿ' ಎಂದು ಮಧುರೈನಲ್ಲಿ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಹೇಳಿಕೆ ನೀಡಿದ್ದರು.

ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತ

ರಾಜ್ಯದ ಹಲವೆಡೆ ಜೋರು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಶನಿವಾರ ಗಾಳಿ ಸಹಿತ ಜೋರು ಮಳೆ ಸುರಿಯಿತು. ಬಿಸಿಲಿನಿಂದ ಬಸವಳಿದಿದ್ದ ಜನರಿಗೆ ತಂಪೆರೆಯಿತು.

ಮೈಸೂರು ಹಾಗೂ ಕೊಡಗು ಜಿಲ್ಲೆಯಲ್ಲಿ ಜೋರು ಮಳೆ ಬಿದ್ದಿತು. ಈ ತಿಂಗಳಲ್ಲಿ ಹೆಚ್ಚಿನ ಮಳೆಯಾಗಿರುವುದು ಇದೇ ಮೊದಲು. ಕೊಡಗು ಜಿಲ್ಲೆಯಲ್ಲಿ ಮಡಿಕೇರಿ, ಸೋಮವಾರಪೇಟೆ, ನಾಪೋಕ್ಲು, ಕುಶಾಲನಗರ, ಸುಂಟಿಕೊಪ್ಪ ಭಾಗದಲ್ಲಿ ಇಡೀ ದಿನ ಧಾರಾಕಾರ ಮಳೆಯಾಯಿತು.

ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ 10ಸಾವಿರ ಕ್ಯೂಸೆಕ್‌ಗೂ ಹೆಚ್ಚು ನೀರು ಹರಿಸುತ್ತಿರುವುದರಿಂದ ಕಾವೇರಿ ನದಿ ನೀರಿನ ಮಟ್ಟ ಹೆಚ್ಚಾಗಿದ್ದು, ಜಲಾಶಯದ ತಗ್ಗಿನಲ್ಲಿರುವ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ, ಮೂಲ್ಕಿ, ಕಡಬ, ಬಂಟ್ವಾಳ ಮತ್ತು ಸುಳ್ಯ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ. ಉಡುಪಿಯಲ್ಲೂ ಶನಿವಾರ ಬೆಳಿಗ್ಗೆಯಿಂದ ಸತತ ಮಳೆಯಾಗಿದ್ದು, ಉಡುಪಿ ತೆಂಕದಲ್ಲಿ ಅತಿ ಹೆಚ್ಚು 12.7 ಸೆಂ.ಮೀ, ಬೆಳ್ಮಣ್‌ನಲ್ಲಿ 12 ಸೆಂ.ಮೀ, ಪಡುಬಿದ್ರಿ ಮತ್ತು ಕೆಮ್ಮಾಲ್‌ನಲ್ಲಿ ತಲಾ 11 ಸೆಂ.ಮೀ ಮತ್ತು ಪಲಿಮಾರಿನಲ್ಲಿ 10.6 ಸೆಂ.ಮೀ ಮಳೆಯಾಗಿದೆ.

ದಾವಣಗೆರೆ ನಗರವೂ ಸೇರಿದಂತೆ ಜಿಲ್ಲೆಯ ಹಲವೆಡೆ ಅರ್ಧ ಗಂಟೆಗೂ ಹೆಚ್ಚು ಉತ್ತಮ ಮಳೆ ಸುರಿಯಿತು. ಚಿತ್ರದುರ್ಗ ನಗರ, ಚಳ್ಳಕೆರೆ, ಹಿರಿಯೂರು, ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಹಾಗೂ ಶಿಕಾರಿಪುರದಲ್ಲಿ ಸಾಧಾರಣ ಮಳೆ ಬಿತ್ತು.

ಹುಬ್ಬಳ್ಳಿ–ಧಾರವಾಡ, ಉತ್ತರ ಕನ್ನಡ ಜಿಲ್ಲೆ ಸೇರಿ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಯಿತು.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಅಣ್ಣಿಗೇರಿ, ನವಲಗುಂದ ಭಾಗದಲ್ಲಿ ಮತ್ತು ಗದಗ ಜಿಲ್ಲೆಯ ಹುಲಕೋಟಿ, ದುಂದೂರು, ಚಿಕ್ಕಹಂದಿಗೋಳ, ಶ್ಯಾಗೋಟಿ ಮತ್ತು ಲಕ್ಷ್ಮೇಶ್ವರದಲ್ಲಿ ಮಳೆಯಾಯಿತು.

ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಹೊನ್ನಾವರ, ಭಟ್ಕಳ, ಅಂಕೋಲಾ, ಮುಂಡಗೋಡ, ಶಿರಸಿಯಲ್ಲಿ ಮಳೆ ಸುರಿಯಿತು. ವಿಜಯನಗರ ಜಿಲ್ಲೆಯ ಹೊಸಪೇಟೆ, ಹಂಪಿ, ಕಮಲಾಪುರ, ಹಗರಿಬೊಮ್ಮನಹಳ್ಳಿ, ಹೂವಿನ ಹಡಗಲಿ, ಅರಸೀಕೆರೆ, ಕಾನಹೊಸಹಳ್ಳಿ, ಕೂಡ್ಲಿಗಿ, ಕೊಟ್ಟೂರು ಹಾಗೂ ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ, ಸಿರುಗುಪ್ಪದಲ್ಲಿ ಸಾಧಾರಣ ಮಳೆಯಾಯಿತು.



ಮಂಗಳೂರಿನಲ್ಲಿ ಶನಿವಾರ ಸುರಿಯುತ್ತಿದ್ದ ಮಳೆಯಲ್ಲಿ ಮಗುವಿನೊಂದಿಗೆ ರಸ್ತೆ ದಾಟುತ್ತಿರುವ ಮಹಿಳೆಯರು – ಪ್ರಜಾವಾಣಿ ಚಿತ್ರ

ಕರಾವಳಿ, ಒಳನಾಡಿನಲ್ಲಿ ಜೋರು ಮಳೆ ಸಾಧ್ಯತೆ: ಮುಂದಿನ ಎರಡು ದಿನ ರಾಜ್ಯದ ಕರಾವಳಿ ಹಾಗೂ ಒಳನಾಡು ಜಿಲ್ಲೆಯ ಅಲ್ಲಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದ ಒಂದೆರಡು ಸ್ಥಳಗಳಲ್ಲಿ ಗುಡುಗು ಮಿಂಚು ಸಹಿತ ಮಳೆಯಾಗಲಿದೆ. ಒಳನಾಡಿನಲ್ಲಿ ಬಿರುಗಾಳಿ ಗಂಟೆಗೆ 30ರಿಂದ 40 ಕಿ.ಮೀ ವೇಗದಲ್ಲಿ ಬೀಸಲಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಬಿರುಸಿನ ಮಳೆಯಾಗುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ಸುಮಲತಾ ನೇತೃತ್ವದಲ್ಲಿ ಬಿಜೆಪಿ ಹೋರಾಟ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಆ.21ರಂದು ನಗರದ ಹೊರವಲಯದ ಇಂಡುವಾಳು ಬಳಿ ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ ತಡೆದು ಬೃಹತ್ ಹೋರಾಟ ನಡೆಸಲು ಬಿಜೆಪಿ ನಿರ್ಧರಿಸಿದೆ.

ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಶನಿವಾರ ನಡೆದ ಮೈಸೂರು ಭಾಗದ ಪಕ್ಷದ ಮುಖಂಡರ ಸಭೆಯಲ್ಲಿ ಸಂಸದೆ ಸುಮಲತಾ ನೇತೃತ್ವದಲ್ಲಿ ಪ್ರತಿಭಟಿಸುವ ನಿರ್ಣಯ ಕೈಗೊಳ್ಳಲಾಯಿತು.

ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ, 'ತಮಿಳುನಾಡಿಗೆ ಯಾವ ಆಧಾರದ ಮೇಲೆ ನಿತ್ಯ 15ಸಾವಿರ ಕ್ಯುಸೆಕ್ ನೀರು ಹರಿಸಲಾಗುತ್ತಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ಅಲ್ಲಿ 1.8 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರು ಹರಿಸಬೇಕಿದೆ. ಆದರೆ, ಅವರು ನಿಯಮ ಮೀರಿ 3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಈಗ ಬೆಳೆ ಬೆಳೆಯುತ್ತಿದ್ದಾರೆ. ಕಾವೇರಿ ನಿರ್ವಹಣಾ ಮಂಡಳಿ ಸಭೆಯಲ್ಲಿ ನಮ್ಮ ಪ್ರತಿನಿಧಿಗಳು, ಕೇವಲ ಕಾಫಿ ಕುಡಿದು, ತಿಂಡಿ ಸೇವಿಸಿ ಬರುತ್ತಿದ್ದಾರೆ' ಎಂದರು.

'ಅಂಬಿ ರಾಜೀನಾಮೆ ಕೊಟ್ಟಿದ್ದೇಕೆ?'

ಸಂಸದೆ ಸುಮಲತಾ ಮಾತನಾಡಿ, 'ನಾನು ಬಿಜೆಪಿಯ ಸದಸ್ಯೆಯಲ್ಲ, ಬಿಜೆಪಿಗೆ ಬೆಂಬಲವನ್ನಷ್ಟೇ ನೀಡಿದ್ದೇನೆ. ಆದರೂ ಜಿಲ್ಲೆಯ ಜನರ ಹಿತದೃಷ್ಟಿಯಿಂದ ಕಾವೇರಿ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದೇನೆ. ಹಲವು ಸಂದರ್ಭಗಳಲ್ಲಿ ತಮಿಳುನಾಡು ಪರವಾದ ನಿರ್ಧಾರ ಕೈಗೊಳ್ಳಲಾಗಿದೆ. ಹೀಗಾಗಿ ರಾಜ್ಯದ ಹಾಗೂ ಜಿಲ್ಲೆಯ ಜನರ ಹಿತಕ್ಕಾಗಿ ಹೋರಾಟದಲ್ಲಿ ಭಾಗಿಯಾಗುತ್ತಿದ್ದೇನೆ' ಎಂದರು.

'ಕೆಆರ್‌ಎಸ್ ಜಲಾಶಯದ ಬೀಗದ ಕೀ ರಾಜ್ಯ ಸರ್ಕಾರದ ಬಳಿ ಇಲ್ಲ ಎಂದು ಕೆಲ ಸಚಿವರು ಹೇಳಿದ್ದಾರೆ. ಅಂಬರೀಷ್ ಕೇಂದ್ರ ಸಚಿವರಾಗಿದ್ದಾಗ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿತ್ತು. ಆಗ ಕೇಂದ್ರ ಸರ್ಕಾರವೇ ಸಮಸ್ಯೆ ಬಗೆಹರಿಸಬಹುದಾಗಿತ್ತು ಎನ್ನುವುದಾಗಿದ್ದರೆ ಅಂಬರೀಷ್ ಸಚಿವ ಸ್ಥಾನಕ್ಕೆ ರಾಜೀನಾಮೆ ಏಕೆ ಕೊಟ್ಟರು' ಎಂದು ಪ್ರಶ್ನಿಸಿದರು.

ಭಾನುವಾರ, ಆಗಸ್ಟ್ 20, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಮಹಿಳಾ ಕ್ರಿಕೆಟ್ ಶ್ರೀನಗರದಲ್ಲಿ ನಡೆದ ಕಾಶ್ಮೀರ ಮಹಿಳಾ ಕ್ರಿಕೆಟ್ ಲೀಗ್ ಪಂದ್ಯದಲ್ಲಿ ಆಟಗಾರ್ತಿಯೊಬ್ಬರ ಬ್ಯಾಟಿಂಗ್


ಮಲ್ಲೇಶ್ವರಂ
ಸುದರ್ಶನ್ ಸಿಲ್ಕ್ಸ್
NOW EVERY FLOOR FILLED WITH FASHION WONDERS
UPTO 50% OFF
MALLESHWARAM
Sudarshan Silks
Since 1944
"MISS ಮಾಡಬೇಡಿ"
WWW.NEWSUDARSHANSILKS.COM
9, MARGOSA ROAD, 8TH CROSS, MALLESHWARAM, BANGALORE-03 080-46300 300, 4095 1133
SC ROAD, BEHIND SAMRAT RESIDENCY, (OPP NATARAJ THEATRE) SHESHADRIPURAM 080-2346 8811
VALET PARKING AVAILABLE

www.prajavani.net

prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಸಂಗೀತಗಾರರು ಆಡುವ ಅಪರೂಪದ ನುಡಿ, ಕಾಣಿಸುವ ಅನನ್ಯ ಅನುಭವ...ಎಲ್ಲವುಗಳ ಲಹರಿ



ಕಣಿವೆಗೆ ಉರುಳಿದ ವಾಹನ: 9 ಯೋಧರ ಸಾವು 2

ಹೊಸ ವೈದ್ಯಕೀಯ ಕಾಲೇಜಿಗೆ ಅನ್ವಯ

ಗರ್ಭಪಾತ ಪ್ರಕರಣ: ತ್ವರಿತ ಇತ್ಯರ್ಥಕ್ಕೆ ತಾಕೀತು 7

ಎಂಬಿಬಿಎಸ್ ಸೀಟು: ಗರಿಷ್ಠ 150ರ ಮಿತಿ 12

ವಿಧಾನ ಪರಿಷತ್‌ಗೆ ಎಂ.ಆರ್. ಸೀತಾರಾಮ್, ಉಮಾಶ್ರೀ, ಸುಧಾಮ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀವ್ರ ವಿರೋಧವನ್ನು ಲೆಕ್ಕಿಸದೇ ವಿಧಾನ ಪರಿಷತ್‌ನ ಮೂರು ಸ್ಥಾನಗಳಿಗೆ ನಾಮ ನಿರ್ದೇಶನ ಮಾಡುವಂತೆ ರಾಜ್ಯ ಸರ್ಕಾರ ಶಿಫಾರಸು ಮಾಡಿದ್ದ ಎಂ.ಆರ್. ಸೀತಾರಾಮ್, ಉಮಾಶ್ರೀ ಮತ್ತು ಎಚ್.ಪಿ. ಸುಧಾಮ್ ದಾಸ್ ಹೆಸರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಂಕಿತ ಹಾಕಿದ್ದಾರೆ.



ಸೀತಾರಾಮ್



ಉಮಾಶ್ರೀ



ಸುಧಾಮ್

ಪರಿಷತ್‌ಗೆ ಸುಧಾಮ್ ದಾಸ್ ಅವರ ನಾಮ ನಿರ್ದೇಶನ ವಿರೋಧಿಸಿ ನಾಲ್ವರು ಸಚಿವರು ಪಕ್ಷದ ಹಿರಿಯ ನಾಯಕರಿಗೆ ಪತ್ರ ಬರೆದಿದ್ದರು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಭೂಸ್ವಾಧೀನ, ಟೆಂಡರ್ ಪ್ರಕ್ರಿಯೆ, ಕಾಮಗಾರಿಯಲ್ಲಿ ವಿಳಂಬ

'ಏರ್‌ಪೋರ್ಟ್ ಟೇಕಾಫ್'ಗೇ ಗ್ರಹಣ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪ್ರವಾಸೋದ್ಯಮ, ಸರಕು ಸಾಗಣೆ, ಕೈಗಾರಿಕೆಗಳ ಅಭಿವೃದ್ಧಿಗೆ ಉತ್ತೇಜನ ನೀಡಲು ವಿಮಾನ ಸೌಲಭ್ಯ ಪೂರಕ. ಆದರೆ, ಜನಪ್ರತಿನಿಧಿಗಳ ಇಚ್ಛಾಶಕ್ತಿ, ದೂರದೃಷ್ಟಿಯ ಕೊರತೆಯಿಂದ ರಾಜ್ಯದ ಎರಡನೇ ಹಂತದ ನಗರಗಳಲ್ಲಿ ವಿಮಾನ ನಿಲ್ದಾಣಗಳ ಕಾಮಗಾರಿ ನಿರೀಕ್ಷಿತ ಮಟ್ಟದಲ್ಲಿ ನಡೆದಿಲ್ಲ. ಒಂದೆರಡು ಕಡೆ ಕಾಮಗಾರಿ ಪೂರ್ಣಗೊಂಡಿದ್ದರೂ ವಿಮಾನಗಳ ಹಾರಾಟ ಆರಂಭವಾಗಿಲ್ಲ.

ಬೆಂಗಳೂರು ಕೇಂದ್ರಿತ ಮಾಹಿತಿ ತಂತ್ರಜ್ಞಾನ, ಉದ್ಯಮಗಳು ಎರಡು-ಮೂರನೇ ಶ್ರೇಣಿಯ ನಗರಗಳಿಗೂ ವಿಸ್ತರಣೆ ಆಗಬೇಕಿದೆ. ಆ ಮೂಲಕ, ಅಭಿವೃದ್ಧಿ- ಆರ್ಥಿಕ ಚಟುವಟಿಕೆಗೆ ವೇಗ ಸಿಗಬೇಕಿದೆ ಎನ್ನುವುದು ಸರ್ಕಾರದ ಆಶಯ. ಈ ಉದ್ದೇಶದಿಂದ ಪ್ರಮುಖ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣ ನಿರ್ಮಾಣದ ಯೋಜನೆಗಳು ರೂಪುಗೊಂಡರೂ ಅನುಷ್ಠಾನ ಆಮೆಗತಿಯಲ್ಲಿದೆ.

ಕಾರವಾರ, ಬಳ್ಳಾರಿ, ರಾಯಚೂರು, ಕೊಪ್ಪಳ, ದಾವಣಗೆರೆ ವಿಮಾನ ನಿಲ್ದಾಣಗಳ ಕಾಮಗಾರಿಯೇ ಟೇಕಾಫ್ ಆಗಿಲ್ಲ. ಈ ಯೋಜನೆಗಳೆಲ್ಲಾ ಕಾರ್ಯಸಾಧ್ಯತಾ ವರದಿ ಹಂತದಲ್ಲಿವೆ.

ಒಳನೋಟ

ವಿಮಾನಯಾನದ 'ಕನಸು'

ಪ್ರತಿಕ್ರಿಯಿಸಿ: 9606038256

feedback@prajavani.co.in

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಜೊತೆ ಮಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ, ಮೈಸೂರು, ಬೀದರ್ ಮತ್ತು ವಿಜಯನಗರ ವಿಮಾನ ನಿಲ್ದಾಣಗಳು ವಾಣಿಜ್ಯ ವಿಮಾನಗಳನ್ನು ನಿರ್ವಹಿಸುತ್ತಿವೆ.

ಜಾಗತಿಕ ಮಟ್ಟದಲ್ಲಿ ಖ್ಯಾತಿ ಪಡೆದಿರುವ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಿಟ್ಟರೆ, ರಾಜ್ಯದ ಎರಡನೇ ಅತೀ ಹೆಚ್ಚು ಪ್ರಯಾಣಿಕ ದಟ್ಟಣೆಯ ವಿಮಾನ ನಿಲ್ದಾಣ ಮಂಗಳೂರಿನದ್ದು.

ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 'ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ'ವನ್ನು (ಕೆಎಸ್‌ಐಐಡಿಸಿ) ನೋಡಲ್ ಏಜೆನ್ಸಿಯಾಗಿ ರಾಜ್ಯ ಸರ್ಕಾರ ನೇಮಿಸಿದೆ. ಕೇಂದ್ರ ಸರ್ಕಾರದ ಪ್ರಾದೇಶಿಕ ಸಂಪರ್ಕ ಯೋಜನೆ -ಉಡಾನ್ (ಉಡೇ ದೇಶ್ ಕಾ ಆಮ್ ನಾಗರಿಕ್) ಅನುಸಾರ ವಿಮಾನ ನಿಲ್ದಾಣ, ಏರ್‌ಸ್ಟ್ರಿಪ್‌ಗಳ ಅಭಿವೃದ್ಧಿಗೆ ಕೆಎಸ್‌ಐಐಡಿಸಿ ಮುಂದಾಗಿದೆ. ಆದರೆ, 'ಉಡಾನ್'ಗೆ ಪೂರಕವಾಗಿ ರಾಜ್ಯದಲ್ಲಿ ವಿಮಾನ ನಿಲ್ದಾಣಗಳು ನಿರ್ಮಾಣ ಆಗಿಲ್ಲ ಎನ್ನುವ ಆರೋಪಗಳಿವೆ.



ವಿಜಯಪುರ ವಿಮಾನ ನಿಲ್ದಾಣದ ಕಾಮಗಾರಿ ಪ್ರಗತಿಯಲ್ಲಿರುವುದು

– ಪ್ರಜಾವಾಣಿ ಚಿತ್ರ: ರಾಜು ಧವಳಗಿ

ಶಿವಮೊಗ್ಗ, ವಿಜಯಪುರ, ಹಾಸನ, ರಾಯಚೂರು, ದಾವಣಗೆರೆ, ಕೊಪ್ಪಳ, ಬಳ್ಳಾರಿ, ಕಾರವಾರ ಸೇರಿ ರಾಜ್ಯದ 14 ಜಿಲ್ಲೆಗಳಲ್ಲಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ಸ್ಥಾಪಿಸಲು ಉದ್ದೇಶಿಸಲಾಗಿದೆ. ಸದ್ಯ ಶಿವಮೊಗ್ಗ ವಿಮಾನ ನಿಲ್ದಾಣ ಕಾರ್ಯಾಚರಣೆಗೆ ಸಿದ್ಧವಾಗಿದ್ದು, ಇದೇ 31ರಂದು ವಿಮಾನ ಹಾರಾಟಕ್ಕೆ ಮುಹೂರ್ತ ನಿಗದಿಯಾಗಿದೆ. ವಿಜಯಪುರ ವಿಮಾನ ನಿಲ್ದಾಣದ ಕಾಮಗಾರಿಯೂ ಇಷ್ಟೊತ್ತಿಗೆ ಮುಗಿಯಬೇಕಿತ್ತು. ಆದರೆ ಕಾಮಗಾರಿ ಆಮೆಗತಿಯಲ್ಲಿದೆ.

ಶಿವಮೊಗ್ಗ ವಿಮಾನ ನಿಲ್ದಾಣದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಕೇಂದ್ರ ನಾಗರಿಕ ವಿಮಾನಯಾನ ನಿರ್ದೇಶನಾಲಯವು ಕೆಎಸ್‌ಐಐಡಿಸಿಗೆ ವಹಿಸಿದೆ. ಆ ಮೂಲಕ, ರಾಜ್ಯ ಸರ್ಕಾರದ ಸಂಸ್ಥೆಯೊಂದು ನಿರ್ವಹಿಸಲಿರುವ ರಾಜ್ಯದ ಮೊದಲ ವಿಮಾನ ನಿಲ್ದಾಣ ಇದಾಗಲಿದೆ.

6ನೇ ಪುಟ ನೋಡಿ

ಹೊಸ ಮೆನು ಪರಿಚಯಿಸಲು ನಿರ್ಧಾರ

ಮತ್ತೆ 188 ಇಂದಿರಾ ಕ್ಯಾಂಟೀನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಹೊರತುಪಡಿಸಿ ರಾಜ್ಯದ ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 188 ಹೊಸ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಶನಿವಾರ ನಡೆದ ಸಂಪುಟ ಸಭೆ ಬಳಿಕ ವಿವರ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, 'ಈಗ ರಾಜ್ಯದಲ್ಲಿ ಒಟ್ಟು 197 ಇಂದಿರಾ ಕ್ಯಾಂಟೀನ್‌ಗಳಿವೆ. ಅವುಗಳ ಜತೆಗೆ ಹೊಸದಾಗಿ 188 ಕ್ಯಾಂಟೀನ್‌ಗಳ ಆರಂಭಕ್ಕೆ ವಿಸ್ತೃತ ಯೋಜನಾ ವರದಿ ರೂಪಿಸುವಂತೆ ನಗರಾಭಿವೃದ್ಧಿ ಇಲಾಖೆಗೆ ಸೂಚಿಸಲಾಗಿದೆ' ಎಂದರು.

ಹೊಸ ಮೆನು: ಇಂದಿರಾ ಕ್ಯಾಂಟೀನ್‌ಗಳಲ್ಲಿ ಒಂದು ದಿನಕ್ಕೆ ಒಬ್ಬರಿಗೆ ಆಹಾರ ಪೂರೈಕೆಗೆ ₹ 62 ದರ ನಿಗದಿಪಡಿಸಲಾಗಿದೆ. ಇದರಲ್ಲಿ ಎರಡು ಊಟ ಮತ್ತು ಒಂದು ಉಪಾಹಾರ ಸೇರಿರುತ್ತದೆ. ಗ್ರಾಹಕರು ಒಟ್ಟು ₹ 25 ಪಾವತಿಸಬೇಕು. ಸರ್ಕಾರ ₹ 37 ಸಹಾಯಧನ ನೀಡಲಿದೆ ಎಂದು ತಿಳಿಸಿದರು.

ಇಂದಿರಾ ಕ್ಯಾಂಟೀನ್‌ಗಳಲ್ಲಿನ ಊಟದ ಮೆನುವಿನಲ್ಲಿ ಬದಲಾವಣೆ ಮಾಡಲು ನಿರ್ಧರಿಸಲಾಗಿದೆ. ಸ್ಥಳೀಯವಾಗಿ ಹೆಚ್ಚು ಬಳಸುವ ಆಹಾರ ಪದಾರ್ಥಗಳನ್ನು ಊಟದಲ್ಲಿ ಪೂರೈಸಲಾಗುವುದು. ಸ್ಥಳೀಯ ತಿಂಡಿ, ತಿನಿಸುಗಳನ್ನು ಒದಗಿಸಲಾಗುವುದು ಎಂದರು.



ದುರಸ್ತಿಗೆ ₹ 21 ಕೋಟಿ: ಈಗಾಗಲೇ ಇರುವ 197 ಇಂದಿರಾ ಕ್ಯಾಂಟೀನ್‌ಗಳ ಕಟ್ಟಡ ದುರಸ್ತಿಗಾಗಿ ₹ 21.29 ಕೋಟಿ ಅನುದಾನ ಒದಗಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ ಎಂದರು.

ಕಾವೇರಿ: 'ಸುಪ್ರೀಂ' ಮೊರೆಗೆ ನಿರ್ಧಾರ

'ಕಾವೇರಿ ನದಿಯಿಂದ ನೀರು ಹರಿಸುವಂತೆ ಆದೇಶಿಸಲು ಕೋರಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಗೆ ಪ್ರತಿಯಾಗಿ ಮನವಿ ಸಲ್ಲಿಸಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದು ಎಚ್.ಕೆ. ಪಾಟೀಲ ತಿಳಿಸಿದರು.

'ಈ ಪ್ರಕರಣದ ಕುರಿತು ಚರ್ಚಿಸುವುದಕ್ಕಾಗಿ ಸಂಪುಟ ಸಭೆಗೆ ಅಡ್ವೊಕೇಟ್ ಜನರಲ್ ಅವರಿಗೂ ಆಹ್ವಾನ ನೀಡಲಾಗಿತ್ತು. ವಸ್ತುಸ್ಥಿತಿ ಆಧರಿಸಿ ಸೋಮವಾರವೇ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು' ಎಂದರು.

'ಕಾವೇರಿ ನೀರಿಗೆ ಸಂಬಂಧಿಸಿದಂತೆ ಸರ್ವಪಕ್ಷ ಸಭೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಪ್ರಕಟಿಸಿದ್ದಾರೆ. ಯಾರೂ ಹೋರಾಟ, ಪ್ರತಿಭಟನೆ ನಡೆಸುವ ಅಗತ್ಯವಿಲ್ಲ' ಎಂದು ಹೇಳಿದರು.

'ಉಡಾನ್: ಜನರಿಗೆ ಸಿಕ್ಕಿದ್ದು ಸುಳ್ಳುಗಳಷ್ಟೇ'

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ 'ಉಡಾನ್' ಯೋಜನೆಯು ಶೇ 93 ರಷ್ಟು ಮಾರ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಸಾಮಾನ್ಯ ಜನರಿಗೆ ಕೇಂದ್ರದಿಂದ ಸಿಕ್ಕಿರುವುದು ಕೇವಲ ಸುಳ್ಳುಗಳು ಮತ್ತು ಜುಮ್ಲಾಗಳಷ್ಟೇ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ಉಡಾನ್ ಯೋಜನೆ ಕುರಿತಂತೆ ಮಹಾಲೇಖಪಾಲರ ವರದಿಯನ್ನು ಉಲ್ಲೇಖಿಸಿ ಶನಿವಾರ 'ಎಕ್ಸ್' ಜಾಲತಾಣದಲ್ಲಿ ಟ್ವೀಟ್ ಮಾಡಿರುವ ಅವರು, 'ಚಪ್ಪಲಿ ಧರಿಸಿರುವವರೂ ಕೂಡ ವಿಮಾನದಲ್ಲಿ ಪ್ರಯಾಣಿಸಬಹುದು ಎಂದು ಮೋದಿ ಹೇಳಿದ್ದರು. ಇತರೆ ಭರವಸೆಗಳಂತೆ ಇದೂ ಈಡೇರಿಲ್ಲ' ಎಂದು ವ್ಯಂಗ್ಯವಾಡಿದ್ದಾರೆ.



ಪ್ರಾದೇಶಿಕವಾರು ಸಂಪರ್ಕ ಕಲ್ಪಿಸುವ ಉಡಾನ್ (ಉಡೇ ದೇಶ್ ಕಾ ಆಮ್ ನಾಗರಿಕ್) ಯೋಜನೆಯನ್ನು ಮೋದಿ ನೇತೃತ್ವದ ಸರ್ಕಾರ ಅಕ್ಟೋಬರ್ 21, 2016ರಂದು ಆರಂಭಿಸಿತ್ತು. 2 ಮತ್ತು 3ನೇ ಹಂತದ ನಗರಗಳು, ಪಟ್ಟಣಗಳ ನಿವಾಸಿಗಳಿಗೂ ಕೈಗೆಟುಕುವ ದರದಲ್ಲಿ ವಿಮಾನ ಪ್ರಯಾಣಕ್ಕೆ ಅವಕಾಶ ಕಲ್ಪಿಸುವುದು ಯೋಜನೆಯಾಗಿದೆ.

'ಯೋಜನೆ ಕಾರ್ಯಗತಗೊಂಡಿಲ್ಲ ಎಂದು ನಾವು ಹೇಳುತ್ತಿಲ್ಲ, ಸಿಎಜಿ ವರದಿ ಉಲ್ಲೇಖಿಸಿದೆ. ವಿಮಾನಯಾನ ಸಂಸ್ಥೆಗಳ ಪ್ರತ್ಯೇಕ ಲೆಕ್ಕ ಪರಿಶೋಧನೆಯೂ ಆಗಿಲ್ಲ. ಅಲ್ಲದೆ, ಬಹುಪ್ರಚಾರ ಪಡೆದಿದ್ದ ಹೆಲಿಕಾಪ್ಟರ್ ಸೇವೆ ಯೋಜನೆಯೂ ಸ್ಥಗಿತವಾಗಿದೆ. ಜನತೆ ಎಂದಿಗೂ ಈ ಅಸಮರ್ಥ ಸರ್ಕಾರವನ್ನು ಕ್ಷಮಿಸುವುದಿಲ್ಲ' ಎಂದು ಖರ್ಗೆ ಹೇಳಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಮೂಲಸೌಕರ್ಯ ಯೋಜನೆಗಳಲ್ಲಿ ಆಗಿರುವ ಹಗರಣಗಳನ್ನು ಸಿಎಜಿ ವರದಿಯು ಬಯಲು ಮಾಡಿದೆ. ಇದರ ಹೊಣೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ಹೊರಬೇಕು ಎಂದು ಕಾಂಗ್ರೆಸ್ ಪಕ್ಷವು ಬುಧವಾರ ಒತ್ತಾಯಿಸಿತ್ತು.

ಜೈನ್ ವಿ.ವಿ. 'ಡೀಮ್ಡ್' ಸ್ಥಾನಕ್ಕೆ ಕುತ್ತು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯಕ್ಕೆ ನೀಡಿದ್ದ ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನವನ್ನು ಹಿಂಪಡೆಯುವಂತೆ ಕೇಂದ್ರ ಶಿಕ್ಷಣ ಸಚಿವಾಲಯಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಿದೆ.

ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜಿಗೆ 2008ರಲ್ಲಿ ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನ ನೀಡಲಾಗಿತ್ತು. ಕೆಲ ತಿಂಗಳ ಹಿಂದೆ ವಿಶ್ವವಿದ್ಯಾಲಯದ ನಿರ್ವಹಣಾ ಅಧ್ಯಯನ ಕೇಂದ್ರದ ವಿದ್ಯಾರ್ಥಿಗಳು ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್, ಅಸ್ಪೃಶ್ಯತೆ, ಅಸಮಾನತೆ, ಜಾತಿ ಕುರಿತು ಅವಹೇಳನಕಾರಿ ಸಂಭಾಷಣೆ ಒಳಗೊಂಡ ವಿಡಂಬನೆಯನ್ನು ಪ್ರದರ್ಶಿಸಿದ್ದರು.

ಪ್ರದರ್ಶನದ ವಿಡಿಯೊ ಹರಿದಾಡಿದ ನಂತರ ಮಹಾರಾಷ್ಟ್ರ ಹಾಗೂ ಕರ್ನಾಟಕದ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾಗಿದ್ದವು. ಏಳು ವಿದ್ಯಾರ್ಥಿಗಳು, ಇಬ್ಬರು ಅಧ್ಯಾಪಕರನ್ನು ಪೊಲೀಸರು ಬಂಧಿಸಿದ್ದರು. ನಂತರ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಕಳೆದ ತಿಂಗಳು ಕರ್ನಾಟಕ ಹೈಕೋರ್ಟ್ ಈ ಎಲ್ಲರ ವಿರುದ್ಧದ ವಿಚಾರಣೆಗೆ ಮಧ್ಯಂತರ ತಡೆಯಾಜ್ಞೆ ನೀಡಿತ್ತು.

ಸಮಾಜದ ಸಾಮರಸ್ಯ ಹಾಳು ಮಾಡುವ ಇಂತಹ ಘಟನೆ ನಡೆಯಲು ವಿಶ್ವವಿದ್ಯಾಲಯದ ಆಡಳಿತ ನಿರ್ವಹಣೆಯ ವೈಫಲ್ಯ ಹಾಗೂ ನಿರ್ಲಕ್ಷ್ಯವೇ ಕಾರಣ. ವಿಡಂಬನೆ ಪ್ರದರ್ಶನದ ಮಾಹಿತಿ ಇದ್ದರೂ ತಡೆದಿಲ್ಲ. ಹಾಗಾಗಿ, ಕ್ರಮ ಅನಿವಾರ್ಯ. ಡೀಮ್ಡ್ ವಿಶ್ವವಿದ್ಯಾಲಯದ ಅಧಿಸೂಚನೆ ಹಿಂಪಡೆಯಬೇಕು ಎಂದು ಉನ್ನತ ಶಿಕ್ಷಣ ಇಲಾಖೆ ಕೇಂದ್ರ ಸರ್ಕಾರಕ್ಕೆ ಬರೆದ ಪತ್ರದಲ್ಲಿ ವಿವರಿಸಿದೆ.

ನಗರದಲ್ಲಿ ತಂಪೆರೆದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಶನಿವಾರ ಮಧ್ಯಾಹ್ನ ಹಾಗೂ ಸಂಜೆ ಜೋರು ಮಳೆ ಸುರಿದು ವಾತಾವರಣವನ್ನು ತಂಪಾಗಿಸಿತು.

ಕೆಲವು ದಿನಗಳಿಂದ ಮಳೆಯಿಲ್ಲದೇ ಬಿಸಿಲಿನ ವಾತಾವರಣ ಕಂಡುಬಂದಿತ್ತು. ಉಷ್ಣಾಂಶವು ಏರಿಕೆಯಾಗಿತ್ತು. ಶನಿವಾರ ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಇತ್ತು. ಮಧ್ಯಾಹ್ನದ ವೇಳೆಗೆ ಅಲ್ಲಲ್ಲಿ ಬಿರುಸಿನ ಮಳೆ ಸುರಿಯಿತು.

ಶೇಷಾದ್ರಿಪುರಂ, ಮಲ್ಲೇಶ್ವರ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಯಶವಂತಪುರ, ಸುಂಕದಕಟ್ಟೆ, ಸದಾಶಿವನಗರ, ಆರ್‌ಟಿ ನಗರ, ವಸಂತನಗರ, ಎಂಜಿ ರಸ್ತೆ, ಟ್ರಿನಿಟಿ, ಅಶೋಕ ನಗರ, ಹಲಸೂರು ಭಾಗದಲ್ಲಿ ಮಳೆಯಾಗಿದೆ. ಮಳೆಯಿಂದ ರಕ್ಷಣೆ ಪಡೆಯಲು ಪಾದಚಾರಿಗಳು ಕೊಡೆಯ ಮೊರೆ ಹೋಗಿದ್ದರು.

ಬ್ಯಾಟರಾಯನಪುರ, ಪೀಣ್ಯ ಕೈಗಾರಿಕಾ ವಲಯ, ಜಾಲಹಳ್ಳಿ, ಯಲಹಂಕ, ಕೆಂಗೇರಿ ಸೇರಿದಂತೆ ನಗರದ ಕೆಲವು ಭಾಗದಲ್ಲಿ ಸಾಧಾರಣ ಮಳೆಯಾಗಿದೆ.



ನಗರದ ಚರ್ಚ್ ರಸ್ತೆಯಲ್ಲಿ ಮಳೆಯಲ್ಲಿಯೇ ಸಾಗಿದ ಯುವತಿಯರು —ಪ್ರಜಾವಾಣಿ ಚಿತ್ರ

'ಕನ್ನಡ ಎನೆ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ನ್ಯಾ. ಎಚ್.ಎನ್. ನಾಗಮೋಹನದಾಸ್

ಸಾಹಿತ್ಯದಿಂದ ಬೆಂಕಿಯಲ್ಲ, ಬೆಳಕು ಬರಬೇಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಡಿದ, ಕೇಳಿದ, ಓದಿದ, ಅನುಭವಿಸಿದ ವಿಷಯಗಳೇ ಕಥೆ, ಕವನ, ಕಾದಂಬರಿ ಎಂಬ ಬೇರೆ ಬೇರೆ ಪ್ರಕಾರಗಳಾಗಿ ಅಭಿವ್ಯಕ್ತಿಗೊಳ್ಳುತ್ತವೆ. ಇಂಥ ಕ್ರಿಯಾಶೀಲತೆಯಿಂದ ಬೆಂಕಿಯೂ ಬರಬಹುದು, ಬೆಳಕೂ ಬರಬಹುದು. ಬೆಂಕಿ ಹಚ್ಚುವ ಸಾಹಿತ್ಯಕ್ಕಿಂತ ಬೆಳಕು ತೋರುವ ಸಾಹಿತ್ಯದ ಅಗತ್ಯವಿದೆ ಎಂದು ಸಂಸ್ಕೃತಿ ಚಿಂತಕ ನ್ಯಾ. ಎಚ್.ಎನ್. ನಾಗಮೋಹನದಾಸ್ ಹೇಳಿದರು.

ಸಿರಿವರ ಪ್ರಕಾಶನ ಪ್ರಕಟಿಸಿದ ಕಾ.ತ. ಚಿಕ್ಕಣ್ಣ ಅವರ 'ಕನ್ನಡ ಎನೆ' ಕೃತಿಯನ್ನು ಶನಿವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ತಮ್ಮದಲ್ಲದ ತಪ್ಪಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಿಗೆ, ಇದ್ದ ಕೆಲಸವನ್ನು ಕಳೆದುಕೊಂಡು ಬೀದಿ ಪಾಲಾಗುತ್ತಿರುವವರಿಗೆ, ನಿರುದ್ಯೋಗದ ಸಮಸ್ಯೆ ಎದುರಿಸುತ್ತಿರುವವರಿಗೆ, ದಾರಿ ಕಾಣದೇ ಸಂಕಷ್ಟದಲ್ಲಿ ಇರುವ ಯುವಜನರಿಗೆ ಮಾರ್ಗದರ್ಶನ ಮಾಡುವ ಪುಸ್ತಕಗಳು ಬರಬೇಕು ಎಂದು ಆಶಯ ವ್ಯಕ್ತಪಡಿಸಿದರು.

ತಂದೆ ತಾಯಿಯ ಆಸ್ತಿಗಾಗಿ ಜಗಳವಾಡಿ ನ್ಯಾಯಾಲಯಕ್ಕೆ ಬರುವವರನ್ನು ನೋಡಿದ್ದೇನೆ. ತಂದೆ ತಾಯಿ ಬಿಟ್ಟು ಹೋದ ಪುಸ್ತಕಗಳಿಗಾಗಿ ಜಗಳವಾಡಿ ನ್ಯಾಯ ಕೇಳಲು ಇಲ್ಲಿವರೆಗೆ ಯಾರೂ ಬಂದಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಬಿ.ಟಿ. ಲಲಿತಾ ನಾಯಕ್ ಮಾತನಾಡಿ, 'ಕಾಲ್ಪನಿಕ ಸಾಹಿತ್ಯಕ್ಕಿಂತ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುವ, ಬೆಳಕು ಚೆಲ್ಲುವ ಸಾಹಿತ್ಯ ಬರಬೇಕು. ಅಸ್ಪೃಶ್ಯತೆ, ಲಿಂಗ ತಾರತಮ್ಯ, ಜಾತಿ ತಾರತಮ್ಯ, ಕಪ್ಪು-ಬಿಳಿ ಜನಾಂಗೀಯ ತಾರತಮ್ಯ, ಶೋಷಣೆಗಳೆಲ್ಲ ನಡೆಯದಂತೆ ಕಾನೂನು ಇರಬಹುದು. ಆದರೆ, ನಮ್ಮ ತಲೆಯಿಂದ ಅದು ಹೋಗಿಲ್ಲ' ಎಂದು ವಿಷಾದಿಸಿದರು.

ಮಾನವೀಯ ಅಂತಃಕರಣವನ್ನು ತಲ್ಲಣಗೊಳಿಸದ ಸಾಹಿತ್ಯವು ಸಾಹಿತ್ಯವೇ ಅಲ್ಲ ಎಂದು ಕೃತಿಕಾರ ಕಾ.ತ. ಚಿಕ್ಕಣ್ಣ ಹೇಳಿದರು. 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಕೃತಿ ಪರಿಚಯಿಸಿದರು.



'ಕನ್ನಡ ಎನೆ' ಪುಸ್ತಕವನ್ನು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಬಿಡುಗಡೆ ಮಾಡಿ ಕೃತಿಕಾರ ಕಾ.ತ. ಚಿಕ್ಕಣ್ಣ ಅವರಿಗೆ ಹಸ್ತಾಂತರಿಸಿದರು. ಸಿರಿವರ ಪ್ರಕಾಶನದ ರವೀಂದ್ರನಾಥ್ ಸಿರಿವರ, ಸಾಹಿತಿ ಬಿ.ಟಿ. ಲಲಿತಾ ನಾಯಕ್, ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲ ಎನ್.ಎಸ್. ಸತೀಶ್, ಸ್ವಾಭಿಮಾನಿ ಕರ್ನಾಟಕ ವೇದಿಕೆಯ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ಇದ್ದರು —ಪ್ರಜಾವಾಣಿ ಚಿತ್ರ

ಸೆ.11ರಿಂದ ಮಹಾ ಕುಬೇರ ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕ ಕಲ್ಯಾಣಾರ್ಥವಾಗಿ ಅಖಿಲ ಭಾರತ ಮಹಾ ಕುಬೇರ ಸಂಪೂರ್ಣ ಯಾಗವನ್ನು ಶಿವಶ್ರೀ ಮೀಡಿಯಾ ಪ್ರೈ.ಲಿ. ಅಖಿಲ ಭಾರತ ಮಹಾ ಕುಬೇರ ಸಂಪೂರ್ಣ ಯಾಗ ಸಮಿತಿ ಮತ್ತು ತಸ್ಮೈ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಬೆಂಗಳೂರು ಅರಮನೆ ಮೈದಾನದ ತ್ರಿಪುರವಾಸಿನಿ ಅಂಗಳದಲ್ಲಿ ಸೆ.11ರಿಂದ 21ರ ವರೆಗೆ ಹಮ್ಮಿಕೊಳ್ಳಲಾಗಿದೆ.

ಪ್ರಥಮ ಕುಂಡ ಸೇರಿ 11 ಪ್ರಮುಖ ಯಾಗ ಕುಂಡಗಳು, 97 ಇತರ ಹೋಮಕುಂಡಗಳಲ್ಲಿ ಯಾಗ ನಡೆಯಲಿದೆ. ಕುಬೇರ ಯಾಗದ ಮುಖ್ಯಸ್ಥರಾಗಿ ಬ್ರಹ್ಮಶ್ರೀ ರಂಗಂ ಸರನ್ಮೋಹನನ್ ತಂತ್ರಿ ಜವಾಬ್ದಾರಿ ನಿರ್ವಹಿಸಲಿದ್ದಾರೆ. ನವಗ್ರಹ ಪೂಜೆ, ಮಹಾವಿಷ್ಣು ಪೂಜೆ, ಲಕ್ಷ್ಮೀ ಕುಬೇರ ಪೂಜೆ, ಸರ ಐಶ್ವರ್ಯ ಪೂಜೆ, ಅಷ್ಟಲಕ್ಷ್ಮೀ ಪೂಜೆ, ಧನಲಕ್ಷ್ಮೀ ಪೂಜೆ, ವಿನಾಯಕ ಪೂಜೆ, ಕಲಶಾಭಿಷೇಕ, ಅಷ್ಟಾಭಿಷೇಕ, ಶಂಖಾಭಿಷೇಕ, ಪುಷ್ಪಾಭಿಷೇಕ, ನವಾಭಿಷೇಕ, ಶಾಂತ ಕುಂಭ ರುದ್ರಾಭಿಷೇಕ, ಪಂಚಾಮೃತಾಭಿಷೇಕ, ಮಹಾ ನೈವೇದ್ಯ, ಮಹಾ ಮಂಗಳಾರತಿ, ಮಹಾ ಗುರು ನಂದನಾ ಪೂಜೆ ನಡೆಯಲಿವೆ. ನಿತ್ಯ ಅನ್ನ ದಾಸೋಹ ಆಯೋಜನೆ ಮಾಡಲಾಗಿದೆ.

'ಪ್ಲಾಟಿನಂ ಸೇವೆ, ಗೋಲ್ಡನ್, ಡೈಮಂಡ್, ಸಿಲ್ವರ್, ಬ್ರಾಂಜ್, ರಾಶಿ ಸಂಕಲ್ಪ ಸೇವೆ ಮಾಡಲು ಭಕ್ತರಿಗೆ ಅವಕಾಶ ಕಲ್ಪಿಸಲಾಗಿದೆ. ವಿವಿಧ ರಾಜ್ಯಗಳಿಂದ ದಾರ್ಶನಿಕರು, ಸ್ವಾಮೀಜಿಗಳು, ಧಾರ್ಮಿಕ ಮುಖಂಡರು, ರಾಜಕೀಯ ಮುಖಂಡರು, ಉದ್ಯಮಿಗಳು ಈ ಮಹಾ ಕುಬೇರ ಯಾಗದಲ್ಲಿ ಭಾಗವಹಿಸುವರು' ಎಂದು ಪ್ರಕಟಣೆ ತಿಳಿಸಿದೆ.

ಯಾಗಕ್ಕೆ ಬರುವ ಭಕ್ತರು ಈಗಾಗಲೇ ಹೆಸರುಗಳನ್ನು ನೋಂದಾಯಿಸಿಕೊಳ್ಳುತ್ತಿದ್ದಾರೆ. ಮಾಹಿತಿಗಾಗಿ 94803 90450, 8951546098 ಸಂಪರ್ಕಿಸಬಹುದು ಎಂದು ಅಖಿಲ ಭಾರತ ಸಂಪೂರ್ಣ ಮಹಾ ಕುಬೇರ ಸಂಪೂರ್ಣ ಯಾಗ ಸಮಿತಿ ತಿಳಿಸಿದೆ.

ರಷ್ಯಾ: ಗಗನ ನೌಕೆಯಲ್ಲಿ ತಾಂತ್ರಿಕ ದೋಷ

ರಷ್ಯಾ (ರಾಯಿಟರ್ಸ್): ರಷ್ಯಾದ 'ಲೂನಾ -25' ಗಗನ ನೌಕೆಯು ಶನಿವಾರ ಚಂದ್ರನ ಕಕ್ಷೆ ತಲುಪಲು ಸಿದ್ಧತೆ ನಡೆಸುತ್ತಿದ್ದ ವೇಳೆ 'ತಾಂತ್ರಿಕ ದೋಷ' ಕಾಣಿಸಿಕೊಂಡಿದೆ ಎಂದು ರಷ್ಯಾದ ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆ 'ರೊಸ್ಕೋಸ್ಮಾಸ್' ತಿಳಿಸಿದೆ.

'ತಾಂತ್ರಿಕ ದೋಷದ ಕುರಿತು ತಜ್ಞರು ವಿಶ್ಲೇಷಿಸುತ್ತಿದ್ದಾರೆ' ಎಂದು 'ರೊಸ್ಕೋಸ್ಮಾಸ್' ತಿಳಿಸಿದೆ.

ನೌಕೆಯು ಸೋಮವಾರ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯಲು ಸಮಯ ನಿಗದಿಪಡಿಸಲಾಗಿದೆ. ಇದು ಚಂದ್ರನಲ್ಲಿ ಘನೀಕರಣಗೊಂಡಿರುವ ನೀರು ಮತ್ತು ಇತರ ಅಂಶಗಳ ಕುರಿತು ಅನ್ವೇಷಿಸಲಿದೆ.


ಕಣಿವೆಗೆ ಉರುಳಿದ ವಾಹನ 9 ಯೋಧರ ಸಾವು

ಲೇಹ್ (ಪಿಟಿಐ): ಸೇನಾಯೋಧರು ಪ್ರಯಾಣಿಸುತ್ತಿದ್ದ ವಾಹನವು ಲಡಾಖ್‌ನ ಲೇಹ್ ಜಿಲ್ಲೆಯ ಕಿಯಾರಿಯಲ್ಲಿ ಶನಿವಾರ ಕಣಿವೆಗೆ ಉರುಳಿದ್ದು, 9 ಮಂದಿ ಯೋಧರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿದ ವಾಹನ ಸಂಜೆ 4.45ರ ವೇಳೆಗೆ ಆಳವಾದ ಕಣಿವೆಗೆ ಉರುಳಿದೆ. ರಕ್ಷಣಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದು, ರಕ್ಷಣಾ ಕಾರ್ಯ ಭರದಿಂದ ಸಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಪಿ.ಡಿ.ನಿತ್ಯಾ ಅವರು ತಿಳಿಸಿದ್ದಾರೆ. ವಾಹನದಲ್ಲಿ 10 ಮಂದಿ ಯೋಧರಿದ್ದರು. ವಾಹನ ಲೇಹ್‌ನಿಂದ ನ್ಯೋಮಾಗೆ ತೆರಳುತ್ತಿತ್ತು. ತೀವ್ರವಾಗಿ ಗಾಯಗೊಂಡಿರುವ ಒಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಹೇಳಿದ್ದಾರೆ.









ವಚನ ಶ್ರಾವಣ –2023ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಚನಗಳು ಕೇವಲ ಮಾತುಗಳಲ್ಲ, ಸಾಹಿತ್ಯವಲ್ಲ, ಬದುಕಿನ ಸಾರ' ಎಂದು ಅತ್ತಿಗುಪ್ಪೆಯ ಮಾಜಿ ಕಾರ್ಪೊರೇಟರ್ ಡಾ. ಎಸ್. ರಾಜು ಹೇಳಿದರು.

ವಚನಜ್ಯೋತಿ ಬಳಗವು ಅತ್ತಿಗುಪ್ಪೆಯ ಗಂಗಾಂಬಿಕೆ ಡಾ. ಮುನಿರಾಜಪ್ಪನವರ ಮನೆಯಂಗಳದಲ್ಲಿ ಆಯೋಜಿಸಿದ್ದ 'ವಚನ ಶ್ರಾವಣ- 2023' ಉದ್ಘಾಟಿಸಿ ಮಾತನಾಡಿದರು.

'ಬದುಕು ಕಟ್ಟಿಕೊಳ್ಳಲು ವಚನಗಳು ದಾರಿದೀಪವಾಗಿವೆ. ಯಾಂತ್ರಿಕತೆಯಲ್ಲಿ ಕಳೆದುಹೋಗುತ್ತಿರುವ ಸಮಯದಲ್ಲಿ ವಚನಗಳು ಅಮೃತಸವಿಯನ್ನು ಉಣಬಡಿಸುತ್ತಿವೆ. ಸಮ ಸಮಾಜದ ನಿರ್ಮಾಣಕ್ಕೆ ಪೂರಕವಾದ ವಚನಗಳನ್ನು ಮನೆ ಮನಕ್ಕೆ ಮುಟ್ಟಿಸುವ ವಚನ ಶ್ರಾವಣ ಬಹು ಅರ್ಥಪೂರ್ಣ ಹಾಗೂ ಅಭಿನಂದನೀಯ ಕಾರ್ಯ' ಎಂದು ಬಣ್ಣಿಸಿದರು.



ವಚನಜ್ಯೋತಿ ಬಳಗದ 'ವಚನ ಶ್ರಾವಣ' ಉದ್ಘಾಟನೆ ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾರಿ ಅನೀಲಕುಮಾರ್ ಅವರನ್ನು ಸನ್ಮಾನಿಸಲಾಯಿತು

ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಮಾತನಾಡಿ, 15 ವರ್ಷಗಳಿಂದ ಶ್ರಾವಣ ಮಾಸದ 30 ದಿನಗಳೂ ಕಾರ್ಯಕ್ರಮಗಳನ್ನು ಆಸಕ್ತ ಅಂಗಳಗಳಲ್ಲಿ ಏರ್ಪಡಿಸಲಾಗುತ್ತಿದೆ. ನೂರಾರು ಕಲಾವಿದರು - ಸಾಹಿತಿಗಳಿಗೆ ವೇದಿಕೆಯನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಮುಖ್ಯಾಂಶಗಳು

- ಮಾಸದ 30 ದಿನಗಳೂ ಕಾರ್ಯಕ್ರಮ
- ಬೆಂಗಳೂರು, ತುಮಕೂರು, ರಾಮನಗರ, ಮೈಸೂರು ಜಿಲ್ಲೆಗಳಲ್ಲಿ ಆಯೋಜನೆ
- ಬದುಕು ಕಟ್ಟಿಕೊಳ್ಳಲು ವಚನಗಳು ದಾರಿದೀಪ

ಈ ಸಾಲಿನ ವಚನ ಶ್ರಾವಣವು ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು, ರಾಮನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ನಡೆಯಲಿದ್ದು, ಸಾರ್ಥಕ ಬದುಕನ್ನು ರೂಢಿಸಿಕೊಂಡು ಸತ್ಯ ಶುದ್ಧ ಪ್ರಾಮಾಣಿಕ ಜೀವನ ನಡೆಸಲು ಪ್ರೇರಕವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಗಾಯಕಿಯರಾದ ಮೀನಾಕ್ಷಿ ಮೇಟಿ, ಪೂರ್ಣಿಕ ಆರಾಧ್ಯ, ಗೀತಾ ಭತ್ತದ್, ಶ್ರಾವಣಿ ಹಣ್ಣಿ, ಸಾತ್ವಿಕ ಬಾಚಲಪುರ ಹಾಗೂ ಪ್ರಕಾಶ್ ಮಯೂರಮಠ್ ವಚನಗಳನ್ನು ಪ್ರಸ್ತುತಪಡಿಸಿದರು. ಕೀಬೋರ್ಡಿನಲ್ಲಿ ಪುಣ್ಯೇಶ್, ತಬಲದಲ್ಲಿ ಮಾರುತಿಪ್ರಸಾದ್ ಜೊತೆಯಾಗಿದ್ದರು.

ರಾಷ್ಟ್ರಪತಿ ಪದಕ ಪುರಸ್ಕೃತ ಪೊಲೀಸ್ ಅಧಿಕಾರಿ ಅನೀಲಕುಮಾರ್ ಗ್ರಾಮಪುರೋಹಿತ್ ಅವರನ್ನು ಅಭಿನಂದಿಸಲಾಯಿತು. ಪ್ರಾಧ್ಯಾಪಕರಾದ ಚಂದ್ರಶೇಖರಮೂರ್ತಿ, ಮಲ್ಲಿಕಾರ್ಜುನ್ ಯೋಗಾನಂದ್, ರಮೇಶ್, ರೇಣುಕಪ್ರಸಾದ್, ರುದ್ರೇಶ್ ಅದರಂಗಿ, ನಿವೃತ್ತ ಅಧಿಕಾರಿಗಳಾದ ಗೌರಿಶಂಕರ ಸೋಂಪುರ, ಎಲೆ ಶಶಿಧರ್, ಶಿವಕುಮಾರ್, ಬಳಗದ ಪ್ರಭು, ರುದ್ರೇಶ್, ರಾಜಾಗುರುಪ್ರಸಾದ್ ಇದ್ದರು.

'ನೆರಳು ರಹಿತ ದಿನ'ಕ್ಕೆ ಸಾಕ್ಷಿಯಾದ ವಿದ್ಯಾರ್ಥಿಗಳು



'ನೆರಳು ರಹಿತ ದಿನ'ಕ್ಕೆ ಸಾಕ್ಷಿಯಾದ ವಿದ್ಯಾರ್ಥಿಗಳು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌರವ್ಯೂಹದಲ್ಲಿ ಅಪರೂಪಕ್ಕೊಮ್ಮೆ ಘಟಿಸುವ 'ನೆರಳು ರಹಿತ ದಿನ'ಕ್ಕೆ ನಗರದ ರಾಜಾಜಿನಗರದ ವೆಂಕಟ್, ಸೇಂಟ್ ಆನ್ಸ್ ಮತ್ತು ವೀನಸ್ ಶಾಲೆಯ ವಿದ್ಯಾರ್ಥಿಗಳು ಶನಿವಾರ ಸಾಕ್ಷಿಯಾದರು.

ಈ ವರ್ಷದ 2ನೇ 'ನೆರಳು ರಹಿತ ದಿನ' ಇದಾಗಿತ್ತು. ಏಪ್ರಿಲ್ 24 ಹಾಗೂ 25ರಲ್ಲಿಯೂ ಈ ಘಟನೆ ಸಂಭವಿಸಿತ್ತು.

ಶನಿವಾರ ಮಧ್ಯಾಹ್ನ 12.24ಕ್ಕೆ ತಮ್ಮ ನೆರಳೇ ತಮಗೆ ಕಾಣದಂತಾಗುವ ರೋಮಾಂಚಕ ದೃಶ್ಯಗಳನ್ನು ನೋಡಿ ವಿದ್ಯಾರ್ಥಿಗಳು ಸಂಭ್ರಮಪಟ್ಟರು. ವಿಜ್ಞಾನ ಶಿಕ್ಷಕರ ಮಾರ್ಗದರ್ಶನದಲ್ಲಿ ಶಾಲಾ ಆವರಣದಲ್ಲಿ ವಿವಿಧ ವಿನ್ಯಾಸ ರೂಪಿಸಲಾಗಿತ್ತು.

ಸಂಸ್ಥೆಯ ಅಧ್ಯಕ್ಷ ಟಿ. ಬಾಲಕೃಷ್ಣ, ಉಪಾಧ್ಯಕ್ಷ ಬಿ. ವೆಂಕಟೇಶ್, ನಿರ್ದೇಶಕ ಬಿ. ಶೇಖರ್, ಪ್ರಾಂಶುಪಾಲರಾದ ಸುಲೋಚನಾ ಬಾಲಕೃಷ್ಣ, ಉಪ ಪ್ರಾಂಶುಪಾಲರಾದ ಶ್ರೀಮತಿ ಅಲಂಕೃತ, ಸುಭಿಕ್ಷ ಇದ್ದರು.

ವಿಶೇಷ ಠೇವಣಿ ಯೋಜನೆ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ಠೇವಣಿ ಯೋಜನೆ 'ರೆಪ್ಕೋ ತಂಗ ಮಗಳ್' ಯೋಜನೆಯನ್ನು ರೆಪ್ಕೋ ಬ್ಯಾಂಕ್ ಜಾರಿಗೆ ತಂದಿದೆ.

ಚೆನ್ನೈನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ವ್ಯವಹಾರಗಳ ಸಚಿವ ಅಜಯ್ ಕುಮಾರ್ ಮಿಶ್ರಾ ಅವರು ಈ ಯೋಜನೆಗೆ ಚಾಲನೆ ನೀಡಿದರು.

18 ವರ್ಷದ ಒಳಗಿನ ಹೆಣ್ಣುಮಕ್ಕಳ ವಿದ್ಯಾಭ್ಯಾಸ, ಆರೋಗ್ಯಕ್ಕೆ ಈ ಯೋಜನೆ ಅನುಕೂಲವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ಯೋಜನೆಯ ಅವಧಿ ಕನಿಷ್ಠ 3 ವರ್ಷಗಳಿಂದ ಗರಿಷ್ಠ 5 ವರ್ಷಗಳ ಮಿತಿ ಇರಲಿದೆ. ಯೋಜನೆಯ ಮುಕ್ತಾಯದ ನಂತರವೇ ಬಡ್ಡಿಯ ಲಾಭ ದೊರೆಯಲಿದೆ. ಈ ಯೋಜನೆ ಅಡಿ ಪೋಷಕರು ತಮ್ಮ ಹೆಣ್ಣುಮಕ್ಕಳ ಮೇಲೆ ಗರಿಷ್ಠ ₹ 1 ಕೋಟಿ ತೊಡಗಿಸಬಹುದು. ಆಗಸ್ಟ್ 17ರಿಂದಲೇ ಯೋಜನೆ ಜಾರಿಗೆ ಬಂದಿದೆ.

ಈ ಠೇವಣಿ ಯೋಜನೆ ಹೆಚ್ಚಿನ ಮಾಹಿತಿಗೆ ಬನಶಂಕರಿ 2ನೇ ಹಂತದಲ್ಲಿರುವ ಬ್ಯಾಂಕ್‌ನಲ್ಲಿ ವಿಚಾರಿಸಬಹುದು (080-26710412, 9481703165).

ಉದ್ಯೋಗದಾತ ಬ್ರ್ಯಾಂಡ್ ಪ್ರಶಸ್ತಿ ಸ್ವೀಕರಿಸಿದ ಕೆಎಸ್‌ಆರ್‌ಟಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಷ್ಯಾದ ಅತ್ಯುತ್ತಮ ಉದ್ಯೋಗದಾತ ಬ್ರ್ಯಾಂಡ್ ಪ್ರಶಸ್ತಿಯನ್ನು ಸಿಂಗಾಪುರದಲ್ಲಿ ಗುರುವಾರ ಕೆಎಸ್‌ಆರ್‌ಟಿಸಿ ಸಂಸ್ಥೆಗೆ ಪ್ರದಾನ ಮಾಡಲಾಯಿತು.

ಅತ್ಯುತ್ತಮ ಮಾನವ ಸಂಪನ್ಮೂಲ ಉಪಕ್ರಮಗಳ ಅನುಷ್ಠಾನ ವರ್ಗದಲ್ಲಿ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿತ್ತು. ವರ್ಲ್ಡ್ ಸಸ್ಟೈನೆಬಿಲಿಟಿ ಕಾಂಗ್ರೆಸ್ ನೀಡಿದ ಈ ಪ್ರಶಸ್ತಿಯನ್ನು ಕೆಎಸ್‌ಆರ್‌ಟಿಸಿ ಪರವಾಗಿ ಮುಖ್ಯ ಲೆಕ್ಕಾಧಿಕಾರಿ ಮಂಜುಳಾ ನಾಯ್ಕ್, ಮಂಡಳಿ ಕಾರ್ಯದರ್ಶಿ ಲತಾ ಟಿ.ಎಸ್. ಸ್ವೀಕರಿಸಿದರು.

ಕಂಟ್ರಿ ಮ್ಯಾನೇಜರ್ ವಿಲ್ಬರ್ ಎನ್.ಜಿ., ಚೀಫ್ ಎನ್‌ವೈರ್ನ್‌ಮೆಂಟ್ ಅಧಿಕಾರಿ ಕರೀನ ಲೆನೋರ್ ಎಸ್. ಬಯೋನ್ ಪ್ರಶಸ್ತಿ ಪ್ರದಾನ ಮಾಡಿದರು.



ಏಷ್ಯಾದ ಅತ್ಯುತ್ತಮ ಉದ್ಯೋಗದಾತ ಬ್ರ್ಯಾಂಡ್ ಪ್ರಶಸ್ತಿಯನ್ನು ಕೆಎಸ್‌ಆರ್‌ಟಿಸಿ ಸಂಸ್ಥೆಯ ಪರವಾಗಿ ಮಂಡಳಿ ಕಾರ್ಯದರ್ಶಿ ಲತಾ ಟಿ.ಎಸ್., ಮುಖ್ಯ ಲೆಕ್ಕಾಧಿಕಾರಿ ಮಂಜುಳಾ ನಾಯ್ಕ್ ಸ್ವೀಕರಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

REAL ESTATE SELLING

Sites

Banashankari

BANASHANKARI 6TH Stage- WANTED/ AVAILABLE BDA Sites All Measurements Residential/ Commercial Sites Contact- 8050908920/ 9986866661

BANASHANKARI 6TH Stage Kodipalya, Near Kengeri Metro Station. 27.50x40 Site, East, 6,000/- Negotiable. 9148914809, 9740075563.

SALE BSK 6th stage 10 Block 30x40 North Facing 80Lakh also 40x60 East Facing 4th Block 2Cr and 20x30 48 lakh Nego. 9945373839, 9620041313

'BANASHANKARI' 6TH Stage, 3rd Block, 30x40, West Facing Prime Location Ready to Construction. Contact :9900097239

SITE FOR sale 30X40 East facing at Banashankari 5th Stage And Banashankari 6th Stage 20X30 Good Location 9448050035

'AVAILABLE 'AND Wanted Banashankari 6th Stage, Anjanapura, BDA And BBMP Sites,20X30,30X40,40X60, 50X80,Contact:9900097239

BSK 6TH Stage Near Metro Station and NPS School BDA Site For Sale 20X30 1st Allotte 9845389955

BTM Layout

SALE BDA BTM Stage 2, MICO Layout Independent House 30'×50 best for future development, investment 3.50CR. +918660563308.

Bangalore North

SALE 50X50 W/F Gated Community Vacant Site in Byappanahalli, Bangalore North 3800 Per Sft Call:8050492849

Basavanagudi

N.R.COLONY, BASAVANAGUDI, 40x60, South facing, excellent residential location for Sale, Contact -9341261231

HRBR Layout

HRBR LAYOUT 20X30 EF BDA Site Sale 40ft Road 22,500/- Psft And Commercial Building for Sale Rental Income 2.75 Cr Sale Rs. 5 Cr Contact: 7349322223

Jakkur

JUDICIAL_LAYOUT 50'x80' PRIME SITE FOR SALE @ Rs._14,500/- PSFT Negotiable. BUYERS/ NRIs_Contact: 9880377799/ 9845054356.

J P Nagar

JPNAGAR 8TH Phase, Royal County BDA Site Sale, 30x50, S/F, 9000/- Negotioble: 9538680364 / 9513004587

JPNAGAR 8TH Phase Royal Lake Frent 40x60,11000/- BDA Approved Site BCMC Layout,30x40,12000/- 9845704509

OLD HOUSE For Sale 27x58 South Facing JP Nagar 1st Phase, Sarakki Main Road.- 9845030368

Kengeri

KENGERI, KARUBELE Road, DC Conversion 30x40 Site for Sale. Fully Developed (Rs. 2,600/- Sqft). 92434-19641.

Kanakapura Road

SALE BCMC, Bank Officer BSK 6th Stage. BDA Panchayat/ Commercial Sites/ House. RMS PROPERTIES: 6360702897

NARAYANANAGAR- 1ST Block, Off Kanakapura Road- 40x60 W/F Site For Sale. Beautiful Location. Contact:- 9845030368

Kempegowda Layout

60x40 BDA SITE



COMMERCIAL SITE FOR SALE @ Nadaprabhu Kempegowda Layout Adjacent to 300 ft. Pheripheral Ring Road, Rs 7800 per sqft. Fixed. **Call: 9900040216**

"NADAPRABHU KEMPEGOWDA Layout, 8th Block, 'D' Sector, 60 feet Road, 50x80 North facing Site sale. 7795531787"

Magadi Road

1080SQFT- SITE Sale Corner Triangle Shape, DC Conversion, E-Katha Kadabagere Cross, Shivani Greens Call: 9845044335

Multiple Locations

BASVESHAWARNAGAR 40×60, Mahalakshmi layout 40×60, Rajajinagar 45×90, Sadashivanagar 200×120, 80×120, Commercial, Site- For Sale- 8660075308.

Nagarabhavi

SITE FOR Sale- Nagarabhavi, 12th Block, Near Nammura Thindi, BDA Site No. 264, West Facing, 40 feet Road, measuring 30x42 sft. Contact Owner: 9844009086, 9343368313

Nelamangala

50X45 NORTH_EAST CORNER_SITE SALE, Nelamangala New Town, Adjacent to Ratan School Main Road. Contact: 9448064395.

Rajajinagar

RAJAJINAGAR NEAR METRO STATION 30X50, 40X60, SITES FOR SALE: GOOD LOCATION CONTACT 9980501366

Rajarajeshwari Nagar

SITE FOR Sale Gattigere (Sudarshan Layout), RR Nagar 30x40 Site W/F @ 8500/- Nego: 9900036544

'A' KHATA Property for Sale in Rajarajeshwari Nagar 400 mtrs from Sub Registrar office, 40x60, East facing Sites. Call: 9448288522

Sahakarnagar

SHAKARNAGAR 1600 Sft North West Corner Site Excellent Location For Sale Contact: 9341260828

Tumkur Road

SALE, SITE, #555 BDA Approved W/F, 40X60 HMT Layout, Prime Location Nelagadaranahalli Nagasandra Bangalore-73 Rate:15000/- sqft. Contact OWNER 9448483407

MEI LAYOUT, Hesaraghatta Road, East Facing 40X60 SITE for SALE Opposite to Playground, Brokers Excuse. PH: 080-23106092, 6360209718.

Vijayanagar

VIJAYANAGAR RPC LAYOUT Near Gayatri Temple 40X60 WF. Also 30X65 Old House Sale: 9448045601/ 9535811626

Vishweshwariah Layout

BDA 30X40 South Facing 1st Block Rate 9500 Srike 100Ft Road Parllel 40Ft Road 1st Block Rate 10500 2nd Block Rate 8000 3ft Margin Land West Facing SMV Layout 6th Block Rate 8500 Contact: Shivu 9844603127

"SITE FOR-SALE 30x40 East Vishveshwaraiah Layout 5th Block, 20x30 West Nagarbhavi 11th Block. Contact: 7892836338"

AVAILABLE VISHWESHWARAIAH Layout 4th Block, 30X40 East Facing, Near 80ft Road Good Location. Contact: 8553908699

RESIDENTIAL PLOT Sale 40x60 SF 40ft Road Rs. 9300/- Negotiable Full White Vishweshwaraiah Layout: 9916826976

VISHWESHWARIA BDA 6th Block 50×80 North, 80 feet road Commercial, Near KLE Law College: 7899570235

***30X40 N/F** Site for sale* VISHVESHWARAIAH LAYOUT 8th Block Rs.10500/Sqt Negotiable, Direct Owner meeting. Call.9591013777

VISHWESHWARAIAH LAYOUT BDA 6th Block EF 30x40 40ft Road Near Oxford College Good Location: 9980860138

SALE 30X40 VISHVESWARAIAH LAYOUT 4th Block south facing 78lakh Negotiable 9945373839, 9620041313

BDA SITE 5 BHK HOUSE FOR SALE



Hosakerehalli
Lift, modular kitchen, commercial space in basement floor, Built-up: 2900 sft (Basement+Gr+3 flrs) South east corner.
Call: 7406 219 219

RIVERSIDE RESORT PROPERTY for SALE / RENT / LEASE



Location : 2 kms. from world famous JOGFALLS, Karnataka.
Premium Rooms, Boating Area, Surrounded by Lush Green Forest & Hills Just Next to River Sharavati.
CALL : 9019369350

House

Basavanagudi

SALE: EF 33x40.5 Ground+ 2 Floors 36Sq Building 85,000/- Rental Income, Behind Federal Bank, Kanakapura Road, Basavanagudi, No Brokers. Call: 94482-12081

Electronic City

1350 SQFT NF Site at Begur. Fully Compounded with Security Gate. A' Khatha. 1.5KM from Hosur Road Metro. Rs. 5400/- Psft:- 9008930130

Hosur Road

A KATHA 15bhk Building for sale 1.8L monthly income. Garvebhavi Palya 9902673298

K R Puram

FOUR ONE BHK Houses in one 40x30 site with own borewell and cauvery water facility two wheeler parking available for sale at KR Puram, Devasandra, Bangalore. Muslim area. Contact: 9663778450 or 9741328689.

Nagarabhavi

"NAGARABHAVI BDA Complex near 'D'-Group BDA 30x40 North 4 BHK Duplex House 2.40 crore. 9448432633"

Palaceguttahalli

PALACE GUTTAHALLI ROAD House Sale Ground First Second on 20x25 (North) 1.10 Cr. Negotiable: 9448324477

Rajarajeshwari Nagar

RAJARAJESHWARINAGAR BHEL Layout 40x60 2 Bedroom 8 Houses, Car-parking for sale. Contact: 9945079777

J P Nagar



Spacious 2 BHK Flat in 3rd Floor, Jeevan Mitra Apartments JP Nagar 1st phase, Rs. 90/- Lakhs (negotiable) CALL : **9341231396 / 9481778364** (WhatsApp). Brokers Excuse.

J.P.NAGAR_9TH Phase`2 BHK`& 3_BHK Flats for Sale, 20%`Special Discount for Police and Defence personal`-Contact -9036706304.

Sadashiva Nagar

SADASHIVANAGAR ARCHITECT BUNGALOW 60X90 NE and 80x120 RMV 1st Block Dollars Colony, Jayanagar 9845057822 9980830798

Sanjaynagar

SALE STILT-FLOOR Parking-Plus 3-floors Each_Consisting of_a 3_BHK House With Lift and`Solar Vinayaka Layout Bhoopsandra Call:6361859856

Vishweshwariah Layout

20X30 TRIPLEX House, West Facing, North door, Near Amma Ashrama, 1.25 Cr (Negotiable)- 8710013684, 9972099398

Flat

Basaveshwaranagar

"MAGADI MAIN Road ready to occupy 3BHK 1315.Sfqt 8600000/-, 2BHK 1050.Sqft 6800000/- with occupancy certificate. 9845286505"

Bannerghatta Road

2 BHK & 3 BHK flats for sale in BG road and Jayangar. Call: 9886425997

Basavanagudi

WELL APPOINTED 3 Bedroom apartment near National College Metro Station Basavanagudi, LalBagh, Bangalore for Sale. Asking price is Rs. 2.5 Crore. Contact: 9980868914.

Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

Malleshwaram

FLATS FOR Sale 2BED ROOM @ Malleshwaram 4th Cross Only 4 Units Left Near TVS Showroom Quoted 1.40Cr all Inclusive Contact/Wts App: 9901556699

Agricultural Land Converted

Sarjapur Road

SALE CONVERTED Two Acres Land,Sarjapur Chikkathirupati Main Road And Near Indus School Contact: 8884501767

Agricultural Land

Hebbal

SALE RAJANKUNTE 1Acres 3Acres 4Acres 10Acres 22Acres 32Acres Just @ Distance of 20kms from Hebbal Thar Road General Clear Titles Compounded: 9844009992

Mysore Road


12000 SQFT Farm Land From Bangalore Mysore Highway 6kms Near Channapatana Total 22L and 1Acres 10Guntas/ Acre 68L Fencing: 9845169300

Dabaspet

SALE AGRICULTURE Land 2.1Acre, 12km from Dabaspet with 80ft state Highway. 80Lacs/acre (nego) Owner: 9611776523

Commercial Building

Whitefield



SALE TENANTED SHOWROOM
HOODI WHITEFIELD
(with Two Side Road), Area: 3735 sft, RENTAL INCOME : Rs. 3,24,000/-
Owner: IBRAHIM SAIT - 9845014561

Jayanagar

***JAYANAGAR 9TH** Block* Commercial PG Building 40x70 Corner5floors,Rental income 7.20 lakhs, Price:10.50cr. Contact.9945079777

Koramangala

BRAND NEW Commercial property for Sale/ Rent in prime location at Koramangala. Contact: 9845122028/ 8548832516

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call:9663001940.



Live in Concert with
USTAD TAUFIQ QURESHI
VIJAY PRAKASH | PRIYANKA BARVE
A musical treat of Indian and South Classical, Bollywood, Folk, Ghazal, Fusion, Contemporary & World Music.
1st September 6:30 pm
Chowdiah Memorial Hall, Malleshwaram, Bengaluru | Tickets available on : bookmyshow

Commercial Land

Mysore Road

SALE BY Owner DC converted for petrol bunk 13,000 sqft vacant commercial land on Bidadi Muthawadi 80 Feet Road, East Facing, Vaastu, E-Khatha clear title. Ready Registration. Ph: 9900170818.

Commerical

BTM Layout

30x40 BDA SITE



COMMERCIAL SITE BTM 6th Stage 1st Block 30x40 East BDA Site 80 feet Road Near Dental College Rs. 13500 Negotiable. **Call : 9845286583**

Basaweshwaranagar

COMMERCIAL NORTH East Corner, Fully Developed Area 2230 Sft, Near Pushpanjali Theater, Shivanagar Bangalore: 9343782958

Residential/ Commercial

Jayanagar

BDA PROPERTY 30x 50 (1500 sq ft) North Facing old house Jayanagar 6th Block near yediyur lake Road contact 7639976999

K R Puram

SITE AT KAMADHENU LAYOUT B.NARAYANAPURA MEASURING 30*40 NEARBY K.R.PURAM STATION CONTACT: 9790716954

Villas/Bunglows

Rajarajeshwari Nagar

RR.NAGAR ARCHITECT BUNGALOW 50x80 Beautiful Location Near (Actor) Ganesh House. Also Duplex House 40x60 with Swimming Pool. Residential Sites 13000, 7000, 5400Sft: 9845057822 9980830798

REAL ESTATE BUYING

Flat

Hebbal

WANTED FOR Purchase New East Facing 3BHK FLAT 1935 Sft @ L&T RAINTREE BOULEVARD. Hebbal Bangalore. OWNERS only Contact: 99010-66686

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

Banashankari

WANTED BDA Banashankari 6th Stage Anjanapura J.P.Nagar Kanakapura Road Surrounding. Immediate Settlement. Phone- 9964627255/ 9845511170

Devanahalli

REQUIRED 10 -100 ACRES CONVERTED/ FREE/ GREEN ZONE IVC ROAD/ NEAR NH DEVANAHALLI OUTRATE/ JD/ VILLA/ LAYOUT MAHESH 9743865623

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any_BDA_Sites Wanted. Contact: SAPTHAGIRI. 9900268073, 9448068073.

Vishweshwariah Layout

"REQUIRED NAGARABHAVI, Vishveshwaraiah, Kempegowda Layout 20x30, 30x40, 40x60, 50x80 Sites, Contact Genuine_sellers only. 9845268611'

WANTED SITES Vishweshwaraiah Layout Any Block 30x40, 30x50, 50x80 Immediate Registration Brokers Excuse, Genuine Buyers: 6360050356

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

RENTAL PROPERTIES

Accommodation Available

Commercial

RENT 10ACRES Convertible Agricultural Land at Kaggalahalli off Kanakapura Ideal for Resort Amusement Convention Sports Venture Owner-9844016887/ 9620312558

5500 SQFT. 1st floor for RENT Thavarekere near (Bangalore Dairy) Chocolate Factory Road, Above Federal Bank. 9342597945

COMMERCIAL BUILDING available for Rent 450 sqft, 3rd Floor at Goraguntepalya, Tumkur Road, Bengaluru. Mob-8310105291

***AVAILABLE FOR** RENT* RPC Layout near Swimming pool 2600 sqft Commercial 4 floor Building. 8867569333

Flats

JAYAMAHAL, 3 BHK 1st floor, Independent apartment, covered parking, Servant quarters, access to large terrace. Contact: 9741415476

SEMIFURNISHED SPACIOUS 2 bhk 1432 sqft Apartment for rent in ideal homes RRNagar Bangalore Call owner:- 9731167255.

Industrial And Factory

INDUSTRIAL BUILDING FOR RENT AT PAPAMPATTI PRIVU,COIMBATORE.250Mtrs from coimbatore- trichy NH ABOUT 35000 sq.ft INDUSTRIAL BUILDING IN 3 ACRES LAND,FULLY COMPUND,POWER 300KVA HT- UPGRADABLE UPTO 500KVA.SUITABLE FOR MNC,ENGINEERING INDUSTRIES,WAREHOUSES,IT COMPANY'S,AUTOMOBILE YARD & SERVICE STATION ETC.CALL : 98421 26269

House

FOR RENT: 3BHK independent east facing house near Vidyapeeta Circle. Contact: 9481679074

Accommodation Wanted

Commercial

WANTED OFFICE Space upto 1000 Sft. for Rent/Lease in and around Malleshwaram, Madhav Nagar, Abshot Layout, Kumara Park and Sanjayanagar Bangalore. Contact: 70221 06263

BUILDERS ESSENTIAL

Water Proofing

WE FIX LEAKING_ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

AUTOMOTIVE

Four Wheelers Selling

Tractors / Heavy Vehicles

Tanker Truck For sale
2016 model, 6 wheels, 12 KL capacity Bharat Benz Tanker Truck used for transport of Petroleum Product is in good condition for sale. Documents legally valid. Interested parties may please contact: **9448468096**

MATRIMONIAL

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ.
http://www.hoysalakarnatakabrahmins.com
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಸುಮ ಗೋಪಾಲಕೃಷ್ಣ
9886908152

USHODHAYA MATRIMONIAL (Estd: 1998)
FOR HIGH CLASS FIRST/ SECOND MARRIAGES Personalised Services All Age Groups INDIA/ ABROAD,
9611919477 9886884291

Brides Wanted

Kannada

EDUCATED BRIDE from A Well To Do Family, Boy 29 Years Self Employed Business From An Affluant Naidu Family From-Bangalore, Contact:9945500472

WELL SETTLED retired young looking healthy widower looking for lady partner widow or unmarried, age less than 50, healthy ,good looking ,forward outlook without ulterior motive may contact mob 97318 31348

MORE Classifieds Ads on Subsequent Pages

‘ಬಾಸ್’ ಎನ್ನದಿದ್ದಕ್ಕೆ ಹಲ್ಲೆ: ನಾಲ್ವರು ಬಂಧನ

ಪ್ರಜಾವಾಣಿ ವಾರ್ತೆ


ಅಭಿಷೇಕ್


ದರ್ಶನ್

ಅಪರಾಧ ಸುದ್ದಿ

ಬೆಂಗಳೂರು: ಯುವಕನನ್ನು ಅಕ್ರಮವಾಗಿ ಕೂಡಿಹಾಕಿ ಲಾಂಗ್‌ನಿಂದ ಹಲ್ಲೆ ಮಾಡಿದ್ದ ನಾಲ್ವರು ಆರೋಪಿಗಳನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಅಂದ್ರಹಳ್ಳಿಯ ಅರಳಿಮರ ವೃತ್ತದ ನಿವಾಸಿ ಅಭಿಷೇಕ್ (19) ಹಾಗೂ ದರ್ಶನ್ (18) ಬಂಧಿತರು. ಇಬ್ಬರಿಬ್ಬರೂ ತಮ್ಮದೇ ಪ್ರದೇಶದ ಬಾಲಕರ ಜೊತೆ ಸೇರಿಕೊಂಡು ಕೃತ್ಯ ಎಸಗಿದ್ದರು. ಬಂಧಿತ ಇಬ್ಬರು ಬಾಲಕರ ಹೆಸರು ಬಹಿರಂಗಪಡಿಸಲಾಗದು’ ಎಂದು ಪೊಲೀಸರು ಹೇಳಿದರು.

‘ಯುವಕನ ಮೇಲೆ ನಡೆದಿದ್ದ ಹಲ್ಲೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಅದರನ್ವಯ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘9ನೇ ತರಗತಿಗೆ ಶಿಕ್ಷಣ ಮೊಟಕುಗೊಳಿಸಿದ್ದ ಆರೋಪಿ ಅಭಿಷೇಕ್, ಪೀಣ್ಯದ ಟಿವಿಎಸ್ ಕಂಪನಿಯ ಪ್ಯಾಕಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ಪಿಯುಸಿ ಮುಗಿಸಿದ್ದ ದರ್ಶನ್, ಉಬರ್ ಕ್ಯಾಬ್ ಕಂಪನಿಯಲ್ಲಿ ಟೆಲಿ ಕಾಲಿಂಗ್ ಕೆಲಸ ಮಾಡುತ್ತಿದ್ದ. ಇವರಿಬ್ಬರು, ಕೆಲ ಹುಡುಗರ ತಂಡ ಕಟ್ಟಿಕೊಂಡು ಅಂದ್ರಹಳ್ಳಿಯಲ್ಲಿ ಸುತ್ತಾಡುತ್ತಿದ್ದರು. ಎಲ್ಲರೂ ತಮಗೆ ಬಾಸ್ ಎನ್ನಬೇಕೆಂದು ಹೇಳುತ್ತಿದ್ದರು. ಅಭಿಷೇಕ್ ಹಾಗೂ ಇತರರು, ರೌಡಿ ರೀತಿಯಲ್ಲಿ ವರ್ತಿಸುತ್ತಿದ್ದರು. ತಮ್ಮನ್ನು ನೋಡಿ ಎಲ್ಲರೂ ಹೆದರಬೇಕೆಂದು ಬಯಸುತ್ತಿದ್ದರು’ ಎಂದು ಹೇಳಿದರು.

ಹಲ್ಲೆ ಮಾಡಿ ವಿಡಿಯೊ ಚಿತ್ರೀಕರಣ: ‘ಅಂದ್ರಹಳ್ಳಿಯ ಯುವಕನೊಬ್ಬರು, ಬಾಸ್ ಎನ್ನುವುದಿಲ್ಲವೆಂದು ವಾದಿಸಿದ್ದರು. ಕೋಪಗೊಂಡಿದ್ದ ಆರೋಪಿಗಳು, ಯುವಕನನ್ನು ಅಪಹರಿಸಿ ಕೊಠಡಿಯೊಂದರಲ್ಲಿ ಕೂಡಿ ಹಾಕಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಬಾಸ್ ಎಂದು ಏಕೆ ಕರೆಯಬೇಕು’ ಎಂದು ಯುವಕ ಪುನಃ ಪ್ರಶ್ನಿಸಿದ್ದ. ಕೋಪಗೊಂಡಿದ್ದ ಆರೋಪಿಗಳು, ಯುವಕನಿಗೆ ಲಾಂಗ್‌ನಿಂದ ಹೊಡೆದಿದ್ದರು. ‘ಬಾಸ್ ಎನ್ನುವವರೆಗೂ ಬಿಡುವುದಿಲ್ಲ’ ಎಂದು ಚಿತ್ರಹಿಂಸೆ ನೀಡಿದ್ದರು. ಇದರ ವಿಡಿಯೊವನ್ನು ಚಿತ್ರೀಕರಿಸಿದ್ದ ಆರೋಪಿಯೊಬ್ಬ, ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದ. ‘ಬಾಸ್ ಎನ್ನದಿದ್ದರೆ, ಇದೇ ಶಿಕ್ಷೆ’ ಎಂದು ಬರೆದುಕೊಂಡಿದ್ದ.’

‘ವಿಡಿಯೊ ಬಗ್ಗೆ ಮಾಹಿತಿ ಬರುತ್ತಿದ್ದಂತೆ, ಘಟನೆ ನಡೆದ ಸ್ಥಳವನ್ನು ಪತ್ತೆ ಮಾಡಲಾಯಿತು. ನಂತರ, ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಹೇಳಿದರು.

ಬೇಕರಿಗೆ ನುಗ್ಗಿ ಗಲಾಟೆ: ಮಾಲೀಕರಿಗೆ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಂಗಾನಗರ ಮುಖ್ಯರಸ್ತೆಯಲ್ಲಿರುವ ‘ಶ್ರೀ ಮಂಜುನಾಥ್ ಕೇಕ್ ಕಾರ್ನರ್ಸ್ ಸ್ವೀಟ್ಸ್’ ಬೇಕರಿಗೆ ನುಗ್ಗಿ ಗಲಾಟೆ ಮಾಡಿದ್ದ ದುಷ್ಕರ್ಮಿಗಳು, ಮಾಲೀಕರಿಗೆ ಜೀವ ಬೆದರಿಕೆಯೊಡ್ಡಿ ಪರಾರಿಯಾಗಿದ್ದಾರೆ.

‘ಆಗಸ್ಟ್ 16ರಂದು ನಡೆದಿರುವ ಘಟನೆ ಸಂಬಂಧ ಬೇಕರಿ ಮಾಲೀಕ ಚಂದ್ರಶೇಖರ್ ದೂರು ನೀಡಿದ್ದಾರೆ. ನಾಲ್ವರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಎರಡು ಬೈಕ್‌ಗಳಲ್ಲಿ ಸ್ಥಳಕ್ಕೆ ಬಂದಿದ್ದ ದುಷ್ಕರ್ಮಿಗಳು, ದೂರುದಾರರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆಯೊಡ್ಡಿದ್ದರು. ಬೇಕರಿ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿದ್ದರು. ಕಬ್ಬಿಣದ ರಾಡ್‌ನಿಂದ ಬೇಕರಿ ಗಾಜಿನ ವಸ್ತುಗಳನ್ನು ಒಡೆದು ಸ್ಥಳದಿಂದ ಪರಾರಿಯಾಗಿದ್ದಾರೆ. ದುಷ್ಕರ್ಮಿಗಳ ಕೃತ್ಯದಿಂದ ₹35 ಸಾವಿರ ನಷ್ಟವಾಗಿರುವುದಾಗಿ ಮಾಲೀಕರು ದೂರಿನಲ್ಲಿ ತಿಳಿಸಿದ್ದಾರೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ಜ್ವರವೆಂದು ಆಸ್ಪತ್ರೆಗೆ ಹೋಗಿ ಬಂದಿದ್ದ ಉದ್ಯಮಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀವ್ರ ಜ್ವರವೆಂದು ಹೇಳಿ ಆಸ್ಪತ್ರೆಗೆ ಹೋಗಿ ಚುಚ್ಚುಮದ್ದು ಹಾಕಿಸಿಕೊಂಡು ಬಂದಿದ್ದ ಹೋಟೆಲ್ ಉದ್ಯಮಿ ಅಮರ್ ಶೆಟ್ಟಿ (31) ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಈ ಸಂಬಂಧ ಕೆ.ಪಿ. ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹೊಸಂಗಡಿಯ ಅಮರ್ ಶೆಟ್ಟಿ, ಐಟಿಐ ಪೂರ್ಣಗೊಳಿಸಿದ್ದರು. ಅವಿವಾಹಿತರಾಗಿದ್ದ ಇವರು, ದುಬೈನಲ್ಲಿ ಆರು ವರ್ಷ ಕೆಲಸ ಮಾಡಿ ವರ್ಷದ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದರು. ಹೋಟೆಲ್ ಉದ್ಯಮ ಆರಂಭಿಸಿದ್ದರು. ಸ್ನೇಹಿತರ ಜೊತೆ ವಾಸವಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.


ಅಮರ್ ಶೆಟ್ಟಿ

‘ಅಮರ್ ಶೆಟ್ಟಿ ಸಾವಿನ ಸಂಬಂಧ ಸಹೋದರ ದೂರು ನೀಡಿದ್ದಾರೆ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿವೆ.

ಚುಚ್ಚುಮದ್ದು ನೀಡಿದ್ದ ಜಾಗದಲ್ಲಿ ಊತ: ‘ತೀವ್ರ ಜ್ವರದಿಂದ ಬಳಲುತ್ತಿದ್ದ ಅಮರ್ ಶೆಟ್ಟಿ ಅವರು ಕೆ.ಪಿ. ಅಗ್ರಹಾರದಲ್ಲಿರುವ ಭಾಗ್ಯ ಕ್ಲಿನಿಕ್‌ಗೆ ಆಗಸ್ಟ್ 13ರಂದು ಹೋಗಿದ್ದರು. ಅಲ್ಲಿಯ ವೈದ್ಯರು, ಚುಚ್ಚುಮದ್ದು ನೀಡಿದ್ದರು. ನಂತರ, ಮಾತ್ರೆಗಳನ್ನು ಬರೆದುಕೊಟ್ಟಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಮರ್ ಮನೆಗೆ ಹೋಗಿ ವಿಶ್ರಾಂತಿ ಪಡೆದಿದ್ದರು. ಇದಾದ ಕೆಲ ಗಂಟೆಗಳ ನಂತರ, ಚುಚ್ಚುಮದ್ದು ನೀಡಿದ್ದ ಜಾಗದಲ್ಲಿ ಊತ ಬಂದು ನೋವಾಗಿತ್ತು. ಹೀಗಾಗಿ, ರಾಜಾಜಿನಗರದ ಮತ್ತೊಂದು ಕ್ಲಿನಿಕ್‌ಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದರು. ಊತ ಕಡಿಮೆಯಾಗದಿದ್ದರಿಂದ ವೈದ್ಯರ ಸಲಹೆಯಂತೆ ಕಿಮ್ಸ್‌ಗೆ ದಾಖಲಾಗಿದ್ದರು. ಚಿಕಿತ್ಸೆ ಪಡೆದರೂ ನೋವು ಕಡಿಮೆಯಾಗಿರಲಿಲ್ಲ. ಆಗಸ್ಟ್ 18ರಂದು ಅಸುನೀಗಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಚುಚ್ಚುಮದ್ದು ವ್ಯತಿರಿಕ್ತ ಪರಿಣಾಮ ಬೀರಿದ್ದರಿಂದ ಅಮರ್ ಆರೋಗ್ಯ ಹದಗೆಟ್ಟಿತ್ತು. ಇವರ ಸಾವಿಗೆ ಭಾಗ್ಯ ಕ್ಲಿನಿಕ್ ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ಕುಟುಂಬಸ್ಥರು ಆರೋಪಿಸುತ್ತಿದ್ದಾರೆ. ತನಿಖೆಯಿಂದ ನಿಜಾಂಶ ತಿಳಿಯಬೇಕಿದೆ’ ಎಂದು ಮೂಲಗಳು ಹೇಳಿವೆ.


ಮಣಿಪುರದಲ್ಲಿ ನಡೆದ ಬೆತ್ತಲೆ ಮೆರವಣಿಗೆ, ರಾಜ್ಯದಲ್ಲಿ ಬಾಲಕಿಯರ ಮೇಲೆ ನಡೆದಿರುವ ಅತ್ಯಾಚಾರ ಘಟನೆಗಳು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕಪ್ಪು ಮೈಬಣ್ಣದ ಅವಹೇಳನ ಖಂಡಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಬಿದ್ದು ಗಾಯ: ಹಲ್ಲೆಯೆಂದು ಸುಳ್ಳು ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ಬಿದ್ದು ಗಾಯಗೊಂಡಿದ್ದ ದಿನೇಶ್ ಸುಬ್ಬಾ (31), ತಮ್ಮ ಮೇಲೆ ಹಲ್ಲೆಯಾಗಿರುವುದಾಗಿ ಸುಳ್ಳು ದೂರು ನೀಡಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

‘ಸಿಕ್ಕಿಂನ ದಿನೇಶ್, ನಗರದ ರೆಸ್ಟೋರೆಂಟ್‌ವೊಂದರ ಕೆಲಸಗಾರ. ಚೀನಾ ಪ್ರಜೆಯೆಂದು ತಿಳಿದು ದುಷ್ಕರ್ಮಿಗಳು ತಮ್ಮ ಮೇಲೆ ಹಲ್ಲೆ ಮಾಡಿದ್ದಾರೆಂದು ಹೇಳಿ ದೂರು ನೀಡಿದ್ದರು. ತನಿಖೆ ಕೈಗೊಂಡಾಗ, ದಿನೇಶ್ ಅವರೇ ಸುಳ್ಳು ದೂರು ನೀಡಿರುವುದು ಗೊತ್ತಾಗಿದೆ’ ಎಂದು ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸ್ ಮೂಲಗಳು ಹೇಳಿವೆ.

ಮದುವೆ ವಾರ್ಷಿಕೋತ್ಸವ ಪಾರ್ಟಿ: ‘ದಿನೇಶ್ ಅವರು ಪತ್ನಿ ಹಾಗೂ ಮೂರು ತಿಂಗಳ ಮಗುವಿನ ಜೊತೆ ದೊಡ್ಡ ತೋಗೂರಿನಲ್ಲಿ ವಾಸವಿದ್ದಾರೆ. ಆಗಸ್ಟ್ 15ರಂದು ದಿನೇಶ್ ಮದುವೆ ವಾರ್ಷಿಕೋತ್ಸವವಿತ್ತು. ಹೀಗಾಗಿ, ಸ್ನೇಹಿತರ ಜೊತೆ ಪಾರ್ಟಿ ಮಾಡಲು ದಿನೇಶ್ ರಾತ್ರಿ ಹೋಟೆಲ್‌ಗೆ ಹೋಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪಾರ್ಟಿ ಮುಗಿಸಿ ಮನೆಯತ್ತ ನಡೆದುಕೊಂಡು ಹೊರಟಿದ್ದರು. ಮದ್ಯದ ಅಮಲಿನಲ್ಲಿದ್ದ ಅವರು, ರಸ್ತೆಯಲ್ಲಿ ಬಿದ್ದು ತಲೆಗೆ ಗಾಯ ಮಾಡಿಕೊಂಡಿದ್ದರು. ರಸ್ತೆಯಲ್ಲಿ ಬಿದ್ದಿರುವುದಾಗಿ ಪತ್ನಿಗೆ ಹೇಳಿದರೆ ಬೈಯುತ್ತಾರೆಂದು ತಿಳಿದಿದ್ದರು. ಹೀಗಾಗಿ, ತಮ್ಮ ಮೇಲೆ ಹಲ್ಲೆ ನಡೆದಿರುವುದಾಗಿ ಸುಳ್ಳು ದೂರು ನೀಡಿದ್ದರು. ಅವರಿಗೆ ಪುನಃ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಂಚೆ ಮೂಲಕ ಡಿಎಲ್, ಆರ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಪ್ರತಿದಿನ ಮುದ್ರಿತವಾಗುವ ಚಾಲನಾ ಅನುಜ್ಞಾ ಪತ್ರ (ಡಿಎಲ್), ವಾಹನ ನೋಂದಣಿ ಪ್ರಮಾಣಪತ್ರ (ಆರ್‌ಸಿ) ಸ್ಮಾರ್ಟ್‌ಕಾರ್ಡ್‌ಗಳನ್ನು ಸೂಚನಾ ಪತ್ರದೊಂದಿಗೆ ಅರ್ಜಿದಾರರಿಗೆ ಸ್ಪೀಡ್ ಪೋಸ್ಟ್ ಮೂಲಕ ತಲುಪಿಸಲು ಸಾರಿಗೆ ಇಲಾಖೆಯು ಅಂಚೆ ಇಲಾಖೆಯ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಶುಕ್ರವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ಸಾರಿಗೆ ಇಲಾಖೆ ಆಯುಕ್ತರು, ಅಧಿಕಾರಿಗಳು ಮತ್ತು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಸಭೆಯಲ್ಲಿ ಈ ಒಪ್ಪಂದ ಮಾಡಿಕೊಳ್ಳಲಾಯಿತು. ಇದರಿಂದ ಸಾರ್ವಜನಿಕರ ಮನೆಬಾಗಿಲಿಗೆ ನಿಗದಿತ ಸಮಯದಲ್ಲಿ ಸ್ಮಾರ್ಟ್‌ಕಾರ್ಡ್ ತಲುಪಲಿದೆ ಎಂದು ಪ್ರಕಟಣೆ ತಿಳಿಸಿದೆ.

ರಂಗನಾಥ ರಾವ್ ಪ್ರಶಸ್ತಿಗೆ ಕೃತಿ ಆಹ್ವಾನ

ಬೆಂಗಳೂರು: ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನವು 2022ನೇ ಸಾಲಿನ ‘ರಂಗನಾಥ ರಾವ್ ಪ್ರಶಸ್ತಿ’ಗೆ ಲೇಖಕಿಯರಿಂದ ಕೃತಿ ಆಹ್ವಾನಿಸಿದೆ.

ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ. ಕೃತಿಗಳು ಆತ್ಮಚರಿತ್ರೆ ಅಥವಾ ಜೀವನ ಚರಿತ್ರೆ ಸಾಹಿತ್ಯ ಪ್ರಕಾರಕ್ಕೆ ಸೇರಿರಬೇಕು. ಈ ಕೃತಿಗಳು 2022ರ ಜನವರಿಯಿಂದ ಡಿಸೆಂಬರ್ ಒಳಗೆ ಪ್ರಕಟವಾಗಿರಬೇಕು.

ಆಸಕ್ತ ಲೇಖಕಿಯರು ತಮ್ಮ ಕೃತಿಗಳ ಮೂರು ಪ್ರತಿಗಳನ್ನು ಸೆ.30ರೊಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಎಚ್. ಎಸ್. ವೆಂಕಟೇಶಮೂರ್ತಿ, ಪ್ರಧಾನ ಕಾರ್ಯದರ್ಶಿ ತೀರ್ಥ ಜಿ.ಆರ್.ಆರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಳಾಸ: ಜಿ.ಎನ್.ರಂಗನಾಥ ರಾವ್, ಕಾರ್ಯಾಧ್ಯಕ್ಷರು, ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠನ, ನಂ.266, ಸ್ನೇಹ, 3ನೇ ಮುಖ್ಯರಸ್ತೆ, 8ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-5600095

ಮಾಹಿತಿಗೆ: 6362473151 ಸಂಪರ್ಕಿಸಬಹುದು.

ಉಚಿತ ಆರೋಗ್ಯ ಶಿಬಿರ ಇಂದು

ಬೆಂಗಳೂರು: ಆರೋಗ್ಯ ಇಲಾಖೆಯು ಇದೇ ಭಾನುವಾರ ಬೆಳಿಗ್ಗೆ 8ರಿಂದ ಸಂಜೆ 4 ಗಂಟೆಯವರೆಗೆ ಬಿನ್ನಿಪೇಟೆ ವಾರ್ಡ್‌ನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಬೃಹತ್ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಂಡಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಶಿಬಿರ ಉದ್ಘಾಟಿಸಲಿದ್ದಾರೆ. ಗಾಂಧಿನಗರ ಕ್ಷೇತ್ರದ ಜನರಿಗೆ ಉತ್ತಮ ಆರೋಗ್ಯ ಸೌಲಭ್ಯ ಹಾಗೂ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಬೃಹತ್ ಆರೋಗ್ಯ ಶಿಬಿರ ಆಯೋಜಿಸಲಾಗಿದೆ. ಎಲ್ಲಾ ರೀತಿಯ ವೈದ್ಯಕೀಯ ಸೇವೆಗಳನ್ನೂ ಉಚಿತವಾಗಿ ಒದಗಿಸಲಾಗುತ್ತದೆ.

ಶಿಬಿರದಲ್ಲಿ ಭಾಗವಹಿಸುವ ಪ್ರತಿಯೊಬ್ಬರನ್ನೂ ತಜ್ಞ ವೈದ್ಯರು ಪರೀಕ್ಷಿಸಲಿದ್ದು, ಔಷಧವನ್ನೂ ವಿತರಿಸಲಾಗುತ್ತದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಐದು ಜಂಕ್ಷನ್‌ಗಳಲ್ಲಿ ಸಿಗ್ನಲ್‌ಮುಕ್ತ ಸಂಚಾರ: ಪರಿಶೀಲನೆಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಸೂಚನೆ

ಬನಶಂಕರಿ ಜಂಕ್ಷನ್: ಮೇಲ್ಸೇತುವೆಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆ–ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಿಸಲು 2.5 ಕಿ.ಮೀ ಮೇಲ್ಸೇತುವೆ ನಿರ್ಮಾಣದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಶೀಘ್ರ ನಿರ್ಧಾರ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿರುವ ಬಗ್ಗೆ ಶನಿವಾರ ಸ್ಥಳ ಪರಿಶೀಲನೆ ಮಾಡಿದ ಶಿವಕುಮಾರ್ ಅವರು, ಮೆಟ್ರೊ, ಬಿಬಿಎಂಪಿ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಬಿಎಂಆರ್‌ಸಿಎಲ್‌ನಿಂದ ಬನಶಂಕರಿ ಜಂಕ್ಷನ್‌ನಲ್ಲಿ ₹45 ಕೋಟಿ ವೆಚ್ಚದಲ್ಲಿ ಸ್ಕೈವಾಕ್ ನಿರ್ಮಿಸಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ಅಂಜುಂ ಪರ್ವೇಜ್ ಹೇಳಿದರು. ಆದರೆ, ಅಷ್ಟೊಂದು ವೆಚ್ಚ ಮಾಡಿದರೂ ಅದರಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಬನಶಂಕರಿ ಜಂಕ್ಷನ್‌ನಲ್ಲಿ ಇದೀಗ ಹೆಚ್ಚಿನ ಸಂಚಾರ ದಟ್ಟಣೆ ಇದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗಲಿದೆ. ಆದ್ದರಿಂದ ದೂರದೃಷ್ಟಿಯಿಂದ ಸಂಚಾರ ದಟ್ಟಣೆ ನಿವಾರಣೆಗೆ ಕ್ರಮ ಕೈಗೊಳ್ಳಬೇಕು. ಈ ಜಂಕ್ಷನ್ ಸೇರಿದಂತೆ ಐದಾರು ಜಂಕ್ಷನ್‌ಗಳಲ್ಲಿ ಸಿಗ್ನಲ್ ರಹಿತ ಸಂಚಾರಕ್ಕೆ ಅನುವಾಗುವಂತೆ ಮೇಲ್ಸೇತುವೆ ನಿರ್ಮಿಸಬೇಕು ಎಂದು ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ರಘುನಾಥ ನಾಯ್ಡು ಮನವಿ ಮಾಡಿಕೊಂಡರು.

‘2.5 ಕಿ.ಮೀ ಮೇಲ್ಸೇತುವೆಯನ್ನು ಯಡಿಯೂರು ಟರ್ಮಿನಸ್‌ನಿಂದ ಆರಂಭಿಸಿ ಬನಶಂಕರಿ ಜಂಕ್ಷನ್ ಮೂಲಕ ಕನಕಪುರ ರಸ್ತೆಗೆ ಸಂಪರ್ಕಿಸುವ ಯೋಜನೆ ಇದಾಗಿದೆ. ಇದರಿಂದ ಟಾಟಾ ಸಿಲ್ಕ್ ಫಾರ್ಮ್ ಜಂಕ್ಷನ್, ಯಡಿಯೂರು ಜಂಕ್ಷನ್, ಯಡಿಯೂರು ಹೆರಿಗೆ ಆಸ್ಪತ್ರೆ ಜಂಕ್ಷನ್, ಜೆಎಸ್‌ಎಸ್ ಕಾಲೇಜು ಜಂಕ್ಷನ್, ಹುಣಸೆಮರ ಜಂಕ್ಷನ್, ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ಸಿಗ್ನಲ್ ಮುಕ್ತವಾಗಲಿದ್ದು, ಕನಕಪುರ ರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ. ಸುಮಾರು ₹200 ಕೋಟಿ ವೆಚ್ಚವಾಗಲಿದೆ’ ಎಂಬ ಪ್ರಸ್ತಾವ ಸಲ್ಲಿಸಿದರು.

ಇದನ್ನು ಪರಿಶೀಲಿಸಿದ ಡಿಸಿಎಂ, ಈ ಯೋಜನೆ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ಬಿಬಿಎಂಪಿಯ ಹಣಕಾಸು ವಿಭಾಗದ ವಿಶೇಷ ಆಯುಕ್ತ ಹಾಗೂ ದಕ್ಷಿಣ ವಲಯದ ಆಯುಕ್ತ ಜಯರಾಂ ರಾಯಪುರ ಅವರಿಗೆ ಸೂಚನೆ ನೀಡಿದರು.

ಸಚಿವ ರಾಮಲಿಂಗಾರೆಡ್ಡಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಇದ್ದರು.

ರಾಜೀವ್ ಗಾಂಧಿ ಅವರ ಪ್ರತಿಮೆಯ ವಿನ್ಯಾಸ ಸಿದ್ಧವಾಗುತ್ತಿರುವ ಇಟ್ಟಮಡುವಿಗೆ ಸಚಿವರು ಭೇಟಿ ನೀಡಿ ವಿನ್ಯಾಸ ನಿರ್ಮಾಣ ಕಾರ್ಯ ಪರಿಶೀಲಿಸಿದರು.

ಗಾಂಧಿಬಜಾರ್ ಮುಖ್ಯರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಿಗಳ ಅನುಕೂಲವಾಗುವಂತೆ ಸ್ಥಳೀಯ ಹಾಲಿ ಹಾಗೂ ಮಾಜಿ ಶಾಸಕರ ಜೊತೆ ಚರ್ಚಿಸಿ ಕಾನೂನು ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಶಿವಕುಮಾರ್ ಅವರು ವ್ಯಾಪಾರಸ್ಥರು ಹಾಗೂ ಸ್ಥಳೀಯರಿಗೆ ಭರವಸೆ ನೀಡಿದರು.

ಗಾಂಧಿಬಜಾರ್ ವಿದ್ಯಾರ್ಥಿ ಭವನದಲ್ಲಿ ಮಾಜಿ ಶಾಸಕ ಆರ್.ವಿ. ದೇವರಾಜ್, ಮಾಜಿ ಮೇಯರ್ ಪಿ.ಆರ್. ರಮೇಶ್, ಕೆಪಿಸಿಸಿ ವಕ್ತಾರ ಡಾ ಶಂಕರ್ ಗುಹಾ ಅವರೊಂದಿಗೆ ಡಿಸಿಎಂ ಉಪಾಹಾರ ಸೇವಿಸಿದರು.



ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಾಲೋಚನೆ ನಡೆಸಿದರು

ಈಜಿಪುರ ಮೇಲ್ಸೇತುವೆ: ಸಂಪುಟದಲ್ಲಿ ಚರ್ಚೆ

‘ಈಜಿಪುರ ಮೇಲ್ಸೇತುವೆ 3 ಕಿ.ಮೀ ಉದ್ದ ಇದ್ದು, ಕಾಮಗಾರಿ ನಿಂತಿದೆ. ಇದೀಗ ಟೆಂಡರ್ ಅಂತಿಮಗೊಳಿಸುವ ಕೆಲಸ ಬಾಕಿ ಇದ್ದು, ಸಚಿವ ಸಂಪುಟದಲ್ಲಿ ಚರ್ಚಿಸಿ ಆದ್ಯತೆ ಮೇರೆಗೆ ಕಾಮಗಾರಿ ತೆಗೆದುಕೊಳ್ಳುತ್ತೇವೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘2017ರಲ್ಲಿ ಈ ಯೋಜನೆ ಕಾಮಗಾರಿ ಆರಂಭವಾಗಿದ್ದು, ಕೇವಲ ಶೇ 35 ಮಾತ್ರ ಕೆಲಸ ಆಗಿದೆ. ಗುತ್ತಿಗೆ ಕಂಪನಿ ಸಮಸ್ಯೆ ಆಗಿ ಕೆಲಸ ನಿಂತಿದೆ. ಟೆಂಡರ್ ರದ್ದು, ಹೊಸ ಟೆಂಡರ್ ಕರೆಯಲಾಗಿತ್ತು. ಹೆಚ್ಚಿನವರು ಆಸಕ್ತಿ ತೋರುತ್ತಿಲ್ಲ. ಸಿಂಗಲ್ ಟೆಂಡರ್ ಆಗಿದ್ದು ಶೇ 19 ಹೆಚ್ಚಳಕ್ಕೆ ಬೇಡಿಕೆ ಇಟ್ಟಿದ್ದಾರೆ. ಹೀಗಾಗಿ ವಾಸ್ತವಾಂಶ ಅರಿಯಲು ಖುದ್ದಾಗಿ ನಾನು ಹಾಗೂ ರಾಮಲಿಂಗಾರೆಡ್ಡಿ ಅವರು ಬಂದಿದ್ದೇವೆ’ ಎಂದರು.

‘₹100 ಕೋಟಿ ಹೆಚ್ಚುವರಿ ಹಣ ಬೇಕಾಗಿದ್ದು, ನಾವೇ ಈ ಯೋಜನೆ ಹೆಚ್ಚುವರಿ ಹಣ ನೀಡಬಹುದೇ ಅಥವಾ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಬಹುದೇ ಎಂದು ಚರ್ಚೆ ಮಾಡುತ್ತೇವೆ’ ಎಂದು ತಿಳಿಸಿದರು.

‘ಒಬ್ಬರು ಮಾಡಿದ ಕೆಲಸಕ್ಕೆ ಬೇರೆಯವರು ಕೈ ಹಾಕಲು ಇಚ್ಛಿಸುವುದಿಲ್ಲ. ಹೀಗಾಗಿ ಕೇವಲ ಒಬ್ಬರು ಟೆಂಡರ್ ನಲ್ಲಿ ಭಾಗವಹಿಸಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುದ್ದಿ 2 ನಿಮಿಷ

ಸೈಕಲ್ ಕಳ್ಳನ ಬಂಧನ

ಬೆಂಗಳೂರು: ವ್ಯಾಪಾರಿ ಸೋಗಿನಲ್ಲಿ ಸುತ್ತಾಡಿ ಸೈಕಲ್‌ಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದಡಿ ಶೇಖರ್‌ನನ್ನು (50) ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಶ್ರೀರಾಮಪುರ ದಯಾನಂದನಗರದ ನಿವಾಸಿ ಶೇಖರ್, ಹಲವು ದಿನಗಳಿಂದ ಸೈಕಲ್ ಕಳ್ಳತನ ಮಾಡುತ್ತಿದ್ದ. ಈತನನ್ನು ಬಂಧಿಸಿ ₹ 5 ಲಕ್ಷ ಮೌಲ್ಯದ 19 ಸೈಕಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಲ್ಲೇಶ್ವರ ನಿವಾಸಿಯೊಬ್ಬರ ₹ 65 ಸಾವಿರ ಮೌಲ್ಯದ ಸೈಕಲ್ ಇತ್ತೀಚೆಗೆ ಕಳ್ಳತನವಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ, ಆರೋಪಿ ಸಿಕ್ಕಿಬಿದ್ದ’ ಎಂದರು.



ಸೈಕಲ್‌ನಲ್ಲಿ ಸುತ್ತಾಟ: ‘ಬೆಳಿಗ್ಗೆ 5ರಿಂದ 7ರ ಅವಧಿಯಲ್ಲಿ ಸೈಕಲ್‌ನಲ್ಲಿ ಸುತ್ತಾಡುತ್ತಿದ್ದ ಆರೋಪಿ, ಯಾವೆಲ್ಲ ಮನೆಗಳ ಎದುರು ಸೈಕಲ್‌ಗಳಿವೆ ಎಂಬುದನ್ನು ತಿಳಿದುಕೊಳ್ಳುತ್ತಿದ್ದ. ಮರುದಿನ ಮನೆಗಳ ಬಳಿ ಹೋಗಿ, ಸೈಕಲ್ ಕದ್ದುಕೊಂಡು ಪರಾರಿಯಾಗುತ್ತಿದ್ದ. ಕದ್ದ ಸೈಕಲ್‌ಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ, ಹಣ ಸಂಪಾದಿಸುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಇತ್ತೀಚೆಗೆ ಸೈಕಲ್‌ವೊಂದನ್ನು ಕದ್ದಿದ್ದ ಆರೋಪಿ, ದೊಡ್ಡಬಳ್ಳಾಪುರದವರೆಗೂ ತುಳಿದುಕೊಂಡು ಹೋಗಿ ಸಂಬಂಧಿಕರಿಗೆ ಕೊಟ್ಟಿದ್ದ’ ಎಂದರು.

‘ಕೆಲದಿನಗಳ ಹಿಂದೆಯಷ್ಟೇ ಸೈಕಲ್ ಕದಿಯುವಾಗ ಜನರ ಕೈಗೆ ಆರೋಪಿ ಸಿಕ್ಕಿಬಿದ್ದಿದ್ದ. ಆದರೆ, ಎದೆನೋವು ಬಂದ ರೀತಿಯಲ್ಲಿ ನಟಿಸಿ ಆರೋಪಿ ತಪ್ಪಿಸಿಕೊಂಡಿದ್ದ’ ಎಂದು ಪೊಲೀಸರು ತಿಳಿಸಿದರು.

ಪತಿಯನ್ನು ಕೂಡಿಹಾಕಿ ಪತ್ನಿ ಪರಾರಿ

ಬೆಂಗಳೂರು: ಮನೆಯ ಸ್ನಾನದ ಕೋಣೆಯಲ್ಲಿ ಪತಿಯನ್ನು ಕೂಡಿಹಾಕಿ ಪತ್ನಿ ಪರಾರಿಯಾಗಿದ್ದು, ಈ ಸಂಬಂಧ ರಾಜರಾಜೇಶ್ವರಿನಗರ ಠಾಣೆಗೆ ದೂರು ಸಲ್ಲಿಕೆಯಾಗಿದೆ.

‘ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು, ಪತ್ನಿಯನ್ನು ಹುಡುಕಿಕೊಡುವಂತೆ ದೂರು ನೀಡಿದ್ದಾರೆ. ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರರಿಗೆ ಎರಡು ತಿಂಗಳ ಹಿಂದೆಯಷ್ಟೇ ಮದುವೆಯಾಗಿದೆ. ಪತಿ– ಪತ್ನಿ ಇಬ್ಬರೂ ಚೆನ್ನಾಗಿದ್ದರು. ಆಗಸ್ಟ್ 12ರಂದು ಪತಿಯನ್ನು ಸ್ನಾನ ಮಾಡಲು ಕಳುಹಿಸಿದ್ದ ಪತ್ನಿ, ಹೊರಗಿನಿಂದ ಬಾಗಿಲು ಹಾಕಿಕೊಂಡು ಮನೆಯಿಂದ ಪರಾರಿಯಾಗಿದ್ದಾರೆ. ಸಂಬಂಧಿಕರು, ಸ್ನೇಹಿತರು ಹಾಗೂ ಇತರೆಡೆ ಹುಡುಕಾಡಿದರೂ ಪತ್ನಿ ಬಗ್ಗೆ ಮಾಹಿತಿ ಸಿಕ್ಕಿಲ್ಲ. ಬೇರೊಬ್ಬ ಯುವಕನ ಜೊತೆ ಪತ್ನಿ ಒಡನಾಟ ಹೊಂದಿದ್ದರೆಂದು ದೂರುದಾರ ತಿಳಿಸಿದ್ದಾರೆ. ಯುವಕನ ಜೊತೆ ಪತ್ನಿ ಹೋಗಿರಬಹುದೆಂದು ಅವರು ಅನುಮಾನ ವ್ಯಕ್ತಪಡಿಸಿದ್ದಾರೆ’ ಎಂದಿವೆ.

ಚಿತ್ರಾವಳಿ



ನಗರದಲ್ಲಿ ರಂಗಚಂದಿರ ಟ್ರಸ್ಟ್‌ನ 6ನೇ ವಾರ್ಷಿಕೋತ್ಸವದಲ್ಲಿ ರಂಗಭೂಮಿ ಕಲಾವಿದರಾದ ಸರ್ವೆಸ್, ಕಗ್ಗೆರೆ ಮಂಜುನಾಥ್ ಹಾಗೂ ಹೇಮಂತ್ ಕುಮಾರ್ ಅವರಿಗೆ ರಂಗ ಗೌರವ ನೀಡಿ ಗೌರವಿಸಲಾಯಿತು. ವಿ.ಕೃಷ್ಣಮೂರ್ತಿ, ಜಿ.ಜಾನಕಿರಾಮ್, ಮೋಹನ್ ಕೊಂಡಜ್ಜಿ, ಡಾ.ಕೆ.ವೈ.ನಾರಾಯಣಸ್ವಾಮಿ, ಆರ್. ನರೇಂದ್ರಬಾಬು, ಮಾಲತೇಶ್ ಎನ್. ಕೊಡ್ಲಿಯಾರ್, ಡಾ.ಬೇಲೂರು ರಘುನಂದನ್, ಗಾಯಕಿ ಸವಿತಾ ಗಣೇಶ್, ರಂಗಸಂಘಟಕ ಜೆಪಿಒ ಚಂದ್ರು ಇದ್ದರು



ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಆಫ್ ಬೆಂಗಳೂರು ಶನಿವಾರ ಆಯೋಜಿಸಿದ್ದ ವಿಶ್ವ ಛಾಯಾಗ್ರಹಣ ದಿನಾಚರಣೆಯಲ್ಲಿ ಹಿರಿಯ ಛಾಯಾಗ್ರಾಹಕರಾದ ಮುತ್ತು ಪಿ., ಎಂ.ಡಿ. ಅಸದ್, ಭಾನುಪ್ರಕಾಶ ಚಂದ್ರ ಹಾಗೂ ವಿಶ್ವನಾಥ ಸುವರ್ಣ ಅವರನ್ನು ಸನ್ಮಾನಿಸಲಾಯಿತು. ಮುಖ್ಯಮಂತ್ರಿ ಅವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಪ್ರೆಸ್‌ಕ್ಲಬ್ ಅಧ್ಯಕ್ಷ ಶ್ರೀಧರ ಆರ್. ಇದ್ದರು
—ಪ್ರಜಾವಾಣಿ ಚಿತ್ರ



ಯಶವಂತಪುರ ಕ್ಷೇತ್ರದ ನೆಲಗುಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ರಾವುಗೋಡ್ಲು ಗ್ರಾಮದ ಆರ್. ಸಂಪತ್‌ರಾಜು ಹಾಗೂ ಉಪಾಧ್ಯಕ್ಷರಾಗಿ ನಾಗಮ್ಮ ನರಸಪ್ಪ ಅವರು ಆಯ್ಕೆಯಾಗಿದ್ದು, ಅಧ್ಯಕ್ಷರನ್ನು ಪಂಚಾಯಿತಿ ಸದಸ್ಯರು ಸನ್ಮಾನಿಸಿದರು

‘ನಮ್ಮ ಕೆರೆ’ ಚರ್ಚೆಯಲ್ಲಿ ಮೂಡಿದ ಒಮ್ಮತದ ಅಭಿಪ್ರಾಯ

ಕೆರೆ ಅತಿಕ್ರಮಣ ಕಡಿವಾಣಕ್ಕೆ ಕ್ರಮ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆರೆ ಅತಿಕ್ರಮಣಗಳನ್ನು ನಿಲ್ಲಿಸಬೇಕು. ಕೆರೆಗಳ ಅಭಿವೃದ್ಧಿಗೆ ಸಂಘಟಿತ ಕೆಲಸಗಳಾಗಬೇಕು. ಕೊಳಚೆ ನೀರನ್ನು ಶುದ್ಧೀಕರಿಸಿ ಮರುಬಳಕೆಯಾಗಬೇಕು. ಕೈಗಾರಿಕೆಗಳು ನೇರವಾಗಿ ಕೊಳಚೆಯನ್ನು ಹೊರಬಿಡಬಾರದು. ಬಳಕೆದಾರರನ್ನು ಒಳಗೊಂಡಂತೆ ಕೆರೆ ಸಂರಕ್ಷಣಾ ಸಮಿತಿ ರಚಿಸಬೇಕು...’

ಇದು ಸಿಟಿಜನ್ಸ್ ಫಾರ್ ಸ್ಯಾಂಕಿ ಮತ್ತು ಬೆಂಗಳೂರು ಪ್ರಜಾ ವೇದಿಕೆಯಿಂದ ಶನಿವಾರ ಕಾನೂನು, ಪರಿಸರ, ನಾಗರಿಕ ಚಟುವಟಿಕೆ, ರಾಜಕೀಯ ಮತ್ತು ನಾಗರಿಕ ಆಡಳಿತ ತಜ್ಞರ ಜೊತೆಗೆ ನಡೆದ ‘ನಮ್ಮ ಕೆರೆ’ ಚರ್ಚೆಯಲ್ಲಿ ಕೇಳಿಬಂದ ಅಭಿಪ್ರಾಯಗಳು.

ಕೆರೆಗಳ ಅಭಿವೃದ್ಧಿ ಎಂದರೆ ಕೆರೆಯನ್ನುಉಳಿಸಿ, ಸಂರಕ್ಷಿಸುವುದೇ ಆಗಬೇಕು. ಕೆರೆಗಳ ಸುತ್ತ ಪಾರ್ಕ್, ನಡಿಗೆ ಪಥ ಮಾಡುವುದೆಲ್ಲ ಆನಂತರದ ಕೆಲಸಗಳಷ್ಟೇ ಎಂದು ನಾಗರಿಕ ಹೋರಾಟಗಾರ ಎನ್.ಎಸ್. ಮುಕುಂದ ಹೇಳಿದರು.

ಕೆರೆಗೆ ಸಂಬಂಧಿಸಿದ ಕಂದಾಯ ದಾಖಲೆಗಳು, ಗಡಿ ನಕ್ಷೆಗಳು ಒಳಗೊಂಡಂತೆ ಎಲ್ಲ ವಿವರ ಲಭ್ಯವಾಗುವ ವೆಬ್‌ಸೈಟ್ ಬೇಕು. ಪ್ರತಿ ವಾರ್ಡ್‌ನಲ್ಲಿ ಕೆರೆ ಸಂರಕ್ಷಣಾ ಸಮಿತಿ ಮಾಡಬೇಕು ಎಂದು ಸಲಹೆ ನೀಡಿದರು.

ಕೆರೆ ಸಂರಕ್ಷಣೆ ಮತ್ತು ನಿರ್ವಹಣೆಗೆ ಅಧಿಕೃತ ಅಧಿಕಾರಿಗಳು ಇರಬೇಕು. ಈಗ ಇರುವವರಿಗೆ ಬೇರೆ ಜವಾಬ್ದಾರಿಯ ಜೊತೆಗೆ ಇದನ್ನು ನೀಡಲಾಗಿದೆ. ಅವರಿಗೆ ನಿರ್ಧಾರ ಕೈಗೊಳ್ಳುವ ಅಧಿಕಾರ ಕೂಡ ಇರಲ್ಲ. ಪ್ರತಿ ಮೂರು ತಿಂಗಳಿಗೊಮ್ಮೆ ಕೆಟಿಸಿಡಿ ಪ್ರಾಧಿಕಾರದ ಸಭೆ ನಡೆಸಬೇಕು ಎಂದು ನಿವೃತ್ತ ಐಎಫ್‌ಎಸ್ ಅಧಿಕಾರಿ ಯು.ವಿ. ಸಿಂಗ್ ತಿಳಿಸಿದರು.

ಕೆರೆಯನ್ನು ರಕ್ಷಿಸಲು ಹೋರಾಟ ಮಾಡುವವರ ಮೇಲೆ ಎಫ್‌ಐಆರ್ ಆದ ಕೂಡಲೇ ಅದನ್ನು ಮರಣ ಶಾಸನ ಎಂದು ತಿಳಿದುಕೊಳ್ಳಬೇಕಿಲ್ಲ. ಕಾನೂನು ತಜ್ಞರ ಸಹಾಯ ಪಡೆದು ನ್ಯಾಯಾಲಯದಲ್ಲಿಯೂ ಹೊರಗೂ ಹೋರಾಟ ಮುಂದುವರಿಸಲು ಸಾಧ್ಯ ಎಂದು ವಕೀಲ ಸ್ಮರಣ್ ಶೆಟ್ಟಿ ಹೇಳಿದರು.

ಕೆರೆಗಳಿಗೆ ಕಾರ್ಖಾನೆಗಳ ನೀರು ಹರಿದಾಗ ಮೀನುಗಳು ಸಾಯುತ್ತವೆ. ನಾವು ಪರೀಕ್ಷಿಸಿದಾಗ ಅದರಲ್ಲಿ ರಾಸಾಯನಿಕ ಹೆಚ್ಚಿರುವುದು ಕಂಡು ಬರುತ್ತದೆ. ಸರ್ಕಾರದ ಶಿಫಾರಸಿನಂತೆ ಪರೀಕ್ಷೆ ನಡೆಸಿದಾಗ ನೀಡುವ ವರದಿಗಳು ನೀರು ಶುದ್ಧವಾಗಿದೆ ಎಂದು ಹೇಳುತ್ತವೆ. ಸತ್ಯ ತಿಳಿಸುವ ಕೆಲಸ ಆಗಬೇಕು. ಕಾರ್ಖಾನೆಗಳ ನೀರು ಮರುಬಳಕೆಯಾಗಬೇಕು. ಅದಕ್ಕಿಂತ ಮೊದಲು ಸರಿಯಾಗಿ ಶುದ್ಧೀಕರಣವಾಗಬೇಕು ಎಂದು ಐಐಎಸ್‌ಸಿ ಪ್ರೊಫೆಸರ್ ಟಿ.ವಿ. ರಾಮಚಂದ್ರ ತಿಳಿಸಿದರು.

ಕೆರೆ ನಿರ್ವಹಣೆ ಮತ್ತು ಸಂರಕ್ಷಣೆಗಾಗಿ ಬಿಬಿಎಂಪಿ ಅಲ್ಲದೇ ಹಲವು ವೇದಿಕೆಗಳು, ಏಜೆನ್ಸಿಗಳು ಕಾರ್ಯನಿರ್ವಹಿಸುತ್ತಿವೆ. ಎಲ್ಲರನ್ನು ಒಂದೇ ವೇದಿಕೆಯಡಿ ತರುವ ಅಗತ್ಯವಿದೆ. ಆಗ ಸಮನ್ವಯತೆಯಿಂದ ಕಾರ್ಯನಿರ್ವಹಿಸಲು ಸಾಧ್ಯ ಎಂದು ಬಿಬಿಎಂಪಿ ಕೆರೆಗಳ ವಿಭಾಗ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋತ್ ಅಭಿಪ್ರಾಯ ವ್ಯಕ್ತಪಡಿಸಿದರು.

ಯಾರೋ ಕೆರೆ, ರಾಜಕಾಲುವೆಗಳ ಅತಿಕ್ರಮಣ ಮಾಡುತ್ತಾರೆ. ಅದರಿಂದ ಉಂಟಾಗುವ ಕೃತಕ ನೆರೆ, ಇನ್ನಿತರ ಸಮಸ್ಯೆಗಳಿಗೆ ಇನ್ಯಾರೋ ಬಲಿಯಾಗುತ್ತಾರೆ ಎಂದು ರಾಜ್ಯ ಪರಿವರ್ತನಾ ಸಂಸ್ಥೆ ಉಪಾಧ್ಯಕ್ಷ ರಾಜೀವ್ ಗೌಡ ವಿಷಾದಿಸಿದರು.

ಪಿಕಲ್ ಜಾರ್ ಮೀಡಿಯಾದ ಸಂಸ್ಥಾಪಕಿ ವಸಂತಿ ಹರಿಪ್ರಕಾಶ್ ಸಂವಾದ ನಿರ್ವಹಿಸಿದರು.



ಸಿಟಿಜನ್ಸ್ ಫಾರ್ ಸ್ಯಾಂಕಿ ಮತ್ತು ಬೆಂಗಳೂರು ಪ್ರಜಾ ವೇದಿಕೆಯಿಂದ ಶನಿವಾರ ನಡೆದ ‘ನಮ್ಮ ಕೆರೆ’ ಚರ್ಚೆಯಲ್ಲಿ ವಿವಿಧ ಕ್ಷೇತ್ರಗಳ ತಜ್ಞರು ಭಾಗವಹಿಸಿದ್ದರು
—ಪ್ರಜಾವಾಣಿ ಚಿತ್ರ

‘ಪಾತ್ರ, ಸನ್ನಿವೇಶ ಸೇರಿದಾಗ ಕಾದಂಬರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಲವಾರು ಪಾತ್ರ ಹಾಗೂ ಸನ್ನಿವೇಶಗಳು ಸೇರಿದಾಗ ಕಾದಂಬರಿ ಹುಟ್ಟುತ್ತದೆ’ ಎಂದು ವಿಮರ್ಶಕಿ ಎನ್. ಸಂಧ್ಯಾರಾಣಿ ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಲೇಖಕಿಯರ ಸಂಘ ಜಂಟಿಯಾಗಿ ಶನಿವಾರ ಆಯೋಜಿಸಿದ ‘ನಾನು ಮತ್ತು ನನ್ನ ಕಾದಂಬರಿ ರಚನೆ’ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಪ್ರತಿಯೊಂದು ಭಾವ ಕೂಡ ಸಾಹಿತ್ಯದ ಯಾವುದೇ ಪ್ರಕಾರವನ್ನು ಪಡೆದುಕೊಳ್ಳಬೇಕಾದರೆ, ಅದಕ್ಕೆ ಬೇಕಾದ ಸ್ವರೂಪ ಅಥವಾ ಮಾಧ್ಯಮವನ್ನು ಅದೇ ಹುಟ್ಟುಹಾಕುತ್ತದೆ. ಕೆಲವೊಮ್ಮೆ ನಮ್ಮ ಭಾವನೆಗಳು ಕವನಗಳಿಗೆ ಮಾತ್ರ ಮೀಸಲಾಗುತ್ತದೆ. ಇನ್ನು ಕೆಲವೊಮ್ಮೆ ಮತ್ತಷ್ಟು ಹೆಚ್ಚಿನ ವಿಚಾರವನ್ನು ಪಡೆದು, ಭಾವನೆ ಕಾದಂಬರಿಯ ರೂಪವನ್ನು ಪಡೆದುಕೊಳ್ಳುತ್ತದೆ’ ಎಂದು ಹೇಳಿದರು.

ಲೇಖಕಿ ಆಶಾ ರಘು, ‘ಕಾದಂಬರಿಯ ಪ್ರಕ್ರಿಯೆ ಒಂದು ಶೋಧ ಕಾರ್ಯವಾಗಿದೆ. ವಿಶಾಲ ವ್ಯಾಪ್ತಿಯಲ್ಲಿ ವಿಸ್ತರಿಸುತ್ತಾ ಸಾಗುವಾಗ ವಿವರಗಳೊಂದಿಗೆ ಪಾತ್ರಗಳ ಮನೋಭೂಮಿಕೆಯ ಆಳವನ್ನು ಶೋಧಿಸುತ್ತ ಹೋಗುವ ಕ್ರಮ ಇದಾಗಿದೆ. ಜಗತ್ತಿನಲ್ಲಿ ಮಾನವ ಮತ್ತು ಪ್ರಕೃತಿ, ಮಾನವ ಮತ್ತು ಮಾನವ ಹಾಗೂ ಮಾನವ ಮತ್ತು ಅವರ ಅಂತರಂಗ ಎಂದು ಮೂರು ರೀತಿಯ ಮುಖಾಮುಖಿಯನ್ನು ಕಾಣಬಹುದು. ಅದರಲ್ಲಿ ಕಡೆಯದು ಕಾದಂಬರಿ ರಚಿಸುವಾಗ ನನಗೆ ಕಾಣಿಸುತ್ತದೆ’ ಎಂದು ಅಭಿಮತ ವ್ಯಕ್ತಪಡಿಸಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, ‘ಇತ್ತೀಚೆಗೆ ಕಾದಂಬರಿ ಬರೆಯುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಲೇಖಕಿಯರು ಕಥನ ಪ್ರಕಾರಕ್ಕೆ ಒಲಿದು, ಬರೆಯುತ್ತಿದ್ದಾರೆ. ಲಿಂಗ ಸಮಾನತೆಯನ್ನು ಕುರಿತು ಮಾತನಾಡುವ ‘ದ್ವಿತ್ವ’, ಅಂಡಮಾನ್ ದ್ವೀಪದಲ್ಲಿ ಸೆರೆಯಾದ ಸ್ವಾತಂತ್ರ ಹೋರಾಟಗಾರರನ್ನು ಕುರಿತು ಬರೆದ ‘ಕರಿನೀರು’ ಮುಂತಾದ ಕಾದಂಬರಿಗಳು ಶ್ರೇಷ್ಠ ಕೃತಿಗಳಾಗಿವೆ. ಆದರೆ ಅವುಗಳ ಸುತ್ತ ನಡೆಯಬೇಕಾದ ಚರ್ಚೆಗಳು ನಡೆದಿಲ್ಲ. ವಿಮರ್ಶೆ ಇಂಥ ಶ್ರೇಷ್ಠ ಕೃತಿಗಳನ್ನು ಪರಿಗಣಿಸಿಲ್ಲವೇ? ಕೇವಲ ಮಹಿಳೆಯರದೆಂದು ದೂರವಿರಿಸುತ್ತಿದೆಯೇ? ಎಂಬ ಪ್ರಶ್ನೆಗಳು ಹುಟ್ಟುತ್ತವೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಮಾರ್ಗದರ್ಶನ ಪದ್ಧತಿ ಕಲಿಕೆಗೆ ಸಹಕಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣ ಹಾಗೂ ಕಲಿಕೆಯ ಪ್ರಮಾಣ ಹೆಚ್ಚಿಸಲು ಮಾರ್ಗದರ್ಶನ (ಮೆಂಟರಿಂಗ್) ಪದ್ಧತಿ ಸಹಕಾರಿ’ ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಯೋಗದಲ್ಲಿ ಪಿಇಎಸ್ ಪದವಿಪೂರ್ವ ಕಾಲೇಜು ನಗರದಲ್ಲಿ ಜೀವಶಾಸ್ತ್ರ ಉಪನ್ಯಾಸಕರಿಗೆ ಹಮ್ಮಿಕೊಂಡ ಶೈಕ್ಷಣಿಕ ಕಾರ್ಯಾಗಾರದಲ್ಲಿ ಮಾತನಾಡಿದರು.

‘ಉಪನ್ಯಾಸಕರು ತಾವು ಬೋಧಿಸುವ ವಿಷಯದಲ್ಲಿ ಹೊಸತನ್ನು ಗ್ರಹಿಸಿ ವಿದ್ಯಾರ್ಥಿಗಳಿಗೆ ತಲುಪಿಸಬೇಕು. ಇದರಿಂದ ವಿದ್ಯಾರ್ಥಿಗಳ ಜ್ಞಾನ ವೃದ್ಧಿಯಾಗುತ್ತದೆ. ಸಮಾಜದಲ್ಲಿ ಶಿಕ್ಷಕರು ಹಾಗೂ ವೈದ್ಯರು ಅತ್ಯುನ್ನತ ಸ್ಥಾನವನ್ನು ಹೊಂದಿದ್ದಾರೆ’ ಎಂದು ಹೇಳಿದರು.

ಇಲಾಖೆಯ ಬೆಂಗಳೂರು ದಕ್ಷಿಣ ಜಿಲ್ಲೆ ಉಪನಿರ್ದೇಶಕ ಆನಂದರಾಜ್ ಎ., ‘ಉಪನ್ಯಾಸಕರು ವಿದ್ಯಾರ್ಥಿಗಳಿಗೆ ವಿಷಯವನ್ನು ಮಾತ್ರವಲ್ಲದೆ, ಮೌಲ್ಯಗಳನ್ನೂ ಬೋಧಿಸಬೇಕು. ತರಗತಿಯಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡಬೇಕು’ ಎಂದು ತಿಳಿಸಿದರು.

ಬೆಂಗಳೂರು ದಕ್ಷಿಣ ಬಯೋಫೋರಂನ ಅಧ್ಯಕ್ಷ ದೇವರಾಜು ಆರ್., ಬೆಂಗಳೂರು ದಕ್ಷಿಣ ಪ್ರಾಂಶುಪಾಲರ ಸಂಘದ ಅಧ್ಯಕ್ಷ ರಾಜಗೋಪಾಲ್, ವಿಜಯ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಟಿ. ಬಾಲಕೃಷ್ಣ ಅಡಿಗ, ಪಿಇಎಸ್ ಹನುಮಂತನಗರ ಕ್ಯಾಂಪಸ್ ನಿರ್ದೇಶಕ ಪ್ರೊ. ಎಂ.ಪಿ. ಸತ್ಯನಾರಾಯಣ, ಪಿಇಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಿ. ನಾರಾಯಣ ರೆಡ್ಡಿ ಇದ್ದರು. ಬೆಂಗಳೂರು ದಕ್ಷಿಣ ವಿಭಾಗದ ವಿವಿಧ ಕಾಲೇಜುಗಳ 50ಕ್ಕೂ ಹೆಚ್ಚು ಜೀವಶಾಸ್ತ್ರ ಉಪನ್ಯಾಸಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

‘ಶಿಸ್ತುಪಥದ ಬಗ್ಗೆ ಅರಿವು: ತಿದ್ದಿಕೊಳ್ಳದಿದ್ದರೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಟೊ ಹಾಗೂ ಬೈಕ್ ಸವಾರರಿಗೆ ಸಂಚಾರ ಶಿಸ್ತುಪಥದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ತಪ್ಪು ತಿದ್ದಿಕೊಳ್ಳದಿದ್ದರೆ ಕಠಿಣ ಕ್ರಮ ಜರುಗಿಸಲಾಗುವುದು’ ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಎಚ್ಚರಿಸಿದರು.

ಸಾಮಾಜಿಕ ಮಾಧ್ಯಮ ‘ಟ್ವಿಟರ್’ನಲ್ಲಿ ಶನಿವಾರ ಜನರೊಂದಿಗೆ ಸಂವಾದ ನಡೆಸಿದ ಕಮಿಷನರ್, ಹಲವು ಪ್ರಶ್ನೆಗಳಿಗೆ ಉತ್ತರಿಸಿದರು.

‘ಆಟೊ ಚಾಲಕರು ಹಾಗೂ ಬೈಕ್ ಸವಾರರು, ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಸಂಚರಿಸುತ್ತಾರೆ. ಶಿಸ್ತುಪಥ ನಿಯಮ ಪಾಲಿಸುವುದಿಲ್ಲ. ಇದರಿಂದಾಗಿ ಇತರೆ ವಾಹನಗಳ ಸಂಚಾರಕ್ಕೆ ಅಡ್ಡಿಯಾಗುತ್ತಿದ್ದು, ಅಪಘಾತಗಳು ಸಂಭವಿಸುತ್ತಿವೆ. ಇದನ್ನು ಪ್ರಶ್ನಿಸಿದರೆ, ಆಟೊ ಚಾಲಕರು ಹಾಗೂ ಬೈಕ್ ಸವಾರರು ಜಗಳ ಮಾಡುತ್ತಾರೆ’ ಎಂದು ಶ್ರೀಕಾಂತ್ ಎಂಬುವರು ದೂರಿದರು.

ಕಮಿಷನರ್, ‘ಶಿಸ್ತುಪಥ ನಿಯಮ ಪಾಲನೆ ಮಾಡದಿರುವುದು ದುರಾದೃಷ್ಟಕರ. ಈ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಲಾಗುತ್ತಿದೆ’ ಎಂದರು.

‘ಆಟೊ ಚಾಲಕರು ಹಾಗೂ ಕೆಲ ಸಂಘಟನೆ ಸದಸ್ಯರು, ಕಾನೂನು ಕೈಗೆತ್ತಿಕೊಂಡು ಜನರ ಮೇಲೆ ದರ್ಪ ಮೆರೆಯುತ್ತಿದ್ದಾರೆ’ ಎಂದು ವಿವೇಕ್ ದೂರಿದರು.

ಕಮಿಷನರ್, ‘ನೈತಿಕ ಪೊಲೀಸ್‌ಗಿರಿಗೆ ಅವಕಾಶವಿಲ್ಲ. ದೂರು ನೀಡಿದರೆ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ರಸ್ತೆಯಲ್ಲಿ ಸುಖಾಸುಮ್ಮನೇ ವಾಹನಗಳನ್ನು ಅಡ್ಡಗಟ್ಟಿ ಗಲಾಟೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಅವರ ಹೆಸರುಗಳನ್ನು ರೌಡಿಪಟ್ಟಿಗೆ ಸೇರಿಸಲಾಗುತ್ತಿದೆ. ನಮ್ಮ 112 ಸಂಖ್ಯೆಯು ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತಿದ್ದು, ಜನರು ತುರ್ತು ಸಂದರ್ಭಗಳಲ್ಲಿ ಕರೆ ಮಾಡಬಹುದು’ ಎಂದು ಕಮಿಷನರ್ ಹೇಳಿದರು.


ನಗರದಲ್ಲಿ ಇಂದು

ನಾಗರ ಪಂಚಮಿ, ಗಂಗಮ್ಮ ದೇವಿ ಜಾತ್ರೆ, ಕರಗ ವಾರ್ಷಿಕೋತ್ಸವ: ಹಾಲಿನ ಕೊಡ ಮೆರವಣಿಗೆ ಬೆಳಿಗ್ಗೆ 8.30ಕ್ಕೆ, ಮಹಾಮಂಗಳಾರತಿ ಅನ್ನದಾನ ಮಧ್ಯಾಹ್ನ 12, ಭರತನಾಟ್ಯ ಪ್ರದರ್ಶನ ಸಂಜೆ 6.30ಕ್ಕೆ, ಆಯೋಜನೆ ಮತ್ತು ಸ್ಥಳ: ಪಾತಾಳ ಪಂಚನಾಗೇಂದ್ರಸ್ವಾಮಿ ಮತ್ತು ದೇವಸ್ಥಾನ, ಮಹಾಲಕ್ಷ್ಮಿಪುರ

‘ನಮ್ಮ ಕರ್ನಾಟಕ ನಮ್ಮ ಮಾದರಿ’ ಚಿಂತನಾ ಸಮಾವೇಶ: ‘ಕರ್ನಾಟಕ ಮಾದರಿಯಿಂದ ಕರ್ನಾಟಕ ಅಸ್ಮಿತೆಯೆಡೆಗೆ’ ಉದ್ಘಾಟನೆ: ಜೇಮ್ಸ್ ಮ್ಯಾನರ್, ದಿಕ್ಸೂಚಿ ಮಾತು: ಎ. ನಾರಾಯಣ, ಅತಿಥಿ: ಕರೆಮ್ಮ ಜಿ. ನಾಯಕ, ಅಧ್ಯಕ್ಷತೆ: ಸಬೀಹಾ ಭೂಮಿಗೌಡ, ಸಮನ್ವಯ: ಆಂಜನೇಯ ರೆಡ್ಡಿ, ಆಯೋಜನೆ: ಜಾಗೃತ ಕರ್ನಾಟಕ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10ರಿಂದ

ಹಿರಿಯ ನಾಗರಿಕರಿಗೆ ಉಚಿತ ಉದ್ಯೋಗ ಮೇಳ: ಅತಿಥಿಗಳು: ಎನ್.ಎ. ಹ್ಯಾರಿಸ್, ವಿಕ್ಟರ್ ಲೋಬೋ, ಆರೀಫ್ ಎಚ್. ಎಂ., ಮನೋಜ್ ಶಾ, ಆಯೋಜನೆ: ನೈಟಿಂಗಲ್ಸ್ ಮೆಡಿಕಲ್ ಟ್ರಸ್ಟ್, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲ್ಯಾಂಗ್‌ಫೋರ್ಡ್ ಟೌನ್, ಬೆಳಿಗ್ಗೆ 10ರಿಂದ

‘ಕನ್ನಡ ನಾಟಕಗಳಲ್ಲಿ ಸ್ತ್ರೀ ಪಾತ್ರ’ ಕುರಿತು ಉಪನ್ಯಾಸ: ಅಧ್ಯಕ್ಷತೆ: ಶ್ರೀನಿವಾಸ ಜಿ. ಕಪ್ಪಣ್ಣ, ಪ್ರಸ್ತಾವನೆ: ಜಯಲಕ್ಷ್ಮಿ ಪಾಟೀಲ್, ಉಪನ್ಯಾಸಕರು: ಕೆ.ವೈ. ನಾರಾಯಣಸ್ವಾಮಿ, ಚಿಂದೋಡಿ ಬಂಗಾರೇಶ, ಎನ್. ಮಂಗಳ, ಹೆಲನ್ ಮೈಸೂರು, ಸುಷ್ಮ ಎಸ್.ವಿ., ಆಯೋಜನೆ: ಈ ಹೊತ್ತಿಗೆ, ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಬೆಳಿಗ್ಗೆ 10ರಿಂದ



ಶ್ರೀನಿವಾಸ ಜಿ.ಕಪ್ಪಣ್ಣ

ಪ್ರಥಮ ವಿಶ್ವ ಕನ್ನಡ ಕಲಾ ಸಮ್ಮೇಳನ: ಸಮ್ಮೇಳನಾಧ್ಯಕ್ಷ ಅಶೋಕ್ ಕುಮಾರ್ ಎಂ., ಉದ್ಘಾಟನೆ: ಸಿ. ಸೋಮಶೇಖರ್, ದೊಡ್ಡಣ್ಣ, ಆಶಯ ನುಡಿ: ಎಂ.ವಿ. ತ್ಯಾಗರಾಜು, ಆಯೋಜನೆ: ವಿಶ್ವ ಕನ್ನಡ ಕಲಾ ಸಂಸ್ಥೆ, ಸ್ಥಳ: ಅಲುಮ್ನಿ ಅಸೋಸಿಯೇಷನ್, ಸಿ.ಬಿ.ಐ ಬಸ್ ನಿಲ್ದಾಣ, ಹೆಬ್ಬಾಳ, ಬೆಳಿಗ್ಗೆ 10ರಿಂದ

‘ನಗರಾಭಿವೃದ್ಧಿ ಮತ್ತು ವಿವಿಧ ಸವಾಲು, ಅವಕಾಶಗಳು ಕುರಿತು ಭವಿಷ್ಯದ ಯೋಜನೆಗಳು’: ಅತಿಥಿಗಳು: ಬೈರತಿ ಸುರೇಶ್, ಆಯೋಜನೆ: ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್, ಸ್ಥಳ: ಫೋರ್ ಸಿಸನ್ಸ್, ಮೇಖ್ರಿ ವೃತ್ತ, ಬೆಳಿಗ್ಗೆ 10

ಡಿ. ದೇವರಾಜ ಅರಸು ಜನ್ಮದಿನಾಚರಣೆ, ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಪ್ರಶಸ್ತಿ ಪುರಸ್ಕೃತರು: ಕಾಗೋಡು ತಿಮ್ಮಪ್ಪ, ಆಯೋಜನೆ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30ರಿಂದ

ಎಸ್. ರಂಗನಾಥ್ ಅವರ ‘ಮಹನೀಯರ ಮಾತುಗಳಲ್ಲಿ ಮಹನೀಯರು’ ಪುಸ್ತಕ ಬಿಡುಗಡೆ: ಎಸ್.ಆರ್. ರಾಮಸ್ವಾಮಿ, ಅಧ್ಯಕ್ಷತೆ: ಟಿ.ವಿ. ವೆಂಕಟಾಚಲ ಶಾಸ್ತ್ರಿ, ಪುಸ್ತಕ ಪರಿಚಯ: ರಾ. ಗಣೇಶ್, ಆಯೋಜನೆ: ಸ್ನೇಹ ಪ್ರಿಂಟರ್ಸ್, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಸ್ಥಳ: ಡಿ.ವಿ.ಜಿ. ಸಭಾಂಗಣ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಶ್ರೀರಕ್ಷಾ ಹೆಗಡೆ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಶ್ರೀರಕ್ಷಾ ಹೆಗಡೆ, ಆಯೋಜನೆ: ಲಯಾಭಿನಯ ಕಲ್ಚರಲ್ ಫೌಂಡೇಷನ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 5

ಜಾನಕಿ ಶ್ರೀನಿವಾಸ ಅವರ ‘ಸಾಧಕರ ಸಂಗದಲಿ–ಕಾವ್ಯ ಸಿಂಚನ’ ಪುಸ್ತಕ ಬಿಡುಗಡೆ: ಎಚ್. ಎಸ್. ವೆಂಕಟೇಶ ಮೂರ್ತಿ, ಅಧ್ಯಕ್ಷತೆ: ಜಿ. ಅಶ್ವತ್ಥನಾರಾಯಣ, ಅತಿಥಿಗಳು: ಬಿ.ಆರ್. ಲಕ್ಷ್ಮಣರಾವ್, ಕೆ. ರಮೇಶ್ ಕಾಮತ್, ಶ್ಯಾಮಲಾ ಕುಲಕರ್ಣಿ, ಆಯೋಜನೆ: ಕೆ. ಗೋಪಾಲ ಕೃಷ್ಣರಾಯ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ವೆಂಕಟೇಶ ಮೂರ್ತಿ

ಎಂ.ಜಿ. ರಂಗಸ್ವಾಮಿ, ಕೆ.ವಿ. ಮುದ್ದವೀರಪ್ಪ ಅವರ ‘ಶಿಕ್ಷಣ ಶಿಲ್ಪಿ’, ವಿನಯ್ ಭಟ್ ಅವರ ‘ಮುಖಾಮುಖಿ’, ವೂಡೇ ಪಿ. ಕೃಷ್ಣ ಅವರ ‘ಅಂಬೇಡ್ಕರ್ ಅನುಸಂಧಾನ’, ಎಸ್.ವಿ. ಮಂಜುನಾಥ್ ಅವರ ‘ನೂರು ನೆನಪು’ ಪುಸ್ತಕಗಳ ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಉದ್ಘಾಟನೆ: ಮಲ್ಲೇಪುರಂ ಜಿ. ವೆಂಕಟೇಶ್, ಪುಸ್ತಕಗಳ ಕುರಿತು: ಬೈರಮಂಗಲ ರಾಮೇಗೌಡ, ಎಂ.ಜಿ. ರಂಗಸ್ವಾಮಿ, ವೂಡೇ ಪಿ. ಕೃಷ್ಣ ಅವರಿಗೆ ಗೌರವಾರ್ಪಣೆ, ಆಯೋಜನೆ: ಪಟೇಲ್ ಪಬ್ಲಿಕೇಷನ್ಸ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30ರಿಂದ

ವಾರ್ಷಿಕ ಸಂಗೀತೋತ್ಸವ: ಆಯೋಜನೆ: ರಿದಮ್ಸ್ ಲಲಿತ ಕಲಾ ಮಹಾವಿದ್ಯಾಲಯ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 11ರಿಂದ

ಟಿ. ಪ್ರದೀಪ್, ಕೃಷ್ಣನ್ ನಾರಾಯಣನ್ ಅವರ ‘ಎಂಪವರಿಂಗ್ ಇಂಡಿಯಾ@100’ ಪುಸ್ತಕ ಬಿಡುಗಡೆ: ಎನ್.ಆರ್. ನಾರಾಯಣಮೂರ್ತಿ, ಆಯೋಜನೆ: ಭಾರತೀಯ ವಿಜ್ಞಾನ ಅಕಾಡೆಮಿ, ಸ್ಥಳ: ಇನ್ಫೊಸಿಸ್ ಸೈನ್ಸ್ ಫೌಂಡೇಷನ್‌ನ ಸಭಾಂಗಣ, ಜಯನಗರ, 2ನೇ ಬ್ಲಾಕ್, ಬೆಳಿಗ್ಗೆ 11

ಎಚ್. ಡುಂಡಿರಾಜ್ ಅವರ ‘ಹನಿಟ್ರ್ಯಾಪ್’, ಅಮಿತಾ ಭಾಗವತ್ ಅವರ ‘ನೀಲಿ ನಕ್ಷೆ’, ನಾ. ಮೊಗಸಾಲೆ ಅವರ ‘ನೀರು’, ಎನ್.ಸಿ. ಮಹೇಶ್ ಅವರ ‘ಸಾಕುತಂದೆ ರೂಮಿ’ ಪುಸ್ತಕಗಳ ಬಿಡುಗಡೆ: ಜಯಂತ್ ಕಾಯ್ಕಿಣಿ, ಅತಿಥಿಗಳು: ಜೋಗಿ, ಕೃಷ್ಣಮೂರ್ತಿ ಕರ್ಕಿ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30ರಿಂದ



ಜಯಂತ್ ಕಾಯ್ಕಿಣಿ

ಡಿ. ದೇವರಾಜ ಅರಸು ಅವರ ಜನ್ಮದಿನಾಚರಣೆ: ಭಾವಚಿತ್ರಕ್ಕೆ ಮಾಲಾರ್ಪಣೆ: ಜಯಕರ ಎಂ.ಎಸ್., ಅತಿಥಿಗಳು: ಶೇಕ್ ಲತೀಫ್, ಡಿ.ಕೆ. ಚಿತ್ತಯ್ಯ ಪೂಜಾರ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಅತಿಥಿ ಗೃಹ– ಸೆಮಿನಾರ್ ಹಾಲ್, ಜ್ಞಾನಭಾರತಿ ಆವರಣ, ಬೆಳಿಗ್ಗೆ 11.30

‘ಬೆಂಗಳೂರು ಜನರ ಸಮಾವೇಶ’: ಉದ್ಘಾಟನೆ: ಸೀತಾರಾಂ ಯೆಚೂರಿ, ಆಯೋಜನೆ: ಸಿಪಿಎಂ, ಸ್ಥಳ: ಶಿಕ್ಷಕರ ಸದನ, ಮಧ್ಯಾಹ್ನ 2.30

‘ಶಲ್ಯಸಾರಥ್ಯ–ಶಲ್ಯ ನಿರ್ಗಮನ’ ಯಕ್ಷಗಾನ ತಾಳಮದ್ದಳೆ: ಹಿಮ್ಮೇಳ ಭಾಗವತ: ಆಕಾಶ ಕಾಶಿ, ಮದ್ದಳೆ: ಪ್ರಥ್ವಿ ಬಡೆಕ್ಕಿಲ, ಮುಮ್ಮೇಳ: ಅವಿನಾಶ ಶೆಟ್ಟಿ ಉಬರಡ್ಕ, ದಿನೇಶ ಶರ್ಮಾ ಕೊಯ್ಯೂರು, ಅನಂತ ಕಾಮತ ಬೆಳಂಬಾರ, ಶ್ರೀರಾಮ ಗರೀಶ, ಆಯೋಜನೆ: ಯಕ್ಷ ಶ್ರೀಹರಿ ಬಳಗ ಮಂಗಳೂರು, ಸ್ಥಳ: ವಿನಾಯಕ ವಿಶ್ವಕರ್ಮ ಕಾಳಿಕಾಂಬ ದೇವಸ್ಥಾನ, ಯಲಹಂಕ ಉಪನಗರ, ಮಧ್ಯಾಹ್ನ 3.30

ಸಮರ್ಪಣಾ ಪ್ರವಚನ: ಲಕ್ಷ್ಮೀನಾರಾಯಣ ಕೋಟೆ, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ್, ಕಾಡುಗೋಡಿ, ಸಂಜೆ 4

‘ಶಿವಭಕ್ತ ವೀರಮಣಿ’ ಯಕ್ಷಗಾನ ತಾಳಮದ್ದಳೆ: ಹಿಮ್ಮೇಳ: ನಂದನ್ ದಂಟಕಲ್, ನಾರಾಯಣ ಮೂರ್ತಿ, ಆದಿತ್ಯ ಹೊನ್ನಕುಡಿಕೆ, ಭಾವನಾ, ಮುಮ್ಮೇಳ: ರವಿ ಐತುಮನೆ, ಆದಿತ್ಯ ಹಲ್ಕೋಡು, ಚಂದನ್ ಕಲಾಹಂಸ, ನಿತಿನ್ ದಂಟಕಲ್, ಕುಮಾರ ಪಾರ್ಥ ಐತುಮನೆ, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ಅನ್ನಪೂರ್ಣ ನಿಲಯ, ನಂ. 35, 5ನೇ ಕ್ರಾಸ್, ಅನ್ನಪೂರ್ಣೇಶ್ವರಿ ಬಡಾವಣೆ, ಚುಂಚಘಟ್ಟ ರಸ್ತೆ, ಜೆ.ಪಿ. ನಗರ, ಸಂಜೆ 4ರಿಂದ

ನೃತ್ಯ ಸಂಹಿತಾ–2023: ಅತಿಥಿಗಳು: ಎನ್. ನಮ್ರತ, ಅರ್ಪಿತಾ ಬ್ಯಾನರ್ಜಿ, ಪವಿತ್ರ, ಆಯೋಜನೆ: ಪ್ರಣವಾಂಜಲಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30ರಿಂದ

‘ಯಂಗ್ ಆರ್ಟಿಸ್ಟ್ ಫೆಸ್ಟಿವೆಲ್’: ಉದ್ಘಾಟನೆ: ಮಾಳ್ವಿಕಾ ನಿರಂಜನ್, ಕವಿತಾ ಐಯ್ಯರ್, ಧಾನಿ ಸಿಂಫಾಲ್, ಆಯೋಜನೆ: ಯಂಗ್ ಆರ್ಟಿಸ್ಟ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 5

ವಚನ ಶ್ರಾವಣ–2023: ವಚನ ಗಾಯನ: ಶೈಲಜ ಪ್ರವೀಣ್, ಮೀನಾಕ್ಷಿ ಮೇಟಿ, ವಚನ ಚಿಂತನೆ: ಗುಂಡೀಗೆರೆ ವಿಶ್ವನಾಥ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾರಾಧನ ಪ್ರತಿಷ್ಠಾನದ ಸಭಾಂಗಣ, ಗೋವಿಂದರಾಜನಗರ, ಸಂಜೆ 5.30

ಸಂಗೀತ ಕಛೇರಿ: ಗಾಯನ: ವಿವೇಕ್ ಸದಾಶಿವನ್, ಪಿಟೀಲು: ಹೊಸಳ್ಳಿ ರಘುರಾಮ್, ಮೃದಂಗ: ಎನ್. ವಾಸುದೇವ್, ಘಟ: ಓಂಕಾರ್ ರಾವ್, ಆಯೋಜನೆ: ಬಿ.ಟಿ.ಎಂ. ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಜೆ.ಪಿ. ನಗರ, ಸಂಜೆ 5.30ರಿಂದ

‘ಪರಿಮಳ ಪ್ರಶಸ್ತಿ’ ಪ್ರದಾನ: ಉದ್ಘಾಟನೆ: ಎಂ.ಎನ್. ವೆಂಕಟಾಚಲಯ್ಯ, ಅತಿಥಿ: ಎನ್. ಸಂತೋಷ್ ಹೆಗ್ಡೆ, ಎಸ್. ಜಯಸಿಂಹ ಅವರ ‘ಶ್ರೀಸುಮತೀಂದ್ರ ದರ್ಶನ’ ಪುಸ್ತಕ ಬಿಡುಗಡೆ: ಸುವಿದ್ಯೇಂದ್ರ ತೀರ್ಥ ಸ್ವಾಮೀಜಿ, ಸಾನ್ನಿಧ್ಯ: ಸುಜಯನಿಧಿತೀರ್ಥ ಸ್ವಾಮೀಜಿ, ಪ್ರಶಸ್ತಿ ಪುರಸ್ಕೃತರು: ಪಿ.ಎಸ್. ದಿನೇಶ್ ಕುಮಾರ್, ವೂಡೇ ಪಿ. ಕೃಷ್ಣ, ಮಲ್ಲೇಪುರಂ ಜಿ. ವೆಂಕಟೇಶ್, ರವೀಂದ್ರ ಭಟ್ಟ, ಶ್ರೀಹರಿ ವಾಳ್ವೇಕರ್ ಆಚಾರ್ಯ, ಸುಳಾದಿ ಹನುಮೇಶಾಚಾರ್ಯ, ಹಿರೇಮಗಳೂರು ಕಣ್ಣನ್, ವೈ.ಎಲ್. ಮಧುಸೂದನ್, ಪುತ್ತೂರು ನರಸಿಂಹ ನಾಯಕ್, ಪ್ರವೀಣ್ ಗೋಡ್ಖಿಂಡಿ, ವಿ. ಕೃಷ್ಣ, ಡಾ.ಎಚ್.ಎನ್. ಸುಬ್ರಹ್ಮಣ್ಯ, ಡಾ.ಬಿ. ರವಿಶಂಕರ್ ಭಟ್, ಡಾ. ಗಿರಿಧರ ಕಜೆ, ಎಚ್.ಎನ್. ಅರುಣ್, ಶ್ರೀಪಾದರಾವ್ ದೇವನಹಳ್ಳಿ, ಆಯೋಜನೆ: ಪರಿಮಳ ಗೆಳೆಯರ ಬಳಗ, ಸ್ಥಳ: ಗಾಯನ ಸಮಾಜದ ಸಭಾಂಗಣ, ಕೆ.ಆರ್. ರಸ್ತೆ, ಸಂಜೆ 5.45

‘ಕೀರ್ತಿ ಚಂದ್ರಿಕಾ ಮಹೋತ್ಸವ: ಅತಿಥಿಗಳು: ಮೈಸೂರು ಬಿ. ನಾಗರಾಜ್, ಶ್ಯಾಮಹರಿ ಚಕ್ರ, ಕೇದಾರ ಮಿಶ್ರಾ, ಒಡಿಸ್ಸಿ ನೃತ್ಯ: ಅರುಣಾ ಮೋಹಾಂತೆ, ಕಥಕ್: ಪೂಜಾಶ್ರೀ ಸಿ.ಜೆ., ವೈದೇಹಿ ಎಸ್., ಆಯೋಜನೆ: ಆಲಪದ್ಮ ನೃತ್ಯ ಮತ್ತು ಸಂಶೋಧನಾ ಕೇಂದ್ರ, ಸ್ಥಳ: ಧ್ವನಿ ಸಭಾಂಗಣ, ಎಇಸಿಎಸ್ ಲೇಔಟ್, ಸಂಜೆ 6ರಿಂದ

‘ಶ್ರೀಕೃಷ್ಣ ಪರಂಧಾಮ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ಪೇಜಾವರ ಮಠ ವಿದ್ಯಾಪೀಠ, ಸಂಜೆ 7.30ರಿಂದ

‘ಹಿಂಗ್ ಮಾಡಿದ್ರೆ ಹೆಂಗೆ’ ನಾಟಕ ಪ್ರದರ್ಶನ: ರಚನೆ: ನಾಗವೇಣಿ ರಂಗನ್, ನಿರ್ದೇಶನ: ಬಾಶ್ ರಾಘವೇಂದ್ರ, ಸಂಗೀತ: ಮೇಘನಾ ಹಳಿಯಾಳ, ಆಯೋಜನೆ: ಅಂತರಂಗ ಬಹಿರಂಗ, ಕಲ್ಪವೃಕ್ಷ ಟ್ರಸ್ಟ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಉಲ್ಲಾಸದ ನಾಗಪಂಚಮಿ

● ಪ್ರಜ್ಞಾ ಮತ್ತಿಹಳ್ಳಿ



ಶ್ರಾವಣಮಾಸದ ನಾಲ್ಕು ಮತ್ತು ಐದನೇ ದಿನಗಳನ್ನು ನಾಗನ ಪೂಜೆಗಾಗಿ ಮೀಸಲಿಡಲಾಗಿದೆ. ಸಾಲು ಸಾಲು ಹಬ್ಬಗಳನ್ನು ತನ್ನ ಜೊತೆಗೆ ಕರೆದು ತರುವ ಶ್ರಾವಣದ ಮೊದಲ ಹಬ್ಬ ಎಂಬ ಹೆಗ್ಗಳಿಕೆಯನ್ನು ಹೊಂದಿರುವ ಈ ಆಚರಣೆಯನ್ನು ಉತ್ತರ ಕರ್ನಾಟಕದವರು 'ಪಂಚಮಿ ಹಬ್ಬ' ಎಂದು ಕರೆಯುತ್ತಾರೆ.

ನವವಿವಾಹಿತ ಹೆಣ್ಣುಮಕ್ಕಳು ತೌರುಮನೆಗೆ ಬರಲು ಕಾತರದಿಂದ ಕಾಯುತ್ತಾರೆ. ಹಬ್ಬ ಇನ್ನೂ ವಾರವಿದೆ ಎನ್ನುವಾಗಲೇ ಸೋದರರು ಕರೆಯಲು ಹೋಗುವುದು ಸಂಪ್ರದಾಯ. ಅಮಾವಾಸ್ಯೆ ಕಳೆಯುತ್ತಿದ್ದ ಹಾಗೆ ಎಲ್ಲರ ಮನೆಯಲ್ಲಿ ಹಬ್ಬದ ತಯಾರಿ ಜೋರಾಗಿ ಶುರುವಾಗುತ್ತದೆ. ಜೋಳದ ಅರಳು ಹುರಿಯುವ ಘಮ ಘಮ ಎಲ್ಲೆಡೆ ಹರಡಿದಂತೆ ಹೆಂಗಳೆಯರ ಸಡಗರ ರಂಗೇರುತ್ತದೆ. 'ಪಂಚಮಿ ತಯಾರಿ ಜೋರೇನ್ರಿ' ಎಂದು ಒಬ್ಬರನ್ನೊಬ್ಬರು ಕೇಳಿಕೊಳ್ಳುತ್ತ ಬಗೆ ಬಗೆಯ ಉಂಡೆಗಳನ್ನು ತಯಾರಿಸುತ್ತಾರೆ. ಕಡಲೆ ಹಿಟ್ಟಿನ ಶೇವು ತಯಾರಿಸಿ ಬೆಲ್ಲದ ಪಾಕದಲ್ಲಿ ಹಾಕಿ ಉಂಡೆ ಕಟ್ಟುತ್ತಾರೆ. ಅವಲಕ್ಕಿ, ಶೇಂಗಾ, ಎಳ್ಳು, ಮೋತಿಚೂರು, ಬೂಂದಿ, ರವೆ, ಹೆಸರಿಟ್ಟು, ಕಡಲೆಹಿಟ್ಟು, ಅಂಟಿನ ಉಂಡೆ, ಲಡ್ಡಿಕೆ ಉಂಡೆ – ಹೀಗೆ ಹತ್ತಾರು ರೀತಿಯ ಉಂಡೆಗಳು ಸಿದ್ಧವಾಗಿ ಡಬ್ಬ ಸೇರುತ್ತವೆ. ಚಕ್ಕುಲಿ, ಕೋಡುಬಳೆ, ಶಂಕರಪಾಳಿ, ಗರಿ ಗರಿ ಅವಲಕ್ಕಿ ಚೂಡ, ಚೂರುಮುರಿ ಚೂಡ – ಇವೆಲ್ಲ ಸಿದ್ಧವಾಗುವಾಗ ಓಣಿ ತುಂಬಾ ಘಮ ಘಮ ವಾಸನೆ ಹಬ್ಬಿ ಎಲ್ಲರಲ್ಲೂ ಹೊಸ ಉತ್ಸಾಹ ಮೂಡಿಸುತ್ತವೆ.

ಮಣ್ಣಿನಿಂದ ತಯಾರಿಸಿದ ನಾಗಪ್ಪಗಳನ್ನು ಕೆಲವರು ಪೇಟೆಗಳಲ್ಲಿ ಕೊಂಡರೆ, ಕೆಲವರು ತಾವೇ ತಯಾರಿಸಿಕೊಳ್ಳುತ್ತಾರೆ. ಚೌತಿಯ ದಿನ ಮನೆಯ ಒಳಗೆ ಹಾಲೆರೆಯುತ್ತಾರೆ. ಜೋಳದ ಅರಳು, ತಂಬಿಟ್ಟು ಬಗೆಬಗೆಯ ಕಾಳುಗಳಿಂದ ತಯಾರಿಸಿದ ಉಸುಲಿ ನೈವೇದ್ಯ ಮಾಡುತ್ತಾರೆ. ಆ ದಿನ ಹೆಂಗಳೆಯರಿಗೆ ಉಪವಾಸ. ತಾವು ವ್ರತಧಾರಣೆ ಮಾಡಿದ್ದೇವೆ ಎಂಬ ಸಂಕೇತಕ್ಕಾಗಿ ದಾರವನ್ನು ಮೂರೇಳೆ ಐದೇಳೆ ಅಥವಾ ಏಳು ಎಳೆಗಳಲ್ಲಿ ಧರಿಸುತ್ತಾರೆ. ಅಕ್ಕ ಪಕ್ಕದ ಮಹಿಳೆಯರನ್ನು ಕರೆದು ಅರಿಶಿಣ ಕುಂಕುಮ ಹಚ್ಚಿ ಉಡಿ ತುಂಬುತ್ತಾರೆ. ಆ ದಿನ ನಾಗಪ್ಪ ಮನೆಗೆ ಬರುತ್ತಾನೆ ಎಂಬ ನಂಬಿಕೆಯಲ್ಲಿ ರೊಟ್ಟಿ ತಟ್ಟುವುದಿಲ್ಲ. ಯಾವ ಕರಿದ ಪದಾರ್ಥಗಳನ್ನೂ ಮಾಡುವುದಿಲ್ಲ.

ಮಾರನೇ ದಿನ ಪಂಚಮಿ. ಅಂದು ಎಲ್ಲರೂ ಹೊಸ ಸೀರೆ ಉಡುತ್ತಾರೆ. ಪ್ರತಿ ಮನೆಯ ಹಿತ್ತಿಲಲ್ಲಿ ಮರಗಳಿಗೆ ಹಗ್ಗ ಬಿಗಿದು ಉಯ್ಯಾಲೆ ಕಟ್ಟಿ ಮಕ್ಕಳು-ಮುದುಕಿಯರೆನ್ನದೆ ಎಲ್ಲ ಮಹಿಳೆಯರೂ ಉಯ್ಯಾಲೆ ಆಡುತ್ತಾರೆ. ಕೆಲವು ಹಳ್ಳಿಗಳಲ್ಲಿ ಯುವಕರು ದೊಡ್ಡ ಮರಗಳ ಕೊಂಬೆಗಳಿಗೆ ಹಗ್ಗ ಕಟ್ಟಿ ಜೋಕಾಲಿ ತಯಾರಿಸುತ್ತಾರೆ. ಊರಿನ ಎಲ್ಲ ಹೆಂಗಳೆಯರೂ ಅಲ್ಲಿ ಸೇರಿ ಜೋಕಾಲಿ ಆಡುತ್ತಾರೆ. ನಗು-ವಿನೋದ, ಕೇಕೆ-ಗದ್ದಲಗಳಿಂದ ಎಲ್ಲರ ಮನಸ್ಸು ಉಲ್ಲಾಸಗೊಳ್ಳುತ್ತದೆ. ಕಾರಣಾಂತರಗಳಿಂದ ತೌರಿಗೆ ಬರದೇ ಇದ್ದ ಹೆಣ್ಣುಮಕ್ಕಳಿಗೆ ಹೊಸ ಸೀರೆ ಮತ್ತು ಪಂಚಮಿ ಉಂಡೆಗಳನ್ನು ಕಳಿಸಿ ಕೊಡುತ್ತಾರೆ. ಕರಾವಳಿ ಜಿಲ್ಲೆಯಲ್ಲಿ ರಂಗೋಲಿಯಿಂದ ನಾಗಪ್ಪನನ್ನು ಬಿಡಿಸಿ ಪೂಜೆ ಮಾಡುತ್ತಾರೆ. ಅರಿಶಿಣ ಎಲೆಯ ಮೇಲೆ ಅಕ್ಕಿ ಹಿಟ್ಟು ಹಚ್ಚಿ ಕಾಯಿ-ಬೆಲ್ಲದ ಹೂರಣ ತುಂಬಿ ಎಲೆಯನ್ನು ಮಡಚಿ ಆವಿಯಲ್ಲಿ ಬೇಯಿಸಿ ಪಾತೋಳಿ ತಯಾರಿಸುತ್ತಾರೆ. ನಾಗಬನ ಅಥವಾ ಹುತ್ತ ಇದ್ದರೆ ಅಲ್ಲಿ ಹೋಗಿ ಹಾಲೆರೆದು ಪೂಜಿಸುತ್ತಾರೆ. ಮಲೆನಾಡಿನಲ್ಲಿ ಕೂಡ ನಾಗರಕಲ್ಲುಗಳು ಇರುವ ಕಡೆ ಹೋಗಿ ಹಾಲು ಎರೆಯುವ ಕ್ರಮ ಇದೆ.

ಎಸ್ಇಪಿಗೆ ಸಮಿತಿ: ನಾಳೆ ಸಿ.ಎಂ. ಸಭೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಕಚೇರಿ ಕೃಷ್ಣದಲ್ಲಿ ಆ.21ರಂದು ಶಿಕ್ಷಣ ತಜ್ಞರು ಮತ್ತು ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯನ್ನು ಸೋಮವಾರ ಕರೆದಿದ್ದಾರೆ.

ಎನ್ಇಪಿ ಜಾರಿಗೊಳಿಸುವುದಿಲ್ಲ ಎಂದು ಘೋಷಿಸಿದ ನಂತರ ಸರ್ಕಾರ ರಾಜ್ಯ ಶಿಕ್ಷಣ ನೀತಿ (ಎಸ್ಇಪಿ) ಮಾರ್ಗಸೂಚಿಗಳನ್ನು ರೂಪಿಸಲು ಮುಂದಾಗಿದೆ. ಅದಕ್ಕಾಗಿ ಸಮಿತಿ ರಚಿಸುವ ಸಾಧ್ಯತೆ ಇದೆ. ಸಮಿತಿ ರಚನೆಯ ನಂತರ ಮಾರ್ಗಸೂಚಿ ಹೊರಡಿಸಲಾಗುತ್ತದೆ ಎಂದು ಉನ್ನತ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳು, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ, ಅತಿಥಿ ಉಪನ್ಯಾಸಕರ ನೇಮಕ ಮತ್ತು ಸಂಭಾವನೆ, ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಶೈಕ್ಷಣಿಕ ಕ್ಯಾಲೆಂಡರ್ ರಚನೆ, ಕೆಲ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವ ಕುರಿತು ಚರ್ಚಿಸಲಿದ್ದಾರೆ ಎಂದೂ ಮೂಲಗಳು ಹೇಳಿವೆ.

ರೈಲಿನಲ್ಲಿ ಬೆಂಕಿ: ತಪ್ಪಿದ ಅಪಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ನಿಂತಿದ್ದ ರೈಲಿನ ಎರಡು ಬೋಗಿಗಳಲ್ಲಿ ಬೆಂಕಿ ಅವಘಡ ಉಂಟಾಗಿದ್ದು, ಅಗ್ನಿಶಾಮಕ ದಳ ಬೆಂಕಿ ನಂದಿಸಿದೆ. ಪ್ರಯಾಣಿಕರು ಇರದಿದ್ದ ಕಾರಣ ಜೀವಾಪಾಯ ಉಂಟಾಗಿಲ್ಲ.

ಮುಂಬೈಯ ಛತ್ರಪತಿ ಶಿವಾಜಿ ಟರ್ಮಿನಲ್‌ನಿಂದ ಹೊರಟಿದ್ದ ಉದ್ಯಾನ್ ಎಕ್ಸ್‌ಪ್ರೆಸ್ ರೈಲು (ಟಿ.ನಂ. 11301) ಕೆಎಸ್ಆರ್ ನಿಲ್ದಾಣದ 3ನೇ ಪ್ಲಾಟ್‌ಫಾರ್ಮ್‌ಗೆ ಶನಿವಾರ ಬೆಳಿಗ್ಗೆ 5.45ಕ್ಕೆ ತಲುಪಿತ್ತು. ಪ್ರಯಾಣಿಕರು ಇಳಿದು ಹೋಗಿದ್ದರು.

ಬೆಳಿಗ್ಗೆ ಸುಮಾರು 7.10ರ ಸಮಯಕ್ಕೆ ಎಂಜಿನ್ ಹಿಂಭಾಗ ಇರುವ ಬಿ1 ಮತ್ತು ಬಿ2 ಬೋಗಿಗಳಲ್ಲಿ ಹೊಗೆ ಕಾಣಿಸಿಕೊಂಡಿದ್ದು, ರೈಲ್ವೆ ಸಿಬ್ಬಂದಿ ತಕ್ಷಣ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು. 7.35ಕ್ಕೆ ಅಗ್ನಿಶಾಮಕ ದಳದವರು ಬಂದು ಬೆಂಕಿ ನಂದಿಸಿದರು.



ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ನಿಂತಿದ್ದ ರೈಲಿನ ಎರಡು ಬೋಗಿಗಳಲ್ಲಿ ಶನಿವಾರ ಬೆಂಕಿ ಕಾಣಿಸಿಕೊಂಡಿತು

ಪ್ರಯಾಣಿಕರಿಗಾಗಲಿ, ಅಕ್ಕಪಕ್ಕದಲ್ಲಿ ಇದ್ದ ಇತರ ರೈಲುಗಳಿಗಾಗಲಿ ಅಪಾಯವಾಗಿಲ್ಲ.

ತನಿಖಾ ಸಮಿತಿ ರಚನೆ: ಬೆಂಕಿ ಅವಘಡಕ್ಕೆ ಕಾರಣ ಏನು ಎಂಬುದು ಇನ್ನೂ ಗೊತ್ತಾಗಿಲ್ಲ. ಅದರ ಪತ್ತೆಗಾಗಿ ತನಿಖಾ ಸಮಿತಿ ರಚಿಸಲಾಗಿದೆ. ಈ ಸಮಿತಿ ಪರಿಶೀಲಿಸಿ ವರದಿ ನೀಡಲಿದೆ ಎಂದು ರೈಲ್ವೆ ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಬೆಂಕಿ ಅವಘಡ ಉಂಟಾಗಿದ್ದ ಆ ಎರಡು ಬೋಗಿಗಳನ್ನು ಡಿಪೊಗೆ ಕಳುಹಿಸಲಾಗಿದೆ. ಎಂಜಿನ್‌ನಲ್ಲಿ ಯಾವುದೇ ಸಮಸ್ಯೆ ಉಂಟಾಗಿಲ್ಲ. ಬೇರೆ ಎರಡು ಬೋಗಿಗಳನ್ನು ಜೋಡಿಸಿಕೊಂಡು ಅದೇ ಉದ್ಯಾನ್ ಎಕ್ಸ್‌ಪ್ರೆಸ್ ರೈಲು ಶನಿವಾರ ರಾತ್ರಿ ಮುಂಬೈಯ ಛತ್ರಪತಿ ಶಿವಾಜಿ ಟರ್ಮಿನಲ್‌ಗೆ ಹೊರಟಿದೆ ಎಂದು ಮಾಹಿತಿ ನೀಡಿದ್ದಾರೆ.

ವಿಧಾನ ಪರಿಷತ್‌ಗೆ ಎಂ.ಆರ್. ಸೀತಾರಾಮ್, ಉಮಾಶ್ರೀ, ಸುಧಾಮ್

ಒಂದನೇ ಪುಟದಿಂದ

ಸುಧಾಮ್ ದಾಸ್ ಅವರ ಬದಲಿಗೆ ಬೇರೆ ಕಾರ್ಯಕರ್ತರಿಗೆ ಅವಕಾಶ ನೀಡುವಂತೆ ಒತ್ತಾಯಿಸಿ ಸಚಿವರಾದ ಜಿ. ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಡಾ.ಎಚ್.ಸಿ. ಮಹದೇವಪ್ಪ, ಆರ್.ಬಿ. ತಿಮ್ಮಾಪುರ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಗೆ ಪತ್ರ ಬರೆದಿದ್ದರು.

ಅವರ ಬದಲಿಗೆ ಬೇರೆ ಕಾರ್ಯಕರ್ತರಿಗೆ ಅವಕಾಶ ನೀಡುವಂತೆ ಒತ್ತಾಯಿಸಿದ್ದರು. ಆದರೆ, ಅವರ ಆಕ್ಷೇಪ ಬದಿಗೊತ್ತಿ ಮುಖ್ಯಮಂತ್ರಿ ಶಿಫಾರಸು ಮಾಡಿದ್ದರು.

ಹಿಂದುಳಿದ ವರ್ಗಗಳ ಕೋಟಾದಿಂದ ಎಂ.ಆರ್. ಸೀತಾರಾಮ್, ಅಲ್ಪಸಂಖ್ಯಾತ ಕೋಟಾದಿಂದ ಮನ್ಸೂರ್ ಅಲಿ ಖಾನ್, ಪರಿಶಿಷ್ಟ ಜಾತಿ ಎಡಗೈ ಕೋಟಾದಡಿ, ಜಾರಿ ನಿರ್ದೇಶನಾಲಯದ ನಿವೃತ್ತ ಅಧಿಕಾರಿ ಸುಧಾಮ್ ದಾಸ್ ಹೆಸರನ್ನು ಪರಿಷತ್‌ಗೆ ನಾಮ ನಿರ್ದೇಶನ ಮಾಡಲು ಈ ಹಿಂದೆಯೇ ಕಾಂಗ್ರೆಸ್ ನಾಯಕರು ಮುಂದಾಗಿದ್ದರು. ಆ ಬೆನ್ನಿಗೆ, ಸುಧಾಮ್ ದಾಸ್ ಅವರ ನಾಮನಿರ್ದೇಶನಕ್ಕೆ ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ಎಡಗೈ ಬಣದ ಪ್ರಮುಖ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಮೂವರ ನೇಮಕಕ್ಕೆ ಆಕ್ಷೇಪ ವ್ಯಕ್ತಪಡಿಸಿ ರಾಜ್ಯಪಾಲರಿಗೂ ದೂರು ಸಲ್ಲಿಕೆಯಾಗಿತ್ತು.

ಉಮಾಶ್ರೀಗೆ ಒಲಿದ ಪರಿಷತ್ ಸ್ಥಾನ: ಮನ್ಸೂರ್ ಅಲಿ ಖಾನ್ ಬದಲು ಉಮಾಶ್ರೀ ಹೆಸರನ್ನು ಪರಿಗಣಿಸುವಂತೆ ಹೈಕಮಾಂಡ್ ಮೇಲೆ ಮುಖ್ಯಮಂತ್ರಿ ಒತ್ತಡ ಹೇರಿದ್ದರು. ವಿಧಾನಸಭೆ ಚುನಾವಣೆಯಲ್ಲಿ ಉಮಾಶ್ರೀಗೆ ಟಿಕೆಟ್ ನಿರಾಕರಿಸಲಾಗಿತ್ತು. ಈ ವೇಳೆ ಪರಿಷತ್‌ಗೆ ನಾಮನಿರ್ದೇಶನ ಮಾಡುವ ಭರವಸೆ ನೀಡಲಾಗಿತ್ತು.

ಕೆಎಎಸ್, ಪಿಎಸ್ಐ ಪರೀಕ್ಷೆ: ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಸೋಲೂರಿನ ಆರ್.ಎಲ್.ಜಾಲಪ್ಪ ಅಕಾಡೆಮಿಯು (ನೆಲಮಂಗಲದಿಂದ 21 ಕಿ.ಮೀ ದೂರ) ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಗ್ರಾಮೀಣ ಪ್ರದೇಶದ ಪದವೀಧರ ಯುವಕ–ಯುವತಿಯರಿಗೆ ನಾಲ್ಕು ತಿಂಗಳ ಉಚಿತ ತರಬೇತಿ ಶಿಬಿರ ಹಮ್ಮಿಕೊಂಡಿದೆ.

ಕೆಎಎಸ್, ಪಿಎಸ್ಐ, ಎಸ್‌ಡಿಎ, ಎಫ್‌ಡಿಎ ಪರೀಕ್ಷೆಗೆ ಸೆ.15ರಿಂದ ತರಬೇತಿ ಆರಂಭವಾಗಲಿದೆ. ವೆಬ್‌ಸೈಟ್: www.rljacademy.in ನಲ್ಲಿ ಆಸಕ್ತರು ಸೆ.10ರ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ಅಕಾಡೆಮಿ ಕಾರ್ಯದರ್ಶಿ ಲಕ್ಷ್ಮಣ ಕೊಡಸೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ 99006 06042, 97314 80759.

‘ಏರ್‌ಪೋರ್ಟ್ ಟೇಕಾಫ್’ಗೇ ಗ್ರಹಣ





ಶಿವಮೊಗ್ಗ ವಿಮಾನ ನಿಲ್ದಾಣದ ನೋಟ

ಒಂದನೇ ಪುಟದಿಂದ...

ರಾಜ್ಯದ ಉಳಿದ ಕಡೆ ನಿರ್ಮಾಣ ಹಂತದಲ್ಲಿರುವ ವಿಮಾನ ನಿಲ್ದಾಣಗಳ ಕಾಮಗಾರಿಯು ಭೂಸ್ವಾಧೀನ, ಟೆಂಡರ್ ವಿಳಂಬ ಮತ್ತಿತರ ಕಾರಣಗಳಿಂದ ನನೆಗುದಿಗೆ ಬಿದ್ದಿದೆ.

ರಾಜ್ಯದಲ್ಲಿ ವಾಯುಯಾನ ಆಧಾರಿತ ಅಭಿವೃದ್ಧಿಗೆ ಉತ್ತೇಜನ ನೀಡಲು ಸಮಗ್ರ ನಾಗರಿಕ ವಿಮಾನಯಾನ ನೀತಿ ರೂಪಿಸುವುದಾಗಿ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಸರ್ಕಾರ ಘೋಷಿಸಿದೆ. ವಿಜಯಪುರ ವಿಮಾನ ನಿಲ್ದಾಣದಲ್ಲಿ ಪ್ರಸಕ್ತ ಸಾಲಿನಲ್ಲಿಯೇ ಕಾರ್ಯಾಚರಣೆ ಮಾಡುವುದು ಹಾಗೂ ಧರ್ಮಸ್ಥಳ, ಕೊಡಗು, ಚಿಕ್ಕಮಗಳೂರಿನಲ್ಲಿ ಏರ್‌ಸ್ಟ್ರಿಪ್ ನಿರ್ಮಾಣದ ಪ್ರಸ್ತಾಪವೂ ಆಯವ್ಯಯದಲ್ಲಿದೆ.

ನಾಗರಿಕ ವಿಮಾನಯಾನ ಸಂಪರ್ಕದ ಮೂಲಕ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ಜತೆಗೆ ಆರ್ಥಿಕ ಪುನಃಶ್ಚೇತನದ ಉದ್ದೇಶದಿಂದ ಕಾಳಿ ನದಿ, ಬೈಂದೂರು, ಮಲ್ಪೆ, ಮಂಗಳೂರು, ತುಂಗಭದ್ರಾ, ಕೆಆರ್‌ಎಸ್, ಲಿಂಗನಮಕ್ಕಿ, ಆಲಮಟ್ಟಿ ಮತ್ತು ಹಿಡಕಲ್ ಜಲಾಶಯಗಳಲ್ಲಿ ವಾಟರ್ ಏರೋಡ್ರೋಮ್ಸ್ ಅಭಿವೃದ್ಧಿಪಡಿಸಲು ಯೋಚಿಸಲಾಗಿತ್ತು. ಮಡಿಕೇರಿ, ಚಿಕ್ಕಮಗಳೂರು ಮತ್ತು ಹಂಪಿಯಲ್ಲಿ ಹೆಲಿಪೋರ್ಟ್‌ಗಳನ್ನು ಸ್ಥಾಪಿಸಲು ಕಾರ್ಯಸಾಧ್ಯತೆ ಮತ್ತು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವ, ಚಿಕ್ಕಮಗಳೂರು, ಹರಿಹರ, ಕುಶಾಲನಗರ, ಅಥಣಿಯಲ್ಲಿ ಕಿರು ವಿಮಾನ ನಿಲ್ದಾಣ ಸ್ಥಾಪಿಸುವ ಚಿಂತನೆಯೂ ನಡೆದಿತ್ತು. ಆದರೆ, ಇದ್ಯಾವುದೂ ನನಸಾಗಿಲ್ಲ.

ಆರ್ಥಿಕವಾಗಿ ಲಾಭ: ಮಹಾರಾಷ್ಟ್ರದ ಶಿರಡಿಯಲ್ಲಿರುವ ವಿಮಾನ ನಿಲ್ದಾಣವನ್ನು ಅಲ್ಲಿನ ಸರ್ಕಾರವೇ ನಿರ್ವಹಿಸುತ್ತಿದೆ. 2-3 ರಾಜ್ಯಗಳು ಇದೇ ಮಾದರಿಯನ್ನು ಅನುಸರಿಸುತ್ತಿವೆ. ರಾಜ್ಯದಲ್ಲಿಯೂ ಮುಂದಿನ ದಿನಗಳಲ್ಲಿ ನಿರ್ಮಿಸುವ ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ತಾನೇ ವಹಿಸಿಕೊಳ್ಳಲು ಸರ್ಕಾರ ಮುಂದಾಗಿದೆ. ಇದರಿಂದ ಆರ್ಥಿಕವಾಗಿ ಲಾಭವಾಗಲಿದೆ ಎನ್ನುವ ಲೆಕ್ಕಾಚಾರ ಕೆಎಸ್‌ಐಐಡಿಸಿ ಅಧಿಕಾರಿಗಳದ್ದು.

ವಿಜಯಪುರ ವಿಮಾನ ನಿಲ್ದಾಣ: ನಗರ ಹೊರವಲಯದ ಬುರಾಣಪುರದಲ್ಲಿ ₹ 347.92 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣ ನಿರ್ಮಿಸಲಾಗುತ್ತಿದೆ. ವಿಮಾನ ನಿಲ್ದಾಣ ಕಾಮಗಾರಿಗೆ ನಿಯಮಗಳ ಪ್ರಕಾರ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಟೆಂಡರ್ ಕರೆಯಬೇಕು. ಆದರೆ, ಹಿಂದಿನ ಬಿಜೆಪಿ ಸರ್ಕಾರ ಲೋಕೋಪಯೋಗಿ ಇಲಾಖೆಗೆ ಈ ಕೆಲಸವನ್ನು ವಹಿಸಿದೆ. ಇಲ್ಲಿ ಮೊದಲ ಹಂತದಲ್ಲಿ ₹ 216.09 ಕೋಟಿಯಲ್ಲಿ 3,050 ಮೀ. ಉದ್ದದ ರನ್ ವೇ ನಿರ್ಮಾಣ, ಪೆರಿಫೆರಲ್ ರಸ್ತೆ, ಏಪ್ರಾನ್, ಟ್ಯಾಕ್ಸಿವೇ, ಸಂಪರ್ಕ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿವೆ. ಈಗಾಗಲೇ ಶೇ 84.27ರಷ್ಟು ಪ್ರಗತಿ ಆಗಿದೆ. ಪ್ರಯಾಣಿಕರ ಟರ್ಮಿನಲ್ ಕಟ್ಟಡ, ಎಟಿಸಿ ಕಟ್ಟಡ, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ವಾಚ್ ಟವರ್, ಯು.ಜಿ ಟ್ಯಾಂಕ್ ನಿರ್ಮಾಣ ಮುಂತಾದ ಎರಡನೇ ಹಂತದ ₹ 86.20 ಕೋಟಿ ವೆಚ್ಚದ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ.

ಮೂರನೇ ಹಂತದಲ್ಲಿ (₹19.39 ಕೋಟಿ) ಎಲೆಕ್ಟ್ರೋ-ಮೆಕ್ಯಾನಿಕಲ್ ಸಾಧನಗಳ ಕಾಮಗಾರಿ ಶೇ 30.70ರಷ್ಟು ಪೂರ್ಣಗೊಂಡಿದೆ. ನಿಲ್ದಾಣವನ್ನು ಎಟಿಆರ್-72 ಕಿರು ವಿಮಾನ ಹಾರಾಟಕ್ಕೆ ಪೂರಕವಾದ ಕಾಮಗಾರಿಯ ಬದಲು ಏರ್‌ಬಸ್ 320 ವಿಮಾನಗಳ ಹಾರಾಟಕ್ಕಾಗಿ ಉನ್ನತೀಕರಿಸಿರುವುದರಿಂದ ಹೆಚ್ಚುವರಿಯಾಗಿ ₹ 127.92 ಕೋಟಿ ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿವೆ. ಇಲ್ಲಿ ರಾತ್ರಿ ಲ್ಯಾಂಡಿಂಗ್ ವ್ಯವಸ್ಥೆ ಕಲ್ಪಿಸಲು ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸಚಿವ ಎಂ.ಬಿ. ಪಾಟೀಲ ನಿರ್ದೇಶನ ನೀಡಿದ್ದಾರೆ. ಮೂಲ ಯೋಜನೆಯಲ್ಲಿ ರಾತ್ರಿ ಲ್ಯಾಂಡಿಂಗ್ ಸೌಲಭ್ಯ ಸೇರಿರಲಿಲ್ಲ. ಈ ಸೌಲಭ್ಯ ಕಲ್ಪಿಸಲು ₹ 12 ಕೋಟಿ ಹೆಚ್ಚುವರಿ ಬೇಕಾಗಿದೆ. ಇಲ್ಲಿಂದ ವಿಮಾನ ಹಾರಾಟ ಆರಂಭವಾದರೆ, ಈ ಭಾಗದಲ್ಲಿ ಆಮದು-ರಫ್ತು ವ್ಯವಹಾರ, ವ್ಯಾಪಾರ ವಹಿವಾಟು, ಸರಕು-ಸಾಗಣೆ ವ್ಯವಸ್ಥೆ ಅಭಿವೃದ್ಧಿಗೆ ಅನುಕೂಲವಾಗಲಿದೆ.

ಕಲಬುರಗಿ ವಿಮಾನ ನಿಲ್ದಾಣ: ವರ್ಷದ ಹಿಂದೆಯಷ್ಟೇ ವೇಗದ ಬೆಳವಣಿಗೆಯ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೆ ಕಲಬುರಗಿ ವಿಮಾನ ನಿಲ್ದಾಣ ಪಾತ್ರವಾಗಿತ್ತು. ವಿಮಾನಗಳ ಹಾರಾಟ ಸೇವೆಯ ಕಡಿತದಿಂದ ಪ್ರಯಾಣಿಕರ ಸಂಖ್ಯೆ ದಿನೇ ದಿನೇ ಕುಸಿಯುತ್ತಿದೆ. ಈ ವರ್ಷದ ಏಪ್ರಿಲ್‌ನಲ್ಲಿ ವಿಮಾನ ಹಾರಾಟ ಬೆಳವಣಿಗೆಯು ಶೇ 25.8ರಷ್ಟು ಹಾಗೂ ಪ್ರಯಾಣಿಕರ ಓಡಾಟ ಶೇ 38.3ರಷ್ಟು ಕುಸಿದಿದೆ.

2019ರ ನವೆಂಬರ್ 22ರಂದು ಕಲಬುರಗಿಯಲ್ಲಿ ವಿಮಾನ ಸೇವೆ ಆರಂಭಗೊಂಡಿತ್ತು. ವಿಜಯಪುರ, ಯಾದಗಿರಿ ಜಿಲ್ಲೆಗಳು ಸೇರಿ ನೆರೆಯ ಮಹಾರಾಷ್ಟ್ರ, ತೆಲಂಗಾಣದ ಗಡಿ ಜಿಲ್ಲೆಗಳ ಜನರಿಗೂ ಅನುಕೂಲವಾಗಿ ಸಂಪರ್ಕ ವ್ಯವಸ್ಥೆ ಸುಧಾರಣೆಗೆ ಬುನಾದಿ ಹಾಕಿತ್ತು. ಸಮೀಪದ ಬೀದರ್ ಮತ್ತು ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಆರ್‌ಜಿಐಎ) ಕಲಬುರಗಿ ನಿಲ್ದಾಣದ ಪ್ರಗತಿಗೆ ಅಡ್ಡಿಯಾಗುತ್ತಿವೆ.

ಆರ್‌ಜಿಐಎ: ಆರ್‌ಜಿಐಎ ವಿಮಾನ ನಿಲ್ದಾಣವು ಸಮೀಪದಲ್ಲಿ ಇರುವುದರಿಂದ ಬೆಂಗಳೂರು, ಮುಂಬೈ, ಅಹಮದಾಬಾದ್‌ನಂಥ ಮೆಟ್ರೊ ನಗರಗಳಿಂದ ಕಲಬುರಗಿಗೆ ವಿಮಾನ ಕಾರ್ಯಾಚರಣೆಗೆ ಅನುಮತಿಸುತ್ತಿಲ್ಲ ಎಂಬ ಮಾತೂ ಇದೆ. ಒಂದು ವಿಮಾನ ನಿಲುಗಡೆಯಾದರೆ ಆರ್‌ಜಿಐಎಗೆ ಲಕ್ಷಾಂತರ ರೂಪಾಯಿ ನಷ್ಟ ಆಗುತ್ತದೆ ಎಂಬ ಲೆಕ್ಕಾಚಾರದಿಂದ ನೈಟ್ ಲ್ಯಾಂಡಿಂಗ್ ಅನುಮತಿ ಸಿಕ್ಕರೂ ಕಲಬುರಗಿಯಲ್ಲಿ ರಾತ್ರಿ ವಿಮಾನ ಕಾರ್ಯಾಚರಣೆಗೆ ಸೇವಾ ಸಂಸ್ಥೆಗಳು ಮುಂದೆ ಬರುತ್ತಿಲ್ಲ.

‘ಈಚೆಗೆ ರಾತ್ರಿ ವಿಮಾನ ನಿಲುಗಡೆ ಸೇವೆಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಅನುಮತಿ ನೀಡಿದೆ. ಅದರ ಸೇವೆ ಪಡೆಯಲು ವಿಮಾನಯಾನ ಸಂಸ್ಥೆಗಳನ್ನು ಆಹ್ವಾನಿಸಬೇಕು. ಸ್ಥಳೀಯ ಜನಪ್ರತಿನಿಧಿಗಳು ಪಕ್ಷಭೇದ ಮರೆತು ನಾಗರಿಕ ವಿಮಾನಯಾನ ಸಚಿವರ ಮೇಲೆ ಒತ್ತಡ ತಂದು ನೈಟ್ ಲ್ಯಾಂಡಿಂಗ್ ಸೇವೆ ಸದ್ಬಳಕೆ ಮಾಡಿಕೊಳ್ಳಬೇಕು’ ಎನ್ನುತ್ತಾರೆ ಕಲಬುರಗಿಯ ನಿವೃತ್ತ ಎಂಜಿನಿಯರ್ ವೆಂಕಟೇಶ್ ಮುದಗಲ್.

ಹುಬ್ಬಳ್ಳಿ ವಿಮಾನ ನಿಲ್ದಾಣ: ಉತ್ತರ ಕರ್ನಾಟಕದ ವಾಣಿಜ್ಯ ಕೇಂದ್ರ ಹುಬ್ಬಳ್ಳಿಯಲ್ಲಿ 1989ರಲ್ಲಿ ವಿಮಾನ ನಿಲ್ದಾಣ ಕಾರ್ಯಾಚರಣೆ ಆರಂಭಗೊಂಡಿತು. ರಾಜ್ಯದ ಮೊದಲ ಹಸಿರು ವಿಮಾನ ನಿಲ್ದಾಣವಿದು. ಆರಂಭದಲ್ಲಿ ಖಾಸಗಿ ಕಂಪನಿ ನಿರ್ವಹಿಸಿತ್ತು. 1994ರಲ್ಲಿ ಎಎಐ ವಹಿಸಿಕೊಂಡಿತು. ಇಲ್ಲಿಂದ ಬೆಂಗಳೂರು, ನವದೆಹಲಿ, ಮುಂಬೈ, ಚೆನ್ನೈ, ಹೈದರಾಬಾದ್ ಹಾಗೂ ಪುಣೆಗೆ ವಿಮಾನ ಸೇವೆ ಇದೆ. ರಾತ್ರಿ ವೇಳೆ ಹಾರಾಟಕ್ಕೂ ವ್ಯವಸ್ಥೆ ಇದೆ. ನಿಲ್ದಾಣದಲ್ಲಿ ₹ 43 ಕೋಟಿ ವೆಚ್ಚದಲ್ಲಿ ಎಂಟು ಮೆಗಾ ವಾಟ್ ಸೌರಶಕ್ತಿ ಉತ್ಪಾದನಾ ಸಾಮರ್ಥ್ಯದ ಘಟಕ ಸ್ಥಾಪಿಸಲಾಗಿದ್ದು, ವಿಮಾನ ನಿಲ್ದಾಣಕ್ಕೆ ವಿದ್ಯುತ್ ಪೂರೈಸಲಾಗುತ್ತಿದೆ.

‘ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ದರ್ಜೆಗೇರಿಸಲು ಸರ್ಕಾರ ಒಪ್ಪಿಗೆ ನೀಡಿದೆ. 20 ಸಾವಿರ ಚದರ ಮೀಟರ್ ವಿಸ್ತೀರ್ಣದ ಆಡಳಿತ ಕಚೇರಿ ಕಟ್ಟದ ನಿರ್ಮಾಣ ಮುಂದಿನ ಫೆಬ್ರುವರಿ ವೇಳೆಗೆ ಪೂರ್ಣಗೊಳ್ಳಲಿದೆ. 2025ರ ವೇಳೆಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ರೂಪುಗೊಳ್ಳಲಿದೆ’ ಎಂದು ವಿಮಾನ ನಿಲ್ದಾಣದ ನಿರ್ದೇಶಕ ಪ್ರಮೋದಕುಮಾರ್ ಠಾಕ್ರೆ ಹೇಳಿದರು. ಈ ನಿಲ್ದಾಣ ಪ್ರಗತಿಯ ಪಥದಲ್ಲಿದೆ.

ಮೈಸೂರು ವಿಮಾನ ನಿಲ್ದಾಣ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಉದ್ಘಾಟನೆಯಾದ ಬಳಿಕ, ಈ ನಗರಗಳ ಮಧ್ಯೆ ವಿಮಾನ ಬಳಕೆದಾರರ ಸಂಖ್ಯೆ ಇಳಿಕೆಯಾಗಿದೆ. ಹೆದ್ದಾರಿ ಮೂಲಕ ಬೆಂಗಳೂರಿಗೆ ಎರಡು ತಾಸಿನಲ್ಲಿ ಪ್ರಯಾಣಿಸಬಹುದು. ಬೆಂಗಳೂರು ನಗರದಿಂದ ಕೆಂಪೇಗೌಡ ವಿಮಾನನಿಲ್ದಾಣಕ್ಕೆ ಪ್ರಯಾಣಿಸಲು ಒಂದೂವರೆ ಗಂಟೆ ವ್ಯಯಿಸಬೇಕು!

ಮಂಡಕಳ್ಳಿಯಲ್ಲಿರುವ ಮೈಸೂರು ವಿಮಾನ ನಿಲ್ದಾಣದಿಂದ ಚೆನ್ನೈ, ಹೈದರಾಬಾದ್ ಹಾಗೂ ಗೋವಾಗೆ ವಿಮಾನಗಳ ಹಾರಾಟ ನಡೆಯುತ್ತಿದೆ. ನಿತ್ಯ ಮೂರು ವಿಮಾನಗಳಲ್ಲಿ ಸುಮಾರು 350ಕ್ಕೂ ಹೆಚ್ಚು ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಬಳಕೆದಾರರ ಸಂಖ್ಯೆಯು 2022–23ರ ಅವಧಿಯಲ್ಲಿ ಶೇ 80.3ರಷ್ಟು ಏರಿಕೆಯಾಗಿದೆ.

‘2022ರ ಅಕ್ಟೋಬರ್‌ನಿಂದ ಕೊಚ್ಚಿಗೆ ತೆರಳುತ್ತಿದ್ದ ಎರಡು ವಿಮಾನ, ಬೆಳಗಾವಿಗೆ ತೆರಳುತ್ತಿದ್ದ ‘ಟ್ರೂಜೆಟ್’ ವಿಮಾನ ರದ್ದಾಗಿದೆ. ಮಂಗಳೂರಿಗೆ ವಿಮಾನ ಸೇವೆ ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸು ಕಂಡಿಲ್ಲ. ಇದರ ಹೊರತಾಗಿಯೂ ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ’ ಎನ್ನುತ್ತಾರೆ ವಿಮಾನ ನಿಲ್ದಾಣದ ನಿರ್ದೇಶಕ ಜೆ.ಆರ್.ಅನೂಪ್.

3.5 ಕಿ.ಮೀ.ನಷ್ಟು ರನ್‌ವೇ ವಿಸ್ತರಿಸಲು ಯೋಜನೆ ಸಿದ್ಧಪಡಿಸಲಾಗಿದೆ. ಕೆಐಎಡಿಬಿ ಮೂಲಕ 91 ಎಕರೆ ಭೂಮಿ ಗುರುತಿಸಲಾಗಿದೆ. ವಿಮಾನ ನಿಲ್ದಾಣ ಪ್ರಾಧಿಕಾರವು ಕೆಐಎಡಿಬಿಗೆ ಮನವಿ ಪತ್ರ ಸಲ್ಲಿಸಿದ ಬಳಿಕ ಅಧಿಸೂಚನೆ ಹೊರಡಿಸುವ ಕೆಲಸಗಳು ನಡೆಯಲಿವೆ.

‘2.75 ಕಿ.ಮೀ. ರನ್‌ವೇ ವಿಸ್ತರಿಸಲು ಮೂಲ ಯೋಜನೆಯಲ್ಲಿ ಕ್ರಮ ಕೈಗೊಳ್ಳಲಾಗಿತ್ತು. ಅದಕ್ಕಾಗಿ 240 ಎಕರೆ ಭೂಮಿ ಬೇಕೆಂದು ಅಂದಾಜಿಸಲಾಗಿತ್ತು. ಅದರಲ್ಲಿ 160 ಎಕರೆಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಟರ್ಮಿನಲ್ ನಿರ್ಮಾಣಕ್ಕಾಗಿ ಗುರುತಿಸಿದ್ದ 46 ಎಕರೆ ಭೂಮಿ ಸ್ವಾಧೀನಕ್ಕೆ ಅಗತ್ಯವಿರುವ ಅನುದಾನಕ್ಕಾಗಿ ಸಂಬಂಧಿಸಿದ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಅವರು ವಿವರಿಸುತ್ತಾರೆ.

ಹಾಸನ ವಿಮಾನ ನಿಲ್ದಾಣ: ವಿಮಾನ ನಿಲ್ದಾಣ ಕಾಮಗಾರಿಗೆ 1996ರಲ್ಲಿ ಎಚ್‌.ಡಿ. ದೇವೇಗೌಡ ಅವರು ಭೂಮಿಪೂಜೆ ನಡೆಸಿದ್ದರು. ನಂತರ 2012ರಲ್ಲಿ ಯೋಜನೆಯನ್ನು ಪರಿಷ್ಕರಿಸಲಾಯಿತು. 2021ರಲ್ಲಿ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ, ವಿಮಾನ ನಿಲ್ದಾಣಕ್ಕೆ ₹ 193 ಕೋಟಿ ಅನುದಾನ ಮಂಜೂರು ಮಾಡಲಾಗಿತ್ತು. ಒಟ್ಟು ₹193.65 ಕೋಟಿ ಅಂದಾಜು ವೆಚ್ಚದ ಯೋಜನೆ ತಯಾರಿಸಲಾಗಿದೆ. ಅದರಲ್ಲಿ ರನ್ ವೇ, ಟರ್ಮಿನಲ್ ಬಿಲ್ಡಿಂಗ್, ಎಟಿಸಿ ಬಿಲ್ಡಿಂಗ್, ಕಾಂಪೌಂಡ್ ಮತ್ತು ಹೈಟೆನ್ಷನ್ ವಿದ್ಯುತ್ ಲೈನ್ ಸ್ಥಳಾಂತರ ಸೇರಿವೆ. ಈವರೆಗೆ ₹ 40 ಕೋಟಿ ಬಿಡುಗಡೆಯಾಗಿದೆ. ಹೈಟೆನ್ಷನ್ ವಿದ್ಯುತ್ ಲೈನ್ ಸ್ಥಳಾಂತರ ಕೆಲಸವೂ ನಡೆಯುತ್ತಿದೆ.

ವಿಮಾನ ನಿಲ್ದಾಣದ ರನ್‌ವೇ 2,200 ಮೀ ಉದ್ದವಿದ್ದು, ಏರ್‌ಬಸ್ 320 ವಿಮಾನ ಇಳಿಯಲು 3 ಸಾವಿರ ಮೀಟರ್‌ವರೆಗೂ ರನ್‌ವೇ ವಿಸ್ತರಿಸಲು ಅವಕಾಶ ಮಾಡಿಕೊಳ್ಳಲಾಗಿದೆ. ಸದ್ಯಕ್ಕೆ ಎಟಿಆರ್ ಮಾದರಿ ವಿಮಾನ ಇಳಿಯಲು 2,200 ಮೀಟರ್ ರನ್ ವೇ ನಿರ್ಮಾಣವಾಗುತ್ತಿದೆ. ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಹಾಗೂ ಬಿಜೆಪಿ ಮಧ್ಯೆ ಸಮರ ನಡೆಯುತ್ತಿದೆ. ಈ ಮಧ್ಯೆ, ಹಾಸನ ವಿಮಾನ ನಿಲ್ದಾಣದ ನಿರ್ವಹಣೆಯನ್ನು ರಾಜ್ಯ ಸರ್ಕಾರವೇ ನೋಡಿಕೊಳ್ಳಲಿದೆ ಎಂದು ಸಚಿವ ಎಂ.ಬಿ. ಪಾಟೀಲ್ ಹೇಳಿಕೆ ನೀಡಿದ್ದಾರೆ.

2023ರ ಡಿಸೆಂಬರ್ ಅಂತ್ಯದ ವೇಳೆಗೆ ವಿಮಾನ ಹಾರಾಟ ಆರಂಭವಾಗಲಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಅಷ್ಟರಲ್ಲಿ ಕಾಮಗಾರಿ ಮುಗಿಯುವ ಸಾಧ್ಯತೆ ಕಡಿಮೆ ಎನ್ನುವುದು ಉದ್ಯಮಿಗಳ ಮಾತು.

ಬೆಳಗಾವಿ ವಿಮಾನ ನಿಲ್ದಾಣ: ಬೆಳಗಾವಿಯ ಸಾಂಬ್ರಾದಲ್ಲಿರುವ ವಿಮಾನ ನಿಲ್ದಾಣ ಹೆಚ್ಚು ಸಕ್ರಿಯವಾಗಿದೆ. ಕೈಗಾರಿಕೆಗಳು, ಸಕ್ಕರೆ ಕಾರ್ಖಾನೆಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು ಇರುವ ಕಾರಣಕ್ಕೆ ವಿಮಾನ ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಬೆಂಗಳೂರು, ನವದೆಹಲಿ, ಪುಣೆ, ಸೂರತ್, ಅಹಮದಾಬಾದ್, ಜೋಧಪುರ, ಮುಂಬೈ, ನಾಸಿಕ್, ನಾಗ್ಪುರ, ಇಂದೋರ್, ತಿರುಪತಿ ಹಾಗೂ ಹೈದರಾಬಾದ್‌ಗೆ ವಿಮಾನಯಾನ ಸಂಪರ್ಕವಿದೆ.

‘ಬೆಳಗಾವಿ ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಲು ಹಿಂದಿನ ಸರ್ಕಾರ ನಿರ್ಧರಿಸಿತ್ತು. ಇದಕ್ಕಾಗಿ 100 ಎಕರೆ ಜಮೀನು ಅಗತ್ಯ ಎಂದು ಅಂದಾಜಿಸಲಾಗಿದೆ. ಅಗತ್ಯವಿದ್ದರೆ ಅದಕ್ಕಿಂತ ಹೆಚ್ಚೂ ಆಗಬಹುದು. ಈ ಬಗ್ಗೆ ಕೆಐಎಡಿಬಿ ಅಧಿಕಾರಿಗಳು ಸಮೀಕ್ಷೆ ನಡೆಸಿ ವರದಿ ಸಲ್ಲಿಸಿದ್ದಾರೆ. ಭೂ ಸ್ವಾಧೀನ ಪ್ರಕ್ರಿಯೆ ಬಾಕಿ ಇದೆ’ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ತಿಳಿಸಿದ್ದಾರೆ.

ಟೇಕಾಫ್ ಆಗಿಲ್ಲ!: ಬಳ್ಳಾರಿ ನಗರದಿಂದ 15 ಕಿ.ಮೀ ದೂರದಲ್ಲಿರುವ ಚಾಗನೂರು ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಿಮಾನ ನಿಲ್ದಾಣದ ಕೆಲಸ 13 ವರ್ಷ ಕಳೆದರೂ ಟೇಕಾಫ್ ಆಗಿಲ್ಲ. ಸುಮಾರು 892 ಎಕರೆ ಕೃಷಿ ಜಮೀನನ್ನು ಸರ್ಕಾರ ವಶಪಡಿಸಿಕೊಂಡಿದೆ. ಖಾಲಿ ಬಿದ್ದ ಜಮೀನು ಬಿಟ್ಟರೆ ಇಲ್ಲಿ ಯಾವ ಕಟ್ಟಡವೂ ತಲೆ ಎತ್ತಿಲ್ಲ. ವಿಮಾನ ನಿಲ್ದಾಣವನ್ನು ಪಿಪಿಪಿ ಮಾದರಿಯಲ್ಲಿ ನಿರ್ಮಿಸಲು 2010ರ ಆಗಸ್ಟ್ 6ರಂದು ಚೆನ್ನೈ ಮೂಲದ ‘ಮಾರ್ಗ್’ ಸಂಸ್ಥೆ ಜತೆ ಸರ್ಕಾರ ಒಪ್ಪಂದ ಮಾಡಿಕೊಂಡಿತ್ತು. ಈ ಸಂಸ್ಥೆ ನಿರ್ಮಾಣ ಕಾರ್ಯ ಆರಂಭಿಸದ ಕಾರಣ ಒಪ್ಪಂದವನ್ನು ರದ್ದುಗೊಳಿಸಿ, ಸ್ಪರ್ಧಾತ್ಮಕ ಬಿಡ್ ಪ್ರಕ್ರಿಯ ಪ್ರಕಾರ ಇಪಿಸಿ (ಎಂಜಿನಿಯರಿಂಗ್, ಪ್ರೊಕ್ಯುರ್‌ಮೆಂಟ್ ಆ್ಯಂಡ್ ಕನ್‌ಸ್ಟ್ರಕ್ಷನ್) ಮಾದರಿಯಲ್ಲಿ ಕೆಎಸ್‌ಐಐಡಿಸಿ ಮೂಲಕ ಅನುಷ್ಠಾನಗೊಳಿಸಲು 2022ರ ನ. 16ರಂದು ಆದೇಶ ನೀಡಲಾಗಿದೆ.

ಇನ್ನು ಕೊಪ್ಪಳ ತಾಲ್ಲೂಕಿನ ಟಣಕನಕಲ್ ಗ್ರಾಮದ ಬಳಿ ಹೊಸ ವಿಮಾನ ನಿಲ್ದಾಣಕ್ಕೆ ಜಿಲ್ಲಾಡಳಿತ 605 ಎಕರೆ ಜಾಗ ಗುರುತಿಸಿದೆ. ಈ ಬಗ್ಗೆ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಸ್ತಾವ ಸಲ್ಲಿಕೆಯಾಗಿದೆ. ಇಲ್ಲಿ ವಿಮಾನ ನಿಲ್ದಾಣವಾದರೆ ಐತಿಹಾಸಿಕ ಆನೆಗೊಂದಿ, ಅಂಜನಾದ್ರಿ ಪರ್ವತ, ಹುಲಿಗೆಮ್ಮ ದೇವಸ್ಥಾನ, ಗವಿ ಸಿದ್ಧೇಶ್ವರ ಮಠ, ತುಂಗಭದ್ರಾ ಜಲಾಶಯ, ಹಂಪಿಯತ್ತ ಪ್ರವಾಸಿಗರು ಬರಬಹುದು, ಕೈಗಾರಿಕೆ, ಆಟಿಕೆ ಕ್ಲಸ್ಟರ್ ಅಭಿವೃದ್ಧಿ ಆಗಬಹುದು ಎನ್ನುವುದು ಈ ಭಾಗದ ಜನರ ನಿರೀಕ್ಷೆ. ❖

‘ರನ್‌ವೇ ವಿಸ್ತರಣೆಯಿಂದ ವೆಚ್ಚ ದುಪ್ಪಟ್ಟು...’

ಬೆಂಗಳೂರು: ಆರಂಭಿಕ ಅಂದಾಜು ಮೊತ್ತ ₹ 220 ಕೋಟಿ; ಪರಿಷ್ಕೃತ ಅಂದಾಜು ₹ 449.22 ಕೋಟಿ. ಅಂದರೆ ನಿಗದಿತ ವೆಚ್ಚಕ್ಕಿಂತ ದುಪ್ಪಟ್ಟು. ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿಗೆ ವೆಚ್ಚವಾದ ಮೊತ್ತವಿದು!

‘ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಮೂರು ಕಿ.ಮೀ ಉದ್ದ, 45 ಮೀಟರ್ ಅಗಲದ ರನ್ ವೇ ನಿರ್ಮಾಣಕ್ಕೆ ₹ 270 ಕೋಟಿ ಖರ್ಚು ತೋರಿಸಲಾಗಿದೆ. ಪ್ರತೀ ಕಿ.ಮೀಗೆ ₹ 90 ಕೋಟಿ ವ್ಯಯಿಸಲಾಗಿದೆ. ಅದರಲ್ಲಿ ಇನ್ನೂ ₹ 21.85 ಕೋಟಿ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಬೇಕಿದೆ. ವಿಮಾನ ನಿಲ್ದಾಣದ ಕಟ್ಟಡಕ್ಕೆ ₹ 40 ಕೋಟಿ ವೆಚ್ಚ ಮಾಡಲಾಗಿದೆ. ವಿಮಾನ ನಿಲ್ದಾಣದ ನಿರ್ಮಾಣಕ್ಕೆ ನಿಗದಿತ ವೆಚ್ಚಕ್ಕಿಂತ ದುಪ್ಪಟ್ಟು ವ್ಯಯಿಸಲಾಗಿದೆ. ಹೊಸ ರನ್‌ವೇಗೆ ಅತೀ ಹೆಚ್ಚು ಹಣ ಖರ್ಚು ಮಾಡಲಾಗಿದೆ. ಈ ಬಗ್ಗೆ ತನಿಖೆ ಆಗಬೇಕು’ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಮಂಜುನಾಥ ಭಂಡಾರಿ ಅಧಿವೇಶನದಲ್ಲಿ ಆಗ್ರಹಿಸಿದ್ದಾರೆ.

‘ಹಳೆಯ ರನ್ ವೇಯನ್ನು ಎಟಿಆರ್-72 ಮಾದರಿ ವಿಮಾನಗಳ ಹಾರಾಟಕ್ಕೆ ಅನುವಾಗುವಂತೆ 2,050 ಮೀಟರ್ ಉದ್ದ, 30 ಮೀಟರ್ ಅಗಲಕ್ಕೆ ವಿನ್ಯಾಸಗೊಳಿಸಲಾಗಿತ್ತು. ನಂತರ ಬೋಯಿಂಗ್ ವಿಮಾನ ಇಳಿಯಲು ಅನುಕೂಲವಾಗುವಂತೆ 45 ಮೀ. ಅಗಲ, 3,050 ಮೀ. ಉದ್ದಕ್ಕೆ ಬದಲಿಸಲಾಗಿದೆ. ಹೀಗಾಗಿ, ವೆಚ್ಚದಲ್ಲಿ ಏರಿಕೆಯಾಗಿದೆ. ಅವ್ಯವಹಾರ ಆರೋಪದ ತನಿಖೆ ನಡೆಸಲಾಗುವುದು’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಉತ್ತರಿಸಿದ್ದಾರೆ.

ಸಂದರ್ಶನ: ಎಂ.ಬಿ. ಪಾಟೀಲ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವ

‘ಕಾಮಗಾರಿಯಲ್ಲಿ ವಿಳಂಬವಿಲ್ಲ’

- **ರಾಜ್ಯದಲ್ಲಿ ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ ಆಮೆಗತಿಯಲ್ಲಿದೆ. ಯಾಕೆ?**

ಇದು ತಪ್ಪು ಅಭಿಪ್ರಾಯ. ನಿರೀಕ್ಷೆ ಪ್ರಕಾರ ಯಾವುದೇ ವಿಳಂಬ ಇಲ್ಲದೆ ಕಾಮಗಾರಿಗಳು ಪ್ರಗತಿಯಲ್ಲಿವೆ. ನಾನು ಅಧಿಕಾರ ವಹಿಸಿಕೊಂಡ ಎರಡು ತಿಂಗಳಲ್ಲೇ ನಾಲ್ಕು ಸಭೆಗಳನ್ನು ಮಾಡಿದ್ದೇನೆ. ಎಲ್ಲವೂ ಸುಸೂತ್ರವಾಗಿ ನಡೆಯುತ್ತಿವೆ.

- **ಕೈಗಾರಿಕೆ, ಪ್ರವಾಸೋದ್ಯಮ ವಲಯಕ್ಕೆ ಉತ್ತೇಜನ ನೀಡಲು ವಿಮಾನ ಯಾನ ಸೌಲಭ್ಯ ಪೂರಕ ಅಲ್ಲವೇ?**


ಇದು ನಿಜ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಪೂರಕ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದೆ. ಎಲ್ಲಿ ವಿಮಾನ ನಿಲ್ದಾಣ ಮಾಡಿದರೆ, ಹೇಗೆ ಅನುಕೂಲ ಆಗುತ್ತದೆ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಂಡೇ ವಿಮಾನ ನಿಲ್ದಾಣಗಳ, ಏರ್‌ಸ್ಟ್ರಿಪ್‌ಗಳ ನಿರ್ಮಾಣ ನಡೆಯುತ್ತಿದೆ.

- **ಶಿವಮೊಗ್ಗ ವಿಮಾನ ನಿಲ್ದಾಣ ಹೊರತುಪಡಿಸಿದರೆ ಉಳಿದ ಕಡೆಗಳಲ್ಲಿ ವಿಮಾನ ನಿಲ್ದಾಣಗಳ ಕಾಮಗಾರಿ ವಿಳಂಬವಾಗಲು ಕಾರಣಗಳೇನು?**

ವಿಜಯಪುರ ಮತ್ತು ಹಾಸನ ವಿಮಾನ ನಿಲ್ದಾಣಗಳ ಕಾಮಗಾರಿ ಯೋಜನೆಯಂತೆ ನಡೆಯುತ್ತಿದೆ. ವಿಜಯಪುರದಲ್ಲಿ ಡಿಸೆಂಬರ್ ವೇಳೆಗೆ ಪೂರ್ಣ ಆಗಲಿದೆ. ಹಾಸನದಲ್ಲಿಯೂ ಕಾಮಗಾರಿ ಪ್ರಗತಿಯಲ್ಲಿದೆ. ರಾಯಚೂರು ವಿಮಾನ ನಿಲ್ದಾಣದ್ದು ಪ್ರಾಥಮಿಕ ಹಂತದಲ್ಲಿದೆ.

- **ಧರ್ಮಸ್ಥಳ, ಕೊಡಗು, ಚಿಕ್ಕಮಗಳೂರಿನಲ್ಲಿ ಏರ್‌ಸ್ಟ್ರಿಪ್ ನಿರ್ಮಿಸುವ ಬಗ್ಗೆ?**


ಈ ಬಾರಿಯ ಬಜೆಟ್‌ನಲ್ಲಿ ಇವು ಘೋಷಣೆಯಾಗಿವೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕೆಎಸ್‌ಐಐಡಿಸಿ ಅಧಿಕಾರಿಗಳು ಪತ್ರ ಬರೆದಿದ್ದು, ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ತ್ವರಿತವಾಗಿ ಬಗೆಹರಿಸುವಂತೆ ಕೋರಲಾಗಿದೆ. ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ 49 ಎಕರೆ ಜಾಗ ಗುರುತಿಸಿದ್ದು, ಇನ್ನೂ 110 ಎಕರೆ ಹೆಚ್ಚುವರಿಯಾಗಿ ಕೇಳಲಾಗಿದೆ. ಧರ್ಮಸ್ಥಳದಲ್ಲೂ ಜಾಗ ಗುರುತಿಸಿದ್ದು, ಅರಣ್ಯ ಇಲಾಖೆ ಹಂತದಲ್ಲಿ ಚರ್ಚೆಗಳು ನಡೆಯುತ್ತಿವೆ.



ರಾಜ್ಯದಲ್ಲಿ ವಿಮಾನ ನಿಲ್ದಾಣ ಯೋಜನೆಗಳ ಪ್ರಗತಿ

ಶಿವಮೊಗ್ಗ	
ವಿಸ್ತೀರ್ಣ	778.62 ಎಕರೆ
ಕಾಮಗಾರಿ	ಎರಡು ಪ್ಯಾಕೇಜ್
ಮೊತ್ತ	₹449.22 ಕೋಟಿ
ಈವರೆಗೆ ಬಿಡುಗಡೆ	₹350 ಕೋಟಿ
ಸ್ಥಿತಿಗತಿ	ಕಾಮಗಾರಿ ಪೂರ್ಣ
ವಿಜಯಪುರ	
ವಿಸ್ತೀರ್ಣ	727 ಎಕರೆ
ಕಾಮಗಾರಿ	ಮೂರು ಪ್ಯಾಕೇಜ್
ಮೊತ್ತ	₹347.92 ಕೋಟಿ
ಈವರೆಗೆ ಬಿಡುಗಡೆ	₹253.70 ಕೋಟಿ
ಮುಕ್ತಾಯ ನಿರೀಕ್ಷೆ	2023 ಅಕ್ಟೋಬರ್
ಹಾಸನ	
ವಿಸ್ತೀರ್ಣ	536 ಎಕರೆ
ಕಾಮಗಾರಿ	2 ಹಂತ
ಮೊತ್ತ	₹193.65 ಕೋಟಿ
ಈವರೆಗೆ ಬಿಡುಗಡೆ	₹109.99 ಕೋಟಿ
ಮುಕ್ತಾಯ ನಿರೀಕ್ಷೆ	2024 ಏಪ್ರಿಲ್
ರಾಯಚೂರು	
ವಿಸ್ತೀರ್ಣ	ವಿಸ್ತೃತ ಯೋಜನಾ ವರದಿ ಸಿದ್ಧ
ಕಾಮಗಾರಿ	ಟೆಂಡರ್ ಆಹ್ವಾನ
ಮೊತ್ತ	₹219 ಕೋಟಿ
ಈವರೆಗೆ ಬಿಡುಗಡೆ	₹11.40 ಕೋಟಿ
ಮುಕ್ತಾಯ ನಿರೀಕ್ಷೆ	2025 ಮಾರ್ಚ್
ಕಾರವಾರ	
ವಿಸ್ತೀರ್ಣ	97.1 ಎಕರೆ
ಕಾಮಗಾರಿ	ರನ್‌ವೇ, ಟರ್ಮಿನಲ್, ಸಂಪರ್ಕ ರಸ್ತೆ
ಮೊತ್ತ	₹82.74 ಕೋಟಿ
ಈವರೆಗೆ ಬಿಡುಗಡೆ	₹27.84 ಕೋಟಿ
ಮುಕ್ತಾಯ ನಿರೀಕ್ಷೆ	2024-25
ಬಳ್ಳಾರಿ	
ವಿಸ್ತೀರ್ಣ	892 ಎಕರೆ ಭೂಸ್ವಾಧೀನ
ಕಾಮಗಾರಿ	ಇಪಿಸಿ ಮಾದರಿಯಲ್ಲಿ ಅಭಿವೃದ್ಧಿ
ಪ್ರಗತಿ	ಸಮಾಲೋಚಕರಾಗಿ ಮೆ: ರೈಟ್ಸ್ ಸಂಸ್ಥೆಯನ್ನು ನೇಮಿಸಲು ಪ್ರಸ್ತಾವ
ಕೊಪ್ಪಳ	
ವಿಸ್ತೀರ್ಣ	ಟಣಕನಕಲ್ ಗ್ರಾಮದ ಬಳಿ 605 ಎಕರೆ ಜಾಗ ಗುರುತು
ಕಾಮಗಾರಿ	ಜಿಲ್ಲಾಡಳಿತದಿಂದ ಕೆಎಸ್‌ಐಐಡಿಸಿಗೆ ಪ್ರಸ್ತಾವ ಸಲ್ಲಿಕೆ

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 20-8-1998

- **ಬರುವಾ ವರ್ಗಾವಣೆ ರದ್ದಿಗೆ ಆಗ್ರಹ: ವಾಜಪೇಯಿಗೆ ಜಯಾ ತಿರುಗೇಟು**

ಚೆನ್ನೈ, ಆ 19 (ಯುಎನ್‌ಐ, ಪಿಟಿಐ)– ಜಾರಿ ನಿರ್ದೇಶನಾಲಯದ ನಿರ್ದೇಶಕ ಎಂ.ಕೆ. ಬೆಜ್‌ಬರುವಾ ಅವರ ವರ್ಗಾವಣೆ ರದ್ದುಪಡಿಸಿ ಈ ಪ್ರಕರಣಕ್ಕೆ ತೆರೆ ಎಳೆಯಬೇಕು ಎಂದು ಎಐಎಡಿಎಂಕೆ ನಾಯಕಿ ಜಯಲಲಿತಾ ಅವರು ಪ್ರಧಾನಿ ವಾಜಪೇಯಿ ಅವರನ್ನು ಒತ್ತಾಯಿಸಿದ್ದಾರೆ.

ವರ್ಗಾವಣೆ ಕುರಿತಂತೆ ಜಯಲಲಿತಾ ಮಾಡಿರುವ ಆರೋಪಕ್ಕೆ ದಾಖಲೆ ಒದಗಿಸುವಂತೆ ಪ್ರಧಾನಿ ಅವರ ಪ್ರಧಾನ ಕಾರ್ಯದರ್ಶಿ ಬ್ರಿಜೇಶ್ ಮಿಶ್ರಾ ಬರೆದಿರುವ ಪತ್ರಕ್ಕೆ ಜಯಾ ಅವರ ಪರವಾಗಿ ಉತ್ತರಿಸಿದ ಎಐಎಡಿಎಂಕೆ ಪ್ರಧಾನ ಕಚೇರಿಯ ಕಾರ್ಯದರ್ಶಿ ಪಿ. ಮಹಾಲಿಂಗಂ, ‘ಸಾಂದರ್ಭಿಕ ಸಾಕ್ಷ್ಯಗಳ ಆಧಾರದಲ್ಲಿ ಜಯಲಲಿತಾ ಆರೋಪ ಮಾಡಿದ್ದಾರೆ’ ಎಂದು ಹೇಳಿದ್ದಾರೆ.

50 ವರ್ಷಗಳ ಹಿಂದೆ — ಸೋಮವಾರ, 20-8-1973

- **ಫ್ರಾನ್ಸಿನಿಂದ ಮತ್ತೊಂದು ಅಣ್ವಸ್ತ್ರ ಸ್ಫೋಟ**

ವೆಲ್ಲಿಂಗ್ಟನ್, ಆ 19– ದಕ್ಷಿಣ ಪೆಸಿಫಿಕ್‌ನ ಮುರುರೋನಾ ಆಟೋಲ್‌ನಲ್ಲಿ ಫ್ರಾನ್ಸ್ ಇಂದು ಬೆಳಿಗ್ಗೆ ಸಣ್ಣ ಅಣ್ವಸ್ತ್ರವೊಂದನ್ನು ಸ್ಫೋಟಿಸಿತು ಎಂದು ನ್ಯೂಜಿಲೆಂಡ್ ಸರ್ಕಾರ ವರದಿ ಮಾಡಿದೆ.

ಫ್ರಾನ್ಸ್ ನಡೆಸುತ್ತಿರುವ ಅಣ್ವಸ್ತ್ರ ಪರೀಕ್ಷೆಗಳ ಸರಣಿಯಲ್ಲಿ ಇದು ಮೂರನೇಯದು. ಇಂದು ನಡೆದದ್ದು ಜಲಜನಕ ಬಾಂಬ್ ಪರೀಕ್ಷೆ ಅಲ್ಲ ಎಂದು ನ್ಯೂಜಿಲೆಂಡ್ ಪ್ರಧಾನಿ ನಾರ್ಮನ್ ಕಿರ್ಕ್ ಅವರು ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಆಗಸ್ಟ್ 20, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಚತುರ್ಥಿ ಗಂ. 24-23 ನಕ್ಷತ್ರ: ಹಸ್ತ ಗಂ. 28-22 ಯೋಗ: ಸಾಧ್ಯಾ ಗಂ. 21-58 ಕರಣ: ವಣಿಜ ಗಂ. 11-24, ಸಿಂಹ ಮಾಸದ 03 ನೇ ದಿನ, ಮಳೆನಕ್ಷತ್ರ: ಮಘಾ 1.
ರಾಹುಕಾಲ: ಸಾಯಂಕಾಲ 04-30–06-00
ಸೂರ್ಯೋದಯ: 06-22 ಸೂರ್ಯಾಸ್ತ : 06-46, ಮುಸ್ಲಿಂ ದಿನಾಂಕ: 03 ಸಫರ್
ದಿನ ವಿಶೇಷ: ವಿನಾಯಕ ಚತುರ್ಥಿ (ತಮಿಳುನಾಡು), ಹರಿತಾಲಿಕಾ ಚತುರ್ಥಿ
ಅದೃಷ್ಟ ಸಂಖ್ಯೆ: 9, 10

ಮೇಷ: ನೀವು ಆರಿಸಿಕೊಂಡ ಮಾರ್ಗದಲ್ಲಿ ಸರಿ ತಪ್ಪುಗಳ ಬಗ್ಗೆ ಯೋಚಿಸಿ ಮುನ್ನಡೆಯಿರಿ. ಕೌಟುಂಬಿಕವಾಗಿ ಜವಾಬ್ದಾರಿಗಳನ್ನು ದಿನದಿಂದ ದಿನಕ್ಕೆ ಕಡಿಮೆ ಮಾಡುವ ಬಗ್ಗೆ ಗಮನಹರಿಸಿ. ಹೊಸ ಸ್ಫೂರ್ತಿಯಿಂದ ಕಾರ್ಯ ನಿರ್ವಹಿಸಿ.

ವೃಷಭ: ಮಂಗಳ ಕಾರ್ಯಕ್ಕೆ ಭಾಗಿಯಾಗಲು ದೂರ ಪ್ರಯಾಣ ಮಾಡಬೇಕಾಗುತ್ತದೆ. ವೃತ್ತಿಗೆ ಸಂಬಂಧಿಸಿದಂತೆ ಶತ್ರುಬಾಧೆ ಎದುರಾಗಬಹುದು, ನಿಮ್ಮ ದೈಹಿಕ ಮತ್ತು ಧಾರ್ಮಿಕ ಪ್ರಯತ್ನದಿಂದ ಸುಧಾರಿಸಿಕೊಳ್ಳಬಹುದು.

ಮಿಥುನ: ವೈದ್ಯ ವೃತ್ತಿಯವರಿಗೆ ತೃಪ್ತಿಕರವಾದ ವರಮಾನ ಪ್ರಾಪ್ತಿಯಾಗುತ್ತದೆ. ಮಂಗಳ ಕಾರ್ಯಗಳು ಸುಗಮವಾಗಿ ನಡೆಯಲೆಂದು ಮನೆ ದೇವರಿಗೆ ಪೂಜೆ ಸಲ್ಲಿಸುವಿರಿ. ಮನೆಯಲ್ಲಿ ಉದ್ವೇಗದ ವಾತಾವರಣ ಎದುರಾಗಬಹುದು.

ಕರ್ಕಾಟಕ: ವೈದ್ಯರು ಅದರಲ್ಲೂ ನರ ರೋಗ ತಜ್ಞರು ಅಭ್ಯಾಸದಲ್ಲಿ ತೋರಿದ ನಿರ್ಲಕ್ಷ್ಯ ಅಥವಾ ಬೇಜವಬ್ದಾರಿತನದಿಂದ ಪಾಪ ಸಂಗ್ರಹಣೆಯಾಗುವುದು. ಹೆಚ್ಚಿನ ಬಂಡವಾಳ ಹೂಡುವಂತೆ ಮಗನಿಂದ ಒತ್ತಾಯ ಹೆಚ್ಚಲಿದೆ.

ಸಿಂಹ: ಆಫೀಸಿನ ಕೆಲಸಗಳಲ್ಲಿ ಕೆಲವೊಂದು ವಿಷಯಗಳನ್ನು ಪರಾಮರ್ಶಿಸಲೇಬೇಕಾದ ಸಮಯ ಬರಲಿದೆ. ಅನಿವಾರ್ಯದ ಮಾತುಗಳನ್ನು ಯೋಚಿಸಿ ಮಾತನಾಡಿ. ತಂದೆ-ತಾಯಿಯವರ ಆರೋಗ್ಯ ಸ್ಥಿತಿ ಉತ್ತಮವಾಗಿರುತ್ತದೆ.

ಕನ್ಯಾ: ಹಿರಿಯರ ಭೇಟಿಯಿಂದಾಗಿ ಕುಟುಂಬದ ಬಗೆಗಿನ ವಿಚಾರಗಳು ತಿಳಿಯಲಿದೆ. ದಾಖಲೆ ಪರಿಶೀಲನೆಯಿಂದ ಆದಾಯ ತೆರಿಗೆಯನ್ನು ಪಾವತಿಸುವಿರಿ.

ತುಲಾ: ಸ್ವಂತ ಉದ್ಯೋಗದವರು ಅಧಿಕ ಬಂಡವಾಳ ಹಾಕುವುದರಿಂದ ಕೈ ಸುಡುವಂತಾಗುವುದು. ಮಕ್ಕಳ ಕೆಲಸಗಳ ಬಗ್ಗೆ ನೆರೆಯವರಿಂದ ಪ್ರಶಂಸೆಯ ಮಾತು ಕೇಳಿ ಆನಂದವಾಗುತ್ತದೆ. ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿ ಲಾಭ.

ವೃಶ್ಚಿಕ: ಮಗನ ಸಹಾಯದಿಂದ ಸಂಬಂಧಿಕರೊಬ್ಬರ ಕೆಲಸ ಸುಗಮವಾಗಿ ಕೈಗೂಡುವುದರಿಂದ ಮನಸ್ಸಿಗೆ ಹೆಚ್ಚಿನ ಸಂತಸವಿರುವುದು. ಸಹೋದ್ಯೋಗಿಗಳೊಂದಿಗಿನ ಭಿನ್ನಾಭಿಪ್ರಾಯಗಳು ನಿವಾರಣೆಯಾಗುವಂತೆ ವರ್ತಿಸಿ.

ಧನು: ನಿರುದ್ಯೋಗಸ್ಥರಿಗೆ ಹೊರ ರಾಜ್ಯವೊಂದರಲ್ಲಿ ಕೆಲಸ ನಿರ್ವಹಿಸುವ ಅವಕಾಶ ಎದುರಾದರೆ ಒಪ್ಪಿಕೊಳ್ಳುವುದು ಉತ್ತಮ. ಪ್ರಾಮಾಣಿಕವಾಗಿ ನಡೆಯುವ ನಿಮಗೆ ವ್ಯವಹಾರಗಳಲ್ಲಿ ಉತ್ತಮ ಆದಾಯ ಇರುವುದು.

ಮಕರ: ಆಡಳಿತಾತ್ಮಕ ವಿಚಾರದಲ್ಲಿ ಬದಲಾವಣೆಗಳ ಅಗತ್ಯವನ್ನು ಸಂಸ್ಥಾಪಕರಿಗೆ ಮನವರಿಕೆ ಮಾಡಿಕೊಡುವಿರಿ. ಒಂದು ಘಟನೆಯಿಂದಾಗಿ ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂಬುದು ನಿಮಗೆ ತಿಳಿಯಲಿದೆ.


ಕುಂಭ: ಈ ದಿನ ಹಣಕಾಸಿನ ವ್ಯವಹಾರದಲ್ಲಿ ಪಾಲುದಾರಿಕೆ ಪಡೆಯುವಿರಿ. ವಾಣಿಜ್ಯ ಬೆಳೆಗಳನ್ನು ದಾಸ್ತಾನು ಮಾಡಿಕೊಳ್ಳುವ ಯೋಚನೆ ಸರಿಯಾದದ್ದಾಗಿರುತ್ತದೆ. ಈ ಸಂಜೆ ನೀವು ಪ್ರೀತಿ ಪಾತ್ರರೊಡನೆ ಸಮಯ ಕಳೆಯುವಿರಿ.

ಮೀನ: ಕೊಟ್ಟ ಮಾತಿನಂತೆ ಕೆಲಸ ನೆರವೇರಿಸಿ ಕೊಡುವುದರಿಂದ ಹೆಸರು ಗಳಿಸಬಹುದು. ಚಿತ್ರರಂಗದವರಿಗೆ ಖ್ಯಾತಿ, ಗೌರವಾನ್ವಿತ ಅವಕಾಶ ದೊರೆಯುವುದು. ವಿವಾದಗಳಿಂದ ದೂರವಿರುವುದನ್ನು ಅಭ್ಯಸಿಸಿಕೊಳ್ಳಿರಿ.

ಪದಬಂಧ 5416 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೊದಲ ಸಲ ನೋಡಿದ ಮಾತ್ರದಿಂದಲೇ ಉಂಟಾಗುವ ಪ್ರೀತಿ (4)
4.ಅಡುಗೆಗೆ ಬೇಕಾದ ಸಾಮಗ್ರಿ (4)
6.ವರ ನೀಡಿರುವ ವಿಸ್ತಾರ ಹೇಳಿಕೆ (3)
7.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
8.ಜನುಮದಲ್ಲೇ ರಾಕ್ಷಸನನ್ನು ಹುಡುಕಿ! (3)
10.ಮನ ಕೊನೆಗಿದ್ದಾಗಿನ ಹತೋಟಿ (3)
12.ಟಾರ ರಸ್ತೆಯಲ್ಲಿರುವ ಮೋರಿ (3)
13.ಆ ಪಾತ್ರ ಮಾಡುತ್ತಿರುವವ ಅಯೋಗ್ಯ! (3)
14.ಕೃಷ್ಣನ ಮೊಮ್ಮಗ (4)
16.ಅಂತರಂಗವಲ್ಲ! ಇದು ಪ್ರಕಟನೆ! (4)

ಮೇಲಿಂದ ಕೆಳಕ್ಕೆ
1. ಚರ್ಮದ ಕೆಲಸಗಾರನಿವನು (3)
2.ತಿರುಮಲದಲ್ಲಿ ಖರೀದಿಸಿದ ಎಳ್ಳು (2)
3.ಆ ಮೆದೆ ಹತ್ತಿರವಿರುವ ಕೂರ್ಮ (2)
5.ಈತ ಮಾತಿನಲ್ಲಿ ನಿಪುಣ (4)
6.ವಿಷಯ ತಿಳಿದಾಗ ಆದ ದುಃಖ (3)
7.ಮಧುರವಾಗಿರುವ ತುಟಿ (3)
9.ಲೋಕಕ್ಕೆಲ್ಲಾ ಪೂಜ್ಯನಾದವನು (4)
11.ಕ್ಷತ್ರಿಯನು ನೋಡುತ್ತಿರುವ ತಾರೆ (3)
13.ಮನ್ಮಥನ ಇನ್ನೊಂದು ಹೆಸರು (3)
14.ಅಕ್ಕರೆ ತೋರುವ ಹಿರಿಯ ಸಹೋದರಿ (2)
15.ನಿಯಮಕ್ಕೆ ಒಳಪಟ್ಟವ ತಿರುಗಿ ನಿಂತಿದ್ದಾನಲ್ಲಾ? (2)



5415ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ವರ್ಗಮೂಲ 4.ಕಮಠ 5.ಏಮಾರು 6.ಕದನ 8.ವ್ಯವಕಲನ 10.ಗುಲಾಬಿ 12.ಮರಣ 13.ಜರಡಿ 15.ತಡಸಲು

ಮೇಲಿಂದ ಕೆಳಕ್ಕೆ: 1.ದುರ್ಗ 2.ಭೀಮ 3.ವರ್ತಕ 4.ಕರು 5.ಏಕೀಕರಣ 7.ನವ್ಯ 9.ನಗು 11.ಬಿಸಿಲು 12.ಮಡಿ 14.ರತ್ನ 16.ಸಜ್ಜೆ

ಸುಡೊಕು 5802

				5			2	1
3		5	2		1	7	9	
	1	6		9				5
5		7			9	1		
	6			2			8	
9		8	6			5		2
1		2		8			6	
			5		6	2		3
6		3		4			5	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5801 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಗುಜರಾತ್ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್‌ನಿಂದ ತೀವ್ರ ಅಸಮಾಧಾನ

ಗರ್ಭಪಾತ: ತ್ವರಿತ ಇತ್ಯರ್ಥಕ್ಕೆ ತಾಕೀತು

ನವದೆಹಲಿ (ಪಿಟಿಐ): 'ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯ ಗರ್ಭಪಾತಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ಬಗ್ಗೆ ನ್ಯಾಯಾಲಯಗಳು ನಿರಾಸಕ್ತಿ ಹಾಗೂ ಅರೆಮನಸ್ಸನ್ನು ಹೊಂದಬಾರದು. ಸಾಮಾನ್ಯ ಪ್ರಕರಣಗಳಿಗೆ ಅನ್ವಯಿಸುವ ಮಾನದಂಡವನ್ನು ಇಂತಹ ವಿಷಯಗಳಲ್ಲಿ ಪಾಲಿಸಬಾರದು. ತ್ವರಿತವಾಗಿ ಇತ್ಯರ್ಥಕ್ಕೆ ಆಸ್ಥೆ ವಹಿಸಬೇಕು' ಎಂದು ಸುಪ್ರೀಂ ಕೋರ್ಟ್ ಶನಿವಾರ ಪ್ರತಿಪಾದಿಸಿದೆ.

ಅತ್ಯಾಚಾರಕ್ಕೆ ತುತ್ತಾದ 25 ವರ್ಷದ ಮಹಿಳೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನಾ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ವಿಭಾಗೀಯ ನ್ಯಾಯಪೀಠವು, ಸಂತ್ರಸ್ತೆಯ ಅರ್ಜಿಯ ವಿಚಾರಣೆಯನ್ನು ಮುಂದೂಡಿರುವ ಗುಜರಾತ್ ಹೈಕೋರ್ಟ್‌ನ ಆದೇಶದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತು. 'ಈ ಪ್ರಕರಣದಲ್ಲಿ 12 ದಿನಗಳ ಅಮೂಲ್ಯ ಸಮಯ ವ್ಯರ್ಥವಾಗಿದೆ' ಎಂದು ಹೇಳಿತು.

'26 ವಾರಗಳು ಪೂರ್ಣಗೊಂಡಿದ್ದ ಸಂತ್ರಸ್ತೆಯು ಗರ್ಭಪಾತಕ್ಕೆ ಅನುಮತಿ ಕೋರಿ ಆಗಸ್ಟ್ 7ರಂದು ಹೈಕೋರ್ಟ್‌ನ ಮೆಟ್ಟಿಲೇರಿದ್ದರು. ಆಕೆಯ ಗರ್ಭಾವಸ್ಥೆ ಹಾಗೂ ಆರೋಗ್ಯದ ಸ್ಥಿತಿಗತಿ ಬಗ್ಗೆ ಪರೀಕ್ಷಿಸುವ ಸಂಬಂಧ ವೈದ್ಯಕೀಯ ಪರಿಣತರ ತಂಡದ ರಚನೆಗೆ ನ್ಯಾಯಾಲಯವು ಆಗಸ್ಟ್ 8ರಂದು ಸೂಚಿಸಿತ್ತು. 10ರಂದು ತಂಡವು ಕೋರ್ಟ್‌ಗೆ ವರದಿ ಸಲ್ಲಿಸಿದೆ' ಎಂದು ಸಂತ್ರಸ್ತೆಯ ಪರ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

ಆಗಸ್ಟ್ 11ರಂದು ಹೈಕೋರ್ಟ್ ಈ ವರದಿಯನ್ನು ಪರಿಶೀಲಿಸಿ ಇದೇ 23ಕ್ಕೆ ವಿಚಾರಣೆಯನ್ನು ಮುಂದೂಡಿರುವ ಬಗ್ಗೆ ನ್ಯಾಯಪೀಠವು ಅಚ್ಚರಿ ವ್ಯಕ್ತಪಡಿಸಿತು.

'ಸಂತ್ರಸ್ತೆಯ ವಿಷಯದಲ್ಲಿ ಪ್ರತಿದಿನವೂ ನಿರ್ಣಾಯಕವಾಗಿದೆ. ಆದರೂ, ವಿಳಂಬ ಮಾಡಿರುವುದು ಕಂಡುಬರುತ್ತದೆ ಎಂದು ಹೇಳಿತು.

ಅಲ್ಲದೇ, ಆಕೆಯ ವಕೀಲರು ಆಗಸ್ಟ್ 17ರಂದು ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಲಾಗಿದೆ. ಇದಕ್ಕೆ ಸಕಾರಣವನ್ನೂ ನೀಡಿಲ್ಲ. ವೆಬ್‌ಸೈಟ್‌ನಲ್ಲೂ ಆದೇಶದ ಪ್ರತಿಯನ್ನು ಅಪ್‌ಲೋಡ್ ಮಾಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಪೀಠವು, ಈ ಬಗ್ಗೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರನ್ನು ವಿಚಾರಣೆಗೆ ಒಳಪಡಿಸುವಂತೆ ಸುಪ್ರೀಂ ಕೋರ್ಟ್‌ನ ಸೆಕ್ರೆಟರಿ ಜನರಲ್‌ಗೆ ನಿರ್ದೇಶನ ನೀಡಿತು.

ಹೈಕೋರ್ಟ್‌ನ ಆದೇಶದವರೆಗೆ ನಾವು ಕಾಯಲು ಸಿದ್ಧ. ಆದರೆ, ಅದರ ಖಚಿತತೆ ತಿಳಿಯದೇ ಮತ್ತೊಂದು ಆದೇಶ ಪ್ರಕಟಿಸುವುದು ಹೇಗೆ? ಎಂದ ನ್ಯಾಯಪೀಠವು, ಸಂತ್ರಸ್ತೆಯ ಆರೋಗ್ಯ ಕುರಿತು ವೈದ್ಯರು ನೀಡಿದ್ದ ವರದಿ ಬಗ್ಗೆ ವಿವರಣೆ ಕೇಳಿತು.

ಇದಕ್ಕೆ ಉತ್ತರಿಸಿದ ವಕೀಲರು, 'ಸಂತ್ರಸ್ತೆಗೆ ಗರ್ಭಪಾತ ಮಾಡಬಹುದು ಎಂದು ವೈದ್ಯಕೀಯ ವರದಿಯಲ್ಲಿ ಹೇಳಲಾಗಿದೆ' ಎಂದು ಹೇಳಿದರು.



'ಸಂತ್ರಸ್ತೆಯು ಗರ್ಭ ಧರಿಸಿ 28ನೇ ವಾರ ಸಮೀಪಿಸುತ್ತಿದೆ. ಹಾಗಾಗಿ, ಗರ್ಭಪಾತಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ತಂಡದಿಂದ ಹೊಸ ವರದಿ ಸಲ್ಲಿಸಬೇಕಿದೆ' ಎಂದು ನ್ಯಾಯಪೀಠದ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಸಂತ್ರಸ್ತೆಯನ್ನು ಮತ್ತೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಭಾನುವಾರ ಸಂಜೆ 6ಗಂಟೆಯೊಳಗೆ ವರದಿ ಸಲ್ಲಿಸಬಹುದು' ಎಂದು ಸೂಚಿಸಿತು.

ಆಗಸ್ಟ್ 21ರಂದು ಈ ಅರ್ಜಿಯನ್ನೇ ಮೊದಲು ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದ ಪೀಠವು, ಪ್ರಕರಣ ಸಂಬಂಧ ಗುಜರಾತ್ ಸರ್ಕಾರ ಮತ್ತು ಸಂಬಂಧಪಟ್ಟ ಸಂಸ್ಥೆಗಳು ಅಭಿಪ್ರಾಯವನ್ನು ಸಾದರಪಡಿಸಲು ನಿರ್ದೇಶನ ನೀಡಿತು.

ಕಾನೂನು ಹೇಳೋದು ಏನು?

ವೈದ್ಯಕೀಯ ಗರ್ಭಪಾತ ಕಾಯ್ದೆಯಡಿ ವಿಶೇಷ ಪ್ರಕರಣಗಳಲ್ಲಿ ಗರ್ಭಪಾತ ಮಾಡಿಸಬಹುದಾದ ಗರ್ಭಾವಸ್ಥೆಯ ಗರಿಷ್ಠ ಅವಧಿಯನ್ನು 24 ವಾರಗಳಿಗೆ ನಿಗದಿಪಡಿಸಲಾಗಿದೆ.

ಈ ನಿಯಮವು ವಿವಾಹಿತ ಮಹಿಳೆಯರು, ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯರು ಸೇರಿದಂತೆ ಅಂಗವಿಕಲೆಯರು, ಅಪ್ರಾಪ್ತೆಯರಿಗೆ ಅನ್ವಯಿಸುತ್ತದೆ.

ಪೋಕ್ಸೊ: ನಿಯಮಗಳ ರಚನೆಗೆ ನಿರ್ದೇಶನ

ನವದೆಹಲಿ: ಸಂತ್ರಸ್ತ ಮಕ್ಕಳು ತನಿಖೆ, ವಿಚಾರಣೆ ಹಾಗೂ ಪುನರ್ವಸತಿ ಸಂದರ್ಭದಲ್ಲಿ ಅನುಭವಿಸುವ ಯಾತನೆ ತಗ್ಗಿಸಲು 'ಸಂರಕ್ಷಕ'ರ ನೇಮಕ ಸೇರಿದಂತೆ ಪೋಕ್ಸೊ ಕಾಯ್ದೆಯಡಿ ಮಾರ್ಗಸೂಚಿಗಳನ್ನು ರಚಿಸುವಂತೆ ಎಲ್ಲ ರಾಜ್ಯ ಸರ್ಕಾರಗಳಿಗೆ ಸುಪ್ರೀಂಕೋರ್ಟ್ ಸೂಚಿಸಿದೆ.

ಸರ್ಕಾರೇತರ ಸಂಸ್ಥೆ 'ಬಚಪನ್ ಬಚಾವೊ ಆಂದೋಲನ' ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಎಸ್.ರವೀಂದ್ರ ಭಟ್ ಹಾಗೂ ಅರವಿಂದಕುಮಾರ್ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿದೆ.

ಮಾರ್ಗಸೂಚಿಗಳನ್ನು ರಚಿಸುವುದಕ್ಕೆ ಸಂಬಂಧಿಸಿ ಅಕ್ಟೋಬರ್ 4ರ ಒಳಗಾಗಿ ಪ್ರಮಾಣಪತ್ರ ಸಲ್ಲಿಸುವಂತೆ ಕೇಂದ್ರ ಸರ್ಕಾರ ಹಾಗೂ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ (ಎನ್‌ಸಿಪಿಸಿಆರ್) ನಿರ್ದೇಶನ ನೀಡಿದ ನ್ಯಾಯಪೀಠ, ಅರ್ಜಿ ವಿಚಾರಣೆಯನ್ನು ಅಕ್ಟೋಬರ್ 6ಕ್ಕೆ ಮುಂದೂಡಿತು.

ಕೋರ್ಟ್ ಹೇಳಿದ್ದೇನು?: 'ಪೋಕ್ಸೊ ನಿಯಮಗಳಲ್ಲಿ ಹೇಳಿರುವಂತೆ, ಸಂತ್ರಸ್ತ ಮಕ್ಕಳ ಪುನರ್ವಸತಿಯಲ್ಲಿ ಸಂರಕ್ಷಕರ ಪಾತ್ರವು ಮಹತ್ವದ್ದಾಗಿದೆ. ಆದರೆ, ಸಂರಕ್ಷಕರ ನೇಮಿಸಬೇಕು ಎಂಬ ಆಶಯವು ಇನ್ನೂ ಈಡೇರಿಲ್ಲ ಅಥವಾ ಭಾಗಶಃ ಇಲ್ಲವೇ ತಾತ್ಪೂರ್ತಿಕವಾಗಿ ಈಡೇರಿದಂತಾಗಿದೆ. ಸಂತ್ರಸ್ತರಿಗೆ ಹಾಗೂ ಅವರ ಕುಟುಂಬಗಳಿಗೆ ನೆರವು ನೀಡುವುದಕ್ಕೆ ಮಿತಿ ಹೇರಿದಂತಾಗಿದೆ' ಎಂದು ನ್ಯಾಯಪೀಠ ಹೇಳಿದೆ.

'ತಮ್ಮ ಮೇಲೆ ನಡೆಯುವ ದೌರ್ಜನ್ಯ ಮಾತ್ರ ಮಕ್ಕಳಲ್ಲಿ ಭೀತಿ, ಅಭದ್ರತೆ ಭಾವನೆ ಮೂಡಿಸುವುದಿಲ್ಲ. ನಂತರದ ದಿನಗಳಲ್ಲಿ ಸಿಗದ ಬೆಂಬಲದ ಕೊರತೆ ಅವರ ನೋವು ಉಲ್ಬಣಗೊಳ್ಳುವಂತೆ ಮಾಡುತ್ತದೆ' ಎಂದುಪೀಠ ಹೇಳಿದೆ.

'ಮಕ್ಕಳ ಮೇಲಿನ ದೌರ್ಜನ್ಯದ ಪ್ರಕರಣಗಳಲ್ಲಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಿದಾಗ ಇಲ್ಲವೇ ಶಿಕ್ಷೆಯ ಪ್ರಮಾಣ ಹೆಚ್ಚಿಸಿದರೆ ಮಾತ್ರ ನಿಜವಾದ ನ್ಯಾಯ ನೀಡಿದಂತೆ ಆಗುವುದಿಲ್ಲ. ರಾಜ್ಯ ಸರ್ಕಾರಗಳು ಹಾಗೂ ಸಂಬಂಧಪಟ್ಟ ಪ್ರಾಧಿಕಾರಗಳು ಸಂತ್ರಸ್ತರಿಗೆ ಬೆಂಬಲ, ಭದ್ರತೆಯನ್ನು ಖಾತ್ರಿಪಡಿಸುವುದು ಅಷ್ಟೇ ಮುಖ್ಯ' ಎಂದು ಹೇಳಿದೆ.

'ಇಬ್ಬರು ಮಕ್ಕಳು' ಮಿತಿ: ಸ್ವಂತ ಮಕ್ಕಳಿಗೆ ಮಾತ್ರ ಅನ್ವಯ

ಮುಂಬೈ(ಪಿಟಿಐ): ಮಹಾರಾಷ್ಟ್ರ ಗ್ರಾಮ ಪಂಚಾಯಿತಿ ಕಾಯ್ದೆಯಲ್ಲಿ ಉಲ್ಲೇಖಿಸಿರುವಂತೆ, 'ಇಬ್ಬರು ಮಕ್ಕಳು' ಎಂಬ ಮಿತಿಯು ಸದಸ್ಯರ ಸ್ವಂತ ಮಕ್ಕಳನ್ನು ಮಾತ್ರ ಒಳಗೊಂಡಿದ್ದು, ಮಲ ಮಕ್ಕಳಿಗೆ ಅನ್ವಯಿಸದು ಎಂದು ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠವು ಶನಿವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎ.ಎಸ್.ಚಂದೂರಕರ್ ಹಾಗೂ ವೃಶಾಲಿ ಜೋಶಿ ಅವರಿದ್ದ ವಿಭಾಗೀಯ ಪೀಠವು ಗ್ರಾಮ ಪಂಚಾಯಿತಿ ಸದಸ್ಯೆ ಖೈರುನ್ನೀಸಾ ಶೇಖ್‌ಚಾಂದ್ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿತು.

ಅರ್ಜಿಯನ್ನು ಅರ್ಹತೆ ಆಧಾರದಲ್ಲಿ ಏಕಸದಸ್ಯ ಪೀಠವೇ ವಿಚಾರಣೆ ನಡೆಸಬೇಕು ಎಂದು ವಿಭಾಗೀಯ ಪೀಠ ನಿರ್ದೇಶನ ನೀಡಿತು.

'ನನಗೆ ಮೂರು ಮಕ್ಕಳಿರುವ ಕಾರಣ ನೀಡಿ ನನ್ನನ್ನು ಗ್ರಾಮ ಪಂಚಾಯಿತಿ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ. ಮೂರು ಮಕ್ಕಳ ಪೈಕಿ, ಇಬ್ಬರು ಮಕ್ಕಳು ಪತಿಯ ಮೊದಲ ವಿವಾಹದಿಂದ ಜನಿಸಿದ್ದು, ನಮ್ಮ ಮದುವೆ ನಂತರ ಒಂದು ಮಗುವಿದೆ' ಎಂದು ಖೈರುನ್ನೀಸಾ ಅವರು ಅರ್ಜಿಯಲ್ಲಿ ವಿವರಿಸಿದ್ದರು.

ಈ ಮೊದಲು ಹೈಕೋರ್ಟ್‌ನ ಏಕಸದಸ್ಯ ಪೀಠವು ಅರ್ಜಿಯ ವಿಚಾರಣೆ ನಡೆಸಿತ್ತು. ಆದರೆ, ಕಾಯ್ದೆಯಲ್ಲಿರುವ 'ಇಬ್ಬರು ಮಕ್ಕಳು' ಎಂಬ ಪದಪ್ರಯೋಗ ಕುರಿತು ಸ್ಪಷ್ಟನೆ ಕೋರಿ ಅರ್ಜಿಯನ್ನು ವಿಭಾಗೀಯ ಪೀಠಕ್ಕೆ ವರ್ಗಾಯಿಸಿತ್ತು.

ತಮಿಳು ನಟ ಶೇಖರ್ ಅರ್ಜಿ ವಜಾ

'ಸಾಮಾಜಿಕ ಮಾಧ್ಯಮ ಬಳಕೆ; ಎಚ್ಚರಿಕೆ ಅಗತ್ಯ'

ನವದೆಹಲಿ(ಪಿಟಿಐ): ಸಾಮಾಜಿಕ ಮಾಧ್ಯಮಗಳಿಂದಾಗುವ ಪರಿಣಾಮಗಳು ಹಾಗೂ ವ್ಯಾಪ್ತಿಯ ಬಗ್ಗೆ ಅದನ್ನು ಬಳಸುವವರು ಜಾಗರೂಕರಾಗಿರಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ತಮಿಳು ನಟ ಹಾಗೂ ಮಾಜಿ ಶಾಸಕ ಎಸ್.ವಿ.ಶೇಖರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಪಿ.ಕೆ. ಮಿಶ್ರಾ ಅವರಿದ್ದ ನ್ಯಾಯಪೀಠವು ಈ ಎಚ್ಚರಿಕೆ ನೀಡಿದೆಯಲ್ಲದೇ, ಅವರ ಅರ್ಜಿಯನ್ನು ವಜಾಗೊಳಿಸಿದೆ.

ಪತ್ರಕರ್ತೆಯರ ಕುರಿತು ಅವಹೇಳನಕಾರಿ ಎನ್ನಲಾದ ಪೋಸ್ಟ್‌ವೊಂದನ್ನು 2018ರಲ್ಲಿ ಫೇಸ್‌ಬುಕ್‌ನಲ್ಲಿ ಶೇಖರ್ ಹಂಚಿಕೊಂಡಿದ್ದರು. ಇದಕ್ಕೆ ಸಂಬಂಧಿಸಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ವಿಚಾರಣೆ ನಡೆಯುತ್ತಿದೆ.

ತಮ್ಮ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಶೇಖರ್ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ಮದ್ರಾಸ್ ಹೈಕೋರ್ಟ್ ಜುಲೈ 14ರಂದು ಆದೇಶಿಸಿತ್ತು. ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ ಅವರು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು.

'ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಂಚಿಕೊಂಡ ದಿನ ಶೇಖರ್ ಅವರಿಗೆ ಕಣ್ಣಿನ ತೊಂದರೆ ಇತ್ತು. ಆ ದಿನ ಅವರು ಕಣ್ಣಿನಲ್ಲಿ ಔಷಧ ಹಾಕಿಕೊಂಡಿದ್ದರಿಂದ ತಾವು ಹಂಚಿಕೊಂಡ ಪೋಸ್ಟ್‌ನ ವಿಷಯವನ್ನು ಓದಲು ಅವರಿಗೆ ಆಗಿರಲಿಲ್ಲ' ಎಂದು ಶೇಖರ್ ಅವರ ಪರ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

'ಸಾಮಾಜಿಕ ಮಾಧ್ಯಮ ಬಳಸುವಾಗ ಬಹಳ ಎಚ್ಚರದಿಂದ ಇರಬೇಕು. ಯಾರಿಗೇ ಆಗಲಿ ಸಾಮಾಜಿಕ ಮಾಧ್ಯಮದ ಬಳಕೆ ಅಗತ್ಯ ಎನಿಸಿದಲ್ಲಿ ಅಂಥವರು ಅದರಿಂದಾಗುವ ಪರಿಣಾಮಗಳನ್ನು ಎದುರಿಸಲೂ ಸಿದ್ಧರಿರಬೇಕು' ಎಂದು ನ್ಯಾಯಪೀಠ ಹೇಳಿತು.

ಕೊಲಿಜಿಯಂ ಶಿಫಾರಸು ಅಧಿಸೂಚನೆ: ಕಾಲಮಿತಿ ಕೋರಿ ಅರ್ಜಿ

ನವದೆಹಲಿ(ಪಿಟಿಐ): ನ್ಯಾಯಮೂರ್ತಿಗಳ ನೇಮಕಾತಿಗಾಗಿ ಕೊಲಿಜಿಯಂನ ಶಿಫಾರಸುಗಳ ಕುರಿತು ಅಧಿಸೂಚನೆ ಹೊರಡಿಸಲು ಕಾಲಮಿತಿ ನಿಗದಿ ಮಾಡಬೇಕು. ಈ ಕುರಿತು ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ನಿರ್ಧಾರ ಕೈಗೊಳ್ಳಲು ಸುಪ್ರೀಂಕೋರ್ಟ್, ಅಟಾರ್ನಿ ಜನರಲ್ ನೆರವು ಕೋರಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ಅರ್ಜಿಯ ಪ್ರತಿಯನ್ನು ಅಟಾರ್ನಿ ಜನರಲ್ (ಎಜಿ) ಆರ್.ವೆಂಕಟರಮಣಿ ಅವರ ಕಚೇರಿಗೆ ತಲುಪಿಸಬೇಕು. ಈ ವಿಷಯದಲ್ಲಿ ಎಜಿ ಅವರು ನ್ಯಾಯಾಲಯಕ್ಕೆ ಸಹಾಯ ಮಾಡಬೇಕು ಎಂದು ಮನವಿ ಮಾಡುತ್ತೇವೆ' ಎಂದ ನ್ಯಾಯಮೂರ್ತಿಗಳು, ವಿಚಾರಣೆಯನ್ನು ಸೆಪ್ಟೆಂಬರ್ 8ಕ್ಕೆ ಮುಂದೂಡಿದರು.

ಫೇಸ್‌ಬುಕ್‌ನಲ್ಲಿ ಆರ್‌ಎಸ್‌ಎಸ್ ಟೀಕೆ: ಬಂಧನ

ಅಹಮದಾಬಾದ್: ಆರ್‌ಎಸ್‌ಎಸ್ ಟೀಕಿಸಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದ ರಾಜ್‌ಕೋಟ್ ಜಿಲ್ಲೆಯ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀಸ್‌ನ ಮುಖ್ಯಸ್ಥರಾದ ವಿನೋದ್ ಘೇರವ್ಡಾ ಅವರನ್ನು ಗುಜರಾತ್ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಇವರು ಉಪ್ಲೇಟಾದಲ್ಲಿ 'ಕ್ಯಾಪ್ಟನ್' ಎಂಬ ಟೇಲರಿಂಗ್ ಅಂಗಡಿ ನಡೆಸುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರ್‌ಎಸ್‌ಎಸ್‌ನ ಸ್ಥಳೀಯ ಕಾರ್ಯಕರ್ತರೊಬ್ಬರು ಕೆಲವು ದಿನಗಳ ಹಿಂದೆ ಇವರ ಮೇಲೆ ದೂರು ನೀಡಿದ್ದರು. ರಾಜ್‌ಕೋಟ್ ಜಿಲ್ಲೆಯ ಉಪ್ಲೇಟಾ ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯು ಫೇಸ್‌ಬುಕ್‌ನಲ್ಲಿ 'ಧೈರ್ಯವಂತರು ಯುದ್ಧಕ್ಕೆ ಹೋದರು, ಹೇಡಿಗಳು ಸಂಘಕ್ಕೆ ಹೋದರು' ಎಂದು ಪೋಸ್ಟ್ ಮಾಡಿದ್ದಾರೆ. ಇದರ ಜತೆಗೆ ಸಂಘದ ಸಂಸ್ಥಾಪಕ ಹೆಡಗೇವಾರ್ ಅವರಿಗೆ ಮತ್ತು ಹಿಂದೂ ಧರ್ಮದ ಸಂಕೇತವಾದ ಕೇಸರಿ ಧ್ವಜದ ಗೌರವಕ್ಕೆ ಧಕ್ಕೆ ತಂದಿದ್ದಾರೆ ಎಂದು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಮಣಿಪುರ ಸಂಘರ್ಷ: ರಾಜ್ಯಪಾಲೆ ಭೇಟಿಯಾದ ಸಿಪಿಎಂ ನಿಯೋಗ

'ರಾಜಕೀಯ ಪರಿಹಾರವೇ ಮಾರ್ಗ'

ಇಂಫಾಲ್ (ಪಿಟಿಐ): ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರ ನೇತೃತ್ವದಲ್ಲಿ ಪಕ್ಷದ ನಿಯೋಗವು ಮಣಿಪುರದ ರಾಜ್ಯಪಾಲೆ ಅನುಸೂಯಾ ಉಯಿಕೆ ಅವರನ್ನು ರಾಜಭವನದಲ್ಲಿ ಭೇಟಿಯಾಗಿ, ಸದ್ಯ ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆದಿರುವ ಆಂತರಿಕವಾಗಿ ಸ್ಥಳಾಂತರವಾದ ಜನರ (ಐಡಿಪಿಎಸ್) ಪರಿಸ್ಥಿತಿಯ ಕುರಿತು ಚರ್ಚಿಸಿತು.

ಜನಾಂಗೀಯ ಹಿಂಸಾಚಾರದಿಂದ ನಲುಗುತ್ತಿರುವ ಮಣಿಪುರದ ಪರಿಸ್ಥಿತಿ ಅವಲೋಕಿಸಲು ರಾಜ್ಯಕ್ಕೆ ಮೂರು ದಿನಗಳ ಭೇಟಿ ಕೈಗೊಂಡಿರುವ ಸಿಪಿಎಂ ನಿಯೋಗದ ತಂಡವು, ಚುರಾಚಂದ್‌ಪುರ ಮತ್ತು ಮೊಯಿರಾಂಗ್‌ನಲ್ಲಿನ ಪರಿಹಾರ ಶಿಬಿರಗಳಿಗೆ ಶುಕ್ರವಾರ ಭೇಟಿ ಕೊಟ್ಟಿತ್ತು. ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳು ನಿರ್ವಹಿಸುತ್ತಿರುವ ಪರಿಹಾರ ಶಿಬಿರಗಳಲ್ಲಿ ವ್ಯವಸ್ಥೆಗಳು ತೃಪ್ತಿಕರವಾಗಿಲ್ಲ ಎಂದು ಯೆಚೂರಿ, ಉಯಿಕೆ ಅವರಿಗೆ ತಿಳಿಸಿರುವುದಾಗಿ ರಾಜ್ಯಪಾಲರ ಸಚಿವಾಲಯ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಿದೆ.

'ಐಡಿಪಿಗಳು, ವಿಶೇಷವಾಗಿ ಮಕ್ಕಳು ಮತ್ತು ಹಾಲುಣಿಸುವ ತಾಯಂದಿರು ಪೌಷ್ಟಿಕ ಆಹಾರದಿಂದ ವಂಚಿತರಾಗಿದ್ದಾರೆ. ಶಿಬಿರಗಳಲ್ಲಿ ಶಿಶುಗಳು ಜನಿಸುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ, ಐಡಿಪಿಗಳು ಎಷ್ಟು ದಿನ ಭರವಸೆಯೊಂದಿಗೆ ಬದುಕಬಲ್ಲರು' ಎಂದೂ ಯೆಚೂರಿ ಪ್ರಶ್ನಿಸಿದ್ದಾರೆ.

ವಿವಿಧ ಪೊಲೀಸ್ ಠಾಣೆಗಳಿಂದ ಬಂದೂಕುಗಳ ಲೂಟಿ ಆಗಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಯೆಚೂರಿ, ಸದ್ಯದ ಬಿಕ್ಕಟ್ಟನ್ನು ರಾಜಕೀಯ ಪರಿಹಾರದಿಂದ ಮಾತ್ರ ಶಮನಗೊಳಿಸಲು ಸಾಧ್ಯ ಎಂದು ಪ್ರತಿಪಾದಿಸಿದ್ದಾರೆ. 'ಹಿಂಸಾಚಾರದಿಂದ ಯಾವುದೇ ಪರಿಹಾರ ಸಿಗುವುದಿಲ್ಲ. ಹಿಂಸಾಚಾರ ಬಿಟ್ಟು, ಮಾತುಕತೆಗೆ ಮುಂದಾಗುವಂತೆ ಎರಡೂ ಸಮುದಾಯಗಳಿಗೆ ಮನವಿ ಮಾಡಲಾಗಿದೆ' ಎಂದು ಉಯಿಕೆ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರದ ಇತರ ನಾಯಕರನ್ನು ಖುದ್ದು ಭೇಟಿ ಮಾಡಿದ್ದು, ಸಾಧ್ಯವಾದಷ್ಟು ಶೀಘ್ರ ಸಂಘರ್ಷ ಅಂತ್ಯಗೊಳಿಸಲು ಮಾರ್ಗಗಳನ್ನು ಕಂಡುಕೊಳ್ಳುವಂತೆ ಒತ್ತಾಯಿಸಿರುವುದಾಗಿ ರಾಜ್ಯಪಾಲರು ಸಿಪಿಎಂ ನಿಯೋಗಕ್ಕೆ ಮಾಹಿತಿ ನೀಡಿದರು ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಸಿಎಂ ಬಿರೇನ್ ಸಿಂಗ್ ವಜಾಕ್ಕೆ ಸಿಪಿಎಂ ಆಗ್ರಹ

ಅಗರ್ತಲಾ/ ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಪರಿಸ್ಥಿತಿಯನ್ನು ಸಹಜ ಸ್ಥಿತಿಗೆ ತರಲು ವಿಫಲವಾಗಿರುವ ಎನ್. ಬಿರೇನ್ ಸಿಂಗ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ವಜಾಗೊಳಿಸಬೇಕು ಎಂದು ಸಿಪಿಎಂ ಹಿರಿಯ ನಾಯಕ, ಪಕ್ಷದ ತ್ರಿಪುರಾ ಘಟಕದ ಪ್ರಧಾನ ಕಾರ್ಯದರ್ಶಿ ಜಿತೇಂದ್ರ ಚೌಧರಿ ಆಗ್ರಹಿಸಿದರು.

ಮಣಿಪುರಕ್ಕೆ ಭೇಟಿ ನೀಡಿರುವ ಪಕ್ಷದ ನಿಯೋಗದಲ್ಲಿರುವ ಜಿತೇಂದ್ರ ಚೌಧರಿ ಅವರು, ಈಶಾನ್ಯ ರಾಜ್ಯದಲ್ಲಿನ ಜನಾಂಗೀಯ ಹಿಂಸಾಚಾರವು, ದೇಶದಾದ್ಯಂತ ಜನರನ್ನು ವಿಭಜಿಸುವ ಬಿಜೆಪಿ-ಆರ್‌ಎಸ್‌ಎಸ್‌ನ ತಂತ್ರದ ಭಾಗವಾಗಿದೆ ಎಂದೂ ಅವರು ಆರೋಪಿಸಿದರು.

'ಮಣಿಪುರದಲ್ಲಿ ಜನರಲ್ಲಿ ದಿನದಿಂದ ದಿನಕ್ಕೆ ಅಪನಂಬಿಕೆ ಬೆಳೆಯುತ್ತಿದೆ. ಪರಿಸ್ಥಿತಿ ಆತಂಕಕಾರಿಯಾಗಿದೆ. ಬಿರೇನ್ ಸಿಂಗ್ ನೇತೃತ್ವದ ಸರ್ಕಾರವು ಪುನಃ ಶಾಂತಿ ಸ್ಥಾಪನೆ ಮತ್ತು ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುವಂತೆ ಮಾಡುವ ಕ್ರಮ ತೆಗೆದುಕೊಳ್ಳಲು ವಿಫಲವಾಗಿದೆ. ರಾಜ್ಯದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರ ವಜಾಗೊಳಿಸಲು ನಾವು ಒತ್ತಾಯಿಸುವುದಿಲ್ಲ. ಆದರೆ, ಬಿರೇನ್ ಸಿಂಗ್ ಅವರನ್ನು ತಕ್ಷಣವೇ ಸಿ.ಎಂ ಸ್ಥಾನದಿಂದ ವಜಾಗೊಳಿಸಬೇಕು' ಎಂದು ಅವರು ಆಗ್ರಹಿಸಿದರು.

ತ್ರಿಪುರಾ ಬಿಜೆಪಿ ಮುಖ್ಯ ವಕ್ತಾರ ಸುಬ್ರತ ಚಕ್ರವರ್ತಿ, ಸಿಪಿಎಂ ನಾಯಕರ ಈ ಆರೋಪ ನಿರಾಧಾರವೆಂದು ತಳ್ಳಿಹಾಕಿದ್ದು, ರಾಜ್ಯವು ಶಾಂತಿಯ ಹಾದಿಯಲ್ಲಿದೆ. ಒಟ್ಟಾರೆ ಪರಿಸ್ಥಿತಿ ಸುಧಾರಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಶಾನ್ಯ ರಾಜ್ಯದಲ್ಲಿ ಸಹಜ ಸ್ಥಿತಿ ನೆಲೆಸುವಂತೆ ಮಾಡಲು ಪ್ರಯತ್ನಿಸುತ್ತಿವೆ. ಆದರೆ, ಸಿಪಿಎಂ ನಿಯೋಗವು ಕದಡಿದ ನೀರಿನಲ್ಲಿ ಮೀನು ಹಿಡಿಯುವ ರೀತಿ ರಾಜ್ಯಕ್ಕೆ ಭೇಟಿ ಕೊಟ್ಟಿದೆ ಎಂದು ಆರೋಪಿಸಿದರು.



ಸ್ಮೈಲ್ ಪ್ಲೀಸ್...

ವಿಶ್ವ ಛಾಯಾಗ್ರಹಣ ದಿನ ಅಂಗವಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಶನಿವಾರ ತಮ್ಮ ಕಚೇರಿ ಆವರಣದಲ್ಲಿ ತಮಿಳುನಾಡು ಪತ್ರಿಕಾ ಛಾಯಾಗ್ರಾಹಕರ ಸಂಘದ (ಟಿಎನ್‌ಪಿಪಿಎ) ಸದಸ್ಯರ ಚಿತ್ರವನ್ನು ಸೆರೆ ಹಿಡಿದರು –ಪಿಟಿಐ ಚಿತ್ರ

ನಕಾರಾತ್ಮಕ ಸುದ್ದಿ: ಯುಪಿಯಲ್ಲಿ ಕಣ್ಗಾವಲು

ಲಖನೌ (ಪಿಟಿಐ): 'ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರುವಂತಹ ಸುದ್ದಿ ಅಥವಾ ಚಿತ್ರ, ತಪ್ಪು ಮಾಹಿತಿಗಳಿರುವ ವರದಿ ಪ್ರಕಟಣೆಯ ಪ್ರಕರಣಗಳನ್ನು ಗುರುತಿಸಿ ಆಯಾ ಮಾಧ್ಯಮ ಸಂಸ್ಥೆಗಳಿಂದ ಸ್ಪಷ್ಟನೆ ಪಡೆಯಬೇಕು' ಎಂದು ಉತ್ತರ ಪ್ರದೇಶ ಸರ್ಕಾರ ತನ್ನ ಎಲ್ಲ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಆ.16ರಂದು ಹೊರಡಿಸಿರುವ ಆದೇಶದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಪ್ರಧಾನ ಕಾರ್ಯದರ್ಶಿ ಸಂಜಯ್ ಪ್ರಸಾದ್ ಅವರು, 'ನಕಾರಾತ್ಮಕ' ಸುದ್ದಿಗಳನ್ನು ಪಟ್ಟಿ ಮಾಡಿ, ಸಮಗ್ರ ದೂರು ಪರಿಹಾರ ವ್ಯವಸ್ಥೆಯಡಿ (ಐಜಿಆರ್‌ಎಸ್) ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಬೇಕು' ಎಂದು ಸೂಚಿಸಿದ್ದಾರೆ.

'ಯಾವುದೇ ಮುದ್ರಣ ಮತ್ತು ಪ್ರಸಾರ ಮಾಧ್ಯಮಗಳು ಸರ್ಕಾರದ ವರ್ಚಸ್ಸಿಗೆ ಧಕ್ಕೆಯಾಗುವಂತೆ ಮಾಹಿತಿಗಳನ್ನು ತಿರುಚಿರುವುದು, ತಪ್ಪು ಮಾಹಿತಿ ನೀಡಿರುವುದು, ನಕಾರಾತ್ಮಕ ಸುದ್ದಿ ಪ್ರಸಾರ ಮಾಡಿರುವುದು ಗಮನಕ್ಕೆ ಬಂದಲ್ಲಿ ಈ ಬಗ್ಗೆ ಆಯಾ ಮಾಧ್ಯಮ ಸಂಸ್ಥೆಗಳಿಂದ ಸ್ಪಷ್ಟನೆ ಪಡೆಯಬೇಕು' ಎಂದು ತಿಳಿಸಲಾಗಿದೆ

ವಾರ್ತಾ ಮತ್ತು ಪ್ರಸಾರ ಇಲಾಖೆಯು ನಿತ್ಯ ಮಾಧ್ಯಮಗಳಲ್ಲಿ ಪ್ರಕಟವಾಗುವ 'ನಕಾರಾತ್ಮಕ ಸುದ್ದಿಗಳನ್ನು' ಗುರುತಿಸಿ ಪಟ್ಟಿ ಮಾಡಬೇಕು. ಇಂತಹ ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆ ನಡೆಸುವುದೂ ಅಗತ್ಯವಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಕೋಟಾದಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆ

ಆತ್ಮಹತ್ಯೆ ತಡೆಗೆ 'ಸ್ಪ್ರಿಂಗ್ ಫ್ಯಾನ್' ತಂತ್ರ

ಕೋಟಾ (ರಾಜಸ್ಥಾನ) (ಪಿಟಿಐ): ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರಗಳ ತಾಣವಾಗಿರುವ ಕೋಟಾದಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಗೆ ಮುಂದಾಗಿರುವ ಜಿಲ್ಲಾಡಳಿತವು, ಹಾಸ್ಟೆಲ್ ಮತ್ತು ಪಿ.ಜಿ. ಕೇಂದ್ರಗಳಲ್ಲಿ ಕಡ್ಡಾಯವಾಗಿ 'ಸ್ಪ್ರಿಂಗ್ ಫ್ಯಾನ್'ಗಳನ್ನು ಅಳವಡಿಸುವಂತೆ ಸೂಚನೆ ನೀಡಿದೆ.

ಈ ಆದೇಶ ಪಾಲಿಸದಿದ್ದಲ್ಲಿ ಹಾಸ್ಟೆಲ್, ಪಿ.ಜಿ ಮಾಲೀಕರು ಮತ್ತು ಸಂಬಂಧಿಸಿದ ತರಬೇತಿ ಕೇಂದ್ರದ ಆಡಳಿತ ಮಂಡಳಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದೂ ಎಚ್ಚರಿಕೆ ನೀಡಿದೆ.

ಕೋಟಾ ಜಿಲ್ಲಾಧಿಕಾರಿ ಒ.ಪಿ. ಬುನಕರ್ ಅವರು ಆಗಸ್ಟ್ 12 ರಂದು 'ಆತ್ಮಹತ್ಯೆ-ವಿರೋಧಿ ಕ್ರಮ' ಕುರಿತು ಜಿಲ್ಲೆಯ ಅಧಿಕಾರಿಗಳು ಮತ್ತು ತರಬೇತಿ ಕೇಂದ್ರಗಳು, ಹಾಸ್ಟೆಲ್ ಪ್ರಮುಖರ ಸಭೆ ನಡೆಸಿ, ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಗೆ ಈ ನಿರ್ದೇಶನ ಪಾಲಿಸಲು ಸೂಚಿಸಿದರು.

ಕೋಟಾದಲ್ಲಿ ಈ ವರ್ಷ ಇಲ್ಲಿಯವರೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದ 20 ವಿದ್ಯಾರ್ಥಿಗಳು ಆತ್ಮಹತ್ಯೆಮಾಡಿಕೊಂಡಿದ್ದಾರೆ. ಕಳೆದ ವರ್ಷ15 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿ ಕೊಂಡಿದ್ದರು ಎಂದುಅಧಿಕಾರಿಗಳು ತಿಳಿಸಿದ್ದಾರೆ.

ಐಐಟಿ–ಜೆಇಇ, ನೀಟ್ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ತರಬೇತಿ ಕೇಂದ್ರದ ತಾಣವಾದ ಕೋಟಾಕ್ಕೆ ಮಕ್ಕಳನ್ನು ಕಳುಹಿಸಬೇಕೆ ಎಂದು ನಿರ್ಧರಿಸುವ ಮೊದಲು ಪೋಷಕರು, ಅವರ ಸಾಮರ್ಥ್ಯವನ್ನು ವೃತ್ತಿಪರರ ನೆರವಿನ ಮೂಲಕ ನಿರ್ಣಯಿಸುವ ಅಗತ್ಯವೂ ಇದೆ ಎನ್ನುತ್ತಾರೆ ಪರಿಣತರು.

ಸೀಲಿಂಗ್ ಫ್ಯಾನ್‌ಗೆ 'ಸ್ಪ್ರಿಂಗ್' ಜೋಡಿಸಿದ್ದಾಗ, ಅದು 20 ಕೆ.ಜಿ. ಗಿಂತ ಹೆಚ್ಚು ತೂಕದ ವಸ್ತು ನೇತುಬಿದ್ದರೆ ಹಿಗ್ಗುತ್ತದೆ. ಅದೇ ಸಮಯದಲ್ಲಿ ಸೈರನ್ ಮೊಳಗಿಸುತ್ತದೆ. ಸ್ಪ್ರಿಂಗ್ ಅಳವಡಿಸಿದ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವೇ ಇಲ್ಲ ಎನ್ನುತ್ತಾರೆ ತಜ್ಞರು.

ಚುನಾವಣೆ: ಮಧ್ಯಪ್ರದೇಶಕ್ಕೆ

4 ರಾಜ್ಯಗಳ ಬಿಜೆಪಿ ಶಾಸಕರು

ಭೋಪಾಲ್ (ಪಿಟಿಐ): ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿರುವ ಮಧ್ಯಪ್ರದೇಶಕ್ಕೆ ಚುನಾವಣೆ ಸಿದ್ಧತೆಯ ಕ್ರಮವಾಗಿ ವಸ್ತುಸ್ಥಿತಿ ವಿವರ ಪಡೆಯಲು ಉತ್ತರ ಪ್ರದೇಶ, ಗುಜರಾತ್, ಬಿಹಾರ, ಮಹಾರಾಷ್ಟ್ರದಿಂದ ಬಿಜೆಪಿ ಶಾಸಕರು ಆಗಮಿಸಿದ್ದಾರೆ. ಮಾಹಿತಿ ಪಡೆಯಲು ಪ್ರತಿ ಶಾಸಕರಿಗೂ ತಲಾ ಒಂದು ಕ್ಷೇತ್ರ ನಿಗದಿಪಡಿಸಲಾಗುತ್ತದೆ.

ಮುಖಂಡರ ಪ್ರಕಾರ, ನಾಲ್ಕು ರಾಜ್ಯಗಳಿಂದ ಆಗಮಿಸಿರುವ ಶಾಸಕರಿಗಾಗಿ ಬಿಜೆಪಿ ಶನಿವಾರದಿಂದ ತರಬೇತಿ ಆರಂಭಿಸಿದೆ. ತರಬೇತಿ ಕಾರ್ಯಕ್ಕೆ ಬಿಜೆಪಿ ರಾಜ್ಯ ಉಸ್ತುವಾರಿ, ಕೇಂದ್ರ ಸಚಿವ ಭೂಪೇಂದ್ರ ಯಾದವ್ ಚಾಲನೆ ನೀಡಿದರು. ಮಧ್ಯಪ್ರದೇಶದಲ್ಲಿ 230 ವಿಧಾನಸಭಾ ಕ್ಷೇತ್ರಗಳಿವೆ.

ಭಾನುವಾರದಿಂದ ಈ ಎಲ್ಲ ಶಾಸಕರು ತಮಗೆ ನಿಗದಿಪಡಿಸಿರುವ ಕ್ಷೇತ್ರಗಳಿಗೆ ತೆರಳಲಿದ್ದು, ಚುನಾವಣೆ ಪೂರ್ವದಲ್ಲಿ ವಸ್ತುಸ್ಥಿತಿಯ ವಿವರ ಪಡೆಯುವರು. ಸ್ಥಳೀಯ ಕಾರ್ಯಕರ್ತರು, ಮತದಾರರ ಜೊತೆಗೂ ಅವರು ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಚುನಾವಣೆ ವೇಳಾಪಟ್ಟಿ ಪ್ರಕಟಣೆಗೂ ಮೊದಲು, 39 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ. 2018ರ ಚುನಾವಣೆಯಲ್ಲಿ ಕಾಂಗ್ರೆಸ್ 114, ಬಿಜೆಪಿ 109 ಸ್ಥಾನ ಗೆದ್ದಿತ್ತು. ಕಾಂಗ್ರೆಸ್‌ಗೆ ಸರಳ ಬಹುಮತಕ್ಕೆ ಎರಡು ಸ್ಥಾನದ ಕೊರತೆ ಇತ್ತು.

ಟಿಎನ್‌ಸಿಸಿ ಅಧ್ಯಕ್ಷರ ಬದಲಾವಣೆ?

ಚೆನ್ನೈ: ತಮಿಳುನಾಡು ಪ್ರದೇಶ ಕಾಂಗ್ರೆಸ್ ಸಮಿತಿ (ಟಿಎನ್‌ಸಿಸಿ) ಅಧ್ಯಕ್ಷ ಕೆ.ಎಸ್.ಅಳಗಿರಿ ಅವರನ್ನು ಬದಲಾಯಿಸಿ, ಶಾಸಕಾಂಗ ಪಕ್ಷದ ನಾಯಕ ಕೆ.ಸೆಲ್ವಪೆರುಂತಗೈ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲು ಎಐಸಿಸಿ ಮುಂದಾಗಿದೆ ಎನ್ನಲಾಗಿದ್ದು, ಇದು ಪಕ್ಷದ ರಾಜ್ಯ ಘಟಕದಲ್ಲಿ ತಳಮಳಕ್ಕೆ ಕಾರಣವಾಗಿದೆ.

ಈ ನಡುವೆ, ಅಳಗಿರಿ ನೇತೃತ್ವದ ಐವರು ಶಾಸಕರನ್ನು ಒಳಗೊಂಡ ನಿಯೋಗವೊಂದು ಶುಕ್ರವಾರ ಬೆಂಗಳೂರಿನಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದೆ.

ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಟಿಎನ್‌ಸಿಸಿ ಅಧ್ಯಕ್ಷರನ್ನು ಬದಲಾಯಿಸುವ ಯೋಜನೆ ಕೈಬಿಡಬೇಕು ಎಂದು ಎಂದು ನಿಯೋಗ ಒತ್ತಾಯಿಸಿದೆ .

ಈ ಹಂತದಲ್ಲಿ ಟಿಎನ್‌ಸಿಸಿ ಅಧ್ಯಕ್ಷರ ಬದಲಾವಣೆ ಅಗತ್ಯ ಇಲ್ಲ. ಒಂದು ವೇಳೆ ಬದಲಾಯಿಸಬೇಕು ಎಂದಾದಲ್ಲಿ ಸೆಲ್ವಪೆರುಂತಗೈ ಬಿಟ್ಟು ಬೇರೆಯವನ್ನು ನೇಮಿಸಬೇಕು ಎಂದು ಅಳಗಿರಿ ಬಣ ಪ್ರತಿಪಾದಿಸಿದೆ ಎನ್ನಲಾಗಿದೆ.

'ಟಿಎನ್‌ಸಿಸಿ ಅಧ್ಯಕ್ಷರ ಬದಲಾವಣೆ ಪ್ರಸ್ತಾವ ಇಲ್ಲ. ವದಂತಿಗಳಿಗೆ ಕಿವಿಗೊಡಬೇಡಿ' ಎಂಬುದಾಗಿ ಮಲ್ಲಿಕಾರ್ಜುನ ಖರ್ಗೆ ಅವರು ನಿಯೋಗಕ್ಕೆ ತಿಳಿಸಿದ್ದಾರೆ ಎಂದು ಹೇಳಲಾಗಿದೆ.

ಟಿಎನ್‌ಸಿಸಿ ಅಧ್ಯಕ್ಷ ಸ್ಥಾನಕ್ಕೆ ಕರ್ನಾಟಕ ಕೇಡರ್‌ನ ಮಾಜಿ ಐಎಎಸ್ ಅಧಿಕಾರಿ ಶಶಿಕಾಂತ ಸೆಂಥಿಲ್, ಕರೂರು ಸಂಸದ ಎಸ್.ಜ್ಯೋತಿಮಣಿ ಹಾಗೂ ಕೃಷ್ಣಗಿರಿ ಸಂಸದ ಎ.ಚೆಲ್ಲಕುಮಾರ್ ಅವರ ಹೆಸರುಗಳು ಪ್ರಸ್ತಾಪವಾಗಿದ್ದವು. ಕೊನೆಗೆ, ಸೆಲ್ವಪೆರುಂತಗೈ ಅವರ ನೇಮಕಕ್ಕೆ ಎಐಸಿಸಿ ಒಲವು ವ್ಯಕ್ತಪಡಿಸಿದೆ ಎನ್ನಲಾಗಿದೆ.

ರಾಜೀವ್ ಗಾಂಧಿ ಜನ್ಮದಿನ ಆಚರಣೆ ಇಂದು

ಲಡಾಖ್‌ನಲ್ಲಿ ರಾಹುಲ್ ಬೈಕ್ ಸವಾರಿ

ಲೇಹ್ (ಪಿಟಿಐ): ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಲಡಾಖ್‌ನಲ್ಲಿ ಲೇಹ್‌ನಿಂದ ಪಾಂಗಾಂಗ್ ಸರೋವರದವರೆಗೆ ಬೈಕ್‌ನಲ್ಲಿ ತೆರಳಿದರು. ಲಡಾಖ್ ಕೇಂದ್ರಾಡಳಿತ ಪ್ರದೇಶವಾದ ಬಳಿಕ ಇದು ರಾಹುಲ್ ಅವರ ಮೊದಲ ಭೇಟಿ.

ಭಾನುವಾರ ಅಲ್ಲಿ ಅವರು ತಮ್ಮ ತಂದೆ, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಜನ್ಮದಿನ ಆಚರಿಸುವರು ಎಂದು ಪಕ್ಷದ ವಕ್ತಾರರು ತಿಳಿಸಿದ್ದಾರೆ. ಲೇಹ್‌ನಿಂದ ಪಾಂಗಾಂಗ್‌ವರೆಗೆ ಅವರು 170 ಕಿ.ಮೀ ದೂರ ಕ್ರಮಿಸಿದ್ದಾರೆ.

ಗುರುವಾರ್ ಲೇಹ್‌ಗೆ ತೆರಳಿದ್ದ ರಾಹುಲ್ ಗಾಂಧಿ ನಂತರ ನಾಲ್ಕು ದಿನ ಪ್ರವಾಸ ವಿಸ್ತರಿಸಲು ನಿರ್ಧರಿಸಿದ್ದರು. ಈ ಅವಧಿಯಲ್ಲಿ ಪಾಂಗಾಂಗ್ ಸರೋವರ, ನುಬ್ರಾ ಕಣಿವೆ, ಕಾರ್ಗಿಲ್ ಜಿಲ್ಲೆಗಳಿಗೆ ಭೇಟಿ ನೀಡುವರು.


ರಾಹುಲ್ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬೈಕ್ ಪ್ರಯಾಣದ ಚಿತ್ರ ಹಂಚಿಕೊಂಡಿದ್ದಾರೆ. ರಾಹುಲ್ ಗಾಂಧಿ ಅವರು ಕೆಟಿಎಂ 390 ಅಡ್ವೆಂಚರ್ ಬೈಕ್‌ನಲ್ಲಿ ತೆರಳಿದ್ದರೆ, ಇತರೆ ಬೈಕ್ ಸವಾರರು ಅವರನ್ನು ಹಿಂಬಾಲಿಸಿದ್ದಾರೆ.

ಹೆಲ್ಮೆಟ್, ಗ್ಲೋವ್ಸ್, ರೈಡಿಂಗ್ ಬೂಟ್ಸ್, ಜಾಕೆಟ್ ಧರಿಸಿದ್ದ ಅವರು ಪರ್ವತಗಳ ಹಿನ್ನೆಲೆಯಲ್ಲಿ ಬೈಕ್ ಸವಾರಿ ಮಾಡುತ್ತಿರುವುದು ಚಿತ್ರದಲ್ಲಿದೆ. 'ಪಾಂಗಾಂಗ್ ಸರೋವರಕ್ಕೆ ತೆರಳುತ್ತಿದ್ದೇನೆ. ಇದು, ಆಕರ್ಷಕ ಸ್ಥಳ ಎಂದು ತಂದೆ ಹೇಳುತ್ತಿದ್ದರು' ಎಂದು ರಾಹುಲ್ ಬರೆದುಕೊಂಡಿದ್ದಾರೆ.

ರಾಹುಲ್ ಅವರು ಲಡಾಖ್‌ನಲ್ಲಿ ಆಗಸ್ಟ್ 25ರವರೆಗೂ ಪ್ರವಾಸದಲ್ಲಿ ಇರಲಿದ್ದಾರೆ. ಎಕ್ಸ್ ಜಾಲತಾಣದಲ್ಲಿಯೂ ಟ್ವೀಟ್ ಮೂಲಕ ಚಿತ್ರ ಹಂಚಿಕೊಂಡಿರುವ ಅವರು, 'ಅಪ್‌ವರ್ಡ್ಸ್, ಅಪ್‌ವರ್ಡ್ಸ್.. ಅನ್‌ಸ್ಟಾಪಬಲ್' ಎಂದು ಅಡಿಬರಹ ಕೊಟ್ಟಿದ್ದಾರೆ.

ರಾಹುಲ್ ಬಳಸಿರುವ ಕೆಟಿಎಂ 390 ಅಡ್ವೆಂಚರ್ ಬೈಕ್‌ನ ಎಂಜಿನ್ ಸಾಮರ್ಥ್ಯ 373 ಸಿ.ಸಿ ಆಗಿದ್ದು, ಗರಿಷ್ಠ ವೇಗಮಿತಿ ಗಂಟೆಗೆ 170 ಕಿ.ಮೀ. ಆಗಿದೆ. 'ನನ್ನ ಬಳಿ ಕೆಟಿಎಂ 390 ಬೈಕ್ ಇದೆ. ಅದನ್ನು ಬಳಸಲು ನನ್ನ ಭದ್ರತಾ ಸಿಬ್ಬಂದಿ ಅವಕಾಶ ನೀಡುವುದಿಲ್ಲ' ಅವರು ಈ ಹಿಂದೆ ತಿಳಿಸಿದ್ದರು.

ಭಾನುವಾರ ಅವರು ಬೈಕ್‌ನಲ್ಲಿ ನುಬ್ರಾ ಕಣಿವೆಗೆ ತೆರಳಲಿದ್ದು, ಅಲ್ಲಿಯೇ ವಾಸ್ತವ್ಯ ಹೂಡುವರು. ಮಾರ್ಗದಲ್ಲಿ ಅವರು ಕೃಷಿಕರು, ವ್ಯಾಪಾರಿಗಳು, ಸಾಮಾನ್ಯ ಜನರನ್ನು ಭೇಟಿಯಾಗುವರು ಎಂದು ಕಾಂಗ್ರೆಸ್ ಮುಖಂಡ ಸೆರಿಂಗ್ ನಾಮ್‌ಗ್ಯಾಲ್ ಅವರು ಮಾಹಿತಿ ನೀಡಿದ್ದಾರೆ.



ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಶನಿವಾರ ಬೈಕ್‌ಲ್ಲಿ ಲಡಾಖ್‌ನ ಲೇಹ್‌ನಲ್ಲಿರುವ ಪಾಂಗಾಂಗ್ ಸರೋವರಕ್ಕೆ ತೆರಳಿದರು –ಪಿಟಿಐ ಚಿತ್ರ


ಕೇಂದ್ರದಿಂದ ಶೃಂಗಸಭೆ ದುರ್ಬಳಕೆ: ಕಾಂಗ್ರೆಸ್ ಟೀಕೆ

'ಜಿ20 ಹೆಸರಿನಲ್ಲಿ ಚುನಾವಣಾ ಪ್ರಚಾರ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಜಿ 20 ಶೃಂಗಸಭೆಯ ಹೆಸರಿನಡಿ ಚುನಾವಣಾ ಅಭಿಯಾನವನ್ನು ನಡೆಸುತ್ತಿದೆ ಎಂದು ಕಾಂಗ್ರೆಸ್ ಟೀಕಿಸಿದೆ.

'1999ರಲ್ಲಿ ಜಿ 20 ರಚನೆಯಾಯಿತು. 19 ರಾಷ್ಟ್ರಗಳು ಹಾಗೂ ಯುರೋಪಿಯನ್ ಒಕ್ಕೂಟವು ಇದರ ಸದಸ್ಯತ್ವ ಪಡೆದಿವೆ. ಇಲ್ಲಿಯವರೆಗೆ 17 ರಾಷ್ಟ್ರಗಳು ಇದರ ಆತಿಥ್ಯ ವಹಿಸಿವೆ. ಈಗ ಭಾರತದ ಸರದಿಯಾಗಿದ್ದು, ಸೆಪ್ಟೆಂಬರ್ 9 ಮತ್ತು 10ರಂದು ನವದೆಹಲಿಯಲ್ಲಿ ಶೃಂಗಸಭೆ ನಿಗದಿಯಾಗಿದೆ. ಆದರೆ, ತನ್ನ ಚುನಾವಣಾ ತಂತ್ರದ ಭಾಗವಾಗಿ ಇದನ್ನು ಬಳಸಿಕೊಳ್ಳುತ್ತಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು 'ಎಕ್ಸ್'ನಲ್ಲಿ (ಟ್ವಿಟರ್) ದೂರಿದ್ದಾರೆ.

'ಕೇಂದ್ರದ ಈ ನಡೆ ಸರಿಯಲ್ಲ. ಇತರೆ ದೇಶಗಳಲ್ಲಿ ಇಂತಹ ವಾತಾವರಣ ಕಾಣಲು ಸಾಧ್ಯವಿಲ್ಲ. ದೇಶ ಎದುರಿಸುತ್ತಿರುವ ಗಂಭೀರ ವಿಷಯಗಳಿಂದ ಜನರ ಲಕ್ಷ್ಯವನ್ನು ಬೇರೆಡೆಗೆ ಸೆಳೆಯಲು ಸರ್ಕಾರ ಈ ದುರ್ಬಳಕೆಯ ತಂತ್ರ ಅನುಸರಿಸುತ್ತಿದೆ' ಎಂದು ಆಪಾದಿಸಿದ್ದಾರೆ.



ಜೈರಾಮ್ ರಮೇಶ್

80ರ ದಶಕದಲ್ಲಿ ಕಾಂಗ್ರೆಸ್ ಸರ್ಕಾರದ ಅಧಿಕಾರಾವಧಿ ವೇಳೆ ನವದೆಹಲಿಯಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳ ಶೃಂಗಸಭೆಯನ್ನು ಸಂಘಟಿಸಲಾಗಿತ್ತು. ಇದಾದ ಬಳಿಕ ನೂರಕ್ಕೂ ಹೆಚ್ಚು ರಾಷ್ಟ್ರಗಳ ಅಲಿಪ್ತ ಶೃಂಗಸಭೆಯನ್ನೂ ಆಯೋಜಿಸಲಾಗಿತ್ತು. ಆದರೆ, ಇಂತಹ ಸಭೆಗಳನ್ನು ಎಂದಿಗೂ ರಾಜಕೀಯ ಲಾಭಕ್ಕೆ ಬಳಸಿಕೊಂಡಿಲ್ಲ ಎಂದು ಹೇಳಿದ್ದಾರೆ.


'ಉತ್ತಮವಾಗಿ ಕಾರ್ಯಕ್ರಮ ಸಂಘಟಿಸುವುದರಲ್ಲಿ ಮೋದಿ ನಿಪುಣರಾಗಿದ್ದಾರೆ ಎಂದು ಈ ಹಿಂದೆ ಬಿಜೆಪಿ ನಾಯಕ ಎಲ್.ಕೆ. ಅಡ್ವಾಣಿ ಹೇಳಿದ್ದು ನನಗೆ ಈಗಲೂ ನೆನಪಿದೆ. ಕಾರ್ಯಕ್ರಮಗಳ ಆಯೋಜನೆ ಮೂಲಕ ದೇಶದ ಜ್ವಲಂತ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸುವಲ್ಲಿ ಪ್ರಧಾನಿ ಕಾರ್ಯತತ್ಪರವಾಗಿದ್ದಾರೆ' ಎಂದು ಆರೋಪಿಸಿದ್ದಾರೆ.

'ನಾವು20' ಸಭೆಗೂ ಅಡ್ಡಿ: ದೆಹಲಿಯ ಸಿಪಿಎಂ ಭವನದಲ್ಲಿ ಹಮ್ಮಿಕೊಂಡಿದ್ದ 'ನಾವು20' ಸಭೆಗೂ ಪೊಲೀಸರು ಅಡ್ಡಿಪಡಿಸಿದ್ದಾರೆ ಎಂದು ಜೈರಾಮ್ ರಮೇಶ್ ದೂರಿದ್ದಾರೆ.

ಆಗಸ್ಟ್ 18ರಿಂದ 20ರವರೆಗೆ ಸಭೆ ಆಯೋಜಿಸಲಾಗಿತ್ತು. ಶಾಂತಿಯುತವಾಗಿ ನಡೆಯುತ್ತಿದ್ದ ಸಭೆಯ ವಿರುದ್ಧ ಪೊಲೀಸರು ಕ್ರಮಕೈಗೊಂಡಿರುವುದು ಸರಿಯಲ್ಲ ಎಂದು ಅವರು ಹೇಳಿದ್ದಾರೆ.

'ಸಂಘಟಕರು ಸಭೆ ಆಯೋಜನೆ ಬಗ್ಗೆ ಯಾವುದೇ ಅನುಮತಿ ಪಡೆದಿಲ್ಲ' ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಸುಧಾಮೂರ್ತಿ ಹೊಸ ಕಾದಂಬರಿ ಬಿಡುಗಡೆಗೆ ಸಿದ್ಧ



ಸುಧಾಮೂರ್ತಿ

ನವದೆಹಲಿ (ಪಿಟಿಐ): ಹೆಸರಾಂತ ಲೇಖಕಿ ಸುಧಾಮೂರ್ತಿ ಅವರ ನೂತನ ಆಂಗ್ಲ ಕಾದಂಬರಿ 'ಕಾಮನ್ ಎಟ್ ಅನ್‌ಕಾಮನ್' ಮುಂದಿನ ವಾರ ಬಿಡುಗಡೆ ಆಗಲಿದೆ ಎಂದು ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾ ಪ್ರಕಾಶನ ಸಂಸ್ಥೆಯು ಪ್ರಕಟಿಸಿದೆ.

ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದ ಸುಧಾಮೂರ್ತಿ ಅವರು ಏಳು ವರ್ಷಗಳ ತರುವಾಯ ವಯಸ್ಕ ಓದುಗರನ್ನು ಗುರಿಯಾಗಿಸಿದ ಕಾದಂಬರಿ ರಚಿಸಿದ್ದಾರೆ. ಈ ಹಿಂದೆ 2017ರಲ್ಲಿ ಅವರ ಕಾದಂಬರಿ 'ತ್ರಿ ಥೌಸಂಡ್ ಸ್ಟಿಚ್ಚಸ್' ಪ್ರಕಟವಾಗಿತ್ತು.

ಶನಿವಾರ 73ನೇ ವರ್ಷದ ಜನ್ಮದಿನ ಆಚರಿಸಿಕೊಂಡಿರುವ ಸುಧಾಮೂರ್ತಿ ಈವರೆಗೆ ಮಕ್ಕಳ ಸಾಹಿತ್ಯ ಸೇರಿದಂತೆ ವಿವಿಧ ಭಾಷೆಗಳಲ್ಲಿ 250ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಅಕ್ಟೋಬರ್‌ನಲ್ಲಿ ಮುಗಿಯಬೇಕಿದ್ದ ಕಾಮಗಾರಿಗೆ ಚಾಲನೆಯೇ ದೊರೆತಿಲ್ಲ

ಉಪನಗರ ರೈಲ್ವೆ ಕಾರಿಡಾರ್–1ಕ್ಕೆ ಗ್ರಹಣ

• ಬಾಲಕೃಷ್ಣ ಪಿ.ಎಚ್.



ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಉಪನಗರ ರೈಲ್ವೆ ಕಾರಿಡಾರ್–1 ಕಾಮಗಾರಿಗೆ ಇನ್ನೂ ಚಾಲನೆ ದೊರೆತಿಲ್ಲ.

ಈ ಮೊದಲಿನ ಯೋಜನೆ ಪ್ರಕಾರವೇ ನಡೆದಿದ್ದರೆ ಈ ವರ್ಷದ ಅಕ್ಟೋಬರ್‌ಗೆ ಪೂರ್ಣಗೊಳ್ಳಬೇಕಿತ್ತು.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಶ್ರೀರಾಂಪುರ, ಮಲ್ಲೇಶ್ವರ, ಯಶವಂತಪುರ, ಮುತ್ಯಾಳ, ಲೊಟ್ಟೆಗೊಲ್ಲಹಳ್ಳಿ, ಕೊಡಿಗೆಹಳ್ಳಿ, ಜ್ಯುಡಿಶಿಯಲ್ ಲೇಔಟ್, ಯಲಹಂಕ, ನಿಟ್ಟೆ ಮೀನಾಕ್ಷಿ, ಬೆಟ್ಟಹಲಸೂರು, ದೊಡ್ಡಜಾಲ ಮೂಲಕ ವಿಮಾನ ನಿಲ್ದಾಣ ಟರ್ಮಿನಲ್‌ಗೆ ಕಾರಿಡಾರ್–1 ಸಂಪರ್ಕಿಸಲಿದೆ. ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾದರೆ ವಿಮಾನ ನಿಲ್ದಾಣಕ್ಕೆ ಹೋಗುವವರಿಗೆ ಮತ್ತು ಅಲ್ಲಿಂದ ಬರುವವರಿಗೆ ಅನುಕೂಲವಾಗಲಿದೆ.

2018ರಲ್ಲಿ ಘೋಷಣೆಯಾಗಿ, 2020ರಲ್ಲಿ ಮಂಜೂರಾಗಿದ್ದರೂ ಕೋವಿಡ್ ಇನ್ನಿತರ ಕಾರಣದಿಂದ ಎರಡು ವರ್ಷಗಳ ಕಾಲ ಕಾಮಗಾರಿಗೆ ಚಾಲನೆ ಸಿಕ್ಕಿರಲಿಲ್ಲ. 2022ರ ಜೂನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದರು. ಮೂಲ ಯೋಜನೆಯ ಪ್ರಕಾರ ಮೊದಲು ಕಾರಿಡಾರ್–1 ಕಾಮಗಾರಿಯನ್ನು ಕೈಗೆತ್ತಿಕೊಂಡು 2023ರ ಅಕ್ಟೋಬರ್‌ಗೆ ಮುಕ್ತಾಯಗೊಳಿಸಬೇಕಿತ್ತು. ಎಲ್ಲ ನಾಲ್ಕು ಕಾರಿಡಾರ್‌ಗಳನ್ನು 40 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ತಿಳಿಸಿದ್ದರು. ಆದರೂ ನಾಲ್ಕು ಕಾರಿಡಾರ್‌ಗಳಲ್ಲಿ ಹೆಚ್ಚು ಅಗತ್ಯ ಇರುವ ಕಾರಿಡಾರ್–1 ಕಾಮಗಾರಿ ಶುರುವಾಗಿಲ್ಲ.

ಪ್ರಜಾವಾಣಿ ವಿಶೇಷ

ಬಿಎಂಆರ್‌ಸಿಎಲ್ ನಿರ್ಮಾಣ ಮಾಡುತ್ತಿರುವ ನೀಲಿ ಮಾರ್ಗವು ದೇವನಹಳ್ಳಿಯನ್ನು ಸಂಪರ್ಕಿಸಲಿದೆ ಎಂಬ ಕಾರಣಕ್ಕೆ ಈ ಕಾರಿಡಾರ್–1 ಅನ್ನು ತಡಮಾಡಲಾಗುತ್ತಿದೆ. ಮೆಟ್ರೊ ಮಾರ್ಗ ಮತ್ತು ಉಪನಗರ ರೈಲು ಮಾರ್ಗವು ನಗರದ ಬೇರೆ ದಿಕ್ಕುಗಳಲ್ಲಿ ಸಾಗಲಿದ್ದರೂ ತಡಮಾಡಲಾಗುತ್ತಿದೆ.


ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಪ್ರಾರಂಭವಾಗುವ ಮೆಟ್ರೊ ನೀಲಿ ಮಾರ್ಗವು ಕೆ.ಆರ್.ಪುರ, ನಾಗವಾರ, ಯಲಹಂಕದ ಮೂಲಕ ದೇವನಹಳ್ಳಿ ಕಡೆಗೆ ಸಾಗುತ್ತದೆ. ಉಪನಗರ ರೈಲ್ವೆ ಯೋಜನೆಯ ಕಾರಿಡಾರ್–1 ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಮಲ್ಲೇಶ್ವರ, ಯಶವಂತಪುರ, ಯಲಹಂಕ ಮೂಲಕ ಸಾಗುತ್ತದೆ. ನಗರದ ದಕ್ಷಿಣ ಭಾಗದಿಂದ ಮೆಟ್ರೊ ರೈಲು, ಉತ್ತರ ಭಾಗದಿಂದ ಉಪನಗರ ಕಾರಿಡಾರ್–1 ಸಾಗುವುದರಿಂದ ಎರಡರಲ್ಲೂ ಬೇರೆಯೇ ಪ್ರಯಾಣಿಕರು ತೆರಳಲಿದ್ದಾರೆ.

ಯೋಜನೆಯ ಮೂಲ ಅವಧಿಯಲ್ಲಿ ಅಲ್ಲದೇ ಇದ್ದರೂ ಪ್ರಧಾನಿ ಘೋಷಿಸಿರುವ ಸಮಯ 2025ರ ಅಕ್ಟೋಬರ್‌ಗೆ ಮುಗಿಸಲು ಪ್ರಯತ್ನಿಸಬೇಕು. ಇಲ್ಲದೇ ಇದ್ದರೆ ಈ ಯೋಜನೆಯನ್ನು ವಹಿಸಿಕೊಂಡಿರುವ ಕೆ–ರೈಡ್ (ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ) ಅಧಿಕಾರಿಗಳು ಈಗ ಪುನರ್‌ನಿಗದಿ ಮಾಡಿಕೊಂಡಿರುವ ಅವಧಿಯಂತೆ 2026ರ ಅಕ್ಟೋಬರ್‌ಗಾದರೂ ಕಾಮಗಾರಿ ಪೂರ್ಣಗೊಳಿಸಬೇಕು. ಈ ಗುರಿ ತಲುಪಬೇಕಿದ್ದರೆ ಕಾರಿಡಾರ್–1ನ್ನು ಮೂರನೇ ಆದ್ಯತೆಯಾಗಿ ಪರಿಗಣಿಸದೇ ಮೊದಲ ಆದ್ಯತೆ ನೀಡಿ ಕಾಮಗಾರಿ ಆರಂಭಿಸಬೇಕು ಎಂದು ಸಿಟಿಜನ್ಸ್ ಫಾರ್ ಸಿಟಿಜನ್ ಸಂಸ್ಥಾಪಕ ರಾಜಕುಮಾರ್ ದುಗರ್ ಒತ್ತಾಯಿಸಿದರು.

ವೇಗವಾಗಿ ಸಾಗಲಿರುವ ಉಪನಗರ ರೈಲು

ಮೆಟ್ರೊ ಸರಾಸರಿ ಒಂದೂವರೆ ಕಿಲೋಮೀಟರ್‌ಗೆ ಒಂದು ನಿಲ್ದಾಣ ಇದ್ದರೆ, ಉಪನಗರ ಯೋಜನೆಯಲ್ಲಿ ಸರಾಸರಿ ಎರಡೂವರೆ ಕಿಲೋಮೀಟರ್‌ಗೆ ಒಂದು ನಿಲ್ದಾಣ ಇರಲಿದೆ. ಅಲ್ಲದೇ ಮೆಟ್ರೊ 58 ಕಿಲೋಮೀಟರ್ ಕ್ರಮಿಸುವ ಹಾದಿಯಾದರೆ, ಉಪನಗರ ರೈಲು 41 ಕಿಲೋಮೀಟರ್ ಕ್ರಮಿಸುವ ಹಾದಿ. ಹಾಗಾಗಿ ಕಾರಿಡಾರ್ ಕಾಮಗಾರಿಗಳು ಮುಗಿದು ಉಪನಗರ ರೈಲು ಆರಂಭಗೊಂಡರೆ ಮೆಟ್ರೊ ರೈಲಿಗಿಂತ ವೇಗವಾಗಿ ಸಾಗಲಿದೆ. ಕನಿಷ್ಠ ಅರ್ಧ ಗಂಟೆ ಮೊದಲು ದೇವನಹಳ್ಳಿಗೆ ತಲುಪಲಿದೆ.

‘ಆಡಳಿತಾತ್ಮಕ, ತಾಂತ್ರಿಕ ಸಮಸ್ಯೆ, ಕೋವಿಡ್ ಕಾರಣ’



ದೇಶದಲ್ಲಿಯೇ ರೈಲ್ವೆ ಇಲಾಖೆಯ ಮೊದಲ ಉಪನಗರ ಯೋಜನೆ ಇದಾಗಿರುವುದರಿಂದ ಆಡಳಿತಾತ್ಮಕ, ತಾಂತ್ರಿಕ ಸಮಸ್ಯೆಗಳಿಂದ ಸ್ವಲ್ಪ ತಡವಾಯಿತು. ಕೋವಿಡ್ ಕೂಡಾ ಇದೇ ಸಮಯದಲ್ಲಿ ಬಂದಿದ್ದರಿಂದ ಸಮಸ್ಯೆಯಾಯಿತು. ರೈಲ್ವೆ ಅಧಿಕಾರಿಗಳು, ಕೆ–ರೈಡ್ ಅಧಿಕಾರಿಗಳು ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. 2026ರ ಒಳಗೆ ಕಾಮಗಾರಿ ಮುಗಿಯಲಿವೆ.

ಕಾರಿಡಾರ್–1 ಆರಂಭಿಸಬೇಕಿತ್ತು. ಆದರೆ, ಅದೇ ಸಮಯದಲ್ಲಿ ಮೆಟ್ರೊ ಸಂಪರ್ಕ ಮಾರ್ಗವೂ ಆಗುತ್ತಿರುವುದರಿಂದ ಕಾರಿಡಾರ್–2 (ಚಿಕ್ಕಬಾಣಾವರ–ಬೈಯಪ್ಪನಹಳ್ಳಿ) ಮೊದಲು ಆರಂಭಿಸಿದ್ದೇವೆ. ಕಾರಿಡಾರ್–3 (ಕೆಂಗೇರಿ–ಬೆಂಗಳೂರು ನಗರ) ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಶೀಘ್ರದಲ್ಲಿ ಈ ಕಾಮಗಾರಿ ಆರಂಭಗೊಳ್ಳಲಿದೆ. ಆನಂತರ ಕಾರಿಡಾರ್–1 ಆರಂಭಿಸುತ್ತೇವೆ. ಈ ಕಾಮಗಾರಿ ಮುಗಿದ ಮೇಲೆಯೇ ಇನ್ನೊಂದು ಕಾಮಗಾರಿ ಆರಂಭವಾಗುವುದಲ್ಲ. ಒಂದು ಕಾಮಗಾರಿ ನಡೆಯುತ್ತಿರುವಾಗಲೇ ಇನ್ನೊಂದು ಕಾರಿಡಾರ್‌ನ ಕಾಮಗಾರಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಆರಂಭಿಸುತ್ತೇವೆ. ನಾಲ್ಕು ಕಾಮಗಾರಿಗಳು ಮುಗಿದಾಗ 10 ಲಕ್ಷ ಜನರು ನಿತ್ಯ ಈ ರೈಲುಗಳಲ್ಲಿ ಸಂಚರಿಸಲಿದ್ದಾರೆ.

ಎಂ.ಬಿ. ಪಾಟೀಲ
ಮೂಲಸೌಕರ್ಯ ಅಭಿವೃದ್ಧಿ ಸಚಿವ

‘ಕೈ ಕಟ್ಟಿ ಹಾಕಲಾಗಿದೆ’



ಕಾರಿಡಾರ್–1 ಆರಂಭಿಸಬೇಕು ಎಂದು ನಗರ ಭೂ ಸಾರಿಗೆ ನಿರ್ದೇಶನಾಲಯ (ಡಿಯುಎಲ್‌ಟಿ) ವರದಿ ನೀಡಿತ್ತು. ಕೆ–ರೈಡ್ ಅಧಿಕಾರಿಗಳೂ ತಯಾರಿದ್ದರು. ಆದರೆ, ರೈಲ್ವೆ, ಕೇಂದ್ರ, ರಾಜ್ಯ ಸರ್ಕಾರಗಳು ಅನುಮತಿ ನೀಡಿದಂತೆ ಕೆ–ರೈಡ್ ಕೆಲಸ ಮಾಡಬೇಕಾಗುತ್ತದೆ. ಕೆ–ರೈಡ್ ಅನ್ನು ಕೈಕಟ್ಟಿದಂತಾಗಿದೆ. ಕಾರಿಡಾರ್–1ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಪ್ರಸ್ತಾವವನ್ನು ಕೂಡಲೇ ಅನುಮೋದನೆ ಮಾಡಿದರೆ ಕಾಮಗಾರಿಗಳು ಆರಂಭವಾಗುತ್ತವೆ. ಇಲಾಖೆಗಳ ನಡುವೆ ಸಂವಹನ ವೇಗವಾಗಬೇಕು.

ರಾಜಕುಮಾರ್ ದುಗರ್
ಸಿಟಿಜನ್ಸ್ ಫಾರ್ ಸಿಟಿಜನ್ ಸಂಸ್ಥಾಪಕ

ಸುದ್ದಿ 2 ನಿಮಿಷ

ಸುಳ್ಳು ಜಾತಿ ಪ್ರಮಾಣಪತ್ರ: ಮಹಿಳೆಗೆ 7 ವರ್ಷ ಜೈಲು

ಹಾವೇರಿ: ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಅಧಿಕಾರ ಅನುಭವಿಸಿದ ಶಿಗ್ಗಾವಿ ತಾಲ್ಲೂಕು ವನಹಳ್ಳಿ ಗ್ರಾಮದ ಲಕ್ಷ್ಮೀ ಮಾರುತಿ ಕಬ್ಬೇರಗೆ ಹಾವೇರಿಯ ಒಂದನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಜಿ.ಎಲ್. ಲಕ್ಷ್ಮೀನಾರಾಯಣ ಅವರು 7 ವರ್ಷ ಕಾರಾಗೃಹ ಶಿಕ್ಷೆ ಹಾಗೂ ₹19 ಸಾವಿರ ದಂಡ ವಿಧಿಸಿದ್ದಾರೆ.

ಲಕ್ಷ್ಮೀ ಕಬ್ಬೇರ ಅವರು ಹಿಂದೂ ಗಂಗಾಮತ (ಪ್ರವರ್ಗ-1) ಕ್ಕೆ ಸೇರಿದ್ದರೂ, ಸುಳ್ಳು ವ್ಯಾಸಂಗ ಪ್ರಮಾಣಪತ್ರ ಹಾಗೂ ಸುಳ್ಳು ಅಫಿಡವಿಟ್ ಘೋಷಣಾ ಪತ್ರ ಹಾಗೂ ಇತರೆ ದಾಖಲಾತಿಗಳನ್ನು ಸೃಷ್ಟಿಸಿ, 4 ಜೂನ್ 2015ರಂದು ಶಿಗ್ಗಾವಿ ತಹಶೀಲ್ದಾರ್ ಕಚೇರಿಗೆ ಸಲ್ಲಿಸಿ, ಹಿಂದೂ ಗಂಟಿಚೋರ್ಸ್ ಪರಿಶಿಷ್ಟ ಜಾತಿಯ ಪ್ರಮಾಣಪತ್ರ ಪಡೆದಿದ್ದರು. ನಂತರ ಹನುಮರಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಿದ್ದ ಸ್ಥಾನಕ್ಕೆ ಸ್ಪರ್ಧಿಸಿ ಆಯ್ಕೆಯಾಗಿ, ನಂತರ ಎಸ್.ಸಿ ಸ್ಥಾನಕ್ಕೆ ಮೀಸಲಾಗಿದ್ದ ಗ್ರಾ.ಪಂ. ಅಧ್ಯಕ್ಷರಾಗಿಯೂ ಆಯ್ಕೆಯಾಗಿದ್ದರು.

ಸುಳ್ಳು ಜಾತಿ ಪ್ರಮಾಣಪತ್ರ ಪಡೆದು ಸರ್ಕಾರಕ್ಕೆ ಮತ್ತು ನೈಜ ಪರಿಶಿಷ್ಟ ಜಾತಿಯ ಅಭ್ಯರ್ಥಿಗೆ ಮೋಸ ಮಾಡಿದ ಕುರಿತಂತೆ ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖಾಧಿಕಾರಿ ದಾವಣಗೆರೆ ಡಿಸಿಆರ್‌ಒ ಪೊಲೀಸ್ ಇನ್‌ಸ್ಪೆಕ್ಟರ್ ಟಿ.ಜಿ. ಶ್ರೀಧರ ಶಾಸ್ತ್ರೀ ಅವರು ಪ್ರಕರಣದ ತನಿಖೆ ನಡೆಸಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಸರ್ಕಾರದ ಪರವಾಗಿ ಒಂದನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ ಸರೋಜಾ ಜಿ.ಕೂಲಗಿಮಠ ಅವರು ವಾದ ಮಂಡಿಸಿದ್ದರು.

ಬಿಜೆಪಿ ಹಲವು ಶಾಸಕರು ಕಾಂಗ್ರೆಸ್‌ಗೆ: ರಂಗನಾಥ್



ರಾಜರಾಜೇಶ್ವರಿನಗರ: ‘ಬಿಜೆಪಿಯ ಹಲವು ಶಾಸಕರು ಕಾಂಗ್ರೆಸ್ ಸೇರ್ಪಡೆ ಖಚಿತ’ ಎಂದು ಕುಣಿಗಲ್ ಶಾಸಕ ಎಚ್.ಡಿ.ರಂಗನಾಥ್ ಹೇಳಿದರು.

ಹೇರೋಹಳ್ಳಿಯಲ್ಲಿ ಕುಣಿಗಲ್ ತಾಲ್ಲೂಕು ಬೆಂಗಳೂರು ನಿವಾಸಿಗಳು ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಉದ್ಯೋಗ ಅರಿಸಿ ಬೆಂಗಳೂರಿಗೆ ಬಂದು ನೆಲೆಸಿರುವ ನಮ್ಮ ತಾಲ್ಲೂಕಿನ ಸಮಸ್ಯೆ, ಕುಂದುಕೊರತೆ ನಿವಾರಿಸುವ ಮೂಲಕ ಅಭಿವೃದ್ಧಿಗೂ ಸಹಕಾರ ನೀಡುತ್ತೇನೆ ಎಂದರು.

ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಎಂ.ಸ್ವಾಮಿಗೌಡ ಮಾತನಾಡಿ, ಐದು ಗ್ಯಾರಂಟಿ ಯೋಜನೆ ಜಾರಿಗೆ ತಂದಿದ್ದರಿಂದ ಶ್ರಮಿಕರು, ನೊಂದವರು, ಕೂಲಿಕಾರ್ಮಿಕರು, ಮಧ್ಯಮವರ್ಗದ ಜನರು ನೆಮ್ಮದಿಯಿಂದ ಜೀವನ ಸಾಗಿಸಲು ಸಾಧ್ಯವಾಗಿದೆ ಎಂದರು.

ಕೆಪಿಸಿಸಿ ಕಾರ್ಮಿಕ ವಿಭಾಗದ ಪ್ರಧಾನ ಕಾರ್ಯದರ್ಶಿ ಬೆಟ್ಟೇಗೌಡ ಮಾತನಾಡಿ, ಬ್ರಿಟಿಷರು ರಾಷ್ಟ್ರದ ಸಂಪನ್ಮೂಲ ಲೂಟಿ ಮಾಡಿಕೊಂಡು ಹೋದ ಮೇಲೆ ಸಂಕಷ್ಟದ ಸಮಯದಲ್ಲಿ ವಿಶ್ವವಿದ್ಯಾಲಯ ಆಸ್ಪತ್ರೆ, ನೀರಾವರಿ ಯೋಜನೆ ಸೇರಿ ಹಲವು ಯೋಜನೆಗಳನ್ನು ತಂದು ರಾಷ್ಟ್ರದ ಅಭಿವೃದ್ಧಿ ಮಾಡಿರುವ ಕಾಂಗ್ರೆಸ್ ಸಾಧನೆ ಮರೆ ಮಾಚುವ ಕೆಲಸ ಬಿಜೆಪಿ ಮಾಡಿದೆ ಎಂದು ಹೇಳಿದರು.

50 ಕೋಟಿ ಗಡಿ ದಾಟಿದ ಜನ್‌ಧನ್ ಖಾತೆ ಸಂಖ್ಯೆ

ನವದೆಹಲಿ (ಪಿಟಿಐ): ಜನ್‌ಧನ್ ಬ್ಯಾಂಕ್ ಖಾತೆಗಳ ಸಂಖ್ಯೆ 50 ಕೋಟಿ ದಾಟಿದ್ದು, ಇದು ಗುರುತರ ಮೈಲಿಗಲ್ಲು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶ್ಲಾಘಿಸಿದ್ದಾರೆ.

ಎಕ್ಸ್ ವೇದಿಕೆಯಲ್ಲಿ (ಟ್ವಿಟರ್) ಈ ಕುರಿತು ಸಂತಸ ಹಂಚಿಕೊಂಡಿರುವ ಅವರು, ‘ಒಟ್ಟು ಜನ್‌ಧನ್ ಖಾತೆಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಖಾತೆಗಳು ನಮ್ಮ ನಾರಿ ಶಕ್ತಿಯದ್ದು. ಶೇ 67 ಖಾತೆಗಳನ್ನು ಗ್ರಾಮೀಣ ಮತ್ತು ಅರೆ ನಗರ ಪ್ರದೇಶಗಳಲ್ಲಿ ತೆರೆಯಲಾಗಿದೆ. ಆರ್ಥಿಕವಾಗಿ ಒಳಗೊಳ್ಳುವಿಕೆಯ ಉಪಲಬ್ಧತೆಯು ದೇಶದ ಎಲ್ಲಾ ಮೂಲೆಗಳನ್ನೂ ತಲುಪಲಿದೆ ಎಂದು ನಾವು ಖಾತ್ರಿಪಡಿಸುತ್ತೇವೆ’ ಎಂದಿದ್ದಾರೆ.

ಜನ್‌ಧನ್ ಬ್ಯಾಂಕ್ ಖಾತೆಗಳ ಸಂಖ್ಯೆ 50 ಕೋಟಿ ಗಡಿ ದಾಟಿದೆ. ಒಟ್ಟು ಖಾತೆಗಳಲ್ಲಿ ಶೇ 56 ಖಾತೆಗಳು ಮಹಿಳೆಯರದ್ದಾಗಿದೆ. ಈ ಖಾತೆಗಳಲ್ಲಿ ಇರಿಸಲಾಗಿರುವ ಒಟ್ಟು ಠೇವಣಿ ಮೊತ್ತವು ₹2.03 ಲಕ್ಷ ಕೋಟಿಗೂ ಹೆಚ್ಚು. 34 ಕೋಟಿ ರುಪೇ ಕಾರ್ಡ್‌ಗಳನ್ನು ಉಚಿತವಾಗಿ ನೀಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿತ್ತು.

‘ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ: ಸಕ್ರಿಯಗೊಳಿಸುವುದು ಹೇಗೆ?’ ವಿಚಾರ ಸಂಕಿರಣ

‘ಗ್ರಾಮೀಣ ಅಭಿವೃದ್ಧಿಗೆ ಅನುದಾನದ ಕೊರತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊಸ ಕಲ್ಪನೆ ಅಡಿ ಗ್ರಾಮೀಣಾಭಿವೃದ್ಧಿ ಮಾಡುವುದು ಅಗತ್ಯ’ ಎಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಅಕಾಡೆಮಿ ಆಫ್ ಗ್ರಾಸ್‌ರೂಟ್ಸ್ ಸ್ಟಡೀಸ್ ಅಂಡ್ ರಿಸರ್ಚ್ ಆಫ್ ಇಂಡಿಯಾವು ನಗರದಲ್ಲಿ ಶನಿವಾರ ಆಯೋಜಿಸಿದ್ದ ‘ಭಾರತದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ: ಸಕ್ರಿಯಗೊಳಿಸುವುದು ಹೇಗೆ’ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಪಂಚಾಯತ್‌ರಾಜ್ ವ್ಯವಸ್ಥೆ ಅಡಿ ಹಳ್ಳಿಗಳ ಅಭಿವೃದ್ಧಿಗೆ ನಿರೀಕ್ಷಿತ ಅನುದಾನ ದೊರೆಯುತ್ತಿಲ್ಲ. ನಗರ ಪ್ರದೇಶದಲ್ಲಿ ಒಂದು ಉಕ್ಕಿನ ಸೇತುವೆ ನಿರ್ಮಿಸಲು ಸಾವಿರಾರು ಕೋಟಿ ಅನುದಾನ ಕಲ್ಪಿಸಲಾಗುತ್ತಿದೆ. ಆ ಸೇತುವೆ ಕಾಮಗಾರಿ ಮುಕ್ತಾಯವಾಗುವ ವೇಳೆಗೆ ಅನುದಾನವು ದುಪ್ಪಟ್ಟು ಆಗಿರಲಿದೆ. ಅದೇ ಪಂಚಾಯತ್‌ರಾಜ್ ವ್ಯವಸ್ಥೆಗೆ ಅನುದಾನ ಸಿಗುತ್ತಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನೀಡುವ ಅರ್ಧದಷ್ಟು ಅನುದಾನವನ್ನೂ ಗ್ರಾಮೀಣ ಪ್ರದೇಶಕ್ಕೆ ಕೊಡುತ್ತಿಲ್ಲ’ ಎಂದು ಹೇಳಿದರು.

‘ಹಳ್ಳಿಗಳಲ್ಲಿ ಬರೀ ರಸ್ತೆ, ಚರಂಡಿ ನಿರ್ಮಿಸುವುದು ಅಲ್ಲ. ಹಳ್ಳಿಗಳನ್ನು ಸಶಕ್ತಗೊಳಿಸಬೇಕಿದೆ. ಶೇ 50ರಷ್ಟು ಗ್ರಾಮಗಳನ್ನು ಹೊಸ ಕಲ್ಪನೆ ಅಡಿ ಮರು ನಿರ್ಮಾಣ ಮಾಡುವುದು ಅಗತ್ಯ. ಗ್ರಾಮೀಣ ಪ್ರದೇಶದಲ್ಲಿ ಮನೆಗಳು ಕುಸಿಯುವ ಹಂತದಲ್ಲಿವೆ’ ಎಂದರು.

‘ಹಳ್ಳಿಗಳ ಜನರು ಹೈನುಗಾರಿಕೆಯಿಂದಲೂ ದೂರವಾಗುತ್ತಿದ್ದಾರೆ. ಜಾನುವಾರುಗಳಿಗೆ ಹಾಸ್ಟೆಲ್ ನಿರ್ಮಿಸುವ ಸ್ಥಿತಿ ಬಂದಿದೆ. ನೆಟ್‌ವರ್ಕ್ ವ್ಯವಸ್ಥೆ, ಸರ್ವಧರ್ಮ ಸ್ಮಶಾನ, ಹೈಟೆಕ್ ಶಾಲೆ ನಿರ್ಮಿಸಬೇಕಿದೆ. ಹಳ್ಳಿಗಳ ಅವಿಭಕ್ತ ಕುಟುಂಬಗಳ ಅದೆಷ್ಟೋ ಮನೆಗಳಲ್ಲಿ ಮಲಗುವ ಕೋಣೆಗಳು ಇರುವುದಿಲ್ಲ. ಅವುಗಳ ಮಹತ್ವವೂ ತಿಳಿದಿಲ್ಲ’ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಬಿ.ಕೆ.ಚಂದ್ರಶೇಖರ್ ಮಾತನಾಡಿ, ‘ಪಂಚಾಯತ್‌ರಾಜ್ ವ್ಯವಸ್ಥೆಯು ಕ್ರಮೇಣ ಸಡಿಲಗೊಳ್ಳುತ್ತಿದೆ. ಈ ವ್ಯವಸ್ಥೆ ಬಲಪಡಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಬದ್ಧತೆ ತೋರಬೇಕು’ ಎಂದರು.

‘ಕ್ಷೇತ್ರ ವಿಂಗಡನೆಯ ನೆಪಹೇಳಿ ಹಿಂದಿನ ಸರ್ಕಾರವು ಜಿಲ್ಲಾ ಪಂಚಾಯಿತಿಗೆ ಚುನಾವಣೆಯನ್ನೇ ನಡೆಸಲಿಲ್ಲ. ಈಗಿನ ಸರ್ಕಾರವು ಚುನಾವಣೆಗೆ ಆಸಕ್ತಿ ತೋರುತ್ತಿದೆ. ಮೂರು ತಿಂಗಳಲ್ಲಿ ಚುನಾವಣೆ ನಡೆಯುವ ಸಾಧ್ಯತೆಯಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಒಂದು ಕಾಲದಲ್ಲಿ ಪಶ್ಚಿಮ ಬಂಗಾಳದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಅತ್ಯಂತ ಪ್ರಬಲವಾಗಿತ್ತು. 1983ರಲ್ಲಿ ನಾನು ಅಲ್ಲಿಗೆ ತೆರಳಿ ಅಧ್ಯಯನ ನಡೆಸಿದ್ದೆ. ಆದರೆ, ಅಲ್ಲಿಯೂ ವ್ಯವಸ್ಥೆ ಸಡಿಲಗೊಳ್ಳುತ್ತಿದೆ’ ಎಂದರು.

ಅಕಾಡೆಮಿ ಆಫ್ ಗ್ರಾಸ್‌ರೂಟ್ ಸ್ಟಡೀಸ್ ಅಂಡ್ ರಿಸರ್ಚ್ ಆಫ್ ಇಂಡಿಯಾ ಸ್ಥಾಪಕ ನಿರ್ದೇಶ ಡಿ.ಸುಂದರ್ ರಾಮ್ ಇದ್ದರು.



ನಗರದಲ್ಲಿ ಶನಿವಾರ ನಡೆದ ‘ಭಾರತದಲ್ಲಿ ಪಂಚಾಯತ್ ರಾಜ್: ಸಕ್ರಿಯಗೊಳಿಸುವುದು ಹೇಗೆ?’ ವಿಚಾರ ಸಂಕಿರಣದಲ್ಲಿ (ಎಡದಿಂದ) ಎಜಿಆರ್‌ಎಎಸ್‌ಆರ್‌ಐ ಸ್ಥಾಪಕ ನಿರ್ದೇಶಕ ಡಿ. ಸುಂದರ್ ರಾಮ್, ಎ. ನಾರಾಯಣಸ್ವಾಮಿ, ಸಚಿವ ಎಚ್‌.ಕೆ.ಪಾಟೀಲ್, ಕಾಂಗ್ರೆಸ್ ಮುಖಂಡ ಬಿ.ಕೆ.ಚಂದ್ರಶೇಖರ್ ಇದ್ದರು — ಪ್ರಜಾವಾಣಿ ಚಿತ್ರ

> **ರಾಜ್ಯದಲ್ಲಿ 18 ಸಾವಿರ ಶುದ್ಧ ನೀರಿನ ಘಟಕ ನಿರ್ಮಿಸಲಾಗಿದೆ. ಇವುಗಳು ನಿರ್ಮಾಣವಾದ ಮೇಲೆ ನೀರಿನಿಂದ ಬರುವ ಶೇ 80ರಷ್ಟು ಕಾಯಿಲೆಗಳು ಕಡಿಮೆಯಾಗಿವೆ**
> **ಎಚ್.ಕೆ.ಪಾಟೀಲ,** ಸಚಿವ

> **ಪಂಚಾಯತ್‌ರಾಜ್ ವ್ಯವಸ್ಥೆ ಉಳಿಸಲು ಜನಾಂದೋಲನವೇ ರೂಪುಗೊಳ್ಳಬೇಕಾದ ಅಗತ್ಯವಿದೆ**
> **ಬಿ.ಕೆ.ಚಂದ್ರಶೇಖರ್**
> ಕಾಂಗ್ರೆಸ್ ಮುಖಂಡ



ಕಾರ್ಯಕ್ರಮದಲ್ಲಿ ರಮೇಶ್ ಅರವಿಂದ್ ಹಾಗೂ ಮಹೇಶ ಜೋಶಿ ಚರ್ಚಿಸಿದರು. ಡಾ.ಸಿ.ಎನ್. ಮಂಜುನಾಥ್ ಇದ್ದಾರೆ —ಪ್ರಜಾವಾಣಿ ಚಿತ್ರ

‘ಕಲಾವಿದನಾಗಿದ್ದು ನನ್ನ ಅದೃಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಲಾವಿದನಾಗಿದ್ದು ನನ್ನ ಅದೃಷ್ಟ. ಚಿತ್ರರಂಗದ ಬದಲು ಬೇರೆ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದರೆ ನಾಡಿನ ಜನರ ಪ್ರೀತಿ ಗಳಿಸಲು ಸಾಧ್ಯವಾಗುತ್ತಿರಲಿಲ್ಲ’ ಎಂದು ಚಲನಚಿತ್ರ ನಟ ರಮೇಶ್ ಅರವಿಂದ್ ಅವರ ಮನದಾಳ ಹಂಚಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಶನಿವಾರ ಆಯೋಜಿದ ‘ಕನ್ನಡದ ಧ್ರುವತಾರೆ’ ಕಾರ್ಯಕ್ರಮದಲ್ಲಿ ಮೊದಲ ಅತಿಥಿಯಾಗಿ ಭಾಗವಹಿಸಿ, ತಮ್ಮ ಜೀವನಾನುಭವನ್ನು ವಿವರಿಸಿದರು.

‘ಪೌರಾಣಿಕ, ಐತಿಹಾಸಿಕ ಚಿತ್ರಗಳಲ್ಲಿ ಅವಕಾಶಕ್ಕಾಗಿ ಕಾಯುತ್ತಿದ್ದೇನೆ. ‘ಮಹಾ ಶರಣ ಹರಳಯ್ಯ’ ಚಿತ್ರದಲ್ಲಿ ಬಸವಣ್ಣನ ಮಾತ್ರ ಮಾಡುವ ಅವಕಾಶ ನನಗೆ ದೊರೆತ್ತಿತ್ತು. ಇಂತಹ ಇನ್ನಷ್ಟು ಪಾತ್ರಗಳಿಗೆ ಎದುರು ನೋಡುತ್ತಿದ್ದೇನೆ’ ಎಂದು ತಿಳಿಸಿ, ಬಾಲ್ಯದಲ್ಲಿಯೇ ಕಲಾವಿದನಾಗಲು ತಮಗೆ ಸಿಕ್ಕ ಪ್ರೇರಣೆಗಳನ್ನು ನೆನಪಿಸಿಕೊಂಡರು.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ ಅವರು, ‘ಸಾಧನೆ ಇಲ್ಲದೇ ಸತ್ತರೆ ಅಂತಹ ಸಾವಿಗೆ ಅರ್ಥವಿರುವುದಿಲ್ಲ. ಏನೂ ಇಲ್ಲದೇ ಸತ್ತರೆ ವ್ಯವಸ್ಥೆಗೆ ಅರ್ಥವಿರುವುದಿಲ್ಲ. ಆದ್ದರಿಂದ ಸಾಧನೆ ಮಾಡುವವರು ತಾಳ್ಮೆಯಿಂದ ನಿರಂತರ ಪ್ರಯತ್ನದಲ್ಲಿ ಇದ್ದಾಗ ಸಾರ್ಥಕ ಸಾಧಕರಾಗಲು ಸಾಧ್ಯವಾಗುತ್ತದೆ. ತಕ್ಷಣ ಸಾಧನೆಯ ಉತ್ತುಂಗಕ್ಕೆ ಏರಬೇಕು ಎನ್ನುವವರು ಅಷ್ಟೇ ಬೇಗನೆ ಕೆಳಗೆ ಬಿದ್ದು ಬಿಡುತ್ತಾರೆ. ನಿರಂತರ ಪ್ರಯತ್ನ ಮಾಡುವವರು ಮಾತ್ರ ನಿಜವಾದ ಸಾಧಕರಾಗುತ್ತಾರೆ’ ಎಂದು ಹೇಳಿದರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, ‘ಪಾರಂಪರಿಕ ಬೇರಿನ ಆಳದೊಂದಿಗೆ ಹೊಸತನದ ಚಿಗುರನ್ನು ಹುಟ್ಟಿಸುವ ಕನಸು ಪರಿಷತ್ತಿನದ್ದಾಗಿದೆ. ಕನ್ನಡದ ಧ್ರುವತಾರೆ ಕಾರ್ಯಕ್ರಮದ ಮೂಲಕ ಕನ್ನಡ ನಾಡಿನ ವಿವಿಧ ಕ್ಷೇತ್ರದಲ್ಲಿ ಅಜ್ಞಾತವಾಗಿ ಅಗಣಿತ ಸೇವೆ ಸಲ್ಲಿಸುತ್ತಿರುವವರನ್ನು ಗುರುತಿಸಲಾಗುತ್ತದೆ’ ಎಂದು ತಿಳಿಸಿದರು.

ಅಮೆರಿಕದಲ್ಲಿ ದಾವಣಗೆರೆ ದಂಪತಿ, ಮಗ ಸಾವು

ಪ್ರಜಾವಾಣಿ ವಾರ್ತೆ



ಯೋಗೇಶ್, ಪ್ರತಿಭಾ ಹಾಗೂ ಯಶ್ ಹೊನ್ನಾಳ್

ದಾವಣಗೆರೆ: ಅಮೆರಿಕದ ಮೇರಿಲ್ಯಾಂಡ್‌ನ ಬಾಲ್ಟಿಮೋರ್‌ನಲ್ಲಿ ನೆಲೆಸಿದ್ದ ದಾವಣಗೆರೆಯ ದಂಪತಿ ಹಾಗೂ ಅವರ ಆರು ವರ್ಷದ ಮಗ ಶುಕ್ರವಾರ ಮೃತಪಟ್ಟಿದ್ದಾರೆ.

ಎಚ್.ಎನ್.ಯೋಗೇಶ್ (37), ಪತ್ನಿ ವೈ.ಎ.ಪ್ರತಿಭಾ (35) ಹಾಗೂ ಪುತ್ರ ಯಶ್ ಹೊನ್ನಾಳ್ ಮೃತರು. ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದ ದಂಪತಿ ಕಳೆದ 9 ವರ್ಷಗಳಿಂದ ಬಾಲ್ಟಿಮೋರ್‌ನಲ್ಲಿ ನೆಲೆಸಿದ್ದರು.

‘ಬಾಲ್ಟಿಮೋರ್‌ನ ಪೊಲೀಸರು ಶನಿವಾರ ಬೆಳಿಗ್ಗೆ ಕರೆ ಮಾಡಿ ಮೂವರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಮಾಹಿತಿ ನೀಡಿದ್ದಾರೆ. ಆದರೆ, ನಿಜವಾಗಿಯೂ ಅಲ್ಲಿ ಏನು ನಡೆದಿದೆ ಎಂಬುದು ಗೊತ್ತಾಗಿಲ್ಲ’ ಎಂದು ಸಂಬಂಧಿಕರಾದ ರಾಮನಗೌಡ ಹಾಗೂ ಸಂತೋಷ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ಯೋಗೇಶ್ ಅವರ ತಂದೆ ಹಾಗೂ ತಾಯಿ ಜಗಳೂರು ತಾಲ್ಲೂಕಿನ ಹಾಲೇಕಲ್ ಗ್ರಾಮದವರು. ಕಳೆದ 25 ವರ್ಷಗಳಿಂದ ಅವರು ದಾವಣಗೆರೆಯ ವಿದ್ಯಾನಗರದಲ್ಲಿ ವಾಸವಿದ್ದಾರೆ. ಕೆಲ ವರ್ಷಗಳ ಹಿಂದೆ ಯೋಗೇಶ್ ಅವರ ತಂದೆ ನಿಧನರಾಗಿದ್ದರು’ ಎಂದು ಮಾಹಿತಿ ನೀಡಿದ್ದಾರೆ.

ಮೃತದೇಹ ತರಲು ಮನವಿ: ವಿಷಯ ತಿಳಿದ ಕೂಡಲೇ ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿದ ಯೋಗೇಶ್ ಅವರ ಕುಟುಂಬದ ಸದಸ್ಯರು, ಮೃತದೇಹಗಳನ್ನು ತವರಿಗೆ ತರಿಸಿಕೊಡುವಂತೆ ಮನವಿ ಮಾಡಿದ್ದಾರೆ.

‘ಮೂವರೂ ‘ಅಸ್ವಾಭಾವಿಕ’ ವಾಗಿ ಮೃತಪಟ್ಟಿರುವ ಬಗ್ಗೆ ಮಾಹಿತಿ ಲಭಿಸಿದೆ. ಕುಟುಂಬದವರ ಕೋರಿಕೆಯಂತೆ ಮೃತದೇಹಗಳನ್ನು ತರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ತಿಳಿಸಿದ್ದಾರೆ.

‘ಅಮೆರಿಕದ ರಾಯಭಾರ ಕಚೇರಿಗೆ ಇ–ಮೇಲ್ ರವಾನಿಸಿದ್ದೇವೆ. ವಿದೇಶಾಂಗ ಸಚಿವಾಲಯಕ್ಕೂ ಮನವಿ ಮಾಡಿದ್ದೇವೆ. ಮೃತದೇಹಗಳನ್ನು ತರಿಸುವ ಪ್ರಕ್ರಿಯೆ ನಡೆಯುತ್ತಿದೆ’ ಎಂದು ಹೇಳಿದ್ದಾರೆ.

ಮುಂದಿನ ತಿಂಗಳು ಪ್ರಕರಣದ ಅಂತಿಮ ವಿಚಾರಣೆ

ಔಷಧ ಕಂಪನಿಗೆ ₹11.68 ಕೋಟಿ ದಂಡ: ಕೆಎಸ್‌ಪಿಸಿಬಿ ಶಿಫಾರಸು

• ಮಂಜುನಾಥ ಹೆಬ್ಬಾರ್

ನವದೆಹಲಿ: ಪರಿಸರ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕೆ ದೊಡ್ಡಬಳ್ಳಾಪುರ ಕೆಐಎಡಿಬಿ ಕೈಗಾರಿಕಾ ಪ್ರದೇಶದಲ್ಲಿರುವ ಔಷಧ ಉತ್ಪಾದನಾ ಕಂಪನಿ ‘ರೆಸೋನೆನ್ಸ್ ಲ್ಯಾಬೊರೇಟರಿ’ಗೆ ₹11.68 ಕೋಟಿ ಪರಿಸರ ದಂಡ ವಿಧಿಸಬಹುದು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಶಿಫಾರಸು ಮಾಡಿದೆ.

‘ಈ ಕಂಪನಿಯು ಪರಿಸರ ಅನುಮತಿ ಪಡೆಯದೇ ದೀರ್ಘಕಾಲದಿಂದ ಬೃಹತ್ ಔಷಧ ಉತ್ಪಾದನಾ ಘಟಕ ನಡೆಸುತ್ತಿದೆ. ಉಲ್ಲಂಘನೆಯ ವಿಭಾಗದ ಅಡಿಯಲ್ಲಿ 2020ರ ಆಗಸ್ಟ್‌ನಲ್ಲಿ ಕರ್ನಾಟಕ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರದಿಂದ ಪರಿಸರ ಅನುಮತಿ ಪಡೆದಿದೆ. ಹಿಂದಿನ ಉಲ್ಲಂಘನೆಗಳಿಗೆ ಪರಿಹಾರವನ್ನು ಮೌಲ್ಯಮಾಪನ ಮಾಡಿ ದಂಡ ಪಾವತಿಸದ ಹೊರತು ಪರಿಸರ ಅನುಮತಿ ನೀಡುವಂತಿಲ್ಲ. ನಿಯಮ ಬಾಹಿರವಾಗಿ ಪರಿಸರ ಅನುಮತಿ ನೀಡಲಾಗಿದೆ. ಜತೆಗೆ, ಪ್ರಾಧಿಕಾರಕ್ಕೆ ಈ ಅಧಿಕಾರವೇ ಇಲ್ಲ’ ಎಂದು ಆರೋಪಿಸಿ ಎಸ್.ಕೆ. ವಿಜಯಕುಮಾರ್ ಎಂಬುವರು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ (ಎನ್‌ಜಿಟಿ) ದಕ್ಷಿಣ ವಲಯ ಪೀಠದ ಮೆಟ್ಟಿಲೇರಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಪೀಠವು ಈ ವರ್ಷದ ಫೆ.1ರಂದು ಆದೇಶ ಹೊರಡಿಸಿ, ‘ಪ್ರಾಧಿಕಾರವು ಕ್ಯೋಟೋ ಪ್ರೋಟೋಕಾಲ್ ಪ್ರಕಾರ, ಪರಿಸರದ ಮೇಲಾಗಿರುವ ಹಾನಿಯ ಲೆಕ್ಕಾಚಾರ ಮಾಡಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳನ್ನು ಅನುಸರಿಸಿಲ್ಲ. ಕಂಪನಿಯ ಮನವಿಯ ಮೇರೆಗೆ ಪ್ರಾಧಿಕಾರವು ಈ ರೀತಿ ಮೌಲ್ಯಮಾಪನ ಮಾಡಿತ್ತು. ಇದು ಸರಿಯಲ್ಲ’ ಎಂದು ಹೇಳಿತ್ತು.

ಕೇಂದ್ರ ಅಥವಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳ ಪ್ರಕಾರ ಪರಿಸರ ಹಾನಿಯ ಮೌಲ್ಯಮಾಪನ ಮಾಡಿ ವರದಿ ಸಲ್ಲಿಸುವಂತೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪೀಠ ನಿರ್ದೇಶನ ನೀಡಿತ್ತು. ಮಂಡಳಿಯ ಪರಿಸರ ಅಧಿಕಾರಿ ರಾಜಶೇಖರ ಎಸ್. ಅವರು ಪೀಠಕ್ಕೆ ಶುಕ್ರವಾರ ವರದಿ ಸಲ್ಲಿಸಿದ್ದು, ಇದನ್ನು ಪರಿಗಣನೆಗೆ ತೆಗೆದುಕೊಂಡು ಮುಂದಿನ ಆದೇಶ ಹೊರಡಿಸಬೇಕು ಎಂದು ಕೋರಿದ್ದಾರೆ. ಪ್ರಕರಣದ ಅಂತಿಮ ವಿಚಾರಣೆಯನ್ನು ಸೆಪ್ಟೆಂಬರ್ 25ಕ್ಕೆ ಮುಂದೂಡಲಾಗಿದೆ.

ಕ್ಯೋಟೋ ಪ್ರೋಟೋಕಾಲ್ ನಿಯಮ ಅನುಸರಿಸಿ ಪರಿಸರಕ್ಕೆ ಆಗಿರುವ ಹಾನಿಯ ಲೆಕ್ಕಾಚಾರ ನಡೆಸಲಾಗಿದೆ. ಈ ಪ್ರಕಾರ, ದಂಡವು ₹7.63 ಲಕ್ಷ ಆಗಲಿದೆ ಎಂದು ಕಂಪನಿಯು ಪ್ರಾಧಿಕಾರಕ್ಕೆ ವರದಿ ಸಲ್ಲಿಸಿದೆ. ಇನ್ನೊಂದೆಡೆ, ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಗಳ ಪ್ರಕಾರ, ಪರಿಸರ ಉಲ್ಲಂಘನೆಯ ಕಾರಣದಿಂದ ಪಡೆದ ಆರ್ಥಿಕ ಲಾಭಕ್ಕೆ ಸಂಬಂಧಿಸಿದಂತೆ/ಜಾಹೀರಾತುಗಳಿಗೆ ಸಂಬಂಧಿಸಿದಂತೆ ಹಾನಿಗೊಳಗಾದ ಪರಿಸರವನ್ನು ಲೆಕ್ಕಾಚಾರ ಮಾಡಲು ಅಥವಾ ನಿರ್ಣಯಿಸಲು ಯಾವುದೇ ಸೂತ್ರವಿಲ್ಲ ಎಂದೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮಾಲಿನ್ಯ ನಿಯಂತ್ರಣ ಮಂಡಳಿಯ ವರ್ಗೀಕರಣದ ಪ್ರಕಾರ, ಇದು ಕೆಂಪು ವರ್ಗದ ಕಂಪನಿ. ಕಂಪನಿ 2012ರ ಫೆಬ್ರುವರಿ 8ರಿಂದ ಕಾರ್ಯಾಚರಣೆ ನಡೆಸುತ್ತಿದೆ. ಪರಿಸರ ಅನುಮತಿ ಪಡೆದಿದ್ದು 2020ರ ಆಗಸ್ಟ್ 24ರಂದು. ಪರಿಸರ ಅನುಮತಿ ಇಲ್ಲದೆ 3,117 ದಿನ ಕಾರ್ಯಾಚರಣೆ ನಡೆಸಲಾಗಿದೆ. ಈ ಕಂಪನಿಯ ಯೋಜನಾ ವೆಚ್ಚ ₹10 ಕೋಟಿಯಿಂದ ₹25 ಕೋಟಿ ನಡುವೆ ಇದೆ. ಹಾಗಾಗಿ, ಇದೊಂದು ದೊಡ್ಡ ಕಂಪನಿ. 50 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶದಲ್ಲಿ ಈ ಕಂಪನಿ ಇದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿ ಪ್ರಕಾರ, ಪರಿಸರ ಪರಿಹಾರ ₹11.68 ಕೋಟಿ ಆಗುತ್ತದೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

ಮುಖ್ಯಾಂಶಗಳು

- ಪರಿಸರ ಅನುಮತಿ ಪಡೆಯದೆ ಕಂಪನಿ ಕಾರ್ಯನಿರ್ವಹಣೆ
- ಎನ್‌ಜಿಟಿ ಮೆಟ್ಟಿಲೇರಿದ್ದ ಸ್ಥಳೀಯ ವ್ಯಕ್ತಿ

ಪುಣೆ ರೇಸ್

ಮಿಸ್ಟಿ ಗೆಲ್ಲುವ ನಿರೀಕ್ಷೆ

ಎಫ್.ಡಿ.ವಾಡಿಯಾ ಟ್ರೋಫಿ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿಸ್ಟಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅರ್ಕಾನ 4, ಸೆಲ್ಲಿನಿ 3
2ನೇ ರೇಸ್: ಪ್ರಿನ್ಸ್ ಇಗೋರ್ 8, ವೊಲೇರ್ 5, ಸೆಸ್ಟಲಾಮೋರ್ 2
3ನೇ ರೇಸ್: ರಷ್ 6, ಇಂಪ್ಯೂನಿಟಿ 8, ಸ್ಟಾರ್ ಗ್ಯಾಲರಿ 1
4ನೇ ರೇಸ್: ರಾಸ್ಪುಟಿನ್ 2, ಸೂಪರ್ ನ್ಯಾಚುರಲ್ 1, ಟ್ರೂಲಿ ಎಪಿಕ್ 3
5ನೇ ರೇಸ್: ಮಿಸ್ಟಿ 3, ಟೈಮ್ ಅಂಡ್ ಟೈಡ್ 1, ಬಿಲೀವ್ 2
6ನೇ ರೇಸ್: ಐರಿಷ್ ಮೋರ್ 10, ಪಿಂಕ್ ಜಾಸ್ಮೈನ್ 2, ಪ್ಯೂರ್ 4
7ನೇ ರೇಸ್: ಜಿಪ್ ಅಲಾಂಗ್ 8, ಅಡಮಾಸ್ 3, ಮ್ಯಾಗ್ನಾನಿಮಸ್ 2

ಉತ್ತಮ ಬೆಟ್: ರಷ್

ಜಾಕ್‌ಪಾಟ್ **3,4,5,6,7** ಟ್ರಿಬಲ್ **4,5,6**

ತುಮಕೂರು ತಾಲ್ಲೂಕಿನಲ್ಲಿಯೇ ಹೆಚ್ಚು ಸಾವು

ಮೂರು ತಿಂಗಳಲ್ಲಿ 87 ನವಜಾತ ಶಿಶು ಸಾವು

• ಮೈಲಾರಿ ಲಿಂಗಪ್ಪ

ತುಮಕೂರು: ಏಪ್ರಿಲ್‌ನಿಂದ ಜೂನ್‌ವರೆಗೆ ಜಿಲ್ಲೆಯಲ್ಲಿ ಒಟ್ಟು 87 ನವಜಾತ ಶಿಶುಗಳು ಮೃತಪಟ್ಟಿವೆ. ಇದೇ ಅವಧಿಯಲ್ಲಿ ತುಮಕೂರು ತಾಲ್ಲೂಕುವೊಂದರಲ್ಲೇ 53 ಶಿಶುಗಳ ಮೃತಪಟ್ಟಿವೆ. ಮಧುಗಿರಿ ಮತ್ತು ಪಾವಗಡ ಈ ಎರಡೂ ತಾಲ್ಲೂಕು ಹೊರತುಪಡಿಸಿದರೆ ಜಿಲ್ಲೆಯ ಉಳಿದ ಕಡೆಗಳಲ್ಲಿ ಮರಣ ಪ್ರಮಾಣ ನಿಯಂತ್ರಣಕ್ಕೆ ಬಂದಿಲ್ಲ.

ಇದೇ ಅವಧಿಯಲ್ಲಿ ಜಿಲ್ಲೆಯಾದ್ಯಂತ ಐವರು ತಾಯಂದಿರು ಸಾವನ್ನಪ್ಪಿದ್ದಾರೆ. ಸಿಸೇರಿಯನ್ ಹೆರಿಗೆ ಸಹ ಜಾಸ್ತಿಯಾಗುತ್ತಿದ್ದು, ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆ ಪ್ರಮಾಣ ಹೆಚ್ಚಿದೆ.

> **ಪ್ರತಿ ತಿಂಗಳು ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಗರ್ಭಿಣಿಯರ ಆರೋಗ್ಯ ಪರೀಕ್ಷಿಸಲಾಗುತ್ತಿದೆ. ಹಸುಳೆಗಳ ಮರಣ ತಡೆಯಲು ಹಲವು ಕ್ರಮ ಕೈಗೊಳ್ಳಲಾಗುತ್ತಿದೆ**
> **ಡಾ.ಮೋಹನ್,** ಜಿಲ್ಲಾ ಆರ್‌ಸಿಎಚ್‌ಒ ಅಧಿಕಾರಿ, ತುಮಕೂರು

ಇತ್ತೀಚೆಗೆ ಅವಧಿಪೂರ್ವದಲ್ಲಿಯೇ ಹೆರಿಗೆ ಆಗುತ್ತಿರುವುದು ಹೆಚ್ಚಾಗಿದೆ. ಇದರಿಂದ ಮಕ್ಕಳ ಮರಣ ಪ್ರಮಾಣವೂ ಅಧಿವಾಗುತ್ತಿದೆ. ಜಿಲ್ಲೆಯಲ್ಲಿ ಹೆಚ್ಚಿನ ಸಾವುಗಳು ಇದೇ ಕಾರಣಕ್ಕೆ ಸಂಭವಿಸಿವೆ.

ಕಡಿಮೆ ತೂಕ ಮತ್ತು ಹುಟ್ಟಿದ ತಕ್ಷಣ ಉಸಿರಾಟದ ತೊಂದರೆ ಕಾಣಿಸಿಕೊಳ್ಳುವುದರಿಂದ ಹೆಚ್ಚಿನ ನವಜಾತ ಶಿಶುಗಳು ಸಾವನ್ನಪ್ಪುತ್ತಿವೆ. ಮಗುವಿನಲ್ಲಿ ಕಾಣಿಸಿಕೊಳ್ಳುವ ಹೃದಯ ರೋಗ ಮತ್ತು ಕಿಡ್ನಿ ಸಮಸ್ಯೆ, ಹುಟ್ಟಿನಿಂದಲೇ ಬರುವ ಕಾಯಿಲೆಗಳಿಂದ ಸಾವು ಜಾಸ್ತಿಯಾಗಿವೆ ಎಂದು ಜಿಲ್ಲಾ ಆಸ್ಪತ್ರೆ ಮೂಲಗಳು ತಿಳಿಸಿವೆ.

ಗರ್ಭಾವಸ್ಥೆ ಸಮಯದಲ್ಲಿ ಗರ್ಭಿಣಿಯರಿಗೆ ಪೌಷ್ಟಿಕ ಆಹಾರ ಕೊರತೆ ಎದ್ದು ಕಾಣುತ್ತದೆ. ಗರ್ಭಿಣಿಯರು ಪೌಷ್ಟಿಕ ಆಹಾರ ಸೇವನೆ ಮಾಡಿದರೆ ಮುಂದೆ ಜನಿಸುವ ಮಕ್ಕಳಿಗೆ ಹೆಚ್ಚಿನ ಸಮಸ್ಯೆಯಾಗುವುದಿಲ್ಲ ಎನ್ನುವುದು ವೈದ್ಯರ ಸಮಜಾಯಿಷಿ.


ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂಗನವಾಡಿಗಳ ಮುಖಾಂತರ ಪೌಷ್ಟಿಕ ಆಹಾರ ಪೂರೈಸಲಾಗುತ್ತಿದೆ. ಆದರೆ, ಅದು ಎಲ್ಲ ಗರ್ಭಿಣಿಯರನ್ನೂ ತಲುಪುತ್ತಿಲ್ಲ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ವ್ಯಾಪಕವಾಗಿದೆ.

ಅಂಕಿ ಅಂಶ

7,406
ಏಪ್ರಿಲ್–ಜೂನ್ ಅವಧಿಯಲ್ಲಿ ಜಿಲ್ಲೆಯಲ್ಲಿ ಆದ ಒಟ್ಟು ಹೆರಿಗೆ

4,678
ಸಿಸೇರಿಯನ್ ಹೆರಿಗೆ

63%
ಸಿಸೇರಿಯನ್ ಹೆರಿಗೆ ಪ್ರಮಾಣ



ಬಾಲಕಿ ಸಾವು: ಕಲುಷಿತ ನೀರು ಸೇವನೆ ಶಂಕೆ

ಗೌರಿಬಿದನೂರು: ತಾಲ್ಲೂಕಿನ ಕಲ್ಲಿನಾಯಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕಹೊಸಹಳ್ಳಿ ಗ್ರಾಮದ ಭಾವನಾ (10) ಶನಿವಾರ ಮೃತಪಟ್ಟಿದ್ದು, ಕಲುಷಿತ ನೀರು ಸೇವನೆ ಸಾವಿಗೆ ಕಾರಣ ಎಂದು ಶಂಕಿಸಲಾಗಿದೆ.

ಒಂದು ವಾರದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಬಾಲಕಿಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಬಾಲಕಿ ಕೊನೆಯುಸಿರೆಳೆದಿದ್ದಾಳೆ.

‘ಬಾಲಕಿಯ ಸಾವಿಗೆ ನೈಜ ಕಾರಣ ದೃಢಪಟ್ಟಿಲ್ಲ. ಪ್ರಯೋಗಾಲಯದ ವರದಿ ಬಂದ ಬಳಿಕ ನಿಖರ ಕಾರಣ ತಿಳಿಯಬಹುದು ಎಂದು ತಹಶೀಲ್ದಾರ್ ಮಹೇಶ್ ಎಸ್. ಪತ್ರಿ ತಿಳಿಸಿದ್ದಾರೆ.

‘ನಮ್ಮ ಮೆಟ್ರೊ’: ಕಾಮನ್ ಮೊಬಿಲಿಟಿ ಕಾರ್ಡ್ ಮಾರಾಟ

ಬೆಂಗಳೂರು: ‘ನಮ್ಮ ಮೆಟ್ರೊ’ನ ಎಲ್ಲ ನಿಲ್ದಾಣಗಳಲ್ಲಿ ರುಪೇ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್ (ಎನ್‌ಸಿಎಂಸಿ) ಆಗಸ್ಟ್ 21 ರಿಂದ ಪ್ರಯಾಣಿಕರಿಗೆ ಲಭ್ಯವಿರುತ್ತವೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಪ್ರಯಾಣಿಕರು ತಮ್ಮ ವಿವರಗಳನ್ನು ವೆಬ್‌ಸೈಟ್: ‘NAMMAMETRO.AGSINDIA.COM’ ಅಥವಾ ‘BMRCL RBL bank NCMC’ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಸ್ವಯಂ ನೋಂದಣಿ ಮಾಡಿಕೊಂಡು, ನೋಂದಣಿ ಸಂಖ್ಯೆ ಅಥವಾ ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ಟಿಕೆಟ್ ಕೌಂಟರ್ ನಿರ್ವಾಹಕರಿಗೆ ತಿಳಿಸಬೇಕು. ಕಾರ್ಡ್‌ನ ಮಾರಾಟ ಬೆಲೆ ₹ 50 ಇರಲಿದೆ. ಸ್ಮಾರ್ಟ್ ಕಾರ್ಡ್‌ಗಳಲ್ಲಿ ಲಭ್ಯವಿರುವ ಶೇ 5ರಷ್ಟು ರಿಯಾಯಿತಿ ಎನ್‌ಸಿಎಂಸಿ ಕಾರ್ಡ್‌ಗಳಿಗೂ ಅನ್ವಯಿಸುತ್ತದೆ. ಈ ಕಾರ್ಡ್ ಎಲ್ಲ ಆರ್‌ಬಿಎಲ್ ಬ್ಯಾಂಕ್ ಶಾಖೆಗಳಲ್ಲೂ ಲಭ್ಯ ಇರುತ್ತದೆ ಎಂದು ತಿಳಿಸಿದೆ.

ಪ್ರಸ್ತುತ ಬಳಕೆಯಲ್ಲಿ ಕಾಂಟ್ಯಾಕ್ಟ್‌ಲೆಸ್ ಸ್ಮಾರ್ಟ್ ಕಾರ್ಡ್‌ಗಳನ್ನು (ಸಿಎಸ್‌ಸಿ) ನಮ್ಮ ಮೆಟ್ರೊ ಪ್ರಯಾಣದಲ್ಲಿ ಮಾತ್ರ ಬಳಸಬಹುದಾಗಿದೆ. ‘ಒಂದು ದೇಶ ಒಂದು ಕಾರ್ಡ್’ ಯೋಜನೆಯಂತೆ ಈ ಕಾರ್ಡ್ ಪರಿಚಯಿಸಲಾಗುತ್ತಿದೆ. ಈ ಕಾರ್ಡ್‌ಗಳನ್ನು ದೇಶದ ಎಲ್ಲ ಸಾರಿಗೆ ವ್ಯವಸ್ಥೆ, ರಿಟೇಲ್ ಅಂಗಡಿ, ಪೆಟ್ರೋಲ್ ಬಂಕ್, ಶಾಪಿಂಗ್‌ಗಳಲ್ಲಿ ಬಳಸಬಹುದಾಗಿದೆ.

ಪ್ರಯಾಣಕ್ಕೆ ಹಾಗೂ ಶಾಪಿಂಗ್‌ಗೆ ಬೇಕಾಗಿರುವ ವಿವಿಧ ಕಾರ್ಡ್‌ಗಳ ಅಗತ್ಯಗಳನ್ನು ಕಡಿಮೆ ಮಾಡಲು ಸಿಎಸ್‌ಸಿ ಕಾರ್ಡ್‌ಗಳನ್ನು ಹಂತ ಹಂತವಾಗಿ ತೆಗೆದು ಹಾಕಲಾಗುವುದು. ರುಪೇ ನ್ಯಾಷನಲ್ ಕಾಮನ್ ಮೊಬಿಲಿಟಿ ಕಾರ್ಡ್ ಮೆಟ್ರೊ ನಿಲ್ದಾಣಗಳಲ್ಲಿ ಕಾರ್ಯಾಚರಣೆ ಸಮಯದಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ. ಸಿಎಸ್‌ಸಿಗಳು ಬೆಳಿಗ್ಗೆ 8ರಿಂದ ಬೆಳಿಗ್ಗೆ 11 ಹಾಗೂ ಸಂಜೆ 5ರಿಂದ ರಾತ್ರಿ 8 ರವರೆಗೆ ಮಾತ್ರ ಮಾರಾಟಕ್ಕೆ ಲಭ್ಯವಿರುತ್ತವೆ ಎಂದು ಅಧಿಕಾರಿಗಳು ಹೇಳಿದ್ದಾರೆ.



‘ನಮ್ಮ ಮೆಟ್ರೊ’ದ ಹಂತ 2, 2‘ಎ’, 2‘ಬಿ’ ಯೋಜನೆಗಳಿಗೆ 318 ಕೋಚ್‌ಗಳ ಪೂರೈಕೆಗೆ ಬಿಇಎಂಎಲ್‌ನೊಂದಿಗೆ ಬಿಎಂಆರ್‌ಸಿಎಲ್ ಶನಿವಾರ ಒಪ್ಪಂದದ ಪತ್ರವನ್ನು ವಿನಿಯಮ ಮಾಡಿಕೊಂಡಿತು. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ಅಂಜುಂ ಪರ್ವೇಜ್ ಹಾಗೂ ಬಿಇಎಂಎಲ್‌ನ ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್ ಇದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TEACHERS B.Sc B.Ed to Teach Maths, Science, English Medium. Contact: 080-23350778, 9448074071. Manjunatha Vidyalaya, Magadi Road, Bangalore- 560023.

THE NATIONAL EDUCATION SOCIETY OF KARNATAKA (R)
BASAVANAGUDI, Bengaluru - 560 004

RECRUITMENT

Applications are invited for the following posts

- **ADMINISTRATOR** - 1 Member
Candidates with Degree / PG Degree Retired KAS Officer with knowledge of General Administration is preferred. Should be able to laison with Govt. departments and offer constructive suggestions to the management
- **LECTURERS IN COMPUTER SCIENCE / BCA** - 10 Members
Candidates with M.Tech in Computer Science / MCA. Working exp. of minimum 2 years in Educational Institution is preferred
- **INTERNAL AUDITOR** - 2 Members
B.com Graduates, with inter CA - CS with experience in internal operations in Educational Institution verification of Stocks, Register and checking of all account workloads, Cash book etc., Knowledge of TALLY ERP 9.2 is a must. Should report to the management.
- **OFFICE SUPERINTENDENTS** - 3 Members
Candidates with Degree, 5 years Experience in Educational Institutions with knowledge of Accounting & drafting is a must.
- **ACCOUNTANT** - 3 Members
Candidates with Commerce Degree and well-versed in Tally ERP 9.2 is Preferred & experience in handling accounts independently upto finalization of accounts also knowledge of TDS, filing of Income Tax Quarterly Returns, GST & all statutory is a must.

Completed application should reach Honorary Seceratary, National Education Society of Karnataka NHS Campus, K.R. Road, Bengaluru - 560 004. Within 01.09.2023 from the date of advertisement.

Renumaration based on qualification and experience

For more details contact 080-26603591 / 9739009828

Dr. H. N. Subramanya, Hon., President — Sri. V. Venkata Sivareddy, Hon., Secretary — Sri. B. S. Arun Kumar, Hon., Secretary

WANTED 48YEARS Old reputed English medium school, Kishora Vidya Bhavana, Chintamani requires residential Principal with good knowledge of academic/ Administrative matters. Attractive salary+P.F. Paid, Interested persons send the resume to the Secretary, Kishora Vidya Bhavana, Bangalore Road, Chintamani on or before 31.08.2023

WANTED PRINCIPAL with 10 years experience in reputed educational institutions. Salary - Rs. 50000/- pm Acharya Sri Rakum Educational institutions, Bettenhalli Tarahunse Road, Near StoneHill International School, Devanahalli Tq, Bangalore Rural. Tel: 080 25215705 / 9459485777 Margondanahlli, rakumacharya@gmail.com

REQUIRED TEACHERS, taught for foundation course for children class 6th to 10th (Physics, Chemistry, Maths, Biology). WEBSITE OPERATOR, TELECALLER, RETIRED ARMY OFFICER, B.PEd. Interview: 23.08.2023 SHREERAM PUBLIC SCHOOL, Chikkabidarakallu, Bangalore. 9449835744, 9535601743

WANTED BETHESDA High School Kumara Park West, Bangalore -20. Middle and Primary School, Science, Maths and Music Teacher/ Nursery. Call: 9901352480

Hospital & Medical Jobs

IMMEDIATE REQUIREMENT: Qualified Pharmacist M/F, 2 -3 yrs experience Belandur, Bangalore- 560103. Contact/ Whatsapp:- 9741407965.

Marketing & Sales

TELECALLERS FRESHER'S (FEMALE) Any Graduates Wanted at Basaveswarnagar with Good Communication Skills (No Targets): 9742277166

WANTED: COMPUTER OPERATOR, TELEMARKETING, FIELD EXECUTIVE, OFFICE BOY FOR REAL ESTATE OFFICE SANJAYNAGAR RMV: 9035883017

WANTED ACCOUNTANT Qualification: B.Com Exp:10years with TDS &`GST Salary:40000/- SUPERVISORS Qualification: Under graduates`Exp: 5-10years Salary 30000/- + Incentive Call:7338084555 9845053636:Mail glprojects7889@gmail.com

WANTED PART TIME
AREA MARKETING EXECUTIVE
Resident of Jayamahal, Indiranagar, HSR Layout, K.R. Puram, Marathahalli, Ramurthynagar.
Timing : 5pm to 9:00pm, Qualification PUC & above
Male / Female, with Two Wheeler, Attractive Salary & Commission
MARKETING EXECUTIVE
For Bangalore City, Qualification Fresh Graduate preferably engineering
Male / Female, with Two Wheeler
Attractive Salary & Commission
Mob: 91762 00934 / 98459 66724

General

SIDVIN GLOBAL SOLUTIONS: Requires DTP OPERATORS M/F with good English, Kannada Typing speed and knowledge of Pagemaker, Indesign, Coreldraw, in and around Chamrajpet. 9341942256.

PURCHASE EXECUTIVE (Male) Graduate, minimum 2-3 years experience, fluency in English,Hindi & Kannada, Knowledge of Computer and Tally With good Communication Skills. Salary Rs.20000-25000/-PM Location JC-Road, Bangalore-02 Contact: 9343833300 email: jatinshah@newindiaelectricals.com

Cook

WANTED COOK (Veg & Non Veg) for a house in Dasarahalli, Peenya. Candidates in and around Dasarahalli preferred. Call: 9845604366

Engg/ Production Technical

A REPUTED Company at peenya, Bangalore, Exporting Precision-Machined Components to Europe, Requires SHIFT SUPERVISOR Production- DME Experience: 2-5 Years in similar capacity in Precision Machine Shops (1) Hands-on experience in conventional and CNC Machine (2) Conversant in Engineering Drawing (3) Leadership Qualities, Computer & Documentation knowledge is most essential (4) knowledge in programming, setting of CNC M/c will be added advantage Phone: 080-68162424 Email: recruitmentin23@gmail.com

WANTED QUALIFIED CIVIL ENGINEER with morethan 10 years of Experience in Construction of Multi-Storied Buildings for a Reputed Construction Company. Interested candidates can forward their resume to: enquiries @farahgroup.in

Multiple Vacancy

A LEADING Group providing Security, Housekeeping, Labour Services in Bangalore & having 28 years Market presence with more than 300 customers/ 2000+ staff is looking for 1) Business Development Executives 2) Training Officers 3) Night Patrolling Officers, For Bangalore Locations. Send your resume to: info@networkda.in or contact: 9900596738, 9606488908 for walk-in interviews.

Receptionist/ Secretary

REQUIRED FEMALE RECEPTIONIST with knowledge of Tally at Goraguntepalya, Tumkur Road, Bengaluru. Mob-8310105291

EDUCATIONAL

Admission

AMIIE (B.TECH), BBA, MBA, Executive-MBA (All Specialisations) BCA, Paramedical, Direct SSLC. PUC. Contact: 9341273990.

Correspondence Courses

STUDY AT Home SSLC DIRECT 2nd PUC Regular Class Science Commerce Arts. BA,B.Com,BBA, B.Sc,BCA,BSW, B.LISc,B.Ed, M.Ed, M.LISc,MA M.Com,M.Sc, MBA, MSW, MCA,PG-Diploma Courses, Contact: Manasa Correspondence College. Malleshwaram Circle Bangalore. 9663555154/ 9880498484.

Education Medical Courses

APPLICATIONS INVITED from DENTAL SURGEONS FOR ONE YEAR Certificate Course in IMPLANTOLOGY Affiliated to RGUHS starting from First September 2023. Contact: 98800-97108.

PERSONAL


Lost

ದಾಖಲೆಗಳು ಕಳೆದುಹೋಗಿದೆ

ಐ.ಜಿ. ಪದ್ಮಿನಿ ಹೆಂಡತಿ ಕುಮಾರ್, ಸುಮಾರು 48 ವರ್ಷ ವಯಸ್ಸುಳ್ಳ ಇವರು ಮೆ. ಪ್ಯಾರಾಡೈಸ್ ಎಂಟರ್‌ಪ್ರೈಸಸ್‌ನ ಮಾಲೀಕರು, ಆರ್.ಆಟ್ ನಂ. 835, ಹಿರಣ್ ಮಯಿ, ವಾಣಿ ಶಾಲೆಯ ಹತ್ತಿರ, ವಿವೇಕನಗರ, ರಾಬರ್ಟ್‌ಸನ್ ಪೇಟೆ, ಕೆ.ಜಿ.ಎಫ್., ಇವರು ಇಂದು ಬೆಂಗಳೂರಿನಲ್ಲಿ ಮೇಲ್ಕಾಣಿಸಿದ ಸಂಸ್ಥೆಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಕಳೆದುಕೊಂಡಿರುತ್ತಾರೆ. ಪ್ಯಾರಡೈಸ್ ಉದ್ಯಕ್ಕೆ ಸಂಬಂಧಿಸಿದ ಮೂಲ ಶಾಶ್ವತ ನೋಂದಣಿ ಪ್ರಮಾಣಪತ್ರ ಹಾಗೂ ಎರಡು ಮೂಲ ಸೇಲ್ ಡೀಡ್‌ಗಳು ಅಂದರೆ 18.10.2002 ದಿನಾಂಕದ ಒಂದು ಸೇಲ್‌ಡೀಡನ್ನು ಶ್ರೀಮತಿ ಕೆ. ಆಂಜನಮ್ಮ ಮತ್ತು ಇನ್ನೊಂದು ಸೇಲ್ ಡೀಡ್ ದಿನಾಂಕ 17.01.2004 ರಂದು ಶ್ರೀಮತಿ ಐ. ಪದ್ಮಿನಿ ಪರವಾಗಿ ಐ. ವೆಂಕಟಪ್ಪ ಅವರು ಜಾರಿಗೊಳಿಸಿದ್ದಾರೆ ಮತ್ತು ಇತರ ದಾಖಲೆ ಮೇಲಿನ ಸಂಸ್ಥೆಯ ಕಂಪನಿ ಪತ್ರ 18.04.2013ರ ಅಫಿಡವಿಟ್ ಅನ್ನು ವಕೀಲ ಮತ್ತು ನೋಟರಿ ಎಸ್. ವಿಜಯಕುಮಾರ್, ಬೆಂಗಳೂರು ಅವರ ಮುಂದೆ ಪ್ರಮಾಣ ವಚನ ಸ್ವೀಕರಿಸಿದರು. ದಾಖಲೆ ದೊರೆತವರು ಈ ಕೆಳಗಿನ ದೂರವಾಣಿ ಸಂಖ್ಯೆ ಸಂಪರ್ಕಿಸಿ : 9449885353

EDUCATION SUCCESS

ಅಭಿನಂದನೆಗಳು



ಶ್ರೀ ಸಚ್ಚಿದಾನಂದ ಸಿಂಗ್ ಅವರು ಪಿ ಹೆಚ್ ಡಿ ಪದವಿಯನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬರುವ ಯುವಿಸಿಇ ಕಾಲೇಜಿನ ಯಾಂತ್ರಿಕ ವಿಭಾಗದ ಪ್ರಾಧ್ಯಾಪಕರಾದ ಡಾ|| ಹೆಚ್. ಜಿ. ಹನುಮಂತರಾಜು (ಪ್ರಾಧ್ಯಾಪಕರು, ಯಾಂತ್ರಿಕ ವಿಭಾಗ) ಇವರ ಮಾರ್ಗದರ್ಶನದಲ್ಲಿ “Experimental and Computational Analysis of Buckling Effects on Polymer Matrix Composite Micro Wind Turbine Blades” ಪ್ರಧಾನವಾಗಿರುತ್ತದೆ.

Change of Name

CHANGE OF NAME

I, **R MEEKHALA,** W/o No. 2577200 L Ex Nk C Natesan, R/at. #50, 9th Main, 3rd Cross, NRI Layout, Kalkere Road,Ramamurthy Nagar, Bengaluru-560016, have changed my name to **MEGALA N** vide affidavit dated 19/08/2023 before Notary N. Kanchivaradaraju, Bangalore

I,NIMA NARAYANAN, changed-my daughter's name-from AISHWARYA JEETENDRA GANGWANI to AISHWARYA JEETENDRA dtd.16.08.2023. Sworn before Notary H.S.Sakalesh Aradhya, Bengaluru.

CHANGE OF NAME

I, **GG JAMUNA BAI,** W/o JC-759259A Ex-Sub Gopinatha Rao G V, R/at.# Janapriya Green Wood Apartment at A-6 238, 2nd Floor, Somashetty Halli, Chickbanawara, Bengaluru-90, have changed my name to **JAMUNA BAI V** vide affidavit dated 19/08/2023 before Notary Gangaraju. B.N. Bangalore.

I, MANASA, changed-my name to MANASA GUPTA dated: 07.08.2023. Sworn before notary H.S.Sakalesh Aradhya, Bengaluru.

CHANGE OF NAME

I, **MANOHAR KRISHNAPPA** S/o. Krishnareddy Chinnappa, R/a #285, Near Anjaneya Temple, Begur, Bengaluru-68 declare that in my Aadhar card my father name is recorded as **KRISHNAREDDY CHINNAPPA** and in my PAN CARD my father Name is recorded as **KRISHNA REDDY** both names are his only. Henceforth, he will be known as **KRISHNAREDDY CHINNAPPA** only, vide affidavit dated 18.08.2023 before Notary S.I. Balaguru, Bangalore.

I, SANJAYAKUMAR H.M residing at Bengaluru-68, have changed my name as SANJAY KUMAR H.M, vide affidavit dated 19/8/2023 before Notary P.C.Ramaiah, Bengaluru

PUBLIC NOTICE

SADASHIVANAGAR CLUB
#21, 15th Cross, Sadashivanagar, Bangalore - 560080, Mob: 9148975091

Tender Notification

For Running Veg & Non Veg Multi Cuisine Canteen & Chaats

Sealed quotations are invited from Experienced catering contractors for Running the Club Canteen. Interested Contractors may apply within 7 days with details of Menu. Rates & Quantity.

Sd/- Hon. Secretary
Date: 20.08.2023

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 20 ಆಗಸ್ಟ್ 2023



ಅನನ್ಯ ಕಲೆಗಳ ಅಪರೂಪದ ಭಂಡಾರ 9



ದೂಳಿನ ನಡುವೆಯೇ ಸಿಡಿದೆದ್ದ ದನಿ 10



ಜಾನಪದ ಲೋಕದಲ್ಲಿ ಗಿರಿಜನರ ಹಾಡು-ಪಾಡು 11

ಜೀವಸತ್ವ ಉಣಿಸಿದ ಸಂಗೀತಗಾರರು

ರಾಗರತಿಯಲ್ಲೇ ಮುಳುಗೇಳುವ ಸಂಗೀತಗಾರರು ಆಡುವ ಅಪರೂಪದ ನುಡಿ, ಕಾಣಿಸುವ ಅನನ್ಯ ಅನುಭವ, ಅನಾಮಧೇಯರಿಂದ ಕಲಿಯುವ ಪಾಠ...ಎಲ್ಲವುಗಳ ಲಹರಿ ಇದು.



ವಸುಧೇಂದ್ರ

ಕಥನ ಸಾಹಿತ್ಯ ರಚಿಸುವವರಿಗೆ ಗುರು-ಶಿಷ್ಯ ಸಂಬಂಧ ‘ದ್ರೋಣ-ಏಕಲವ್ಯ’ರ ಸಂಬಂಧವಿದ್ದಂತೆ. ಏಕಲವ್ಯನಿಗೆ ದ್ರೋಣರ ಮೂರ್ತಿ ಗುರುರೂಪಕವಾದರೆ, ನಮಗೆ ನಮ್ಮ ಹಿರಿಯ ಸಾಹಿತಿಗಳ ಪುಸ್ತಕಗಳು. ಕತೆಗಾರನಾಗಿ ನನಗೆ ಮತ್ತೊಂದು ವಿಶೇಷ ಸಂಗತಿಯೂ ಗೋಚರಿಸುತ್ತದೆ. ಸಾಹಿತ್ಯದ ಸೂಕ್ಷ್ಮಗಳನ್ನು ಕಲಿಯಲು ನನಗೆ ಸಾಹಿತಿಗಳೇ ಗುರುಗಳಾಗಬೇಕೆನ್ನಿಸುವುದಿಲ್ಲ. ಇತರ ಕಲಾಪ್ರಕಾರದಲ್ಲಿ ಸಾಧನೆ ಮಾಡಿದ ಯಾರೇ ಹಿರಿಯರು ಮಾರ್ಗದರ್ಶನ ಮಾಡಬಹುದು ಅನ್ನಿಸುತ್ತದೆ.

ನನಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಕೇಳುವ ಹವ್ಯಾಸವಿದೆ. ನನಗೆ ಹಾಡಲು ಬರುವುದಿಲ್ಲ ಎನ್ನುವ ಖೇದವಿದೆಯಾದರೂ, ಹಾಡುವವರ ಕಂಠಶ್ರೀಯನ್ನು ಕೇಳಿ ಸಂತೋಷಗೊಳ್ಳುವ ಸೌಭಾಗ್ಯವನ್ನು ರೂಢಿಸಿಕೊಂಡಿದ್ದೇನೆ. ಮುಖ್ಯವಾದ ರಾಗಗಳನ್ನು ಗುರುತಿಸುವುದು, ಕೀರ್ತನೆಯ ಅರ್ಥವನ್ನು ತಿಳಿದುಕೊಳ್ಳುವುದು, ಸಂಗೀತಗಾರರ ಜೀವನಚರಿತ್ರೆಗಳನ್ನು ಓದುವುದು-ನನ್ನ ಹವ್ಯಾಸಗಳಾಗಿವೆ. ಸಾಮಾನ್ಯವಾಗಿ ಸಂಗೀತಗಾರರು ಸಾಹಿತಿಗಳಂತೆ ಮಾತಾಡುವುದಿಲ್ಲ. ಅವರಿಗೆ ಶಬ್ದಾರ್ಥಕ್ಕಿಂತಲೂ ರಾಗರತಿಯೇ ಮುಖ್ಯ. ಆದರೆ ಅಪರೂಪಕ್ಕೆ ಸಂಗೀತ ಕಛೇರಿಗಳಲ್ಲಿ ಒಮ್ಮೊಮ್ಮೆ ಮಾತಾಡುತ್ತಾರೆ.

ಸುಮಾರು ನಾಲ್ಕೈದು ವರ್ಷಗಳ ಹಿಂದೆ ಖ್ಯಾತ ಪಿಟೀಲು ವಾದಕರಾದ ಟಿ.ಎನ್. ಕೃಷ್ಣನ್ ಅವರು ಬೆಂಗಳೂರಿನ ಗಾಯನ ಸಮಾಜದಲ್ಲಿ ಕಛೇರಿಯೊಂದನ್ನು ಕೊಟ್ಟರು. ಆಗಲೇ ಎಂಬತ್ತು ದಾಟಿದ್ದ ಅವರು ವೃದ್ಧಾಪ್ಯದಿಂದ ಜರ್ಜರಿತರಾಗಿದ್ದರು. ಅವರು ವೇದಿಕೆಯನ್ನು ಹತ್ತಲು ಇಬ್ಬರು ಹುಡುಗರ ಸಹಾಯವನ್ನು ಪಡೆದುಕೊಂಡು, ನಿಧಾನಕ್ಕೆ ಒಂದೊಂದೇ ಹೆಜ್ಜೆಗಳನ್ನು ಇಡುತ್ತಾ ಬಂದರು. ತಮ್ಮ ಆಸನದಲ್ಲಿ ಕುಳಿತುಕೊಂಡು, ಕೈಯಲ್ಲಿ ಪಿಟೀಲು ತೆಗೆದುಕೊಂಡು ಶೃತಿಗೊಳಿಸಿಕೊಂಡ ನಂತರ ಸ್ವಲ್ಪ ಮಾತಾಡಿದರು.

‘ಬದುಕಿನ ಅನೇಕ ಕೆಲಸಗಳನ್ನು ಮಾಡುವಾಗ ನನಗೆ ಮುಪ್ಪು ಬಂದಿರುವುದು ತಿಳಿಯುತ್ತದೆ. ಉಣ್ಣುವಾಗ, ನಡೆಯುವಾಗ, ನಿದ್ರಿಸುವಾಗ, ಮಾತ್ರೆ ತೆಗೆದುಕೊಳ್ಳುವಾಗ... ಆದರೆ ಯಾವಾಗ ಕೈಗೆ ಈ ಪುಟ್ಟ ಪಿಟೀಲು ಬರುತ್ತದೋ, ಆಗ ವೃದ್ಧಾಪ್ಯ ಮರೆತು ಹೋಗುತ್ತದೆ. ಅದನ್ನು ನುಡಿಸುವಾಗ ನನಗೆ ಹದಿನೆಂಟರ ಯೌವನ ಮರುಕಳಿಸುತ್ತದೆ. ಆದರೆ ನನಗೊಲಿದ ಈ ಪಿಟೀಲನ್ನು ದಕ್ಕಿಸಿ ಉಳಿಸಿಕೊಳ್ಳುವುದು ಸುಲಭವಲ್ಲ. ಈಗಲೂ ಬೆಳಿಗ್ಗೆ ನಾಲ್ಕಕ್ಕೆ ಎದ್ದು ಒಂದೆರಡು ತಾಸು ನುಡಿಸುತ್ತೇನೆ. ದಿನವೂ ಹೊಸತೇನನ್ನೋ ಕಲಿತುಕೊಳ್ಳುತ್ತೇನೆ’ ಎಂದು ಹೇಳಿ ನಿಷ್ಕಲ್ಮಶ ನಗೆಯನ್ನು ನಕ್ಕರು.

ಕೃಷ್ಣನ್ ಅವರು ಮೇಲಿನ ಮಾತುಗಳನ್ನು ಹೇಳಿದಾಗ ನನಗೆ ಮೈಯಲ್ಲಿ ಮಿಂಚು ಸಂಚರಿಸಿದಂತಾಗಿತ್ತು. ಬೇಕೆಂದಾಗ ಹರೆಯವನ್ನು ನಮ್ಮೊಳಗೆ ಆಹ್ವಾನಿಸಿಕೊಳ್ಳುವ ‘ಮಂತ್ರಶಕ್ತಿ’ ಯಾರಿಗೆ ಬೇಡ? ಅದಕ್ಕೊಂದು ಸುಲಭದ, ಆದರೆ ಕಠಿಣ ಪರಿಶ್ರಮದಿಂದ ಕರಗತ ಮಾಡಿಕೊಳ್ಳಬೇಕಾದ ಸಾಧನವನ್ನು ಟಿ.ಎನ್. ಕೃಷ್ಣನ್ ಹೇಳಿದ್ದರು. ನನ್ನ ‘ಪಿಟೀಲು’ ಪುಸ್ತಕವಲ್ಲದೆ ಬೇರೇನಲ್ಲ ಎಂದು ಹೊಳೆಯಲು ಹೆಚ್ಚು ಸಮಯ ಬೇಕಾಗಲಿಲ್ಲ. ‘ನಿತ್ಯ ನನ್ನ ‘ಪಿಟೀಲಿ’ನೊಡನೆ ಒಂದೆರಡು ತಾಸು ಒಡನಾಡುತ್ತಾ ಹೊಸದನ್ನು ಕಲಿಯದಿದ್ದರೆ, ಆ ಮಂತ್ರದಂಡವನ್ನು ನಾನು ಕಳೆದುಕೊಳ್ಳುತ್ತೇನೆ’ ಎನ್ನುವುದು ಅರ್ಥವಾಗಿತ್ತು. ಸಾಹಿತ್ಯದ ಪಾಠವನ್ನು ಹೇಳಿದ ಆ ಹಿರಿಯ ಸಂಗೀತ ಗುರುಗಳಿಗೆ ಮನಸ್ಸಿನಲ್ಲಿಯೇ ವಂದನೆಗಳನ್ನು ಅರ್ಪಿಸಿದೆ.

ನನ್ನ ಮತ್ತೊಬ್ಬ ಸಾಹಿತ್ಯದ ಗುರುಗಳು ಮಂಗನಪಲ್ಲಿ ಬಾಲಮುರಳೀಕೃಷ್ಣ. ಅವರು ತಮ್ಮ 86ನೇ ವಯಸ್ಸಿನಲ್ಲಿ ತೀರಿಕೊಂಡಾಗ, ಅವರ ಹತ್ತಿರದ ಶಿಷ್ಯರೊಬ್ಬರು ಪತ್ರಿಕೆಯೊಂದರಲ್ಲಿ ನುಡಿನಮನವನ್ನು ಸಲ್ಲಿಸಿದ್ದರು. ಬಾಲಮುರಳೀಕೃಷ್ಣ ಅವರಿಗೆ ಮುಪ್ಪಿನಲ್ಲಿ ಮರೆವಿನ ರೋಗ ತೀವ್ರವಾಗಿ ಬಾಧಿಸಿತಂತೆ. ಈ ರೋಗ ಕೊನೆಕೊನೆಗೆ ಅದೆಷ್ಟು ತೀವ್ರವಾಗಿ ಹೋಯಿತೆಂದರೆ, ಅವರು ತಮ್ಮ ಮಗನನ್ನೂ ಗುರುತಿಸಲಾರದೆ ಹೋದರಂತೆ. ಆದರೆ ಸಾಯುವ ಗಳಿಗೆಯವರೆಗೂ ಯಾರಾದರೂ ಅವರನ್ನು ರಾಗವೊಂದನ್ನು ಪ್ರಸ್ತುತ ಪಡಿಸಲು ಕೋರಿದರೆ, ತಪ್ಪಿಲ್ಲದಂತೆ ಆ ರಾಗವನ್ನು ಆ ಮುಪ್ಪಿನ ಬಾಧೆಯಲ್ಲಿಯೇ ಒಪ್ಪಿಸುತ್ತಿದ್ದರಂತೆ. ಕಲ್ಯಾಣಿ ಎಂದರೆ ಕಲ್ಯಾಣಿ, ತೋಡಿ ಎಂದರೆ ತೋಡಿ, ಶಂಕರಾಭರಣ ಬೇಕೆಂದರೆ ಶಂಕರಾಭರಣ! ತಕ್ಷಣ ನನಗೆ ಸಾಹಿತ್ಯದ ಪಾಠವೊಂದು ದಕ್ಕಿ ಹೋಯಿತು. ನಾನೆಂದೂ ಮರೆಯಬಾರದ ರಾಗಗಳು ಯಾವವೆಂದು ನನಗೆ ಹೊಳೆದವು. ಅವು ‘ಕುವೆಂಪು ರಾಗ’, ‘ಕಾರಂತ ರಾಗ’, ‘ಮಾಸ್ತಿ ರಾಗ’ - ಇನ್ನೂ ಹಲವಾರು ರಾಗಗಳು. ಮತ್ತೆ ಮತ್ತೆ ಈ ‘ರಾಗ’ಗಳನ್ನು ಓದಿ ಒಲಿಸಿಕೊಳ್ಳಬೇಕು ಎಂಬ ಸಾಕ್ಷಾತ್ಕಾರವಾದಾಗ ರೋಮಾಂಚನವಾಗಿತ್ತು.

ಇತ್ತೀಚೆಗೆ ಬಾಂಬೆ ಜಯಶ್ರೀ ಅವರ ಸಂಗೀತವನ್ನು ನಾನು ತೀವ್ರವಾಗಿ ಕೇಳುತ್ತೇನೆ. ಅವರು ಕೆಲವು ಸಿನಿಮಾ ಗೀತೆಗಳನ್ನೂ ಹಾಡಿರುವುದರಿಂದ ಸಾಕಷ್ಟು ಜನಪ್ರಿಯರು. ಆ ಕಾರಣದಿಂದ ಅವರನ್ನು ಸಾಹಿತ್ಯೋತ್ಸವಗಳಿಗೂ ಆಹ್ವಾನಿಸುತ್ತಾರೆ. ಇತ್ತೀಚೆಗೆ ತಿರುವನಂತಪುರದಲ್ಲಿ ನಡೆದ ಮಾತೃಭೂಮಿ ಸಾಹಿತ್ಯ ಉತ್ಸವಕ್ಕೆ ಅವರನ್ನು ಆಹ್ವಾನಿಸಿದ್ದರು. ಅವರೊಡನೆ ನಡೆದ ಸಂವಾದದಲ್ಲಿ ಅವರೊಂದು ವಿಶೇಷ ಘಟನೆಯನ್ನು ಸಭಿಕರೊಡನೆ ಹಂಚಿಕೊಂಡರು. ಒಮ್ಮೆ ದುಬೈ ನಗರದಲ್ಲಿ ಅವರು ಸಂಗೀತ ಕಛೇರಿಯನ್ನು ಕೊಟ್ಟರಂತೆ. ಸಾಮಾನ್ಯವಾಗಿ ಕಛೇರಿ ಮುಗಿದ ನಂತರ ಪರಿಚಿತರು, ಸಂಗೀತ ಪ್ರೇಮಿಗಳು ಕಲಾವಿದರನ್ನು ಭೇಟಿಯಾಗಿ ಕಾರ್ಯಕ್ರಮ ಅದೆಷ್ಟು ಸೊಗಸಾಗಿ ಮೂಡಿಬಂತು ಎಂದು ಅವರಿಗೆ ಸಂತೋಷದಿಂದ ತಿಳಿಸುವುದು ಸಂಪ್ರದಾಯ. ಆದರೆ ಅಂದು ಹದಿನಾರು-ಹದಿನೇಳು ವಯಸ್ಸಿನ ಹುಡುಗನೊಬ್ಬ ಅವರೆಡೆಗೆ ನಡೆದು ಬಂದ. ಅವನು ರಭಸದಿಂದ ನಡೆಯುತ್ತಿದ್ದ ರೀತಿ, ಮುಖದಲ್ಲಿದ್ದ ವಿಚಿತ್ರ ಭಾವ ನೋಡಿದ ತಕ್ಷಣ ಜಯಶ್ರೀ ಅವರಿಗೆ ಆ ಹುಡುಗನಿಗೆ ಏನೋ ಸಮಸ್ಯೆ ಇರಬೇಕು ಅನ್ನಿಸಿದೆ. ಆ ಹುಡುಗ ಅವರೆಡೆಗೆ ಬಂದಿದ್ದೇ, ಮುಖದಲ್ಲಿ ಒಂದಿಷ್ಟೂ ನಗುವಿಲ್ಲದೆ ‘ಈವತ್ತು ನೀನು ಎಲ್ಲಾ ತಪ್ಪು ಹಾಡಿದಿ. ಆಲ್ ರಾಂಗ್... ಆಲ್ ರಾಂಗ್... ನಂಗೆ ಸಿಟ್ಟು ಬಂದಿದೆ’ ಎಂದು ಹೇಳಿ ಹೊರಟೇ ಹೋದನಂತೆ. ಈ ತರಹ ಯಾರೂ ಹಿರಿಯ ಕಲಾವಿದರಿಗೆ ಹೇಳುವುದಿಲ್ಲ. ಆದ್ದರಿಂದ ಜಯಶ್ರೀ ಅವರ ಮನಸ್ಸಿಗೆ ಅಸಂತೋಷವಾಯ್ತು.

ಆ ರಾತ್ರಿ ಕಲಾವಿದೆಗೆ ಮತ್ತು ಇತರರಿಗೆ ಔತಣಕೂಟವಿತ್ತು. ಅಲ್ಲಿ ಈ ಬಾಲಕನನ್ನೂ ಮತ್ತು ಅವನ ತಾಯಿಯನ್ನೂ ಜಯಶ್ರೀ ಗಮನಿಸಿದರು. ಆ ಹುಡುಗ ಮಾತಿಲ್ಲದೆ, ಎಲ್ಲಿಯೋ ಶೂನ್ಯದಲ್ಲಿ ನೋಟವನ್ನು ನೆಟ್ಟಿದ್ದು ಕಂಡಾಗ ಅವನೊಬ್ಬ ಮಾನಸಿಕ ಅಸ್ವಸ್ಥನಿರಬಹುದು ಎಂಬ ಅನುಮಾನ ಅವರಿಗೆ ಬಂದಿದೆ. ಆದರೂ ಕುತೂಹಲದಿಂದ ತಾಯಿಯನ್ನು ಕಂಡು ಸಂಜೆ ನಡೆದ ಘಟನೆಯನ್ನು ವಿವರಿಸಿದರು. ಆಗ ಆ ತಾಯಿ ತುಸು ಹಿಂಜರಿಕೆಯಿಂದಲೇ ‘ಅವನು ಹೇಳಿದ್ದಾನೆಂದರೆ ನೀವು ಏನಾದರೂ ಹಾಡಿನಲ್ಲಿ ತಪ್ಪು ಮಾಡಿರುತ್ತೀರಿ. ನನಗೆ ಅವನಷ್ಟು ಸಂಗೀತ ಗೊತ್ತಿಲ್ಲ. ಅವನು ಆಟಿಸಂ ಕಾಯಿಲೆಯ ಹುಡುಗ. ಆದರೆ ಸಂಗೀತ ಆಲಿಸುವುದರಲ್ಲಿ ಅವನಿಗೆ ವಿಶೇಷ ಪ್ರಾವೀಣ್ಯ ಇದೆ. ನಿಮ್ಮ ದೊಡ್ಡ ಅಭಿಮಾನಿ. ನಿಮ್ಮ ಎಲ್ಲಾ ಧ್ವನಿಚಕ್ರಗಳನ್ನೂ ನೂರಾರು ಸಲ ಕೇಳಿದ್ದಾನೆ. ಈಗಲೂ ರಾತ್ರಿ ಮಲಗುವಾಗಲೂ ನಿಮ್ಮ ಹಾಡುಗಳನ್ನು ಕೇಳುತ್ತಾ ನಿದ್ದೆ ಹೋಗುತ್ತಾನೆ. ಸಂಗೀತದಲ್ಲಿ ಅವನೊಂದು ಕಂಪ್ಯೂಟರ್ ಇದ್ದಂತೆ. ಏನು ತಪ್ಪು ನಡೆದರೂ ಅವನಿಗೆ ಗೊತ್ತಾಗುತ್ತದೆ’ ಎಂದು ಹೇಳಿದರು. ಅನಂತರ ಜಯಶ್ರೀ ಚೆನ್ನೈಗೆ ವಾಪಸಾದರು.

ಒಂದು ವಾರದ ನಂತರ ಜಯಶ್ರೀಯವರಿಗೆ ಆ ಕಛೇರಿಯ ಸಂಪೂರ್ಣ ವಿಡಿಯೊ ರೆಕಾರ್ಡಿಂಗ್ ಅನ್ನು ಆಯೋಜಕರು ಕಳುಹಿಸಿಕೊಟ್ಟರು. ಜಯಶ್ರೀ ಅವರು ಅದನ್ನು ಮತ್ತೊಮ್ಮೆ ಕೇಳಿದರು. ಆಗ ಅವರಿಗೆ ತಮ್ಮ ಹಾಡುಗಾರಿಕೆಯಲ್ಲಿ ಸಾಕಷ್ಟು ನ್ಯೂನತೆಗಳು ಇಣುಕಿವೆ ಎಂದು ತಿಳಿದುಬಿಟ್ಟಿತು. ತಕ್ಷಣ ಅವರಿಗೆ ಆ ಹುಡುಗ ಮತ್ತು ತಾಯಿಯ ನೆನಪು ಬಂದಿದೆ. ಅವರು ಮನೋವೈದ್ಯರೊಬ್ಬರಿಗೆ ಕರೆ ಮಾಡಿ ಆಟಿಸಂ ಕಾಯಿಲೆ ಬಗ್ಗೆ ವಿಚಾರಿಸಿದ್ದಾರೆ. ಈ ಮಕ್ಕಳು ಉಳಿದಂತೆ ಸಮಾಜದ ಜೊತೆ ಹೊಂದಿಕೊಳ್ಳಲು ಕಷ್ಟವಾದರೂ, ಕೆಲವೊಂದು ಸಂಗತಿಗಳಲ್ಲಿ ಸಾಮಾನ್ಯ ಮನುಷ್ಯರು ಸಾಧಿಸಲಾಗದ ವಿಶೇಷ ಪ್ರತಿಭೆಯಿರುತ್ತದೆ. ಗಣಿತ, ಸಂಗೀತ, ನೆನಪಿನ ಶಕ್ತಿ, ಕಂಠಪಾಠ - ಹೀಗೆ ಅದು ಏನಾದರೂ ಆಗಿರಬಹುದು. ಈ ಹುಡುಗನಿಗೆ ಸಂಗೀತದಲ್ಲಿ ಅಂತಹ ಶಕ್ತಿ ಇರಬಹುದು. ಜಗತ್ತಿನ ಉಳಿದ ‘ಸಜ್ಜನ’ರಂತೆ ಈ ಹುಡುಗ ಹಿಂಜರಿಯದೆ, ‘ಅಪ್ರಿಯಸತ್ಯ’ವನ್ನು ಯಾವ ಮುಲಾಜಿಲ್ಲದೆ ಹೇಳಿರಬಹುದು ಎಂದು ವೈದ್ಯರು ಅಭಿಪ್ರಾಯ ಪಟ್ಟರಂತೆ.

11ನೇ ಪುಟಕ್ಕೆ...



ಅಂಕಸಮುದ್ರದಲ್ಲಿ ನೀರುನಾಯಿಯ ಜೀವಸಂಚಾರ

ಸಿ.ಶಿವಾನಂದ

ಕಲ್ಯಾಣ ಕರ್ನಾಟಕದ ಏಕೈಕ ಪಕ್ಷಿಧಾಮ ಇರುವುದು ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಕಸಮುದ್ರದಲ್ಲಿ. ಇದು ಪಕ್ಷಿ ಸಂರಕ್ಷಿತ ಮೀಸಲು ಪ್ರದೇಶ. ಇದನ್ನು ಪಕ್ಷಿಗಳ ಕಾಶಿ ಎಂದೂ ಕರೆಯಲಾಗುತ್ತಿದೆ. ಇಲ್ಲಿಗೆ ಅಪರೂಪದ, ನಾಜೂಕಿನ, ವಯ್ಯಾರ ಮಾಡುವ ಅತಿಥಿಯೊಬ್ಬರ ಆಗಮನವಾಗಿದೆ. ಅದು ಪಕ್ಷಿಯಲ್ಲ, ನೀರುನಾಯಿ.

ಕೇವಲ ಕೂಗಳತೆ ದೂರದಲ್ಲಿರುವ ತುಂಗಭದ್ರಾ ಹಿನ್ನೀರಿನಿಂದ ಪಂಪ್‌ಹೌಸ್ ಕಾಲುವೆ ಮೂಲಕ ಕೆರೆ ದಿಬ್ಬವನ್ನು ಏರಿ ಪಕ್ಷಿಧಾಮಕ್ಕೆ ನೀರುನಾಯಿಗಳು ಕಾಲಿಟ್ಟಿವೆ. ಯಥೇಚ್ಛ ಸಂಖ್ಯೆಯಲ್ಲಿರುವ ಕ್ಯಾಟ್ ಫಿಶ್(ಮುರುಗೊಡ) ನೀರು ನಾಯಿಗಳಿಗೆ ಮೃಷ್ಟಾನ್ನ ಭೋಜನವಿದ್ದಂತೆ. ಬಾನಾಡಿಗಳ ಜೀವ ವೈವಿಧ್ಯಕ್ಕೆ ಕಂಟಕವಾಗಿರುವ ಕ್ಯಾಟ್‌ಫಿಶ್‌ಗಳ ಅಟಾಟೋಪಕ್ಕೆ ಬ್ರೇಕ್ ಹಾಕಲು ಪ್ರಕೃತಿಯೇ ನೀರು ನಾಯಿಗಳನ್ನು ಪಕ್ಷಿಧಾಮಕ್ಕೆ ಆಹ್ವಾನಿಸಿರುವಂತಿದೆ.

ಪಕ್ಷಿಧಾಮದ ಕೆರೆಗೆ ಮೊಟ್ಟ ಮೊದಲ ಬಾರಿಗೆ ಬಂದಿರುವ ಆರು ನೀರುನಾಯಿಗಳು ಇಲ್ಲಿ ಬೀಡು ಬಿಟ್ಟಿವೆ. ಕಂದು ಮೈಬಣ್ಣ, ಚೂಪಾದ ಮೀಸೆಗಳು, ತುಪ್ಪಳದ ಚರ್ಮ, ಚಪ್ಪಟೆ ತಲೆ, ಬಲವಾದ ಬಾಲ, ಹುಟ್ಟುಗಳಂತೆ ಕಾಣುವ ಪಾದಗಳು-ಇವು ನೀರುನಾಯಿಯ ಲಕ್ಷಣ. ಇವು ನಾಯಿಗೆ ಜಾತಿಗೆ ಸೇರಿಲ್ಲ. ನಾಯಿಯ ಮುಖ ಹೋಲುತ್ತಿರುವುದರಿಂದ ನೀರುನಾಯಿಗಳು ಎಂದು ಹೆಸರಿಸಲಾಗಿದೆ ಅಷ್ಟೆ. ನೀರುನಾಯಿಗಳ ಬರುವಿಕೆಯಿಂದ ಪಕ್ಷಿಗಳ ಕಲರವ ಮತ್ತಷ್ಟೂ ಹೆಚ್ಚಾಗಿದ್ದು, ಪಕ್ಷಿಪ್ರಿಯರ ಸಂತಸಕ್ಕೆ ಕಾರಣವಾಗಿದೆ. ಇವುಗಳನ್ನು ನೋಡುವುದಕ್ಕೆ ಕೆಲವರು ಸದಾ ಧ್ಯಾನಸ್ಥ ಸ್ಥಿತಿಯಲ್ಲಿ ಪಕ್ಷಿಧಾಮದ ದಂಡೆಯಲ್ಲಿ ಕುಳಿತುಕೊಳ್ಳುವುದು ಈಗ ಸಾಮಾನ್ಯವಾಗಿದೆ.

ಹೊಸಪೇಟೆ-ಹರಿಹರ ರಾಜ್ಯ ಹೆದ್ದಾರಿಯ ಉಪನಾಯಕನಹಳ್ಳಿಯಿಂದ ಕೇವಲ 3 ಕಿ.ಮೀ. ದೂರದಲ್ಲಿರುವ 244 ಎಕರೆ ಪ್ರದೇಶದ ವಿಶಾಲವಾದ ಪಕ್ಷಿಧಾಮಕ್ಕೆ ಅಲಾಸ್ಕಾ, ಸೈಬೀರಿಯಾ, ಯುರೋಪ್ ದೇಶಗಳಿಂದ ವಲಸೆ ಹಕ್ಕಿಗಳು ಬರುತ್ತವೆ. ಪೆಸಿಫಿಕ್ ಗೋಲ್ಡನ್ ಪ್ಲೋವರ್, ಲಿವ್ ಸ್ಯಾಂಡ್ ಪೈಪರ್, ರಫ್, ವಿಜನ್, ಕಾಮನ್ ಪೊಚರ್ಡ್, ಸೋಲಾರಿ ಬಾತುಗಳು, ಅಪರೂಪದ ಪಕ್ಷಿ ಇಂಡಿಯನ್ ಸ್ಕಿಮ್ಮರ್ ಸೇರಿ 200ಕ್ಕೂ ಹೆಚ್ಚು ಪ್ರಭೇದಗಳ ಪಕ್ಷಿಗಳು ಇಲ್ಲಿಗೆ ವಲಸೆ ಬರುತ್ತವೆ. ಬಣ್ಣದ ಕೊಕ್ಕರೆ(ಪೇಂಟೆಡ್ ಸ್ಟಾರ್ಕ್), ನೀರು ಕಾಗೆ(ಕಾರ್ಮೋರೆಂಟ್) ಒಳಗೊಂಡಂತೆ ಹಲವು ಬಾನಾಡಿಗಳಿಗೆ ಇದು ಹೆರಿಗೆ ಮನೆಯಾಗಿದೆ. ಚಳಿಗಾಲದಲ್ಲಿ ಪಕ್ಷಿಪ್ರಿಯರಿಗೆ ಈ ಸ್ಥಳ ಸ್ವರ್ಗ. ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ನೀರುನಾಯಿಗಳ ಬದುಕು-ಬವಣೆ

ನದಿಗಳು, ಕೆರೆಗಳನ್ನು ಸ್ವಚ್ಛವಾಗಿಡುವಲ್ಲಿ ನೀರು ನಾಯಿಗಳ ಕಾರ್ಯವೈಖರಿ ಪ್ರಶಂಸೆಗೆ ಒಳಪಡುತ್ತದೆ. ಸಾವನ್ನಪ್ಪಿ ಕೊಳೆಯುವ ಸ್ಥಿತಿಯಯಲ್ಲಿರುವ ವಿವಿಧ ಜಾತಿಯ ಮೀನುಗಳು, ಜಲಚರ ಪ್ರಾಣಿಗಳೆಲ್ಲವನ್ನೂ ತಿಂದು ಸ್ವಚ್ಛಗೊಳಿಸುವುದು ಇವುಗಳ ದಿನಚರಿ. ಇವುಗಳಿಂದಾಗಿಯೇ ಕೆರೆ, ಜಲಾಶಯಗಳು ಸದಾ ಸ್ವಚ್ಛಂದವಾಗಿ ಕಾಣುವುದು.

ತುಂಬಾ ನಾಜೂಕಿನ, ಬುದ್ಧಿವಂತ ಮತ್ತು ಸೂಕ್ಷ್ಮಜೀವಿ ನೀರುನಾಯಿ. ಅಕ್ಟೋಬರ್ ತಿಂಗಳಲ್ಲಿ ಇದರ ಸಂತಾನದ ಸಮಯ. ಗರ್ಭ ಧರಿಸಿದ 60ರಿಂದ 63 ದಿನಗಳಲ್ಲಿಯೇ ಮರಿ ಹಾಕುತ್ತದೆ. ಹುಟ್ಟಿದೊಡನೆ ಮರಿಗೆ ದೃಷ್ಟಿ ಕಾಣುವುದಿಲ್ಲ, ಹುಟ್ಟು ಕುರುಡುತನ ಕಾಡಿದರೂ, ಅಮ್ಮನ ವಾತ್ಸಲ್ಯ ಕಾಪಿಡುತ್ತದೆ. ಒಂದು ವರ್ಷ ತಾಯಿ ಮಡಿಲಲ್ಲಿ ಇವುಗಳು ಜತನಗೊಳ್ಳುತ್ತವೆ. ಮರಿಗಳಿಗೆ ಈಜು ಬಾರದು. ಆದ್ದರಿಂದ ಸದಾ ತಾಯಿಯ ಆಶ್ರಯ ಬಯಸುತ್ತವೆ. ಜತೆಗೆ ನದಿ ದಡಗಳಲ್ಲಿ ಮತ್ತು ಕಡಲಜೊಂಡಿನಲ್ಲಿ ಬಚ್ಚಿಟ್ಟು, ಸದಾ ಕಾವಲಿನಲ್ಲೇ ಮರಿಗಳನ್ನು ಸಾಕುತ್ತವೆ. ತಾಯಿಯೊಂದಿಗೆ ಬದುಕು ಕಂಡುಕೊಳ್ಳುವ ಮರಿಗಳು ಯಾವಾಗಲೂ ತಾಯಿ ಒಲವನ್ನು ನಿರೀಕ್ಷಿಸುತ್ತವೆ. ತಂದೆ ಆಗಾಗ ಬಂದು ಹೋಗುವ ಅತಿಥಿ ಅಷ್ಟೆ. ಗುಂಪಾಗಿ ಆಟ ಆಡುವುದು, ನದಿ ತೀರದಲ್ಲಿ ಮನೆಗಳನ್ನು ನಿರ್ಮಿಸಿಕೊಳ್ಳುವ ಈ ಪ್ರಾಣಿ ಅತಿ ಬುದ್ಧಿವಂತಿಕೆಯಿಂದ ತನ್ನ ರಕ್ಷಣೆ, ಪೋಷಣೆಯನ್ನು ತಾನೇ ಮಾಡಿಕೊಳ್ಳುತ್ತದೆ.



ಅಂಕಸಮುದ್ರದಲ್ಲಿ ಸಂಕೋಚದ ನಡುವೆಯೂ ಕಂಡ ನೀರುನಾಯಿಯ ಮುಖ
ಚಿತ್ರ: ವಿಜಯಕುಮಾರ್ ಇಟ್ಟಿಗಿ

ಒಂದು ವರ್ಷದ ನಾಯಿ 7ರಿಂದ 11 ಕೆ.ಜಿ. ತೂಕ, 59ರಿಂದ 64 ಸೆಂ.ಮೀ. ಉದ್ದ ಇರುತ್ತದೆ. ಪ್ರತಿದಿನ ತಮ್ಮ ದೇಹತೂಕದ ಕಾಲು ಭಾಗದಷ್ಟು ಆಹಾರ ಸೇವಿಸುತ್ತವೆ. ಅತ್ಯಂತ ಬಲಶಾಲಿಯಾದ ಪ್ರಾಣಿ ಇದು. ಜೀರ್ಣಕ್ರಿಯೆಗೆ ಅನುವಾಗುವಂತೆ ತಣ್ಣೀರಿನಲ್ಲಿ ದೇಹವನ್ನು ಇವು ಬೆಚ್ಚಗಿಟ್ಟುಕೊಳ್ಳುತ್ತವೆ ಎಂದು ಪಕ್ಷಿ ತಜ್ಞರು ಮಾಹಿತಿ ನೀಡುತ್ತಾರೆ.

ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ, ಭೂತಾನ್, ಮ್ಯಾನ್ಮರ್, ಥಾಯ್ಲೆಂಡ್, ವಿಯೆಟ್ನಾಂ, ಮಲೇಷ್ಯಾ, ಸಿಂಗಪುರ, ಇಂಡೊನೇಷ್ಯಾ ನೀರು ನಾಯಿಗಳ ಆವಾಸ ಸ್ಥಾನಗಳಾಗಿವೆ.

ನೀರುನಾಯಿಗಳದ್ದು ನಾಚಿಕೆ ಸ್ವಭಾವ. ಮನುಷ್ಯರು ಕ್ಯಾಮೆರಾ ಹಿಡಿದು ನಿಂತದ್ದನ್ನು ಕಂಡಾಗ ಸಹಜವಾಗಿರದೆ ನಾಟಕೀಯವಾಗಿ ಒನಪು ವಯ್ಯಾರ ಮಾಡುತ್ತವೆ. ಆ ಸ್ಥಳದಿಂದ ಬೇರೆಡೆಗೆ ಓಡಿಹೋಗಲು ಹವಣಿಸುತ್ತಿರುತ್ತವೆ. ಫೋಟೊಗಳನ್ನು ತೆಗೆಯುವಾಗ ಅವುಗಳ ಉತ್ತಮ ನೋಟಕ್ಕಾಗಿ ಹರಸಾಹಸ ಮಾಡಬೇಕು. ಕ್ಷಣಾರ್ಧದಲ್ಲಿ ಅವು ನೀರಿನಲ್ಲಿ ಮಾಯವಾಗುತ್ತವೆ.

ಮೀನುಗಾರರ ಜೀತಗಾರ

ನೀರು ನಾಯಿಗಳು ಬಾಂಗ್ಲಾದೇಶ ಮತ್ತು ಪಾಕಿಸ್ತಾನದಲ್ಲಿ ಮೀನುಗಾರರ ಜೀತದಾಳುಗಳಾಗಿ ದುಡಿಯುತ್ತವೆ. ಮೀನುಗಳನ್ನು ಹಿಡಿಯುವಲ್ಲಿ ಅವರೊಂದಿಗೆ ಕೈಜೋಡಿಸುತ್ತವೆ. ಗುಂಪು ಗುಂಪಾಗಿರುವ ಮೀನುಗಳನ್ನೆಲ್ಲಾ ಬೆನ್ನಟ್ಟುವ ನೀರುನಾಯಿಗಳು, ಮೀನುಗಾರರ ಬಲೆಗೆ ಅವು ಬೀಳುವಂತೆ ಮಾಡಲು ನೆರವಾಗುತ್ತವೆ.

ಐಯುಸಿಎನ್(ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್) ಅಂತರರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟ ದೃಢಪಡಿಸಿದಂತೆ 12 ಪ್ರಭೇದಗಳ ಜೀವಿಗಳು ಅಳಿವಿನ ಅಂಚಿನಲ್ಲಿವೆ. ಅದರ ಬೇಟೆ ಮತ್ತು ನೈಸರ್ಗಿಕ ಸಂಪತ್ತು ಹಾಳಾಗುತ್ತಿರುವುದರಿಂದ ನೀರುನಾಯಿಗಳ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ದೃಢಪಡಿಸಿದೆ. ನೀರುನಾಯಿಗಳನ್ನು ಬೇಟೆ ಆಡಿದರೆ ಹುಲಿಯನ್ನು ಬೇಟೆಯಾಡಿದರೆ ಕ್ರಮ ಜರುಗಿಸಲು ಇರುವ ಕಾನೂನೇ ಅನ್ವಯಿಸುತ್ತದೆ ಎಂದು ಪಕ್ಷಿಪ್ರೇಮಿ ವಿಜಯಕುಮಾರ್ ಇಟ್ಟಿಗಿ ಮಾಹಿತಿ ನೀಡಿದರು.

> **“ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿರುವ ತುಂಗಭದ್ರಾ ಹಿನ್ನೀರು ಪ್ರದೇಶ ಹಾಗೂ ಅಂಕಸಮುದ್ರ ಪಕ್ಷಿ ಸಂರಕ್ಷಿತ ವಲಯ ಪ್ರದೇಶವನ್ನು ನೀರುನಾಯಿಗಳ ಸಂರಕ್ಷಿತ ವಲಯ ಎಂದು ಘೋಷಿಸಬೇಕು. ಪಕ್ಷಿಧಾಮದಲ್ಲಿ ಸಂಗ್ರಹಗೊಂಡಿರುವ ನೀರು ಕಲುಷಿತವಾಗದಂತೆ ಎಚ್ಚರವಹಿಸಬೇಕು. ಇಲ್ಲದಿದ್ದರೆ ಪಕ್ಷಿ ಸಂಕುಲಕ್ಕೆ ಅಪಾಯ. ನೀರುನಾಯಿಗಳಿಗೆ ಶುದ್ಧವಾದ ನೀರು ಬೇಕು. ಕಲುಷಿತ ವಾತಾವರಣ ಇದ್ದರೆ ಅಲ್ಲಿಂದ ಕಾಲು ಕೀಳುತ್ತವೆ.”**
>
> ವಿಜಯಕುಮಾರ್ ಇಟ್ಟಿಗಿ
> ವನ್ಯಜೀವಿ ಪ್ರೇಮಿ, ಹಗರಿಬೊಮ್ಮನಹಳ್ಳಿ

‘ನಿರುತ್ತರ’ ಎಂಬ ಮಾಯಾಲೋಕ

ಮೂಡಿಗೆರೆಯ ಕಾಡು, ಕಾಫಿ ತೋಟದ ನಡುವೆ ಇರುವ ‘ನಿರುತ್ತರ’ದಲ್ಲಿ ತೇಜಸ್ವಿ ಇಲ್ಲದೆ ಒಂದೂವರೆ ದಶಕ. ಅವರ ಪತ್ನಿ ರಾಜೇಶ್ವರಿ ಇಲ್ಲದೆ ಒಂದೂವರೆ ವರ್ಷ. ತೇಜಸ್ವಿಯವರ ಪರಿಸರ ಬರಹದ ಶಕ್ತಿಕೇಂದ್ರವೇ ಆಗಿತ್ತು ಈ ‘ನಿರುತ್ತರ’. ಅದರ ಸುತ್ತಲಿನ ತೋಟವನ್ನು ಇತ್ತೀಚೆಗೆ ಗಮನಿಸಿ, ಅನುಭವಿಸಿ ಬಂದ ಓದುಗ ಒಡನಾಡಿಯ ಲೇಖನವಿದು.

ನರೇಂದ್ರ ರೈ ದೇರ್ಲ

ಬರಹದ ದಾರಿಯಲ್ಲಿ ಪೂರ್ಣಚಂದ್ರ ತೇಜಸ್ವಿಯವರನ್ನು ಅರ್ಥೈಸುವುದಕ್ಕೂ ಬದುಕಿನ ದಾರಿಯಲ್ಲಿ ತಿಳಿಯುವುದಕ್ಕೂ ವ್ಯತ್ಯಾಸವಿದೆ. ಈ ಎರಡನೆಯ ಭಾಗ್ಯವನ್ನು ಹೆಚ್ಚು ಗಮನಿಸಿ, ಅನುಭವಿಸಿದವನು ನಾನು. ತೇಜಸ್ವಿಯವರು ನೇರಾನೇರವಂತೆ, ಓದುಗರೊಂದಿಗೆ ಹೆಚ್ಚು ಬೆರೆಯುವುದಿಲ್ಲವಂತೆ, ಮೌನಿಯಂತೆ ಎಂದೆಲ್ಲಾ ಹಿಂದೆ ಮಾತನಾಡುವವರನ್ನು ಕೇಳಿದ್ದೇನೆ, ನೋಡಿದ್ದೇನೆ. ಆದರೆ ನಿಜವಾಗಿ ತೇಜಸ್ವಿಯವರು ಹಾಗಿರಲಿಲ್ಲ. ಅವರು ದಿನದ ಸಮಯವನ್ನು ಹಾಳಾಗಲು ಬಿಡುತ್ತಿರಲಿಲ್ಲ. ಜಗಲಿ ಹರಟೆ ಅವರಿಗೆ ಇಷ್ಟವಿರಲಿಲ್ಲ. ಅವರು ಕಾಡು, ಕಾಫಿ ತೋಟವನ್ನು ಆಯ್ಕೆ ಮಾಡಿಕೊಂಡು ‘ನಿರುತ್ತರ’ವನ್ನು ತನಗೆ ಬೇಕಾದಂತೆ ಕಟ್ಟಿಕೊಂಡದ್ದೇ ಅದಕ್ಕೆ. ಜನಾರಣ್ಯದ ಮಧ್ಯೆ ತಾನು ಕಳೆದು ಹೋಗಬಾರದೆಂಬ ಹಠಕ್ಕೆ!

ಹಾಗೆ ನೋಡಿದರೆ ಇವತ್ತಿಗೂ ದಿನದ ಇಪ್ಪತ್ನಾಲ್ಕು ಗಂಟೆ ಪೂರ್ಣ ಒದಗುವುದು ಈ ನೆಲದ ಕೃಷಿಕರಿಗೇ. ಅಲ್ಲಿ ಅವರು ಸಮಯದೊಂದಿಗೇ ಬಾಳುತ್ತಾರೆ. ನಾಗರಿಕ ಜಗತ್ತಿನಿಂದ ದೂರವಾಗಿ ತೇಜಸ್ವಿ ‘ನಿರುತ್ತರ’ವನ್ನು ಕಟ್ಟಲು ಬಲವಾದ ಕಾರಣ ಇದೊಂದೇ. ಅದು ಪ್ರಶ್ನೆ, ಉತ್ತರ ಎರಡೂ ಇಲ್ಲದ ಜಾಗ ಮತ್ತು ಆ ನಿರುದ್ವಿಗ್ನ ಏಕಾಂತದಲ್ಲಿ ತನಗೆ ತಾನೇ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವ ಜಾಗ. ತೇಜಸ್ವಿ ‘ನಿರುತ್ತರ’ದಲ್ಲಿ ಇದ್ದಷ್ಟು ದಿನ ಅದನ್ನೇ ಮಾಡಿದ್ದು ಮತ್ತು ಹೆಚ್ಚು ನೈತಿಕವಾಗಿ ಬದುಕಿದ್ದು. ಅವರ ಶಿಷ್ಯ ಶಿವ ಈಗಲೂ ತೇಜಸ್ವಿ ಮುದ್ದಿಸಿಟ್ಟು ಹೋಗಿರುವ ಹಸಿರನ್ನು ಹಾಗೆಯೇ ನಳನಳಿಸುವಂತೆ ನೋಡಿಕೊಳ್ಳುತ್ತಿದ್ದಾರೆ.

ಮನುಷ್ಯ ಹೆಚ್ಚು ನೈತಿಕವಾಗಿ ಬಾಳಲು ನೆಲ, ಕಾಡು, ಹಸಿರು, ಕೆಸರು ಕೊಡುವಷ್ಟು ಪಾಲು ನಗರ, ಮಹಾನಗರಗಳು ಇವತ್ತು ಕೊಡಲಾರವು. ಮೋಸ, ವಂಚನೆ, ಹುಸಿ ನಗುಗಳಿಗೆ ಪಟ್ಟಣ ಹೆಚ್ಚು ಅವಕಾಶ ಮಾಡಿ ಕೊಡುತ್ತದೆ. ಅಲ್ಲಿ ಮನುಷ್ಯ ಹೆಚ್ಚು ಮಾತನಾಡಬೇಕಾಗುತ್ತದೆ. ತೇಜಸ್ವಿ ಹಾಗಲ್ಲ, ಅವರು ಹೆಚ್ಚು ಮಾತನಾಡಿದ್ದು, ಬಾಳಿದ್ದು ಕೀಟ, ಪತಂಗ, ನಾಯಿ, ಮೀನು, ಹಕ್ಕಿ, ಉಡ, ಇರುವೆಗಳೊಂದಿಗೆ. ಪ್ಯಾರ, ವೆಂಕ್ಟ, ಮಂದಣ್ಣ, ಬಿರಿಯಾನಿ ಕರಿಯಪ್ಪ ಮುಂತಾದ ನೆಲದುಡಿಮೆಯ ಆಳುಗಳೊಂದಿಗೆ. ನಗರ ಇಡುವ ಹೆಜ್ಜೆಯಡಿಯಲ್ಲಿ ಅವರು ಏನೂ ಹುಡುಕಲಿಲ್ಲ. ಅವರಿಗೆ ತಮ್ಮ ಕಾಫಿ ತೋಟದ ಮೂಲೆ ಮೂಲೆಯೂ ವಿಸ್ಮಯದ ಆಕರಗಳೇ. ಕೃಷಿಕರ ಬದುಕು ಯಾವಾಗಲೂ ಹೀಗೆಯೇ, ದಿನಾ ನಡೆಯುವ ಅದೇ ಗದ್ದೆಯ ಬದು, ಕೆರೆಯ ದಂಡೆ, ತೆಂಗು ಕಂಗುಗಳ ಬುಡ, ಮುಳ್ಳುಬೇಲಿಯ ಮೇಲೆ ಕೂತ ಕಪ್ಪೆ, ತೆನೆಯಿಂದ ಉರುಳುವ ಮಂಜುನೀರು ಎಲ್ಲವೂ ಏನಾದರೂ ಕೊಡುತ್ತಲೇ ಇರುತ್ತವೆ!


ಎಷ್ಟೋ ಬಾರಿ ‘ದೇರ್ಲ, ಒಂದೈದು ನಿಮಿಷ... ಈಗ ಬಂದೆ. ಇಲ್ಲೇ ಕೂತಿರಿ’ ಎಂದು ನಿರುತ್ತರದ ಜಗಲಿಯಲ್ಲಿ ಕೂರಿಸಿ ತೇಜಸ್ವಿ ಎಲ್ಲೂ ಹೋಗದೆ ಅದೇ ಜಗಲಿಯಲ್ಲಿ ಸುತ್ತಾಡಿದ್ದನ್ನು ನಾನು ಗಮನಿಸಿದ್ದೇನೆ. ತೇಜಸ್ವಿ ಕಾಡಿಗೋ, ಕೆರೆದಂಡೆಗೋ, ತೋಟಕ್ಕೋ ಇಳಿಯದೆ ನನಗೆ ಕಾಣುವಷ್ಟೇ ದೂರದಲ್ಲಿ ಅದ್ಯಾವುದೋ ಜೇಡರ ಬಲೆ ಮುಂದೆ ಧ್ಯಾನಸ್ಥನಾದುದನ್ನು ಗಮನಿಸಿದ್ದೇನೆ. ಇಂಥ ಮರೆಯುವ ಶಕ್ತಿಯನ್ನು ಹಳ್ಳಿ, ತೋಟವಲ್ಲದೆ ಒತ್ತಡದ ತ್ರಿಶಂಕು ಮಹಾನಗರ ಕೊಡಲು ಸಾಧ್ಯವೇ?

ತೇಜಸ್ವಿ ಇದ್ದಬದ್ದ ಮರಗಳನ್ನು ತೆಗೆದು ಮಟ್ಟಸ ಸವರಿ ಮನೆ ಕಟ್ಟಲಿಲ್ಲ. ಮರಗಳ ನಡುವೆಯೇ ಅವುಗಳನ್ನು ಮುಟ್ಟದೆ ‘ನಿರುತ್ತರ’ವನ್ನು ಕಟ್ಟಿದರು. ಮರದ ಗೆಲ್ಲು ಮನೆ ಮಾಡಿಗೆ ತಾಗಬಾರದು, ಬೇರು ಒಳಗಡೆ ನುಸುಳಬಾರದು, ಚಾವಣಿಗೆ ಗೆದ್ದಲು ಹತ್ತಬಾರದು, ಮನೆ ಸುತ್ತ ಅಂಗಳ ಬೇಕು, ಅಂಗಳ ಸುತ್ತ ನರಿ ನಾಯಿಗಳು ನುಸುಳದಂತೆ ಗೋಡೆ, ಗೇಟು ಬೇಕು, ನೆಲದ ಮೇಲೆ ಸಿಮೆಂಟು ಇಂಟರ್‌ಲಾಕ್ ಹಾಕಬೇಕು- ಇದ್ಯಾವುದೂ ತೇಜಸ್ವಿಯವರಿಗೆ ಮುಖ್ಯವಾಗಲೇ ಇಲ್ಲ. ಅವರ ಮನೆ ಹಿಂದೆ ಮುಂದೆ ಭಾಗಶಃ ನವನಾಗರಿಕತೆಯ ಕುರುಹುಗಳೂ ಇಲ್ಲ. ಈ ಕಾರಣಕ್ಕಾಗಿಯೇ ಮರಬಿದ್ದು, ಗೆದ್ದಲು ಹಿಡಿದು ಅವರು ಆಗಾಗ ಮನೆ ರಿಪೇರಿ ಮಾಡಿಸಬೇಕಾಯಿತು. ಭೂಮಿಯಾಳದ ಬೇರು ನುಸುಳಿ ಸಿಮೆಂಟು, ನೆಲ, ಜಗಲಿ ಮುರಿಯುವುದು ಇದ್ದೇ ಇದೆ.

9ನೇ ಪುಟಕ್ಕೆ...



ತೇಜಸ್ವಿ ವಾಸವಿದ್ದ ‘ನಿರುತ್ತರ’ ಈಗಲೂ ಹಸಿರಿನಿಂದ ನಳನಳಿಸುತ್ತಿದೆ



ಪೂರ್ಣಚಂದ್ರ ತೇಜಸ್ವಿ

ಅನನ್ಯ ಕಲೆಗಳ ಅಪರೂಪದ ಭಂಡಾರ

ಗ್ಯಾಲರಿ



ಅದಿತಿ ಆರ್ಟ್ ಗ್ಯಾಲರಿಯಲ್ಲಿ ಸಂಗ್ರಹಿಸಲಾಗಿರುವ ಮುಖವಾಡಗಳು

ಎಚ್‌ಎಸ್ ನವೀನ ಕುಮಾರ್


‘ಕಟ್ಟಿಗೆಯ ಹೊರೆಯನು ಹೊತ್ತರೂ ತಲೆ ಮೇಲೆ ಇರಲೊಂದು ಹೂವು.. ಹೊರೆ ಭಾರವಾದಾಗ ಹೂವಿನ ಕಂಪೊಳು ಕಡಿಮೆ ಎಂದೆನಿಪುದು ನೋವು’ ಎಂಬುದಾಗಿ ಹಿರಿಯ ಕವಿ ಎಸ್.ವಿ ಪರಮೇಶ್ವರ ಭಟ್ಟರು ತಮ್ಮ ‘ಇಂದ್ರ ಚಾಪ’ದಲ್ಲಿ ಹೇಳುತ್ತಾರೆ. ಬದುಕೆಂಬ ಪಯಣದಲ್ಲಿ ನಿತ್ಯವೂ ಹತ್ತು ಹಲವು ಒತ್ತಡಗಳ ಕಟ್ಟಿಗೆಯ ಹೊರೆಯನ್ನು ಹೊತ್ತು ಸಾಗುವ ನಮಗೆ ‘ಸದಭಿರುಚಿ’ ಎಂಬ ತುರುಬಿನ ಹೂವಿದ್ದರೆ, ಹೊರೆಯ ಭಾರ ಕಡಿಮೆ ಎನಿಸುವುದು ಖಚಿತ. ಅಂತಹ ಸದಭಿರುಚಿಯ ಅತ್ಯಂತ ಸೃಜನಾತ್ಮಕ ಅಭಿವ್ಯಕ್ತಿಯನ್ನು ಉಡುಪಿಯ ಪ್ರಖ್ಯಾತ ಮೂಳೆ ಶಸ್ತ್ರ ಚಿಕಿತ್ಸಕ ಡಾ.ಕಿರಣ್ ಆಚಾರ್ಯ ಅವರ ‘ಅದಿತಿ ಆರ್ಟ್ ಗ್ಯಾಲರಿ’ಯಲ್ಲಿ ನೋಡಬಹುದು. ರಾಜ್ಯದ ಹಿರಿಯ ಮುತ್ಸದ್ದಿ ಹಾಗೂ ಮಾಜಿ ಸಚಿವರಾಗಿದ್ದ ಡಾ.ವಿ. ಎಸ್. ಆಚಾರ್ಯರ ಪುತ್ರರಾದ ಡಾ.ಕಿರಣ್ ಆಚಾರ್ಯ ತಮ್ಮ 50 ವರ್ಷ ವಯಸ್ಸಿನೊಳಗೆ ನೂರು ದೇಶ ಸುತ್ತ ಬೇಕೆಂಬ ಮಹತ್ವಾಕಾಂಕ್ಷೆಯ ಗುರಿಯನ್ನು 2019ರಲ್ಲಿಯೇ ಪೂರೈಸಿದ್ದಾರೆ. ಈ ದೇಶಗಳಲ್ಲಿ ತಾವು ತೆಗೆದ ಅತ್ಯದ್ಭುತ ಛಾಯಾಚಿತ್ರಗಳು, ಸಂಗ್ರಹಿಸಿದ ಅಮೂಲ್ಯ ವಸ್ತುಗಳು, ಅತ್ಯಪೂರ್ವ ಮುಖವಾಡಗಳನ್ನು ಒಟ್ಟಾಗಿ ಕಲೆ ಹಾಕಿ ಉಡುಪಿ ನಗರದಲ್ಲಿ ಸಮಾನಮನಸ್ಕರೊಡಗೂಡಿ ‘ಅದಿತಿ ಆರ್ಟ್ ಗ್ಯಾಲರಿ’ ಎಂಬ ಖಾಸಗಿ ಕಲಾ ಗ್ಯಾಲರಿಯನ್ನು ತೆರೆದಿದ್ದಾರೆ. ಅದಿತಿ ಅವರ ಮಗಳ ಹೆಸರೂ ಹೌದು ಜೊತೆಗೆ ADITI ಯನ್ನು ವಿಸ್ತರಿಸಿದರೆ, A- ART(ಕಲೆ), D-DANCE(ನೃತ್ಯ), I-IMAGING(ಛಾಯಾಗ್ರಹಣ), T- THEATRE (ರಂಗಭೂಮಿ), I- INTRERACTION(ಸಂವಹನ) ಎಂದಾಗುತ್ತದೆ.



ಈ 5 ಸೃಜನಶೀಲ ಕಲೆಗಳಿಗೆ ಈ ಗ್ಯಾಲರಿ, ಕರಾವಳಿಯ ಸಾಂಸ್ಕೃತಿಕ ಜೀವನಾಡಿಯಾದ ಉಡುಪಿಯಲ್ಲಿ ಒಂದು ವಿಶಿಷ್ಟ ವೇದಿಕೆಯಾಗಿ ರೂಪುಗೊಂಡಿದೆ. ಡಾ.ಕಿರಣ್ ಆಚಾರ್ಯ ಅವರು ಹೇಳುವಂತೆ, ಅವರ ತಂದೆ ವಿ ಎಸ್ ಆಚಾರ್ಯ ‘Journey is a reward destination is a bonus’ ಎನ್ನುತ್ತಿದ್ದರಂತೆ. ಅದರಂತೆ ಪ್ರಪಂಚದ ನಾಲ್ಕು ದಿಕ್ಕುಗಳಲ್ಲಿ ಸಂಚರಿಸಿರುವ ಡಾ.ಕಿರಣ್ ಆಚಾರ್ಯರು, ಅಲ್ಲಿನ ಸ್ಥಳೀಯರ, ಮೂಲ ನಿವಾಸಿಗಳ ಜೊತೆಗಿದ್ದು ಅವರ ವಿಶಿಷ್ಟ ಸಂಪ್ರದಾಯ ಆಚರಣೆಗಳನ್ನು ದಾಖಲಿಸುತ್ತಾರೆ. ಆಯಾ ದೇಶಗಳಿಗೆ ವಿಶೇಷವಾದ ಸಾಕುಪ್ರಾಣಿಗಳ, ವನ್ಯಜೀವಿಗಳ ಫೋಟೋಗಳನ್ನು ಕ್ಲಿಕ್ಕಿಸುತ್ತಾರೆ. ಪ್ರತಿ ದೇಶದಲ್ಲೂ ಮುಖ್ಯವಾಗಿ ಹಳ್ಳಿ ಬದಿಗಳನ್ನೇ ಕೇಂದ್ರವಾಗಿರಿಸಿಕೊಂಡು ಪಯಣಿಸುವ ಕಿರಣ್ ಆಚಾರ್ಯ ಸ್ಥಳೀಯ ಆಹಾರವನ್ನೇ ಆಸ್ವಾದಿಸುತ್ತಾರೆ. ಸಂಪೂರ್ಣ ಸಸ್ಯಾಹಾರಿ ಆದ ಅವರಿಗೆ ಅತ್ಯಂತ ವಿಚಿತ್ರ ಮಾಂಸ ಆಹಾರದ ಅನುಭವವೂ ಆಗಿದೆ. ಒಂದೆಡೆ ಹುರಿದ ಚೇಳೇ ಅಲ್ಲಿನ ಜನರ ಆಹಾರವಾಗಿತ್ತಂತೆ! ‘ನನ್ನ ಅದೃಷ್ಟಕ್ಕೆ ಅಲ್ಲಿ ಹುರಿದ ಬಾಳೆಹಣ್ಣು ಇತ್ತು’ ಎಂದು ನಗುತ್ತಾ ಹೇಳುತ್ತಾರೆ ಡಾಕ್ಟರ್ ಕಿರಣ್ ಆಚಾರ್ಯ.

ಸಾಂಸ್ಕೃತಿಕ ಕಾರ್ಯಗಳಿಗೆ ಟ್ರಸ್ಟ್ ಆರಂಭ

ಈ ದೇಶ ಸುತ್ತುವ ಹವ್ಯಾಸವನ್ನು 1999ರಲ್ಲಿ ತಮ್ಮ ವೈದ್ಯ ವೃತ್ತಿಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವುದರ ಮೂಲಕ ಆರಂಭಿಸಿದ ಡಾಕ್ಟರ್ ಆಚಾರ್ಯರು, ಅಲ್ಲಿನ ವಿಶಿಷ್ಟ ವಸ್ತುಗಳು, ಮುಖವಾಡಗಳ ಸಂಗ್ರಹಣೆಗೆ ಹಾಗೂ ಅತ್ಯಪೂರ್ವ ಛಾಯಾಗ್ರಹಣಕ್ಕೆ ವಿಸ್ತರಿಸಿ ಅವನ್ನು ಅತ್ಯಂತ ವ್ಯವಸ್ಥಿತವಾಗಿ ಕೂಡಿಡುವ ಕೆಲಸವನ್ನು ಆರಂಭಿಸಿದರು. ಈ ವಿಶಿಷ್ಟ ಸಂಗ್ರಹಣೆಗೆ 2014ರಲ್ಲಿ ‘ಅದಿತಿ ಆರ್ಟ್ ಗ್ಯಾಲರಿ’ ಎಂಬ ಹೆಸರು ನೀಡಿದರು. ತಮ್ಮ ಪತ್ನಿ ಭರತನಾಟ್ಯ ಹಾಗೂ ಕರ್ನಾಟಕ ಸಂಗೀತ ಕಲಾವಿದೆ ವಿದುಷಿ ಪ್ರತಿಮಾ ಕಿರಣ್, ಉಡುಪಿಯ ಹಿರಿಯ ಪ್ರಖ್ಯಾತ ಛಾಯಾಚಿತ್ರ ಪತ್ರಕರ್ತ ಆಸ್ಟ್ರೋ ಮೋಹನ್ ಅವರ ಪತ್ನಿ ಭರತನಾಟ್ಯ ಕಲಾವಿದೆ ವಿದುಷಿ ಪ್ರವೀಣಾ ಮೋಹನ್ ಮುಂತಾದವರ ಜೊತೆಗೂಡಿ ಒಂದು ಟ್ರಸ್ಟ್ ಆರಂಭಿಸಿದರು.



ಡಾ.ಕಿರಣ್ ಆಚಾರ್ಯ

ತಾವು ಪ್ರಾರಂಭಿಸಿದ ಟ್ರಸ್ಟ್ ಮೂಲಕ ಚಿತ್ರಕಲೆ, ನೃತ್ಯ, ಸಂಗೀತ, ಸಂವಹನ, ಮುಂತಾದ ಸೃಜನಶೀಲ ಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾರಂಭಿಸಿದರು. ಈ ಆರ್ಟ್ ಗ್ಯಾಲರಿಯಲ್ಲಿ ಪ್ರತಿ ಬಾರಿಯೂ ಕೆಲ ತಿಂಗಳುಗಳ ಕಾಲ, ದೇಶ, ವಿದೇಶದ ಪ್ರಖ್ಯಾತ ಚಿತ್ರ ಕಲಾವಿದರ ಚಿತ್ರ ಪ್ರದರ್ಶನ ಆಯೋಜನೆಗೊಳ್ಳುತ್ತದೆ. ಈ ಕಲಾವಿದರು ತಮ್ಮದೇ ಆದ ಥೀಮ್ ನಲ್ಲಿ ಮೂಡಿಸಿರುವ ಅದ್ಭುತ ಚಿತ್ರಗಳ ಸವಿಯನ್ನು ಕಲಾಸಕ್ತರು ಸವಿಯುತ್ತಾರೆ. ಅತ್ಯಂತ ವಿಶಿಷ್ಟ ಮುಖವಾಡಗಳ ಪ್ರದರ್ಶನ, UNMASKING THE MASK ಕೂಡ ಇಲ್ಲಿ ನಡೆಯುತ್ತದೆ. ಇವುಗಳ ಜೊತೆಗೆ ಬಹಳ ಹಿಂದೆ ಬಳಸಲಾಗುತ್ತಿದ್ದ ವೈದ್ಯರ ಪೋರ್ಟಬಲ್ ಫಾರ್ಮಸಿ ಪೆಟ್ಟಿಗೆ, ಅತ್ಯಂತ ವಿಶಿಷ್ಟವಾದ ಬರವಣಿಗೆಯ ಮೇಜು, ಕಂಚಿನ ಪಡ್ಡು ಕಾವಲಿ, ಅತ್ಯಂತ ವಿಶಿಷ್ಟವಾದ ಕಲ್ಲಿನ ಶಿಲ್ಪಗಳು, ಪೂಜೆಗೆ ಬಳಸುತ್ತಿದ್ದ ಮರದ ವಿಭೂತಿ ಕರಡಿಗೆ, ಭಾರತ ಸಂವಿಧಾನದ ಕರಡು ಪ್ರತಿ, ಬಹಳ ಅಪರೂಪದ ಬೆಂಕಿ ಪೊಟ್ಟಣಗಳ ಸಂಗ್ರಹ, ವಿಶಿಷ್ಟವಾಗಿ ಶಬ್ದ ಮಾಡುವ ಮಲೇಷ್ಯಾದ ಮರದ ಕಪ್ಪೆ ಹೀಗೆ ಊಹಿಸಲಸಾಧ್ಯವಾದ ಹಲವಾರು ಅಪೂರ್ವ ವಸ್ತುಗಳ ಸಂಗ್ರಹವೂ ಇದೆ. ಈ ವಸ್ತುಗಳಲ್ಲಿ ಅಂದಿನ ದಿನಗಳಲ್ಲಿ ವೈದ್ಯರು ಬಳಸುತ್ತಿದ್ದ ಸಲಕರಣೆಗಳಾದ ಲೋಹದ ಸಿರಿಂಜುಗಳು, ನಂಜು ನಿರೋಧಕ ಸೋಪು, ಬರೆಯಲು ಬಳಸುತ್ತಿದ್ದ ವಿವಿಧ ಬಣ್ಣದ ಇಂಕುಗಳು, ಲೇಖನಿ ನಿಬ್ಬುಗಳನ್ನು ಯಥಾವತ್ತಾಗಿ ಸಂಗ್ರಹಿಸಿರುವುದು ಅತ್ಯಂತ ವಿಶಿಷ್ಟವಾಗಿದೆ ಹಾಗೂ ಇವು ಕಿರಣ್ ಆಚಾರ್ಯ ಅವರ ತಾಳ್ಮೆ ಸೂಕ್ಷ್ಮ ಗ್ರಹಿಕೆಗೆ ಹಿಡಿದ ಕನ್ನಡಿಯಾಗಿದೆ. ಅತ್ಯುತ್ತಮ ಕ್ಯಾಲಿಯೋಗ್ರಾಫರ್ ಕೂಡ ಆಗಿರುವ ಕಿರಣ್ ಆಚಾರ್ಯ ಅವರ ಕೈ ಬರವಣಿಗೆ ಕೂಡ ಅತ್ಯದ್ಭುತ. ಅತ್ಯುತ್ತಮ ಛಾಯಾಗ್ರಾಹಕರಾದ ಕಿರಣ್ ಆಚಾರ್ಯರು ಪ್ರಪಂಚದ ವಿವಿಧ ಭಾಗಗಳ ವನ್ಯಜೀವಿಗಳು ಹಾಗೂ ಪಕ್ಷಿಗಳ ಅತ್ಯಂತ ವಿಶಿಷ್ಟ ಚಿತ್ರಗಳನ್ನು ತಮ್ಮ ಕ್ಯಾಮೆರಾ ಕಣ್ಣಿನಲ್ಲಿ ಸೆರೆ ಹಿಡಿದಿದ್ದಾರೆ. ತಮ್ಮ ಪ್ರವಾಸದ ವೇಳೆ ತಾವು ನೋಡಿದ ಪ್ರತಿಯೊಂದು ಅಂಶವನ್ನು ಎಷ್ಟೇ ಹೊತ್ತಾದರೂ ತಮ್ಮ ಡೈರಿಯಲ್ಲಿ ನಮೂದಿಸಿ, ನಂತರ ಅದರ ಸ್ಕ್ರಾಪ್ ಬುಕ್ ಮಾಡಿಡುವ ಆಚಾರ್ಯರು ತಮ್ಮ ಪ್ರತಿ ವಿದೇಶ ಭೇಟಿಗೂ ಒಂದೊಂದು ಆಕರ್ಷಕ ವರ್ಣಮಯ ಹೊತ್ತಿಗೆಯನ್ನು ಸಿದ್ಧಪಡಿಸಿದ್ದಾರೆ. ಜೊತೆಗೆ ಬೇರೆ ಬೇರೆ ದೇಶಗಳಲ್ಲಿನ ಅಪೂರ್ವ ವಸ್ತುಗಳನ್ನು ಒಂದು ಮ್ಯಾಗ್ನೆಟ್ ಬೋರ್ಡ್‌ನಲ್ಲಿ ಜೋಡಿಸಿಟ್ಟು ಪ್ರತಿ ದೇಶದ ನೆನಪನ್ನು ಹಸಿರಾಗಿಸಿದ್ದಾರೆ. ಏಷ್ಯಾ, ಯುರೋಪ್, ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯಾ ಹೀಗೆ ಎಲ್ಲ ಖಂಡಗಳ 195 ದೇಶಗಳಲ್ಲಿ ನೂರಕ್ಕೂ ಹೆಚ್ಚು ದೇಶ ಸುತ್ತಿ ಅಲ್ಲಿನ ವಿಶಿಷ್ಟತೆ, ವಿಭಿನ್ನತೆಗಳನ್ನು ವಿವಿಧ ಸ್ವರೂಪಗಳಲ್ಲಿ ದಾಖಲಿಸಿದ್ದಾರೆ.

ಇತ್ತೀಚಿಗೆ ಉಡುಪಿಯಲ್ಲಿಯೇ ವೈದ್ಯನಾಗಿ ಆಸ್ಪತ್ರೆ ನಡೆಸುತ್ತಿರುವ ನನ್ನ ತಮ್ಮ ಡಾ.ನರೇಂದ್ರ ಕುಮಾರ್ ವಿಶಿಷ್ಟವಾದ ಬೇಸಿಗೆ ಶಿಬಿರವೊಂದನ್ನು ಆಯೋಜಿಸಿದ್ದರು. ಈ ಶಿಬಿರದ ಮಕ್ಕಳನ್ನು ಅದಿತಿ ಆರ್ಟ್ ಗ್ಯಾಲರಿಗೆ ಇಲ್ಲಿರುವ ವಿಶಿಷ್ಟ ಕಲಾಕೃತಿಗಳ ಪರಿಚಯ ಮಾಡಿಸುವ ಸಲುವಾಗಿ ಕರೆದೊಯ್ಯಲಾಗಿತ್ತು. ಆಗ ಡಾ.ಕಿರಣ್ ಆಚಾರ್ಯ ಅವರು ಮಕ್ಕಳಲ್ಲಿ ಮಕ್ಕಳಾಗಿ ಬೆರೆತು ಇಲ್ಲಿರುವ ಪ್ರತಿಯೊಂದು ವಿಶಿಷ್ಟ ವಸ್ತುಗಳನ್ನು ಅತ್ಯಂತ ಪ್ರೀತಿ ತನ್ಮಯತೆಯಿಂದ ಮಕ್ಕಳಿಗೆ ವಿವರಿಸಿದ್ದು ವಿಶಿಷ್ಟವಾಗಿತ್ತು. ಹಾಗೂ ಮುಂದಿನ ಪೀಳಿಗೆಗೆ ಇದನ್ನು ಪರಿಚಯಿಸುವ ಅವರ ಕೌತುಕ, ಮಕ್ಕಳ ಮನಸ್ಸಿನ ಮುಗ್ಧತೆ ಕುತೂಹಲ ಎದ್ದು ಕಾಣುತ್ತಿತ್ತು.

ವೃತ್ತಿಯಲ್ಲಿ ಮುರಿದ ಮೂಳೆ ಕೀಲುಗಳನ್ನು ಸರಿ ಮಾಡುವ ಡಾಕ್ಟರ್ ಕಿರಣ್ ಆಚಾರ್ಯರ ‘ಅದಿತಿ ಆರ್ಟ್ ಗ್ಯಾಲರಿ’ಯನ್ನು ಒಮ್ಮೆ ಹೊಕ್ಕು ಹೊರ ಬಂದರೆ, ಮುರಿದ ಮುದುಡಿದ ಮನಸ್ಸುಗಳೂ ರಿಪೇರಿಯಾಗುವುದು ಖಂಡಿತ. ಅಂದ ಹಾಗೆ ಇದು ಖಾಸಗಿ ಗ್ಯಾಲರಿ. ನಿಜವಾದ ಕಲಾಸಕ್ತರು, ಪೂರ್ವಾನುಮತಿಯೊಂದಿಗೆ ಮಾತ್ರ ಇದನ್ನು ವೀಕ್ಷಿಸಲು ಸಾಧ್ಯ.

ದೂಳಿನ ನಡುವೆಯೇ ಸಿಡಿದೆದ್ದ ದನಿ

ಭಾರತಿ ದೇವಿ ಪಿ.

ಐತಿಹಾಸಿಕ ಎಳೆಯುಳ್ಳ ‘ವಖಾರಿ ಧೂಸ’ ನಾಟಕವು ಎಲ್ಲಾ ಕಾಲದ ಚಳವಳಿಗಳ ಒಡಲ ಕತೆಯನ್ನು ಹೇಳುವಂತೆ ಕಾಣುತ್ತದೆ...

ರಂಗಭೂಮಿ

ಸುತ್ತಲೂ ತಂಬಾಕಿನ ದೂಳು, ದೂಳಿನ ಮಬ್ಬಿನ ನಡುವೆಯೇ ಅಸ್ಪಷ್ಟವಾಗಿ ಮೂಡುತ್ತಿರುವ ಆಕಾರಗಳು ನಿಧಾನವಾಗಿ ಸ್ಪಷ್ಟತೆ ಪಡೆಯುತ್ತಾ ಕಣ್ಣಮುಂದೆ ಮೂಡುತ್ತವೆ. ಕೆಮ್ಮು, ಅನಾರೋಗ್ಯ, ನರಳಾಟಗಳ ನಡುವೆಯೇ ತಮ್ಮ ತಮ್ಮ ಬದುಕಿನ ಪಾಡನ್ನು ಹೇಳುತ್ತಾ ಹೇಳುತ್ತಾ ನಮ್ಮ ನಡುವಿಂದಲೇ ಎದ್ದವರ ಹಾಗೆ ಪ್ರೇಕ್ಷಕರನ್ನು ತೆಕ್ಕೆಗೆ ತೆಗೆದುಕೊಂಡುಬಿಡುತ್ತವೆ. ‘ವಖಾರಿ ಧೂಸ’ ನಾಟಕ ತೆರೆದುಕೊಳ್ಳುವುದು ಹೀಗೆ. ಡಿ.ಎಸ್. ಚೌಗಲೆಯವರು ರಚಿಸಿದ ಈ ನಾಟಕವನ್ನು ಕಾಂತೇಶ ಕದರಮಂಡಲಗಿ ಅವರ ನಿರ್ದೇಶನದಲ್ಲಿ ಈಚೆಗೆ ಶಿವಮೊಗ್ಗದಲ್ಲಿ ‘ಸಹ್ಯಾದ್ರಿ ರಂಗತರಂಗ’ ತಂಡ ರಂಗದ ಮೇಲೆ ಅನಾವರಣಗೊಳಿಸಿತು.

‘ವಖಾರಿ’ ಎಂದರೆ, ತಂಬಾಕನ್ನು ಶುಚಿಗೊಳಿಸುವ ಗೋದಾಮು, ‘ಧೂಸ’ ಎಂದರೆ ದೂಳು. ಐತಿಹಾಸಿಕ ಎಳೆಯುಳ್ಳ ಈ ನಾಟಕ ಆ ಕಾಲದ ಹೋರಾಟದ ಕಥೆ ಹೇಳುತ್ತಲೇ ಎಲ್ಲಾ ಕಾಲದ ಚಳವಳಿಗಳ ಒಡಲ ಕತೆಯನ್ನು ಹೇಳುವಂತೆ ಕಾಣುತ್ತದೆ. ಎಂಬತ್ತರ ದಶಕದಲ್ಲಿ ನಿಪ್ಪಾಣಿಯಲ್ಲಿ ತಂಬಾಕು ಬೆಳೆಗಾರರು ಹೆದ್ದಾರಿ ತಡೆ ಮಾಡಿ ಪ್ರತಿಭಟಿಸಿದ್ದರು. ವ್ಯವಸ್ಥೆ ಇದಕ್ಕೆ ನಿರ್ದಯವಾಗಿ ಪ್ರತಿಕ್ರಯಿಸಿತ್ತು. ರೈತರು, ವಖಾರಿಯಲ್ಲಿ ಕೆಲಸ ಮಾಡುವ ಸ್ತ್ರೀ-ಪುರುಷರು, ಬೀಡಿಕಟ್ಟುವವರ ಬದುಕಿನ-ಬವಣೆ ಎಲ್ಲವುಗಳ ಹಿನ್ನೆಲೆಯಲ್ಲಿ ರಚನೆಗೊಂಡ ಈ ನಾಟಕ ಆ ಕಾಲದ ಕಥೆಯಾದರೂ ವರ್ತಮಾನಕ್ಕೆ ಕನ್ನಡಿ ಹಿಡಿಯುತ್ತದೆ.

ವಖಾರಿಗಳ ದೂಳಿನ ಮಧ್ಯೆ ಸೂಕ್ತ ಸೌಲಭ್ಯ, ವೇತನ ಇಲ್ಲದೆ ನಿರಂತರ ದುಡಿಯುತ್ತಿರುವ ಜನ. ಅದರಲ್ಲೂ ತಮ್ಮ ಅಸಹಾಯಕತೆಯಿಂದ ಮಾಲೀಕರ ಲೈಂಗಿಕ ದೌರ್ಜನ್ಯಕ್ಕೆ ತುತ್ತಾಗುವ ಹೆಣ್ಣುಮಕ್ಕಳು. ಹೀಗೆ ನವೆಯುತ್ತಾ ಬಡತನ, ಶೋಷಣೆ, ಅನಾರೋಗ್ಯದ ಕೊನೆಯಿಲ್ಲದ ಸುಳಿಯಲ್ಲಿ ಸಿಲುಕುವ ಈ ಬಡ ಮಂದಿ ಬದುಕಿನ ಆಧಾರವೇ ಕಿತ್ತು ಹೋಗುವ ಅಪಾಯ ಎದುರಿಸಿಯೂ ಶೋಷಕ ವ್ಯವಸ್ಥೆಯ ವಿರುದ್ಧ ಕಿಡಿಯಾಗುತ್ತಾರೆ. ಈ ಕಿಡಿ ಬೆಂಕಿಯಾಗದೇ ಹೋದರೂ ವ್ಯವಸ್ಥೆಯೆಂಬ ಬಟ್ಟೆಯನ್ನು ಛಿದ್ರ ಛಿದ್ರ ಮಾಡಿಬಿಡುತ್ತದೆ.



ಶಿವಮೊಗ್ಗದಲ್ಲಿ ‘ಸಹ್ಯಾದ್ರಿ ರಂಗತರಂಗ’ ತಂಡದಿಂದ ಪ್ರದರ್ಶನಗೊಂಡ ‘ವಖಾರಿ ಧೂಸ’ ನಾಟಕದ ದೃಶ್ಯ.

ಡಿ.ಎಸ್.ಚೌಗಲೆಯವರು ಕನ್ನಡ, ಮರಾಠಿ ರಂಗಭೂಮಿಗಳೆರಡರ ಸತುವನ್ನು ಮೈಗೂಡಿಸಿಕೊಂಡವರು. ಅವರ ಈ ನಾಟಕ ವಾಸ್ತವವನ್ನು ಅದರ ವಿಭಿನ್ನ ಪದರಗಳಲ್ಲಿ ಕಟ್ಟಿಕೊಡುತ್ತದೆ.

ಶೋಷಣೆಯ ವಿರುದ್ಧದ ಸಂಘರ್ಷ ಇಲ್ಲಿ ಸರಳರೇಖಾತ್ಮಕವಾದುದಲ್ಲ. ಇದನ್ನು ಅರ್ಥ ಮಾಡಿಕೊಂಡು ಕಾರ್ಮಿಕರ ಹಕ್ಕುಗಳಿಗಾಗಿ ಆಂದೋಲನ ನಿಧಾನಕ್ಕೆ ಆಕಾರ ಪಡೆಯುತ್ತಾ ಹೋಗುತ್ತದೆ. ಇದರ ಮುಂದಾಳತ್ವ ವಹಿಸಿಕೊಂಡವಳು ಭೀಮವ್ವ. ಈಕೆಗೆ ಬಡವರ ಸಂಕಟ, ಹೆಣ್ಣುಮಕ್ಕಳ ಅಸಹಾಯಕತೆ, ಎನ್.ಜಿ.ಒಗಳ ಹುನ್ನಾರ ಎಲ್ಲವುಗಳ ಅರಿವಿದೆ. ಜನರ ‘ಭೋಳೇತನ ಮತ್ತು ನಂಬಿಕೆಗಳು’ ಶೋಷಣೆಗೆ ದಾರಿಮಾಡಿಕೊಟ್ಟಿವೆ ಎಂಬುದು ಅವಳಿಗೆ ಅರ್ಥವಾಗಿದೆ. ಜೊತೆಗೆ ‘ಹೋರಾಟ ಅಂದರ ಐದು ಬೆರಳಿದ್ದಂಗ. ಒಂದೊಂದು ಬೆರಳಂದರೆ ಒಂದೊಂದು ಸಮುದಾಯದ ಪ್ರತಿನಿಧಿ’ ಎನ್ನುತ್ತಾ ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗಬೇಕೆನ್ನುವ ಮನಸ್ಸಿದೆ. ಒಂದಿಷ್ಟು ದನಿಯೆತ್ತಿದರೂ ಕೆಲಸ ಕಳೆದುಕೊಂಡು ಬದುಕಿಗೆ ಆಧಾರವೇ ಇಲ್ಲದಂತಾಗುವ ಸ್ಥಿತಿ ಇದ್ದರೂ ಈಕೆ ಸುತ್ತಲಿನ ಕಾರ್ಮಿಕರನ್ನು ಒಂದುಗೂಡಿಸುವ ಕೆಲಸ ಮಾಡುತ್ತಾಳೆ.

ಈ ಪ್ರಧಾನ ಎಳೆಯ ಜೊತೆಗೆ ವಖಾರಿಯ ಒಡೆಯ ಪಾರೀಸ ಗೌಡನ ಮನೆಯ ಚಿತ್ರಣ ಇದೆ. ಅವನ ಅಂಗವಿಕಲ ಮಗ ಬಾಹುಬಲಿ, ಮರುಗುವ ಕರುಳಿನ ಪತ್ನಿ ಪದ್ಮವ್ವ ನಿರಂತರ ಅವನ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸುತ್ತಿರುತ್ತಾರೆ. ಅಭಂಗಗಳನ್ನು ಹಾಡುತ್ತಾ ಕುಣಿಯುತ್ತಾ ಪಾಂಡುರಂಗ ವಿಠ್ಠಲನನ್ನು ಭಜಿಸುವ ವಾರಕರಿ ಪಂಥದ ಬಾಬಾ ಜನರ ಜೊತೆ ಇರುತ್ತಾ ಮನಸ್ಸಿನ ಕೊಳೆ, ಸಮಾಜದ ಕೊಳೆ ದೂರೀಕರಿಸುವ ಯತ್ನದಲ್ಲಿ ಬೆಂಬಲ ಕೊಡುತ್ತಾರೆ, ಇವರ ಒತ್ತಾಸೆಯಲ್ಲಿ ಆಂದೋಲನ ಗರಿಗಟ್ಟುತ್ತದೆ. ಅದೇ ಹೊತ್ತಿನಲ್ಲಿ ಊರ ಜಾತ್ರೆಗೆ ಪ್ರದರ್ಶಿಸಲು ನಡೆಯುತ್ತಿರುವ ‘ಸಂಗ್ಯಾ ಬಾಳ್ಯಾ’ ನಾಟಕ ತಾಲೀಮು ಒಳಗೊಳಗೇ ನಡೆಯುವ ದ್ರೋಹದ, ಸಂಚಿನ ಸುಳಿವು ಕೊಡುತ್ತಿರುತ್ತದೆ. ಹೀಗೆ ನಾಟಕ ಹಲವು ಆಯಾಮಗಳ ದರ್ಶನ ಮಾಡಿಸುತ್ತಾ ಹೋಗುತ್ತದೆ.

ಒಬ್ಬ ಹೆಣ್ಣಿನ ಕಣ್ನೋಟದಲ್ಲಿ ಆಂದೋಲನವನ್ನು ಕಟ್ಟುವ, ಕಾಣುವ ಬಗೆ ನಾಟಕದ ವಿಶೇಷವಾಗಿದೆ. ರಂಗದ ಮೇಲೆಯೂ ಇದು ಶಕ್ತವಾಗಿ ಮೂಡಿದೆ. ಇಲ್ಲಿ ಒಂದೆಡೆ ಭೀಮವ್ವ ಇದ್ದರೆ ಇನ್ನೊಂದೆಡೆ ಮನೆಯೊಳಗಿದ್ದೇ ಗಂಡನ ಠೇಂಕಾರವನ್ನು ವಿಮರ್ಶಿಸುವ, ನೊಂದವರ ಜೊತೆಗಿರುವ ಪಾರೀಸಗೌಡನ ಪತ್ನಿ ಪದ್ಮವ್ವ ಇದ್ದಾಳೆ. ತಮ್ಮ ಮೇಲಾಗುತ್ತಿರುವ ದೌರ್ಜನ್ಯಕ್ಕೆ ನಿರಂತರ ತಿರುಗೇಟು ನೀಡುತ್ತಿರುವ ಹೆಣ್ಣುಮಕ್ಕಳಿದ್ದಾರೆ. ನಾಟಕದ ಕೊನೆಯಲ್ಲಿ ಶೋಷಕ ಪಾರೀಸಗೌಡನ ಅಂಗವಿಕಲ ಮಗ ಬಾಹುಬಲಿ ತೊದಲುನುಡಿಯಲ್ಲಿ ಹೇಳುವ ‘ಹಂ ಹೋಂಗೇ ಕಾಮ್ ಯಾಬ್’ಗೆ ಎಲ್ಲರೂ ದನಿಗೂಡಿಸುವಾಗ ಪ್ರೇಕ್ಷಕರ ದನಿಯೂ ಸೇರಿಬಿಡುತ್ತದೆ.

ತಾವು ಎಲ್ಲವನ್ನೂ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುತ್ತೇವೆ ಎನ್ನುವವರ ಟೊಳ್ಳುತನ ನಾಟಕದಲ್ಲಿ ಬಯಲಾಗುತ್ತದೆ. ಏಕಕಾಲಕ್ಕೆ ಜಾತಿಕ್ರೌರ್ಯ, ವರ್ಗದ ಠೇಂಕಾರ, ಪಿತೃಪ್ರಾಧಾನ್ಯ ಎಲ್ಲವನ್ನೂ ಬುಡಮೇಲಾಗಿರುವ ಈ ಆಂದೋಲನ ಹಲವು ನೈತಿಕ, ರಾಜಕೀಯ ಪ್ರಶ್ನೆಗಳನ್ನು ಒಡಲೊಳಗೆ ಇರಿಸಿಕೊಂಡಿದೆ.

ನಿರ್ದೇಶಕ ಕಾಂತೇಶ್ ಕದರಮಂಡಲಗಿ ಈ ನಾಟಕದ ಪರಿವೇಶ ನೋಡುಗರ ಮನದಲ್ಲಿ ಮೂಡುವ ಹಾಗೆ ಕಟ್ಟಿಕೊಟ್ಟಿದ್ದಾರೆ. ತಂಡದ ಬಹುತೇಕ ಕಲಾವಿದರು ವೃತ್ತಿ ಕಲಾವಿದರಲ್ಲ. ಬಾಹುಬಲಿ, ಪದ್ಮವ್ವ, ಭೀಮವ್ವ, ಪಾರೀಸಗೌಡ, ಬಾಬಾ ಮುಂತಾದ ಪಾತ್ರಗಳು ನಮ್ಮ ನಡುವಿಂದಲೇ ಎದ್ದು ಬಂದಂತಿದ್ದು ನೋಡುಗರ ಜೊತೆ ಸಂವಾದಿಸುವಂತೆ ಮೂಡಿಬಂದಿವೆ. ಅದರಲ್ಲೂ ಅಂಗವಿಕಲನಾದ ಬಾಹುಬಲಿ ಧಿಕ್ಕಾರ ಕೂಗುತ್ತಾ ಕರಪತ್ರ ಹಚ್ಚುವ ದೃಶ್ಯ ಮನದೊಳಗೆ ಇಳಿದುಬಿಡುತ್ತದೆ.

‘ನಿರುತ್ತರ’ ಎಂಬ ಮಾಯಾಲೋಕ

8ನೇ ಪುಟದಿಂದ...

ಸಾಮಾನ್ಯವಾಗಿ ಮನೆ ಕಟ್ಟುವಾಗ ಪಾಯಕ್ಕೆ ಕಲ್ಲಿಡುವ ಮೇಸ್ತ್ರಿಯಿಂದ ಹಿಡಿದು ಮಾಡಿಗೆ ಹಂಚು ಇಡುವ ಆಚಾರಿಯವರೆಗೆ ಸಲಹೆ ಸೂಚನೆ ಕೊಡುವವರು ನೂರಾರು ಜನ. ಸುಮ್ಮನೆ ರಿಕ್ಷಾದಲ್ಲಿ ಎರಡು ಚೀಲ ಸಿಮೆಂಟು ತಂದು ಹಾಕುವ ಡ್ರೈವರ್ ಕೂಡ ಒಂದೈದು ನಿಮಿಷ ಹೊಸಮನೆಯ ಪಾಯದಲ್ಲಿ ನಿಂತು ಸಲಹೆ ಕೊಡುತ್ತಾನೆ. ಕೇಳುವ ಜಾಯಮಾನ ತೇಜಸ್ವಿಯವರದ್ದಲ್ಲ. ಅವರು ಕಟ್ಟಿದ್ದು ಅವರ ಮನೆ. ಆದುದರಿಂದ ಆ ಮನೆಗೆ ಆಯಪಾಯ, ವಾಸ್ತು ಯಾವುದೂ ಇಲ್ಲ. ಸಮೃದ್ಧ ಗಾಳಿ ಬೆಳಕು, ವಿಶಾಲವಾದ ಹಜಾರ, ಜಗಲಿ ಎಲ್ಲದಕ್ಕಿಂತ ಹೆಚ್ಚು ಏಕಾಂತಕ್ಕೆ ಅಗತ್ಯವಿರುವುದೆಲ್ಲ ಅಲ್ಲಿದೆ. ಅದಕ್ಕಿಂತ ಹೆಚ್ಚು ಹೊರಗಡೆಯಿಂದಲ್ಲ, ನಿರುತ್ತರದ ಒಳಗಡೆಯಿಂದ ಹೊರಗಡೆ ನೋಡಬೇಕು. ಕಾಣಿಸುವ ನಿಬಿಡ ಹಸಿರು, ಕೆರೆ, ತೊರೆ, ಗಿಡಮರ ಬಳ್ಳಿಗಳು ಎಲ್ಲವೂ ಚೆಂದ ಚೆಂದ....

‘ನಿರುತ್ತರ’ದ ಪೋರ್ಟಿಕೊ ತುಂಬಾ ವಿಶಾಲವಾದುದು ಮತ್ತು ಪಾರದರ್ಶಕವಾದುದು. ಗಾಜಿನ ಕಿಟಕಿಯಿಂದ ಹೊರಗಡೆಯ ಕಾಡು, ಅಲ್ಲಿ ನಡೆಯುವ ನಿಸರ್ಗಕ್ರಿಯೆಯ ಸಮೀಪದರ್ಶನ ಮಾಡಿಸುವ ಏಕಾಂತವಿದು. ಎಷ್ಟೋ ಬಾರಿ ಹಕ್ಕಿ ಕೀಟಗಳು ನೇರವಾಗಿ ಬಂದು ಇಲ್ಲೊಂದು ಮನೆಯಿದೆ, ಕಿಟಕಿ ಗಾಜು ಇದೆ ಎಂಬುದನ್ನು ಮರೆತು ಕನ್ನಡಿಗೆ ಡಿಕ್ಕಿ ಹೊಡೆಯುತ್ತವೆ. ಗಂಗೆಹುಳು, ಇಂಬಳ, ಚೆರಟೆ ಜಗಲಿಗೆ ಹತ್ತಿ ಹರಿದಾಡುತ್ತವೆ. ಇದ್ದಕ್ಕಿದ್ದಂತೆ ಅಳಿಲು ಕಂಬದ ಮೇಲೆ ಹರಿದಾಡಿ ಮಾಯವಾಗುತ್ತದೆ. ಓಂತಿ ಅದ್ಯಾವುದೋ ಕಾಡು ಹಾವು ಜಗಲಿಯ ಗಿಡಗಳ ಮೇಲೆ ಹರಿದಾಡುತ್ತವೆ. ನೀರು ಬಾವಲಿ ಟ್ಯೂಬ್‌ಲೈಟ್ ಮೇಲೆಯೇ ಮಣ್ಣು ತಂದು ಗೂಡು ಕಟ್ಟಿದೆ. ಜಗಲಿಗೆ ದಿನಾ ಬೀಳುವ ಹೂವು, ತರಗೆಲೆ ಅವುಗಳನ್ನೆಲ್ಲಾ ಗುಡಿಸಿ ಸ್ವಚ್ಛ ಮಾಡಬೇಕಾದ ದಿನವಹೀ ಕೆಲಸ- ಇದೆಲ್ಲ ಕಾರಣಗಳಿಗೆ ನಗರಮುಖಿಗಳಿಗೆ ಇಂಥ ಮನೆಗಳಲ್ಲಿ ಬದುಕುವವರು ಅತಿಮಾನುಷರಾಗಿ ಕಾಣಿಸುತ್ತಾರೆ!

ತೇಜಸ್ವಿಯವರಲ್ಲಿ ಎರಡು ಸಮಯಗಳಿದ್ದವು. ಒಂದು ಅವರು ಬರೆಯುವ ಸಮಯ. ಇನ್ನೊಂದು ಬಾಳುವ ಸಮಯ. ಇವೆರಡಕ್ಕೂ ಕಾಡು ಅವರಿಗೆ ಪೂರಕವಾಗಿಯೇ ಇತ್ತು. ತೇಜಸ್ವಿಯವರ ಯಾವುದೇ ಕೃತಿಗಳನ್ನು ನೋಡಿ, ಪ್ರಬಂಧ, ಕತೆ, ಕಾದಂಬರಿ ಅವುಗಳಲ್ಲಿ ಬರುವ ಗರಿಷ್ಠ ಪಾತ್ರಗಳು ಕಾಫಿ ತೋಟದ ಕೆಲಸ, ಖರೀದಿ, ರಿಪೇರಿ ದುಡಿಮೆಗೆಂದು ‘ನಿರುತ್ತರ’ಕ್ಕೆ ಬಂದು ಹೋಗುವ ಪಾತ್ರಗಳೇ. ನಮ್ಮ ಮನೆಗಳಿಗೂ ಅಂತಹದ್ದೇ ಪಾತ್ರಗಳು ಬರುತ್ತವೆ. ಆದರೆ ಅವುಗಳ ಬಗ್ಗೆ ಅವರು ನೀಡುವ ಒಳಸುರಿಗಳ ಬಗ್ಗೆ ಬರೆಯಬಹುದೆಂದು ನಮಗೆ ಅನಿಸುವುದೇ ಇಲ್ಲ. ಹಾಗಂತ ತೇಜಸ್ವಿ ಹೊರಗಡೆ ನೋಡದವರೆಂದಲ್ಲ, ಅವರಿಗೆ ಮಂದಣ್ಣನೊಂದಿಗೆ ವಿಜ್ಞಾನಿ ಕರ್ವಾಲೋ ಕೂಡ ಗೊತ್ತು!

ಹಾರುವ ಓತಿಯ ಜತೆಗಿನ ಪ್ರಯಾಣವನ್ನೇ ಗಮನಿಸಿ. ಅಲ್ಲಿ ಮಂದಣ್ಣ ಮತ್ತು ಕರ್ವಾಲೋ ಜತೆ ಜತೆಯಾಗಿಯೇ ಸಾಗುತ್ತಾರೆ. ಕರ್ವಾಲೋ ದೃಷ್ಟಿ ಮೇಲ್ಮುಖ. ಅವರು ಓತಿಯನ್ನು ಮರದ ಮೇಲೆ ಹುಡುಕುತ್ತಾರೆ. ವಿಜ್ಞಾನ ಯಾವಾಗಲೂ ಹಾಗೆಯೇ ಮೇಲೆ ಮೇಲೆ ನೋಡುತ್ತದೆ. ಮಂದಣ್ಣ ಭಾಗಶಃ ನೆಲ ನೋಡಿಕೊಂಡೇ ಕಾಡಿನುದ್ದಕ್ಕೂ ಮಣ್ಣಿನ ಮೇಲೆಯೇ ನಡೆಯುತ್ತಾನೆ. ಈ ದೇಶದ ನಾಟಿ ಯಾವಾಗಲೂ ಹಾಗೆಯೇ ನೆಲಮುಖಿ. ಮಂದಣ್ಣ-ಕರ್ವಾಲೋ ಮೂಲಕ ತೇಜಸ್ವಿ ನೆಲ ಮತ್ತು ಆಕಾಶವನ್ನು ಮಲೆನಾಡಿನ ದಟ್ಟ ಕಾಡೊಳಗಡೆ ಜೋಡಿಸುತ್ತಾರೆ. ಸಾಮಾನ್ಯರಿಗೆ ಪಶ್ಚಿಮ ಘಟ್ಟದ ದಟ್ಟಾರಣ್ಯದೊಳಗೆ ಪೊದೆ, ತರಗೆಲೆಯ ಹಾಗೆ, ಹಸಿರು ಪೊದೆಯೊಳಗೆ ನೆಲವೂ ಕಾಣಿಸುವುದಿಲ್ಲ, ಆಕಾಶವೂ ಕಾಣಿಸುವುದಿಲ್ಲ. ಹಸಿರಿಗೆ ಎಲ್ಲವನ್ನೂ ಮುಚ್ಚುವ ಶಕ್ತಿ ಇದೆ.

ಇವೆರಡನ್ನೂ ಜೋಡಿಸುವ ತೇಜಸ್ವಿ ಸಾದ್ಯಂತವಾಗಿ ಆಕಾಶವನ್ನು ನೋಡಬಲ್ಲರು. ತರಗೆಲೆಯ ಹಾಸಿಗೆಯನ್ನು ಬಗೆದು ಕಾಡೊಳಗಡೆಯ ಒಂದು ಹಿಡಿ ಮಣ್ಣು ಹಿಡಿದು ಅಲ್ಲಿರುವ ಅಸಂಖ್ಯಾತ ಕ್ರಿಮಿಕೀಟಗಳ ಕತೆ ಹೇಳಬಲ್ಲರು. ಆಕಾಶಕಾಯ, ಭೂಮಿಯಡಿಯ ಖನಿಜ, ಮರದ ತೊಗಟೆಗಂಟಿದ ಕರ್ಕಶ ಶಬ್ದ ಮಾಡುವ ಜೀರುಂಡೆ ಬೇಡ ಬಿಡಿ, ತನ್ನ ಬೇಟೆಕೋವಿಯ ಗುರುಬಿಂದುವಿನ ಮೇಲೆ ಕೂತು ಅದ್ಯಾವುದೋ ಅನಾಮಿಕ ಕೀಟದ ಬಗ್ಗೆ ಹತ್ತಾರು ಪುಟ ಬರೆಯಬಲ್ಲರು.

ತೇಜಸ್ವಿ ಈ ಮಣ್ಣು, ಈ ಕೀಟ, ಈ ನಕ್ಷತ್ರ, ಈ ಆಕಾಶಕಾಯಗಳ ಕತೆ ಕಲಿತದ್ದು ತರಗತಿಯೊಳಗಡೆಯಲ್ಲ. ಸಸ್ಯಶಾಸ್ತ್ರ, ಕೀಟಶಾಸ್ತ್ರ, ಭೂಗೋಳ, ಜೀವವಿಜ್ಞಾನ ಇವು ಯಾವುದನ್ನೂ ಅವರು ತರಗತಿಯೊಳಗಡೆ ಗಂಭೀರವಾಗಿ ಓದಿದವರಲ್ಲ. ಅವರ ನಿರುತ್ತರ, ಸುತ್ತಲಿನ ತೋಟ, ಮೂಡಿಗೆರೆ, ಸುತ್ತಲಿನ ರೈತರು, ಕೃಷಿ ಕಾರ್ಮಿಕರು, ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ ಇಲಾಖೆಯ ಅಧಿಕಾರಿಗಳು, ಅರಣ್ಯ ಇಲಾಖೆಯ ಗಾರ್ಡುಗಳು, ರಸ್ತೆಗೆ ಡಾಂಬರು ಹಾಕುವವರು, ಮಂಗ ಕುಣಿಸುವವರು, ಬಿರಿಯಾನಿ ಮಾಡುವವರು, ಹಳೆ ಚಪ್ಪಲಿ-ಬಾಟ್ಲಿ ಖರೀದಿ ಮಾಡುವವರು, ಮರ ಕಸಿ ಮಾಡುವವರು, ಕಾಫಿ ಕೊಯ್ಯುವವರು... ಎಲ್ಲರೂ ಅವರಿಗೆ ಮಾಹಿತಿ ಮೂಲಗಳೇ.

ನನಗೆ ಎಷ್ಟೋ ಬಾರಿ ಟಿ.ಎನ್. ಸೀತಾರಾಂ ಅವರ ಧಾರಾವಾಹಿ ನೋಡುವಾಗ ಪರದೆಯ ಮೇಲೆ ಕಾಣಿಸುವ ಪ್ರತಿಯೊಂದು ಪಾತ್ರ ಕೂಡ ಬೌದ್ಧಿಕವಾಗಿ ಬುದ್ಧಿವಂತರಾಗಿಯೇ ಕಾಣಿಸುವುದು. ಕಾರಣ ಈ ಎಲ್ಲಾ ಪಾತ್ರಗಳಿಗೂ ಸಂಭಾಷಣೆ ಬರೆಯುವುದು ಸೀತಾರಾಂ ಅವರೇ. ತೇಜಸ್ವಿಯವರ ಚಿತ್ರಣಗಳು ಹಾಗಲ್ಲ. ಅವರ ಬಹುಪಾಲು ಪಾತ್ರಗಳು ನೆಲದ ಮೇಲೆಯೇ ನಿಂತು ಮಾತನಾಡುತ್ತವೆ. ಕನ್ನಡದಲ್ಲಿ ‘ಪುಗುವುದು’ ಎಂಬ ಶಬ್ದವೊಂದಿದೆ. ಒಳಗೊಳ್ಳುವುದು ಎಂದು ಈ ಪದದ ಅರ್ಥ. ಸ್ವಂತ ಲೇಖಕನಿಗೆ ಮಣ್ಣಿನೊಂದಿಗೆ ಪುಗುವ ಶಕ್ತಿ ಇದ್ದಾಗ ಮಾತ್ರ ಪಾತ್ರಗಳು ನೆಲದ ಮೇಲೇ ನಿಲ್ಲಲು ಸಾಧ್ಯ!

ತಿದ್ದುಪಡಿ: ಆಗಸ್ಟ್ 13ರ ‘ಭಾನುವಾರದ ಪುರವಣಿ’ಯಲ್ಲಿ ಪ್ರಕಟವಾಗಿದ್ದ ‘ಕಾರ್ಮಿಕರ ಹಿರಿಯಕ್ಕ ಮೋಟಾಬೆನ್’ ಲೇಖನದಲ್ಲಿ ಮೋಟಾಬೆನ್ ಅವರು 1985ರಲ್ಲಿ ಹುಟ್ಟಿದರು ಎಂದು ತಪ್ಪಾಗಿತ್ತು. ಅವರು ಹುಟ್ಟಿದ್ದು 1885ರಲ್ಲಿ. –ಸಂ

ಮುನ್ನೋಟ 20-08-2023 ರಿಂದ -26-08-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕಾರ್ಯನಿಮಿತ್ತ ದೂರ ಪ್ರಯಾಣ ಮಾಡುವ ಯೋಗವಿದೆ. ಸ್ನೇಹಿತರೊಂದಿಗೆ ಮಾಡಿಕೊಂಡಿದ್ದ ವ್ಯವಹಾರ ಒಪ್ಪಂದಗಳನ್ನು ಆದಷ್ಟು ಬೇಗ ಮುಗಿಸಿಕೊಳ್ಳಿ. ಸಂಗೀತಗಾರರಿಗೆ ಹೆಚ್ಚಿನ ಅವಕಾಶ ಮತ್ತು ಸಂಪಾದನೆ ಇರುತ್ತದೆ. ಬೇರೆಯವರೊಂದಿಗೆ ಮಾತನಾಡುವಾಗ ತೂಕಯುತವಾಗಿ ಮಾತನಾಡಿ. ಸ್ವತ್ತು ಖರೀದಿಯ ವಿಚಾರದಲ್ಲಿ ಬಂಧುಗಳು ನಿಮಗೆ ಸಹಾಯ ಮಾಡುವವರು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಯಾವುದೇ ಸ್ಥಳದಲ್ಲಿ ಮಾತನಾಡುವಾಗ ಆವೇಶ ಕಡಿಮೆ ಇರಲಿ. ಸಾಕುಪ್ರಾಣಿಗಳನ್ನು ಸಾಕುವ ಇಚ್ಛೆ ಈಗ ಹೆಚ್ಚಾಗುತ್ತದೆ. ಕಟ್ಟಡ ನಿರ್ಮಾಣ ಕಾರ್ಮಿಕರೊಡನೆ ಸೌಹಾರ್ದಯುತವಾಗಿ ಇರುವುದು ಒಳ್ಳೆಯದು. ಮನೆಯ ನಿರ್ಮಾಣ ಕಾರ್ಯವನ್ನು ಮಾಡಬಹುದು. ನಿಮ್ಮ ಆಸ್ತಿಯನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಬಹುದು. ಸಂಗಾತಿಯ ಕೃಷಿ ಮಾಡುವ ಆಸೆಗೆ ಅನುಕೂಲ ಸಿಗುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮ್ಮ ಆದರ್ಶಗಳನ್ನು ಬಿಟ್ಟುಕೊಡದೆ ಮುನ್ನಡೆಯುವುದು ಉತ್ತಮ, ನಿಮಗೆ ಇದರಿಂದ ಉತ್ತಮ ಫಲ ಸಿಗುತ್ತದೆ. ದುರ್ಜನರು ನಿಮ್ಮ ಸಹವಾಸ ಮಾಡಲು ಕಾತುರರಾಗಿ ಕಾಯುತ್ತಿರುತ್ತಾರೆ, ಅವರಿಂದ ದೂರವಿರಿ. ವ್ಯವಸ್ಥಾಪಕರ ಜೊತೆ ಧೈರ್ಯದಿಂದ ಮಾತನಾಡಿ ಜವಾಬ್ದಾರಿಯ ಜೊತೆ ಸ್ಥಾನವನ್ನು ಹೆಚ್ಚಿಸಿಕೊಳ್ಳಬಹುದು. ಸಾಕಷ್ಟು ಯಕ್ಷಪ್ರಶ್ನೆಗಳಾಗಿ ಉಳಿದಿದ್ದ ಕೆಲವು ಸಮಸ್ಯೆಗಳಿಗೆ ಈಗ ಉತ್ತರ ಸಿಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಮ್ಮ ಆತ್ಮಾಭಿಮಾನದ ಜೊತೆಗೆ ಗೌರವವೂ ಹೆಚ್ಚುತ್ತದೆ. ರೈತರಿಗೆ ಕಾಡು ಪ್ರಾಣಿಗಳಿಂದ ಕಾಟ ಹೆಚ್ಚಾಗುವ ಸಾಧ್ಯತೆ ಇದೆ. ನಿಮ್ಮ ಕುಟುಂಬದ ಹಿರಿಯರ ದರ್ಶನ ಪಡೆಯಲು ಅವರಿರುವ ಜಾಗಕ್ಕೆ ತೆರಳುವಿರಿ. ಕೆಲವು ಕೆಟ್ಟ ಸ್ನೇಹಿತರಿಂದ ಮಕ್ಕಳ ನಡವಳಿಕೆ ಬದಲಾಗಬಹುದು ಎಚ್ಚರ. ಹಿರಿಯ ಶ್ರೇಣಿಯ ಕೆಲವು ಅಧಿಕಾರಿ ವರ್ಗದವರಿಗೆ ಉನ್ನತ ಸ್ಥಾನಮಾನ ದೊರೆಯುತ್ತವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ದತ್ತು ಮಕ್ಕಳನ್ನು ತೆಗೆದುಕೊಂಡಿರುವವರು ಬಂಧುಗಳ ಬಗ್ಗೆ ಎಚ್ಚರ ವಹಿಸಿ, ಅವರು ಮಗುವಿಗೆ ಜನ್ಮ ವೃತ್ತಾಂತವನ್ನು ತಿಳಿಸುವ ಸಾಧ್ಯತೆಯಿದೆ. ಹಳೆಯದನ್ನು ಮರೆತು ಹೊಸದರೊಂದಿಗೆ ಹೊಂದಿಕೊಳ್ಳುವುದು ಉತ್ತಮ. ಇರುವುದರಲ್ಲಿ ಸಂತಸ ಕಾಣುವುದು ನಿಮಗೆ ಒಳಿತು. ಬದ್ಧ ವೈರಿಗಳು ಕೂಡ ನಿಮ್ಮ ಕಷ್ಟಕ್ಕೆ ಸ್ಪಂದಿಸುವರು. ಆಕಸ್ಮಿಕವಾಗಿ ಪರಿಚಯವಾದ ವ್ಯಕ್ತಿಯಿಂದ ಸೂಕ್ತ ಸಹಾಯ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಗಣಿತ ಉಪನ್ಯಾಸಕರಿಗೆ ಬೇಡಿಕೆ ಹೆಚ್ಚಾಗುತ್ತದೆ. ನಿರುದ್ಯೋಗಿಗಳು ಸಿಕ್ಕ ಕೆಲಸಕ್ಕೆ ಸೇರಿಕೊಳ್ಳುವುದು ಉತ್ತಮ. ಸಭೆ, ಸಮಾರಂಭಗಳಲ್ಲಿ ಭಾಗವಹಿಸುವಾಗ ನಿಮ್ಮ ಒಡವೆಗಳ ಬಗ್ಗೆ ಎಚ್ಚರವಿರಲಿ, ಕಳ್ಳತನವಾಗುವ ಸಾಧ್ಯತೆಗಳಿವೆ. ನಿಮ್ಮ ಹರಿತವಾದ ಮಾತುಗಳು ಬೇರೆಯವರನ್ನು ಗಾಸಿಗೊಳಿಸಬಹುದು, ಮಾತಿನಲ್ಲಿ ಕಠಿಣತೆ ಬೇಡ. ಸತತ ಪ್ರಯತ್ನದಿಂದ ಮಾಡುತ್ತಿದ್ದ ಕೆಲಸಗಳನ್ನು ಕಡೆ ಘಳಿಗೆಯಲ್ಲಿ ಕೈಚೆಲ್ಲಬೇಡಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಖಾಸಗಿ ಕಂಪನಿಗಳಲ್ಲಿ ನಿಷ್ಠೆಯಿಂದ ಕೆಲಸ ಮಾಡುತ್ತಿರುವವರಿಗೆ ಹೆಚ್ಚಿನ ಅನುಕೂಲ ಈಗ ದೊರೆಯುತ್ತದೆ. ಮಕ್ಕಳ ನಡವಳಿಕೆಯಲ್ಲಿ ಆಗುತ್ತಿರುವ ವ್ಯತ್ಯಾಸವನ್ನು ಪತ್ತೆಹಚ್ಚಿ ಸರಿದಾರಿಗೆ ತನ್ನಿ. ನಿಮ್ಮ ಬಂಧುಗಳ ಸಂತೋಷಕೂಟದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತವೆ. ಆರೋಗ್ಯದ ಕಡೆ ಹೆಚ್ಚಿನ ನಿಗಾ ವಹಿಸಿ. ತೀರ್ಥ ಯಾತ್ರೆ ಮಾಡುವ ಅವಕಾಶ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಮನೆಯಲ್ಲಿ ನಡೆಯುವ ಕೆಲವು ಘಟನೆಗಳು ನಿಮ್ಮನ್ನು ಚಿಂತೆಗೀಡು ಮಾಡುತ್ತವೆ. ಗುರಿಯಿಟ್ಟು ಮಾಡಿದ ಕೆಲಸಗಳಲ್ಲಿ ಉತ್ತಮ ಫಲಿತಾಂಶವಿರುತ್ತದೆ. ನಿಮ್ಮ ಹಿರಿಯರ ಮಾತನ್ನು ಗೌರವಿಸುವುದರಿಂದ ನಿಮಗೆ ಹೆಚ್ಚು ಒಳಿತಾಗುತ್ತದೆ. ಆಸೆ ಪಟ್ಟ ಒಡವೆಗಳನ್ನು ಕೊಳ್ಳಲು ಪ್ರಯತ್ನಪಡುವಿರಿ. ಹಣದ ಒಳಹರಿವು ಉತ್ತಮವಾಗಿದ್ದರೂ ಅಷ್ಟೇ ಖರ್ಚು ಬರುತ್ತದೆ. ಕೃಷಿ ಸಂಬಂಧಿತ ಚಟುವಟಿಕೆಗಳು ಭರದಿಂದ ಸಾಗುತ್ತವೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಹೊಸ ವಾಹನ ಕೊಳ್ಳಲು ಆಲೋಚನೆ ಮಾಡುವಿರಿ. ಹೊರಗಿನ ಆಹಾರವನ್ನು ಸೇವಿಸುವಾಗ ಸಾಕಷ್ಟು ಎಚ್ಚರ ವಹಿಸಿ. ಜನರಿಗೆ ನೀವು ಮಾಡುವ ನಿಸ್ವಾರ್ಥ ಸೇವೆಗಳು ಉತ್ತಮ ಪ್ರತಿಕ್ರಿಯೆಯನ್ನು ಪಡೆಯುತ್ತವೆ. ರಕ್ಷಣಾ ಸೇವೆಯಲ್ಲಿರುವ ಕೆಲವರಿಗೆ ಶಿಸ್ತು ಬದ್ಧ ಜೀವನಕ್ಕೆ ಹೊಂದಿಕೊಳ್ಳಲು ಕಷ್ಟವಾಗಬಹುದು. ಗಣ್ಯ ವ್ಯಕ್ತಿಗಳ ಪರಿಚಯದಿಂದ ನಿಮ್ಮ ಗೌರವ ಹೆಚ್ಚುತ್ತದೆ. ಕಾರ್ಯಗಳು ಸುಲಭವಾಗಿ ಆಗುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನೀವು ಭಾಗವಹಿಸುವ ಸಭೆ ಸಮಾರಂಭಗಳಲ್ಲಿ ಉತ್ತಮ ಗೌರವ ದೊರೆಯುತ್ತವೆ. ನಿಮ್ಮ ಮಕ್ಕಳ ಆಯ್ಕೆಯಂತೆ ಖರೀದಿಸಿದ ಆಸ್ತಿಯ ಮೌಲ್ಯ ಸಾಕಷ್ಟು ಹೆಚ್ಚಾಗುತ್ತದೆ. ಕಷ್ಟವಾದರೂ ನಿಮ್ಮ ಕೆಲಸಗಳನ್ನು ಬಹಳ ಶ್ರದ್ಧೆಯಿಂದ ಮಾಡುವಿರಿ. ಸುಗಂಧ ದ್ರವ್ಯಗಳನ್ನು ಮಾರಾಟ ಮಾಡುವವರ ವ್ಯವಹಾರ ಈಗ ಸಾಕಷ್ಟು ಹೆಚ್ಚಾಗುತ್ತದೆ. ಗೃಹಾಲಂಕಾರ ವಸ್ತುಗಳನ್ನು ಮಾರಾಟ ಮಾಡುವವರಿಗೆ ಲಾಭವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಉದಯೋನ್ಮುಖ ಕಲಾವಿದರುಗಳಿಗೆ ಉತ್ತಮ ಹೆಸರು ಬರುವ ಕಾರ್ಯಕ್ರಮದಲ್ಲಿ ಭಾಗವಹಿಸುವ ಆಕಾಶವಿದೆ. ಹಿರಿಯರು ಕುಟುಂಬದ ಗೌರವವನ್ನು ಉಳಿಸಲು ಬಹಳ ಪ್ರಯತ್ನ ಪಡುವರು. ನೂತನ ವಾಹನಕೊಳ್ಳುವ ಯೋಚನೆಯನ್ನು ಸರಿಯಾಗಿ ಪರಿಶೀಲನೆ ಮಾಡಿ. ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಆಸಕ್ತಿ ತಳೆಯುವಿರಿ. ಬಿತ್ತನೆ ಬೀಜ ಉತ್ಪಾದಿಸುವವರಿಗೆ ಹೆಚ್ಚಿನ ಮಾರುಕಟ್ಟೆ ದೊರೆಯುತ್ತದೆ

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಕುಶಲಕರ್ಮಿಗಳಿಗೆ ಹೆಚ್ಚಿನ ಕೆಲಸ ದೊರೆಯುವ ಸಾಧ್ಯತೆ ಇದೆ. ವಾಹನಗಳನ್ನು ರಿಪೇರಿ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ನೀವು ಬಂಧುಗಳೊಡನೆ ನಿರಂತರವಾಗಿ ಮಾಡಿಕೊಳ್ಳುತ್ತಿರುವ ಎಡವಟ್ಟುಗಳು ನಿಮಗೆ ದೊಡ್ಡ ಪಾಠ ಕಲಿಸಬಹುದು. ಹೆಚ್ಚಿದ ಜವಾಬ್ದಾರಿಗಳು ನಿಮಗೆ ಒತ್ತಡವನ್ನು ತರುತ್ತವೆ. ನಿಮ್ಮ ನಿರ್ಧಾರಗಳಿಗೆ ನೀವು ಹೆಚ್ಚಿನ ಬದ್ಧತೆ ತೋರಿರಿ.

ಪದಬಂಧ 2803



ಮೇಲಿನಿಂದ ಕೆಳಕ್ಕೆ
1.ಯಮನನ್ನು ಸೋಲಿಸಿದ ಮಹಿಳೆ ಗಾಯತ್ರಿಯ ಮಿತ್ರೆ 3
2.ಬಿಟ್ಟುಬಿಡಲಾದ, ಹೊರಗೆ ಎಸೆಯಲ್ಪಟ್ಟವ 2
3.ಅನುರಣಿಸುವ ಮಿಡಿತದ ಮನವುಳ್ಳವ 4
4.ಕೈಗೆ ಸೇರಿ ಹೋದದ್ದು 4
5.ಜೈವಿಕ ಗೊಬ್ಬರದ ಮೂಲ 4
6.ಕಲ್ಪನೆಯಲ್ಲಿ ವಿಹರಿಸಿ ಸೃಷ್ಟಿಸುವವ, ಅವನ ಸೃಷ್ಟಿ 4
7.ಸಂಕುಚಿತವಲ್ಲದೆ ವಿಸ್ತಾರಗೊಂಡಿರುವ ನಮ್ಮ ನಾಡು ನೆಲೆವೀಡು 7
10.ಲಗ್ನಪತ್ರಿಕೆಯಲ್ಲಿ ಹರಿದ್ರಾ ಕುಂಕುಮದಿಂದಲಂಕೃತಳಾದವಳು 3
13.ಲವಂಗ, ಜಾಪತ್ರೆಯ ಜೊತೆಗೆ ಸೇರಿದ ಸುವಾಸಿತ ಕಾಯಿ 3
14.ಬೆನ್ನೆಲುಬಿನ ಪ್ರಾಣಿವರ್ಗ 4
15.ಸೂರ್ಯವಂಶದ ಶ್ರೇಷ್ಠ ಕುಲಪುತ್ರ 4
17.ಕಚೇರಿಯಲ್ಲಿ ಜೊತೆಯಾಗಿ ಕೆಲಸಮಾಡುವವ 4
18.ಶ್ರೇಷ್ಠ ಕೊಡುಗೆಯನ್ನು ನೀಡುವ ದೇವರಿಗೆ ಸಲ್ಲುವ ಅಭಿದಾನ 4
22.ದೇಹವೆಂಬ ವಾಸಸ್ಥಳ 3
23.ಅಮೆರಿಕದ ಕ್ಷಿಪಣಿ ಕೇಂದ್ರ 2

ಎಡದಿಂದ ಬಲಕ್ಕೆ
1.ಕತೆ, ಕಾವ್ಯ, ಗದ್ಯ, ಪದ್ಯ, ನಾಟಕ ಎಲ್ಲಾ ಪ್ರಕಾರದ ಬರವಣಿಗೆ 3
3.ಎಲ್ಲವೂ ಒಪ್ಪವಾಗಿದೆ, ಸರಿತೂಗುವಂತೆ ಲೋಪವಿಲ್ಲದೆ ಇದೆ 4
5.ಎಲ್ಲರಿಗೂ ಅನ್ವಯವಾದದ್ದು, ಎಲ್ಲರೂ ಒಪ್ಪಿ ಅನುಸರಿಸುವಂತದ್ದು 4
7.ವಿಷದಿಂದ ಕೂಡಿದ ಸ್ಪಷ್ಟೀಕರಣ 3
8.ಸುದೀರ್ಘವಾದ ಅಳಿವು ಅಂತ್ಯ 3
9.ಕೀರ್ತಿಶಾಲಿಯಾಗಿ ಯಶಸ್ಸು ತರುವವ 4
11.ಹೆಜ್ಜೆಯ ಮೇಲೊಂದು ಹೆಜ್ಜೆಯನಿಕ್ಕುತ ಬಾರಮ್ಮ ಎಂದು ಈ ಹಣದೊಡತಿಗೆ ಆಹ್ವಾನ 2
12.ಕಾಡಿನ ಕುಲಕ್ಕೆ ಸೇರಿದ್ದು 4
14.ಕಾಲ್ಪನಿಕ ಅಥವಾ ನಡೆದ ಘಟನೆಗಳನ್ನು ಸ್ವಾರಸ್ಯಕರವಾಗಿ ಹೆಣೆದು ಹೇಳುವವ 4
16.ದೀರ್ಘವಾಗಿ ಸಂಭೋದಿಸಬಹುದಾದ ರಾಧೇಯ, ಕುಂತಿ ಪುತ್ರ 2
17.ಕಾಡಿಸು, ಪೀಡಿಸು, ಆತಂಕಕ್ಕೊಳಪಡಿಸು 4
19.ಕೊಂಬಿನಿಂದ ತಿವಿಯುವ ಪೊಗರಿನ ಪ್ರಾಣಿ 3
20.ಆಪತ್ಬಾಂಧವ, ಅನಾಥರನ್ನು ಕಾಪಾಡುವವ 3
21.ಇನಿತಾದರೂ ಅನುಕಂಪವುಳ್ಳದ್ದು 4
24.ಭುವಿಯನ್ನು ಹಸಿರಾಗಿಸುವ ಸಸ್ಯ-ವೃಕ್ಷ 4
25.ಓಡುತ್ತಲೇ ಇರುವ ಕಾಲ 3

ಪದಬಂಧ ಉತ್ತರ -2802

ಮೇಲಿಂದ ಕೆಳಕ್ಕೆ
1.ಕಾರ್ತಿಕ 2.ಜಪಾನ 3.ಮಣಕ 4.ಮಿಗಿಲು 7.ಮನುಜ 9.ಡೆಕ್ಕಣ 10.ಮಹತಿ 11.ನಕಲಿ 12.ಸನಕ 13.ಲಸಿಕೆ 16.ಜವಾನ 18.ದಮಡಿ 19.ನಸುಕು 20.ಗುಮಾನಿ 21.ಆಲಾಪ 22.ಸಲಿಲ

ಎಡದಿಂದ ಬಲಕ್ಕೆ
1.ಕಾಮರಾಜ 3.ಮಹಾಸ್ವಾಮಿ 5.ಪಾಣಿಗ್ರಹಣ 6.ಕವಿಮನ 8.ಕಡೆಗೋಲು 10.ಮಹಾಜನ 12.ಸಣಕಲ 14.ಕದಲೀವನ 15.ತಿಲಾಂಜಲಿ 17.ಕದಲಿಕೆ 19.ನಸುನಗು 21.ಆಡಿಮಾಸ 23.ಮಾಣಿಕ್ಯಮಾಲಾ 24.ಕುಟುಂಬಿನಿ 25.ಪರಕಾಲ

ಡಿವಿಜಿ ಇಂಗ್ಲಿಷ್ ಬರಹಗಳಿಗೆ ಹೊಸ ಬೆಳಕು



ಡಿವಿಜಿ

ಎಸ್. ದಿವಾಕರ್



ಡಿವಿಜಿ ಅವರ ಆಯ್ದ ಲೇಖನಗಳ ಕೃತಿಸರಣಿ

ಬಹುಶ್ರುತ ವಿದ್ವಾಂಸ, ವಿಖ್ಯಾತ ಲೇಖಕ, ಪತ್ರಕರ್ತ, ರಾಜಕೀಯ ಹಾಗೂ ಸಾಮಾಜಿಕ ವ್ಯಾಖ್ಯಾನಕಾರ ಮತ್ತು ಸಂಸ್ಥೆಗಳ ಸ್ಥಾಪಕ ಡಿ.ವಿ. ಗುಂಡಪ್ಪ (17.3.1887-7.10.1975) ಅವರ ಕಾರ್ಯಕ್ಷೇತ್ರ ಬೆಂಗಳೂರಾಗಿದ್ದರೂ ಅದರ ಹರಹು ಮತ್ತು ಪರಿಣಾಮ ಜಗದ್ವ್ಯಾಪಕವಾಗಿತ್ತು. ಇಪ್ಪತ್ತು ವರ್ಷಕ್ಕೇ ಇಂಗ್ಲಿಷ್, ಸಂಸ್ಕೃತ, ಕನ್ನಡ ಭಾಷೆಗಳ ಮೇಲೆಅಸಾಧಾರಣ ಪ್ರಭುತ್ವವನ್ನುಸಾಧಿಸಿದ್ದಅವರು 1913-14ರಷ್ಟು ಹಿಂದೆಯೇ ಒಬ್ಬ ಪತ್ರಕರ್ತರಾಗಿ ರಾಷ್ಟ್ರೀಯ ಮಟ್ಟದ ಪ್ರಸಿದ್ಧಿ ಪಡೆದಿದ್ದರು. ತಮ್ಮ 88 ವರ್ಷಗಳ ಜೀವಿತದಲ್ಲಿ ಸಾರ್ವಜನಿಕ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದಕ್ಕಾಗಿ ಅವರು ಮಾಡಿದ ಪ್ರಯತ್ನಗಳು ಒಂದೆರಡಲ್ಲ. ರಾಜಕೀಯದಲ್ಲಿ ಮಹದೇವ ಗೋವಿಂದ ರಾನಡೆ, ಗೋಪಾಲಕೃಷ್ಣ ಗೋಖಲೆ, ವಿ.ಎಸ್.ಶ್ರೀನಿವಾಸ ಶಾಸ್ತ್ರಿಯವರ ಉದಾರವಾದಿ ಪಂಥದ ವಾರಸುದಾರರಾಗಿದ್ದು, ಆಳವಾದ ವಿದ್ವತ್ತು, ಬಹುಶ್ರುತತ್ವ, ವಿರಕ್ತ ಜೀವನ, ಪ್ರಾಮಾಣಿಕತೆ, ಇತ್ಯಾದಿಗಳಿಂದಾಗಿ ಅವರು ವಿವಿಧ ಸರ್ಕಾರಗಳ ನಾಯಕರಿಂದ ಹೇಗೋ ಹಾಗೆ ಸಾಮಾನ್ಯ ಜನರಿಂದಲೂ ಅಪೂರ್ವ ಗೌರವಕ್ಕೆ ಪಾತ್ರರಾಗಿದ್ದರು. ಮುನಿಸಿಪಲ್ ಕೌನ್ಸಿಲರಾಗಿ (1912), ಕರ್ನಾಟಕ ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರಾಗಿ (1927-1940), ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ (1927-1943), ಕಾನ್‌ಸ್ಟಿಟ್ಯೂಷನಲ್ ರಿಫಾರ್ಮ್ಸ್ ಕಮಿಟಿ ಆಫ್ ಕರ್ನಾಟಕದ ಸದಸ್ಯರಾಗಿ (1938-1939), ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ (1933-1937) ಅವರು ಸಲ್ಲಿಸಿದ್ದು ನಿಸ್ಪೃಹವೂ ಉದಾತ್ತವೂ ಆದ ಸೇವೆ.

ಪತ್ರಿಕೋದ್ಯಮದಲ್ಲಿ ಡಿ.ವಿ.ಜಿ.ಯವರಿಗೆ ಗುರುಸಮಾನರು ಇಂಗ್ಲೆಂಡಿನ ಪ್ರಖ್ಯಾತ ಪತ್ರಕರ್ತ ಡಬ್ಲ್ಯು.ಟಿ. ಸ್ಟೆಡ್. ಸಮಕಾಲೀನ ವಿದ್ಯಮಾನಗಳನ್ನು ಕುರಿತ ತಮ್ಮ ದೃಷ್ಟಿಕೋನವನ್ನು ಪ್ರಚುರಪಡಿಸುವುದಕ್ಕಾಗಿ ಡಿ.ವಿ.ಜಿ.ಯವರೂ ತಮ್ಮದೇ ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು ಪ್ರಕಟಿಸಿದರು. ಅವುಗಳಲ್ಲಿ 'ಭಾರತಿ' (ದೈನಿಕ - 1908), 'ಕರ್ನಾಟಕ' (ಅರ್ಧವಾರಪತ್ರಿಕೆ - 1913ರಿಂದ 1920ರವರೆಗೆ), 'ಕರ್ನಾಟಕ ಅಂಡ್ ದಿ ಇಂಡಿಯನ್ ರಿವ್ಯೂ ಆಫ್ ರಿವ್ಯೂಸ್' (ಮಾಸಿಕ - 1921ರಿಂದ 1927ರವರೆಗೆ, 'ಪಬ್ಲಿಕ್ ಅಫೇರ್ಸ್' (ಮಾಸಿಕ - 1949ರಿಂದ 1975ರವರೆಗೆ) ಮುಖ್ಯವಾದುವು. ಇವುಗಳಲ್ಲದೆ 'ಮೈಸೂರ್ ಟೈಮ್ಸ್', 'ಹಿಂದೂಸ್ತಾನ್ ರಿವ್ಯೂ', 'ನ್ಯೂ ಇಂಡಿಯಾ', 'ದಿ ಹಿಂದೂ', 'ದಿ ಈವೆನಿಂಗ್ ಮೇಲ್', 'ದಿ ಪಯೊನೀರ್', 'ಇಂಡಿಯನ್ ಸ್ಟೇಟ್ಸ್ ರಿವ್ಯೂ', 'ಸ್ವರಾಜ್ಯ', 'ದಿ ಬಾಂಬೆ ಕ್ರಾನಿಕಲ್', 'ದಿ ಸರ್ವೆಂಟ್ಸ್ ಆಫ್ ಇಂಡಿಯಾ', 'ದಿ ಮದ್ರಾಸ್ ಮೇಲ್', 'ಕರೆಂಟ್ ಸೈನ್ಸ್', 'ದಿ ಆರ್ಯನ್ ಪಾತ್', 'ಮೈಸಿಂಡಿಯಾ', 'ತ್ರಿವೇಣಿ', 'ಗಾಂಧಿ ಮಾರ್ಗ್', 'ಡೆಕನ್ ಹೆರಾಲ್ಡ್', 'ದಿ ಇಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ'... ಹೀಗೆ ಅವರು ಬರೆಯದ ಇಂಗ್ಲಿಷ್ ಪ್ರತಿಕೆಗಳೇ ಇರಲಿಲ್ಲ. ಜೊತೆಗೆ ಆಗಾಗ ಇಂಗ್ಲಿಷಿನಲ್ಲಿ ಪುಸ್ತಕಗಳನ್ನೂ ಬರೆದದ್ದುಂಟು (ಅವುಗಳ ಸಂಖ್ಯೆ ಇಪ್ಪತ್ತಕ್ಕೂ ಹೆಚ್ಚು.) ಈ ಪುಸ್ತಕಗಳಲ್ಲಿ ಕೆಲವನ್ನು ಇಂಡಿಯಾದ ಪತ್ರಿಕೆಗಳಷ್ಟೇ ಅಲ್ಲ, ಇಂಗ್ಲೆಂಡಿನ ಪತ್ರಿಕೆಗಳೂ ವಿಮರ್ಶಿಸಿದ್ದವು. ಉದಾಹಣೆಗೆ 'ದಿ ಸ್ಟೇಟ್ಸ್ ಅಂಡ್ ದೇರ್ ಪೀಪಲ್ ಇನ್ ದಿ ಇಂಡಿಯನ್ ಕಾನ್‌ಸ್ಟಿಟ್ಯೂಷನ್' ಎಂಬ ಕೃತಿ. 200 ಪುಟಗಳ ಈ ಕೃತಿಯ ಬೆಲೆ ₹2 ಅಥವಾ ಷಿಲಿಂಗ್ 3. (ನಾಲ್ಕನೆಯ ಸಂಪುಟದಲ್ಲಿ ಈ ಕೃತಿಯ ಕೆಲವು ಉದ್ಧೃತ ಭಾಗಗಳಿವೆ).


ಸಿ. ಎಫ್. ಆಂಡ್ರ್ಯೂಸ್ ಅವರ ಬಗ್ಗೆ ನಾವೆಲ್ಲ ಕೇಳಿದ್ದೇವಷ್ಟೆ. ಅವರು ಪ್ರಸಿದ್ಧ ಕ್ರಿಶ್ಚಿಯನ್ ಮಿಷನರಿ, ಸಮಾಜ ಸುಧಾರಕರು, ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದವರು; ದಕ್ಷಿಣ ಆಫ್ರಿಕದಿಂದ ಹಿಂತಿರುಗುವಂತೆ ಮಹಾತ್ಮಾ ಗಾಂಧಿಯವರ ಮನವೊಲಿಸಿದವರು. ಅಂಥವರು ಮೇಲ್ಕಂಡ ಪುಸ್ತಕವನ್ನು ಲಂಡನ್ನಿನ 'ಸ್ಪೆಕ್ಟೇಟರ್' ಪತ್ರಿಕೆಯಲ್ಲಿ ವಿಮರ್ಶಿಸಿದ್ದು ಹೀಗೆ: "It is a well-arranged and documented review of one of the most difficult subjects... The author is outspoken in his disappointment at the Princes' attitude during the earlier Conference sessions. They bluffed, and in the end surrendered nothing at all. They entrenched their own position, as arbitrary Rulers, at the expense of their subjects. Mr. Gundappa hopes that at the next session, the leading Indian statesmen will not barter away, as they did before, the rights of the Indian States' subjects."

ಡಿ.ವಿ.ಜಿ.ಯವರ ಇಂಗ್ಲಿಷ್ ಬರಹಗಳು ಅಸಂಖ್ಯಾತ; ಅವರ ಕನ್ನಡ ಬರಹಗಳಿಗಿಂತ ಮೂರು ನಾಲ್ಕು ಪಟ್ಟು ಹೆಚ್ಚು. ಅವುಗಳಲ್ಲಿ ಸಾಕಷ್ಟು ಕಳೆದೇಹೋಗಿವೆ ಎನ್ನಬೇಕು. ಉಳಿದಿರುವ ಬರೆಹಗಳಲ್ಲಿ ಅತ್ಯುತ್ತಮವಾದುದನ್ನು ಸಂಗ್ರಹಿಸಿ ಪ್ರಕಟಿಸುವ ಮಹತ್ವದ ಕಾರ್ಯ ಇದೀಗ ಕೈಗೂಡಿದೆ. ವಿದ್ವಾಂಸರಾದ ಎಸ್. ಆರ್. ರಾಮಸ್ವಾಮಿ ಮತ್ತು ಬಿ.ಎನ್. ಶಶಿಕಿರಣ್ ಅವರ ಪರಿಶ್ರಮದಿಂದಾಗಿ ಡಿ.ವಿ.ಜಿ.ಯವರು ಪತ್ರಿಕೋದ್ಯಮ, ರಾಜಕೀಯ, ಸಾಹಿತ್ಯ, ಸಂಸ್ಕೃತಿ, ಇವುಗಳಿಗೆ ಸಂಬಂಧಿಸಿದಂತೆ ಇಂಗ್ಲಿಷಿನಲ್ಲಿ ಬರೆದಿರುವ ಬರೆಹಗಳ ಒಂಬತ್ತು ಸಂಪುಟಗಳು ಹೊರಬಂದಿವೆ. ಮೊದಲ ಸಂಪುಟದಲ್ಲಿ ಡಿ.ವಿ.ಜಿ. 1908ರಿಂದ 1917ರವರೆಗೆ ಬರೆದ ಮುಖ್ಯ ಲೇಖನಗಳು ಹಾಗೂ ಪುಸ್ತಕಗಳು ಇವೆ. ಎರಡನೆಯ ಸಂಪುಟ 1917-1922; ಮೂರನೆಯದು 1923-1927; ನಾಲ್ಕನೆಯದು 1929-1940; ಐದನೆಯದು 1949-1952; ಆರನೆಯದು 1954-1955; ಏಳನೆಯದು 1956-1960; ಎಂಟನೆಯದು 1963-1967; ಒಂಬತ್ತನೆಯದು 1969-1971. ಸದ್ಯದಲ್ಲೇ ಇನ್ನೂ ಎರಡು ಸಂಪುಟಗಳು ಪ್ರಕಟವಾಗಲಿವೆ.

ಮೊದಲ ಸಂಪುಟದಲ್ಲೇ ಇರುವ ವಿಷಯವ್ಯಾಪ್ತಿ, ವಿಚಾರಸ್ಪಷ್ಟತೆ ಗಮನಾರ್ಹ. ಡಿ.ವಿ.ಜಿ. ಪತ್ರಿಕೋದ್ಯಮಕ್ಕೆ ಬಂದು ಮೂರು ವರ್ಷ ಕೂಡ ಆಗಿರಲಿಲ್ಲ. 1908ರಲ್ಲಿ ಮೈಸೂರು ಸಂಸ್ಥಾನದ ದಿವಾನ ವಿ.ಪಿ. ಮಾಧವರಾಯರು ಪತ್ರಿಕಾ ನಿರ್ಬಂಧದ ಕಾನೂನೊಂದನ್ನು ತಂದಾಗ ಪತ್ರಿಕಾಕರ್ತರೆಲ್ಲ ಅದನ್ನು ವಿರೋಧಿಸಿದರು. ಆಗ ಡಿ.ವಿ.ಜಿ. ಆ ಬಗ್ಗೆ ಇಡೀ ದೇಶದ ಪತ್ರಿಕೆಗಳಲ್ಲಿ ಪ್ರಕಟವಾದದ್ದನ್ನು ಸಂಪಾದಿಸಿ 'ಪ್ರೆಸ್ ಗ್ಯಾಗ್ ಇನ್ ಮೈಸೂರ್' ಎಂಬ ಗ್ರಂಥವನ್ನು ಪ್ರಕಟಿಸಿದರು. ಕೋಲ್ಕತ್ತದಿಂದ ಪ್ರಕಟವಾಗುತ್ತಿದ್ದ 'ಹಿಂದೂಸ್ತಾನ್ ರಿವ್ಯೂ'ದಲ್ಲಿ 'ರಾಮಮೋಹನರಾಯ್, ವಿವೇಕಾನಂದ ಅಂಡ್ ದಿ ಇಂಡಿಯನ್ ನ್ಯಾಷನಾಲಿಸಂ', 1917ರಲ್ಲಿ 'ಕೌಂಟ್ ಲಿಯೊ ಟಾಲ್‌ಸ್ಟಾಯ್' ಎಂಬ ಪುಸ್ತಕ ಮತ್ತು 'ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾದ 29 ಲೇಖನಗಳ ಆಯ್ದ ಭಾಗಗಳು ಮೊದಲ ಸಂಪುಟದಲ್ಲಿವೆ. ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯನ್ನು ವಿರೋಧಿಸಿ ಲಂಡನ್ನಿನ 'ದಿ ಟೈಮ್ಸ್', 'ದಿ ಮದ್ರಾಸ್ ಮೇಲ್' ಮೊದಲಾದ ಪತ್ರಿಕೆಗಳು ಎತ್ತಿದ ಆಕ್ಷೇಪಣೆಗಳಿಗೆ ಡಿವಿಜಿಯವರು ಬರೆದ ಲೇಖನಗಳ ಉದ್ಧೃತ ಭಾಗಗಳೂ ಇವೆ.

ಮೈಸೂರಿನ ಆರ್ಥಿಕ ಅಭಿವೃದ್ಧಿ, ಇಂಗ್ಲಿಷ್ ಗೀತೆಗಳು ಕುರಿತ ವಿಮರ್ಶೆ, ಭಾರತೀಯ ಭಾಷೆಗಳಲ್ಲಿ ವಿಜ್ಞಾನ ಪರಿಭಾಷೆ, ಬೌದ್ಧಿಕ ಉದಾರವಾದ, ಪ್ರಜಾಪ್ರಭುತ್ವ, ಜಾತ್ಯತೀತತೆ, ಮುಂಬರುವ ಕಾಂಗ್ರೆಸ್: ಸರ್ಕಾರ ಮತ್ತು ಪಕ್ಷ, ಶಿಕ್ಷಣ ಸುಧಾರಣೆ, ಯೂರೋಪಿನ ಭವಿಷ್ಯ, ಕಬ್ಬಿಣದ ಪರದೆಯ ಹಿಂದೆ, ಕಲೆ ಮತ್ತು ಸಮುದಾಯ, ಹೀಗೆ ವಿವಿಧ ಲೇಖನಗಳು; ಸಾಕ್ರಟಿಸ್, ಪ್ಲೇಟೊ, ಜೆ.ಎಸ್.ಮಿಲ್, ಜೆರೇಮಿ ಬೆಂಥಮ್, ಕರ್ಕ್ಗಾರ್ಡ್, ಜೋಸೆಫ್ ಮತ್ಸಿನಿ, ಗೋಖಲೆ, ದಾದಾಭಾಯಿ ನವರೋಜಿ, ಫಿಲಿಪ್ ಸ್ಪ್ರಾಟ್, ವಿಜ್ಞಾನಿ ಸಿ.ವಿ.ರಾಮನ್ ಮೊದಲಾದವರ ಜೀವನ, ಸಾಧನೆಗಳ ಚಿತ್ರಗಳು, ಹೀಗೆ ಇತರ ಸಂಪುಟಗಳ ಪರಿವಿಡಿಯನ್ನು ಓದಿದರೂ ಸಾಕು, ಡಿ.ವಿ.ಜಿ.ಯವರ ಆಸಕ್ತಿಯ ಕ್ಷೇತ್ರಗಳು, ಅವುಗಳಲ್ಲಿ ಅವರಿಗಿದ್ದ ವ್ಯಾಪಕ ಅಧ್ಯಯನ, ಅವರ ಚಿಂತನೆಯ ಸ್ವರೂಪ, ಅವರ ಧೀಮಂತ ವ್ಯಕ್ತಿತ್ವ ಬೆರಗು ಹುಟ್ಟಿಸುತ್ತವೆ.

ಹೆಚ್ಚುಕಡಿಮೆ ಒಂದು ಶತಮಾನ ಕಾಲದ ರಾಜಕೀಯ ವಿದ್ಯಮಾನಗಳನ್ನೂ ಸಮಾಜ-ಸಂಸ್ಕೃತಿಗಳನ್ನೂ ಪ್ರತಿಬಿಂಬಿಸುವ ಈ ಸಂಪುಟಗಳು ನಿಸ್ಸಂದೇಹವಾಗಿ ಒಂದು ಉದಾರವಾದಿ ಮನಸ್ಸಿನ ಅಪೂರ್ವ ಚಿಂತನೆಗಳ ಫಲವಾಗಿವೆ.



ಸೆಲೆಕ್ಟೆಡ್ ರೈಟಿಂಗ್ಸ್ ಆಫ್ ಡಿ.ವಿ. ಗುಂಡಪ್ಪ (ಒಂಬತ್ತು ಸಂಪುಟಗಳು)

ಸಂ: ಎಸ್.ಆರ್. ರಾಮಸ್ವಾಮಿ ಮತ್ತು ಬಿ.ಎನ್. ಶಶಿಕಿರಣ್;

ಪ್ರ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು

ಸಂ: 9845195858

ಬೆಲೆ: ₹4500

ಕಾವಳದ ಮುರುಳಿನಾದಕ್ಕೆ ಕಿವಿಯಾಗುವ ಹಂಬಲ

ಗೌರಿ

ವಿಮರ್ಶೆ

ಒಬ್ಬ ಮಹತ್ವದ ಕವಿ ಜನರನ್ನು ತಲುಪದೇ ಹೋದರೆ ನಷ್ಟವಾಗುವುದು ಯಾರಿಗೆ? ಅಥವಾ ಇದನ್ನೇ ಇನ್ನೊಂದು ಬಗೆಯಲ್ಲಿ ಕೇಳಬೇಕು ಅಂದರೆ ಒಂದು ನಿಜವಾದ ಕಾವ್ಯವನ್ನು ತನ್ನ ಅಂತಃಸತ್ವದ ಭಾಗವಾಗಿಸಿಕೊಳ್ಳದೇ ಹೋದರೆ ಸಮಾಜಕ್ಕಾಗುವ ನಷ್ಟ ಯಾವ ರೀತಿಯದ್ದು? ಈ ಪ್ರಶ್ನೆಗಳು ತೀವ್ರವಾಗಿ ಕಾಡಿದ್ದು ಪು.ತಿ.ನ. ಅವರ 'ಮಲೆದೇಗುಲ' ಕೃತಿಯ ಬಗ್ಗೆ ಜ.ನಾ. ತೇಜಶ್ರೀ ಅವರು ಬರೆದಿರುವ 'ಅರಿವು-ಇರವುಗಳ ಸನ್ನೆಗೈ ಪು.ತಿ.ನ. ಮಲೆದೇಗುಲ' ಪುಸ್ತಕವನ್ನು ಓದುವಾಗ.

ಪು.ತಿ.ನ. ಹೆಸರು ಪರಿಚಯವಿದ್ದಷ್ಟು ಅವರ ಕೃತಿಗಳು ಜನಮಾನಸದಲ್ಲಿ ನೆಲೆಯೂರಿಲ್ಲ. ಅದರಲ್ಲಿಯೂ ಈ ಕಾಲದ ತರುಣ-ತರುಣಿಯರಿಗಂತೂ ಪು.ತಿ.ನ. ಮತ್ತಷ್ಟು ದೂರ. ಈ ಕಂದರಕ್ಕೆ ಕಾರಣಗಳು ಹಲವಿರಬಹುದು. ಆದರೆ ಅದರ ನಡುವೆಯೇ ಅವರ ಕೃತಿಗಳನ್ನು ಜನರ ಹತ್ತಿರಕ್ಕೆ ಕೊಂಡೊಯ್ಯುವ ಪ್ರಯತ್ನ ನಡೆಸಿದವರೂ ವಿರಳವೇ. ಅಂಥದ್ದೊಂದು ಪ್ರಯತ್ನದ ಕಾರಣಕ್ಕಾಗಿಯೇ ತೇಜಶ್ರೀ ಅವರ ಈ ಕೃತಿ ಮಹತ್ವದ್ದಾಗಿದೆ. ಖಂಡಿತವಾಗಿ ಅವರು ಈ ಕೃತಿಯ ಮೂಲಕ ಪು.ತಿ.ನ. ಅವರ ಸಾಹಿತ್ಯಕ್ಕೆ ಉಪಕಾರ ಮಾಡುತ್ತಿಲ್ಲ; ಅವರ ಕಾವ್ಯ ಪ್ರವೇಶಕ್ಕೆ ದಾರಿ ತಿಳಿಯದೇ ದೂರವೇ ಉಳಿದ ಆಸಕ್ತರಿಗೆ ಉಪಕಾರ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ನಮ್ಮೊಳಗನ್ನು ಚಿಗುರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಪು.ತಿ.ನ. ಕಾವ್ಯದಿಂದ ನಾವು ಹೇಗೆ ಉಪಕೃತರಾಗಬಹುದು ಎಂಬುದನ್ನು ತೋರಿಸುತ್ತಿದ್ದಾರೆ.


'ಮಲೆದೇಗುಲ'ದಲ್ಲಿ ದೇಗುಲಧ್ಯಾನದ ಐವತ್ತೊಂದು ಮುಕ್ತಕಗಳಿವೆ. ಒಂದೊಂದು ಮುಕ್ತಕಗಳನ್ನೂ ಇಟ್ಟುಕೊಂಡು ಅದರ ಕುರಿತು ಟಿಪ್ಪಣಿಯನ್ನು ಬರೆದಿದ್ದಾರೆ ತೇಜಶ್ರೀ. ಈ ಟಿಪ್ಪಣಿಗಳು, ಬರಿಯ ಕವಿತೆಯ ಅರ್ಥವನ್ನು ಡಿಕೋಡ್ ಮಾಡುವ ಒಣ ಬರಹವಲ್ಲ. ಹಾಗೆಂದು ತನ್ನ ವಿದ್ವತ್ತನ್ನು ಪ್ರದರ್ಶಿಸುವ ವಿಮರ್ಶೆಯ ಭಾಷೆಯಲ್ಲಿಯೂ ಇದು ಇಲ್ಲ. ತಾನು ಕಾವ್ಯದಲ್ಲಿ ಕಂಡ ನೋಟಗಳನ್ನು, ಉಂಡ ಆನಂದವನ್ನು ತನ್ನ ಸಹಜೀವಿಗಳಿಗೂ ಉಣಿಸುವ ಮಮತೆಯಿಂದ, ಅಂತಃಕರಣದ ಒತ್ತಡದಿಂದ ಬರೆದ ಟಿಪ್ಪಣಿಗಳಿವು. ಹಾಗಾಗಿಯೇ ಒಬ್ಬ ಕವಿಗೆ ಮಾತ್ರ ಕಾಣಸಿಗುವ ಹಲವು ನೋಟಗಳು ಇಲ್ಲಿವೆ.

ಇದು ಒಳಗಡಿಯಿಡುವ ಬಾಗಿಲಷ್ಟೆ, ಒಳಗಿರುವುದು: 'ವಿರಮಿಸುವ ಕಾವಳವದು, ಶ್ಯಾಮನೆನೆ ಹೆಸರದಕೆ/ ಅದರ ಕೈಯೊಳು ಜಗವ ನಾದಿಸುವ ಮುರುಳಿ'. ನಮ್ಮೊಳಗನ್ನೂ ಆ ಮುರುಳಿಯ ನಾದ ನಾದಿಸುವಂತೆ ಮಾಡುತ್ತವೆ ಈ ಟಿಪ್ಪಣಿಗಳು.

ಈ ಪುಸ್ತಕಕ್ಕೆ ಲೇಖಕಿ ಬರೆದಿರುವ ಸುದೀರ್ಘವಾದ ಪ್ರಸ್ತಾವನೆಯೂ ಅಷ್ಟೇ ಆಪ್ತವಾಗಿದೆ ಮತ್ತು ಪುತಿನ ಬಗ್ಗೆ, ಅವರ ಕಾವ್ಯದ ಬಗ್ಗೆ ಇರುವ ಹಲವು ಪೂರ್ವಗ್ರಹಗಳನ್ನು ನಿವಾರಿಸುವಂತಿದೆ. ಪುಸ್ತಕದ ಕೊನೆಯಲ್ಲಿ ತೀಕ್ಷ್ಣ ಒಳನೋಟಗಳುಳ್ಳ ಎಸ್. ಮಂಜುನಾಥ ಅವರ ಒಂದು ಲೇಖನ ಮತ್ತು ಸ್ವತಃ ಪುತಿನ ಅವರೇ ಬರೆದಿರುವ ಮುನ್ನುಡಿಗಳೂ ಇವೆ.

ಇದು ಪು.ತಿ.ನ. ಮೇಲುಕೋಟೆಯ ದೇಗುಲದ ಕುರಿತು ಬರೆದಿರುವ ಪದ್ಯಗಳು ಎಂಬುದು ಸಾಮಾನ್ಯ ಗ್ರಹಿಕೆ. ಇದು ತಪ್ಪೂ ಅಲ್ಲ. ಆದರೆ ಪು.ತಿ.ನ. ಎದುರಿಗೆ ಕಾಣಿಸುವ ಮಣ್ಣುಕಲ್ಲಿನ ದೇಗುಲಕ್ಕೆ ನಿಂತುಕೊಂಡಿಲ್ಲ. ಅವರು ಕಾಣುತ್ತಿರುವ ದೇಗುಲ, ತಮ್ಮ ಕಾವ್ಯದ ಮೂಲಕ ಕಾಣಿಸುತ್ತಿರುವ ದೇಗುಲ, 'ಮನೆಯಲ್ಲ ಮಠವಲ್ಲ ರಾಜನರಮನೆಯಲ್ಲ' 'ಇರುಳಿನೊಳು ಮಿರುತಾರಗೆಯ ಮಾಲೆಗೊಳುತ/ಮೋಡ ಮುತ್ತುವ ಜಡೆಗೆ ಜಾಹ್ನವಿಯ ಜಾರಿಬರೆ/ ಪಕ್ಕಕೆಳವೆರೆಸೆಕ್ಕಿ ಕಣ್ ಸವಿಯ ಕೊಳುತ/ ಮೆರೆವಿದರ ದರ್ಶನವೇ ದುಡುಕಿಸುವುದೆನ್ನೆದೆಯ ನಡೆಯ/ಮನುಜಗಿದು ನೆಲೆಯಾಸೆಯೋ ಕಟ್ಟಕಡೆಯ?'-ಪ್ರಕೃತಿಯೇ ಒಂದು ದೇಗುಲವಾಗಿ ರೂಪುಗೊಂಡಿರುವುದನ್ನು ಕಾಣಿಸುವ ಈ ಸಾಲುಗಳ ಬಗ್ಗೆ ತೇಜಶ್ರೀ ಬರೆದ ಟಿಪ್ಪಣಿಯ ಭಾಗ ಹೀಗಿದೆ: 'ತನ್ನ ಯಾವ ಹುಡುಕಾಟದಿಂದ ಬೆಟ್ಟದ ಕಲ್ಲು ಈ ಬಗೆಯಾಗಿ ಆಯಿತು? ಬೆಟ್ಟದ ಕಲ್ಲು ಇದ್ದಕ್ಕಿದ್ದಂತೆ ಒಬ್ಬರಿಗೆ ದೇವರಾಯಿತು, ಮತ್ತೊಬ್ಬರಿಗೆ ಕಲೆ ಎನಿಸಿತು, ಯಾವ ಅರ್ಥ ಘಟಿಸಿತು ಈ ತೆರನಾಗಿ ಬೆಟ್ಟದ ಕಲ್ಲನ್ನು? ಎನ್ನುವಾಗ ಕವಿಯು ಬಳಸಿರುವುದು ಪ್ರಶ್ನಾರ್ಥಕ ಚಿಹ್ನೆಯಾದರೂ ಅದು ಧ್ವನಿಸುತ್ತಿರುವುದು ಬೆರಗನ್ನು. ಇದೇ ಬೆರಗು ಕವಿತೆಯ ಕೊನೆಯಲ್ಲಿರುವ ಪ್ರಶ್ನಾರ್ಥಕ ಚಿಹ್ನೆಯೆಡೆಗೂ ನಮ್ಮನ್ನು ಸೆಳೆಯುತ್ತದೆ. 'ಇದೇ ನಮ್ಮಾಸೆಯ ಶಾಶ್ವತ ನೆಲೆಯೋ?' ಎನ್ನುವಾಗ ಇಲ್ಲಿ ಬೆರಗಿನ ಜೊತೆಗೆ ಸಣ್ಣ ಅನುಮಾನವೂ ಸೇರಿಕೊಂಡಿದೆ. ನನ್ನ ಕಣ್ಣಿನ ಮೂಲಕ ಸೆರೆಸಿಕ್ಕುವ ಗೋಪುರ/ದೇಗುಲದ 'ನೋಟ' ಕೂಡ ದೇಗುಲಕ್ಕೆ ನಾನು ನೀಡುವ ಕಾಣಿಕೆ ಎನ್ನುವ ಅತಿಸೂಕ್ಷ್ಮ ಆಯಾಮವನ್ನು ಕವಿತೆ ನಮ್ಮ ಮುಂದಿಡುತ್ತಿದೆ. ಇಲ್ಲಿ, 'ನೆಲೆಯಾಸೆ' ಪದವು ಪುತಿನ ಅವರ ಹೊಸಸೃಷ್ಟಿ. ಕವಿತೆಯ ಆರಂಭದಲ್ಲಿ ಪ್ರಸ್ತಾಪಗೊಂಡಿರುವ ಮನೆ, ಮಠ ಇತ್ಯಾದಿ 'ನೆಲೆ'ಗಳನ್ನು ಈ ಪದವು ಬೃಹತ್ತಾಗಿ ವಿಸ್ತರಿಸುತ್ತಿದೆ.'

ಇದು ಪು.ತಿ.ನ. ಮಲೆದೇಗುಲ ಕೃತಿಯ ವಿಮರ್ಶೆ ಅಲ್ಲ ಎಂದು ಲೇಖಕಿಯೇ ಸ್ಪಷ್ಟಪಡಿಸಿದ್ದಾರೆ. ಪು.ತಿ.ನ. ಕಾವ್ಯಲೋಕದ ಒಡನಾಡಿಗಳಿಗೆ ಇವು ತುಂಬ ಮುಖ್ಯ ಅನಿಸದೆಯೂ ಇರಬಹುದು. ಆದರೆ ಅವರ ಕಾವ್ಯವನ್ನು ದಾಟಲಾಗದೆ, ಅದರೊಳಗನ್ನು ಮುಟ್ಟಲಾಗದೆ ದೂರ ಸರಿದ ಹಲವು ಕಾವ್ಯಾಸಕ್ತರಿಗೆ ಇದು ಖಂಡಿತ ಕೈಹಿಡಿದು ಪುತಿನ ಕಾವ್ಯೋದ್ಯಾನದೊಳಗೆ ಕರೆದೊಯ್ಯುವ ಕೈಪಿಡಿಯಂತೆ ಕೆಲಸ ಮಾಡುತ್ತದೆ. ಸಾಹಿತ್ಯ, ಬದುಕುಗಳೆಲ್ಲವೂ ಮೀಡಿಯೊಕ್ರಸಿಯಿಂದ ತೀವ್ರವಾಗಿ ರೋಗಗ್ರಸ್ತಗೊಳ್ಳುತ್ತಿರುವ ಈ ಹೊತ್ತಿನಲ್ಲಿ ನಿಜದ ಕಾವ್ಯದ ರುಚಿಹತ್ತಿಸುವ ತುರ್ತು ಎಷ್ಟಿದೆ ಎಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ಅಂಥದ್ದೊಂದು ಮಹತ್ವದ ಪ್ರಯತ್ನವನ್ನು ಈ ಕೃತಿ ಮಾಡುತ್ತಿದೆ.



ಪು: 142 ₹150

ಅರಿವು-ಇರವುಗಳ ಸನ್ನೆಗೈ ಪು.ತಿ.ನ. ಮಲೆದೇಗುಲ

ಲೇ: ಜ.ನಾ.ತೇಜಶ್ರೀ

ಪ್ರ: ಡಾ. ಪು.ತಿ.ನ. ಟ್ರಸ್ಟ್, ಬೆಂಗಳೂರು

ಸಂ:9483913393

ಸ್ಫೂರ್ತಿ ತುಂಬುವ, ವಿವೇಕ ರೂಢಿಸುವ ಪುಸ್ತಕ ಸರಣಿ



ಬಹುರೂಪಿ ಪ್ರಕಾಶನದ ಐದು ಕಿರುಪುಸ್ತಕಗಳು

ಗ್ರಾಮ ಭಾರತದ ಸಮಕಾಲೀನ ಮಾನವೀಯ ಘಟನೆಗಳನ್ನು ಕತೆಯಾಗಿಸಿ ಮಕ್ಕಳಿಗೆ ತಿಳಿಸುವ ಯತ್ನ ವಿರಳವೇ. ಪಿ. ಸಾಯಿನಾಥ್ ಅವರ ಪೀಪಲ್ಸ್ ಆರ್ಕೈವ್ ಆಫ್ ರೂರಲ್ ಇಂಡಿಯಾ (PARI) ಅಂತಹ ಕೆಲಸವನ್ನು ವೆಬ್ ಪೋರ್ಟಲ್ ಮೂಲಕ ಅದಾಗಲೇ ಪ್ರಾರಂಭಿಸಿದೆ. ಆ ಕಥಾಸರಣಿಯ ಐದನ್ನು ಬಹುರೂಪಿ ಪ್ರಕಾಶನ ಕಿರು ಪುಸ್ತಕಗಳಾಗಿ ಕನ್ನಡಕ್ಕೆ ತಂದಿದೆ.

ವಲಸೆ ಕಾರ್ಮಿಕರ ಮಕ್ಕಳ ಶಿಕ್ಷಣದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ 'ಮರಳಿ ಮನೆಗೆ' (ಪ್ರೀತಿ ಡೇವಿಡ್, ಕನ್ನಡಕ್ಕೆ: ರಾಜಾರಾಂ ತಲ್ಲೂರು, ಬೆಲೆ: ₹125), ಆಂಧ್ರದಿಂದ ಕೊಚ್ಚಿಗೆ ಕೆಲಸ ಹುಡುಕಿಕೊಂಡು ಟಿಕೆಟ್ ಇಲ್ಲದೆ ಪಯಣಿಸುವ ಆರು ಮಂದಿಯ ಆಸಕ್ತಿಕರ ಕಥನ 'ಟಿಕೆಟ್ ಇಲ್ಲ, ಪ್ರಯಾಣ ನಿಲ್ಲಲ್ಲ' (ಸುಬೂಹಿ ಜಿವಾನಿ, ಕನ್ನಡಕ್ಕೆ: ಅಬ್ಬೂರು ಪ್ರಕಾಶ್, ಬೆಲೆ: ₹125), ಅಂಗವೈಕಲ್ಯ ಮೀರಿ ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಮಟ್ಟಕ್ಕೆ ಬೆಳೆಯುವ ಹುಡುಗಿಯ ಸ್ಫೂರ್ತಿದಾಯಕ ವಿಷಯದ 'ಗೆದ್ದೇ ಬಿಟ್ಟೆ...!' (ನಿವೇಧಾ ಗಣೇಶ್, ಕನ್ನಡಕ್ಕೆ: ಸಂತೋಷ ತಾಮ್ರಪರ್ಣಿ), ತಮಿಳುನಾಡಿನಲ್ಲಿ ಸಂಪಂಗಿ ಫಾರ್ಮ್ ನೋಡಿಕೊಳ್ಳುತ್ತಲೇ ಸಿಂಗಲ್ ಪೇರೆಂಟ್ ಆಗಿ ಯಶಸ್ಸು ಸಾಧಿಸುವ ವ್ಯಕ್ತಿಯ ಹೂರಣ ಇರುವ 'ನಂದಿನಿ ಎಂಬ ಜಾಣೆ' (ಅಪರ್ಣಾ ಕಾರ್ತಿಕೇಯನ್, ಕನ್ನಡಕ್ಕೆ: ವಿ. ಗಾಯತ್ರಿ, ಬೆಲೆ: ₹150), ಎಚ್‌ಐವಿ ಇರುವ ಮಕ್ಕಳೇ ಕಲಿಯುವ ಶಾಲೆಯಲ್ಲಿ ಗುರಿ ಇಟ್ಟುಕೊಂಡು ಮುನ್ನಡೆಯುವ ಮಗುವಿನ ಮನಕಲಕುವ ಕಥೆಯ 'ಸ್ನೇಹಗ್ರಾಮದ ಸಂಸತ್ತು' (ವಿಶಾಖ ಜಾರ್ಜ್, ಕನ್ನಡಕ್ಕೆ: ಪ್ರಸಾದ್ ನಾಯ್ಕ್, ಬೆಲೆ: ₹ 150) ಬಹುರೂಪಿ ಕನ್ನಡೀಕರಿಸಿರುವ ಪುಟ್ಟ ಕೃತಿಗಳ ಗುಚ್ಛ.

ಅಚ್ಚುಕಟ್ಟಾದ ಅನುವಾದ, ಸೊಗಸಾದ ಮುಖಪುಟಗಳು ಕೃತಿಯನ್ನು ಅಂದಗಾಣಿಸಿವೆ. ತಮ್ಮದೇ ಜಗತ್ತಿನಲ್ಲಿ ಇರುವ ಮಕ್ಕಳಿಗೆ ಸ್ಫೂರ್ತಿ ತುಂಬುವ, ಚಿಂತನೆಗೆ ಹಚ್ಚುವ, ವಿವೇಕ ವರ್ಧಿಸುವ ಇಂತಹ ಕಥೆಗಳು ನಿಜಕ್ಕೂ ಟಾನಿಕ್‌ನಂತೆ. **(ಸಂಪರ್ಕ:7019182729)**

ಮೊದಲ ಓದು

ಗಾಂಧಿ ತಾರುಣ್ಯದ ಬದುಕಿನ ಚಿತ್ರಣ


'ಮೋಹನದಾಸ್ ಕರಂಚಂದ್ ಗಾಂಧಿ-ಪಾದರಸದಂತೆ ಚುರುಕು' ಗಾಂಧಿಯವರ ಮೊಮ್ಮಗ ಗೋಪಾಲಕೃಷ್ಣ ಗಾಂಧಿ ಸಂಪಾದಿಸಿದ ಕೃತಿ. ಮುಖ್ಯವಾಗಿ ಮಹಾತ್ಮ ಗಾಂಧಿಯವರ ಬಾಲ್ಯ, ಕುಟುಂಬದ ಚಿತ್ರಣ ಕಟ್ಟಿಕೊಡುತ್ತದೆ. ಗಾಂಧಿಯವರ ಆತ್ಮಚರಿತ್ರೆಯಂತಿರುವ ಈ ಕೃತಿಯನ್ನು ಎಂ.ಎಸ್. ರಘುನಾಥ್ ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.

'ಚದುರಿಹೋಗಿದ್ದ ಗಾಂಧಿ ಅವರ ಆತ್ಮಚರಿತ್ರೆಯ ವಿವರಗಳನ್ನು, ಜೀವನ ಚರಿತ್ರಕಾರರು ಮರು ನಿರೂಪಣೆಯಲ್ಲಿ, ವಿಶ್ಲೇಷಣೆಯಲ್ಲಿ ಮತ್ತು ಬದುಕನ್ನು ಅರ್ಥೈಸುವುದರಲ್ಲಿ ಬಳಸಿಕೊಂಡಿದ್ದಾರೆ. ಈ ಆತ್ಮಚರಿತ್ರೆಯ ಸಂಗ್ರಹವು ವಾಸ್ತವವನ್ನು ದೃಢೀಕರಿಸುತ್ತದೆ. ಗಾಂಧಿಯವರ ಬದುಕಿನ ಕಥೆಯನ್ನು ಅವರದೇ ಮಾತುಗಳಲ್ಲಿ ಕೇಳಿಸಿಕೊಂಡಾಗ ಮಾತ್ರ ಅತ್ಯುತ್ತಮವೆಂದು ಪರಿಗಣಿತವಾಗಬಹುದು. ಅದೇ ಸಾವಯವ ಸತ್ಯ' ಎಂದು ಗೋಪಾಲಕೃಷ್ಣ ಗಾಂಧಿ ಕೃತಿಯ ಉದ್ದೇಶವನ್ನು ಪ್ರಸ್ತಾವನೆಯಲ್ಲಿ ಹೇಳುತ್ತಾರೆ.

ಪುಸ್ತಕದ ಮೊದಲ ಅಧ್ಯಾಯ ಗಾಂಧಿ ಅವರ ಕುಟುಂಬದ ಸಮಗ್ರ ಚಿತ್ರಣ ಕಟ್ಟಿಕೊಡುತ್ತದೆ. ತಂದೆಯ ಕುರಿತು ಗಾಂಧಿಯವರಿಗಿದ್ದ ಅಭಿಪ್ರಾಯವನ್ನು ಹೇಳುತ್ತದೆ. ಬಾಲ್ಯ, ವಿವಾಹದಿಂದ ಲಂಡನ್‌ಗೆ ಹೊರಟು ನಿಲ್ಲುವವರೆಗಿನ ಗಾಂಧಿ ಬದುಕಿನ ಹಲವಾರು ಘಟನೆಗಳು ಈ ವಿಭಾಗದಲ್ಲಿವೆ. ನಂತರದ ಅಧ್ಯಾಯದಲ್ಲಿ ಲಂಡನ್ ಪ್ರಯಾಣದಿಂದ ದಕ್ಷಿಣ ಆಫ್ರಿಕಾದಲ್ಲಿನ ಗಾಂಧಿ ಬದುಕಿನ ವಿವರಗಳನ್ನು ಒಳಗೊಂಡಿದೆ.

ಒಟ್ಟು ಆರು ಅಧ್ಯಾಯಗಳಿದ್ದು, ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಮರಳುವವರೆಗಿನ ಗಾಂಧಿಯವರ ಬದುಕಿನ ಮೆಲುಕು ಇಲ್ಲಿದೆ. ತರುಣ ಮೋಹನದಾಸನನ್ನು ರೂಪಿಸಿದ ಹೋರಾಟಗಳು, ಅನುಭವಗಳು ಮತ್ತು ತತ್ವಾದರ್ಶಗಳನ್ನು ಒಳಗೊಂಡಿದೆ.

'ಈ ಕೃತಿಯು ನಮಗೆ ಗೊತ್ತಿಲ್ಲದ ಗಾಂಧಿಯವರ ವಿಷಯಗಳನ್ನು ತಿಳಿಸುವುದಲ್ಲದೇ ಮಹಾತ್ಮ ಅವರ ಆತ್ಮದ ಬಗ್ಗೆ, ಅವರ ಆಂತರಿಕ ಹೋರಾಟಗಳು, ಅಂಕೆಯಿಲ್ಲದ ಆವೇಶಗಳು, ತಮ್ಮ ಪಾಪ ಕಾರ್ಯಗಳ ತಪ್ಪೊಪ್ಪಿಗೆ, ಕುಟುಂಬ ಜೀವನದ ನೋವು ನಲಿವುಗಳು, ತಮ್ಮ ಜನತೆಗೆ ನ್ಯಾಯದ ಅನ್ವೇಷಣೆಯಲ್ಲಿ ತಮ್ಮ ಜೀವನವನ್ನೇ ತ್ಯಾಗ ಮಾಡುವಂತಹ ಗಟ್ಟಿ ಮನೋಭಾವದಂತಹ ಅನೇಕ ಸಂಗತಿಗಳನ್ನು ಒಳಗೊಂಡಿದೆ. ಗಾಂಧಿ ಕುರಿತಾದ ಈವರೆಗಿನ ಅಸಂಖ್ಯಾತ ಕೃತಿಗಳ ನಡುವೆಯೂ ಇಂತಹ ಪುಸ್ತಕ ಅಗತ್ಯವಿತ್ತು ಎಂಬ ಭಾವನೆ ಮೂಡಿಸುತ್ತದೆ' ಎಂದು ಕ್ಯಾಪ್ಟನ್ ಗೋಪಿನಾಥ್ ಕೃತಿಯ ಮುನ್ನುಡಿಯಲ್ಲಿ ಹೇಳಿದ್ದಾರೆ.



ಪು: 368 ₹350

ಮೋಹನದಾಸ್ ಕರಂಚಂದ್ ಗಾಂಧಿ-ಪಾದರಸದಂತೆ ಚುರುಕು

ಸಂ: ಗೋಪಾಲಕೃಷ್ಣ ಗಾಂಧಿ

ಕನ್ನಡಕ್ಕೆ: ಎಂ.ಎಸ್.ರಘುನಾಥ್

ಪ್ರ:ವಸಂತ ಪ್ರಕಾಶನ

ಸಂ:080-40917099

'ನಗರ ಬದುಕಿನ ತುಣುಕು ಚಿತ್ರಗಳು'

ಇದು ಕಿರಣ್‌ಕುಮಾರ್ ಅವರ ಮೊದಲ ಕಥಾಸಂಕಲನ. ಹನ್ನೆರಡು ಕಥೆಗಳ ಈ ಜಗತ್ತಿನಲ್ಲಿ ಮಹಾನಗರದಲ್ಲಿ ಬದುಕುತ್ತಿರುವ ಮಧ್ಯಮ-ಮೇಲ್ಮಧ್ಯಮ ವರ್ಗದ ಬದುಕಿನ ಹಲವು ಮಗ್ಗಲುಗಳು ಅನಾವರಣಗೊಂಡಿವೆ. ಇಲ್ಲಿನ ಬಹುತೇಕ ಕಥೆಗಳಲ್ಲಿ ಪಾತ್ರಗಳು ಬದುಕುತ್ತಿರುವುದು ನಗರದಲ್ಲಾದರೂ ಅವುಗಳ ಸ್ಮೃತಿಬೇರುಗಳು ಇರುವುದು ಊರುಗಳಲ್ಲಿ. ದಾವಣಗೆರೆಯವರನ್ನು ಹುಡುಕುವುದನ್ನು ವ್ಯಸನವಾಗಿಸಿಕೊಂಡಿರುವ ವೃದ್ಧ ಗೋಪಾಲಯ್ಯನಿಂದ ಹಿಡಿದು 'ಇಪ್ಪತ್ತೊಂದನೇ ಕ್ರೋಮೋಸೋಮು' ಕಥೆಯ ಶೇಖರ ಮತ್ತು ಪ್ರಿಯದರ್ಶಿನಿ ಅವರವರೆಗೂ ಇದು ನಿಜ. ಇಲ್ಲಿ ಹಳ್ಳಿಯ ಬದುಕು ಬರೀ ಅವರು ಬಿಟ್ಟುಬಂದ ಬದುಕಲ್ಲ, ಅವರ ಭೂತದ ಬದುಕು. ಹಾಗಾಗಿಯೇ ಅವರ ವರ್ತಮಾನವನ್ನು, ವರ್ತಮಾನದ ಎಷ್ಟೋ ಸಮಸ್ಯೆಗಳನ್ನು, ಅದನ್ನು ಎದುರಿಸುವ ರೀತಿಗಳನ್ನು ನಿಯಂತ್ರಿಸುತ್ತಿರುವ ಬೀಜಗಳು ಹಳ್ಳಿಗಳಲ್ಲಿ ಇವೆ. ಆದರೆ ಬದುಕಿನ ಸಂದರ್ಭದಲ್ಲಿ ಅದನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ. ಹಾಗಾಗಿಯೇ ಇವು ತಮ್ಮ ಕಾಲುಗಳನ್ನು ಭೂತದಲ್ಲಿ ಹುಗಿದುಕೊಂಡು, ಪರಿಹಾರಕ್ಕಾಗಿ ಆಕಾಶದತ್ತ ಮುಖಮಾಡಿ ನಿಂತಿರುವಂತೆ ಭಾಸವಾಗುತ್ತವೆ.

'ಕಾಜೂ ಬಿಸ್ಕೆಟ್' ಮತ್ತು 'ಇಪ್ಪತ್ತೊಂದನೇ ಕ್ರೋಮೋಸೋಮು' ಈ ಸಂಕಲನದ ಗಮನಾರ್ಹ ಕಥೆಗಳು. ಕಿರಣ್‌ಕುಮಾರ್ ಅವರ ಕಥನಶಕ್ತಿಯನ್ನು ಸೀಮೆಗಳನ್ನು ಸೂಚಿಸುವ ಕಥೆಗಳೂ ಹೌದು. ಇಲ್ಲಿನ ಹಲವು ಕಥೆಗಳ ವಸ್ತು ಕುತೂಹಲ ಹುಟ್ಟಿಸುವಂತಿವೆ. ಆದರೆ ಅದನ್ನು ನಿರ್ವಹಿಸುವಲ್ಲಿ ಕಥೆಗಾರರು ಇನ್ನಷ್ಟು ಸಾವಧಾನ ತೋರಬೇಕಿತ್ತು.

ಇಲ್ಲಿನ ಕಥಾಜಗತ್ತಿನ ಆತ್ಮವನ್ನು ಹಿಡಿದಿಡುವ, ಸುಂದರ ಮುಖಪುಟದ ಬಗ್ಗೆಯೂ ಇಲ್ಲಿ ಪ್ರಸ್ತಾಪಿಸಲೇಬೇಕು. ಅಪಾರ ಅವರ ವಿನ್ಯಾಸದ ಈ ಮುಖಪುಟ ಈ ಸಂಕಲನದ ಹದಿಮೂರನೇ ಕಥೆಯಂತೆ ನಮ್ಮನ್ನು ಸೆಳೆಯುವ ಶಕ್ತಿ ಹೊಂದಿದೆ.



ಪು: 102 ₹125

ಕಾಜೂ ಬಿಸ್ಕೆಟ್

ಲೇ: ಕಿರಣ್ ಕುಮಾರ್ ಕೆ.ಆರ್.

ಪ್ರ: ಕಿರಣ್ ಕುಮಾರ್

ಸಂ: 9986348768

ಇದು ಅನುಭವ, ಜ್ಞಾನದ ಕೋಶ

ಕುಂಚ ಕಲಾವಿದೆಯೂ ಆಗಿರುವ ಲೇಖಕಿ ಶಾಂತಿವಾಸು ಅವರ ಅನುಭವ, ಅನುಭಾವಗಳ ಕಥನ ಈ ಕೃತಿ. ಇದರಲ್ಲಿ ಒಟ್ಟು 39 ಲೇಖನಗಳಿದ್ದು, ಎಚ್.ಎಸ್.ಕೃಷ್ಣಮೂರ್ತಿಯವರ ತುಳಸಿಬಿಲ್ವ ಎರಡು ವೈಚಾರಿಕ ಮಾಲೆಯ ಅವಲೋಕನವನ್ನೂ ಒಳಗೊಂಡಿದೆ. ಲೇಖಕಿಯ ಕುರಿತ ಲೇಖನವೂ ಒಂದಿದೆ. ಅನುಭವಗಳ ಜೊತೆಗೆ ಕಿರು ಜ್ಞಾನಕೋಶವಾಗಿಯೂ ಇದನ್ನು ಲೇಖಕಿ ರೂಪಿಸಿದ್ದಾರೆ.

ಕೃತಿಯ ಶೀರ್ಷಿಕೆಯ ಲೇಖನವು ಶಾಂತಿವಾಸು ಅವರ ಬಾಲ್ಯದ ನೆನಪನ್ನು ಹೊತ್ತಿದೆ. ಕೆಂಪು ಬಣ್ಣದ ಸಲ್ವಾರ್ ಕಮೀಜ್ ಸುತ್ತ ಸುತ್ತುವ ಈ ಅನುಭವ ಕಥನ, ಮನೆಯೊಳಗಿನ ಕನ್ನಡಿಯನ್ನು ಮಾರ್ಮಿಕವಾಗಿ ನೋಡಿದೆ. ಹೀಗಾಗಿಯೇ 'ಬಾಲ್ಯ ಕಾಣಿಸದ ಕನ್ನಡಿ' ಎಂಬ ಉಲ್ಲೇಖ. ಈ ಲೇಖನದಲ್ಲಿ ಬಾಲ್ಯದ, ತಂಗಿದ್ದ ಮನೆಯ ವಿಸ್ತೃತ ಚಿತ್ರಪಟವನ್ನು ಓದುಗರ ಎದುರಿಗೆ ಲೇಖಕಿ ಇರಿಸಿದ್ದಾರೆ. ಲೇಖಕಿಯ ಅಪ್ಪ-ಅಮ್ಮನ ನೆನಪು, ಅವರ ಜೀವನ ಶಿಸ್ತು ವಿವರಿಸುವ ಲೇಖನಗಳು ಇಲ್ಲಿವೆ. 'ಬೆಂಗಳೂರಿನ ಬಾಣಂತಿಯರು' ಎಂಬ ಬರಹದಲ್ಲಿ ಅನುಭವ ಲೋಕವನ್ನು ತೆರೆದಿಡುತ್ತಾ, ಮರೆಯಾಗುತ್ತಿರುವ ಹಲವು ಆಚಾರ-ವಿಚಾರಗಳನ್ನು ಲೇಖಕಿ ವಿವರಿಸಿದ್ದಾರೆ. 'ವೃದ್ಧಾಶ್ರಮಗಳೆಂಬ...' ಎಂಬ ಲೇಖನದಲ್ಲಿ ವಯಸ್ಸಾದವರನ್ನು ಮನೆಯಲ್ಲಿ ಹೇಗೆ ನೋಡಿಕೊಳ್ಳಬೇಕು? ಅವರ ಮನಸ್ಸಿನ ಪರಿವರ್ತನೆ ಹೇಗೆ? ಎನ್ನುವುದನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ. ಈ ಎಲ್ಲ ಲೇಖನಗಳು ಆಪ್ತ ಭಾಷೆಯಲ್ಲಿದೆ.

'ಉಪಯೋಗಿಸೋಣ ಉಳಿಸೋಣ' ಸರಣಿಯಲ್ಲಿ ಕನ್ನಡದ ಹಲವು ವಿಶೇಷಗಳಿವೆ. ಕರ್ನಾಟಕ ಕಂಡ ಮೊದಲುಗಳು, ಜ್ಞಾನಪೀಠ ಪ್ರಶಸ್ತಿ ಪಡೆದವರ ವಿವರ, ರಾಜ್ಯ ಉದಯದ ವಿವರ, ಕನ್ನಡ ಭಾಷೆಯ ಉಗಮದ ಸುದೀರ್ಘ ಉಲ್ಲೇಖವಿದೆ.



ಪು: 244 ₹270

ಬಾಲ್ಯ ಕಾಣಿಸದ ಕನ್ನಡಿ

ಲೇ: ಶಾಂತಿವಾಸು

ಪ್ರ: ಪ್ರತಿಭಾ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್

ಸಂ: 9008784891

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

ಕಥೆ

ಬಿ.ಎಲ್. ವೇಣು ಅವರ **ಸೋಲೊಪ್ಪದವಳು**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಹಿಂದಿ ಮೂಲ: ಬದರಿ ನಾರಾಯಣ್

ಕನ್ನಡಕ್ಕೆ: ಪ್ರತಿಭಾ ನಂದಕುಮಾರ್ ಅವರ **ದೀನಾನಾಥ್ ಗೌತಮ್..**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಕಲೆ ಮತ್ತು ಸಂಸ್ಕೃತಿಯ ಕುರುಹುಗಳನ್ನು ತನ್ನೊಳಗೆ ಹುದುಗಿಸಿಟ್ಟುಕೊಂಡಿರುವ ರಾಮನಗರದ ಜಾನಪದ ಲೋಕದಲ್ಲಿ ಈಗ ಬುಡಕಟ್ಟು ಗಿರಿಜನರ ಬದುಕು ಸಾರುವ ಶಿಲ್ಪಗಳು ಕರೆಯುತ್ತಿವೆ



ಜಾನಪದ ಲೋಕದಲ್ಲಿ ಗಿರಿಜನರ ಹಾಡು-ಪಾಡು

ಚಿತ್ರ-ಬರಹ: ಓದೇಶ ಸಕಲೇಶಪುರ

ಕರ್ನಾಟಕದ ಜಾನಪದ ಸಂಸ್ಕೃತಿ ಹಾಗೂ ಕಲೆಗಳ ಸಂಗ್ರಹಾಲಯ ರಾಮನಗರದ ಜಾನಪದ ಲೋಕ. ಗ್ರಾಮೀಣ ಸಂಸ್ಕೃತಿಯ ವಿಸ್ಮಯಗಳ ಆಗರ. ಬಾಲ್ಯದ ನೆನಪುಗಳು ಮರುಕಳಿಸುವ ತಾಣವಿದು. ಪೂರ್ವಜರ ಬದುಕಿನ ಚಿತ್ರಣವೂ ಕಣ್ಣಮುಂದೆ ಹಾದು ಹೋದಂತಹ ಅನುಭವವಿಲ್ಲಿ.

ಕಲೆ ಮತ್ತು ಸಂಸ್ಕೃತಿಯ ಕುರುಹುಗಳನ್ನು ತನ್ನೊಳಗೆ ಹುದುಗಿಸಿಟ್ಟುಕೊಂಡಿರುವ ಜಾನಪದ ಲೋಕದಲ್ಲಿ ಇದೀಗ 'ಬುಡಕಟ್ಟು ಗಿರಿಜನರ ಲೋಕ'ವೊಂದು ಸೃಷ್ಟಿಯಾಗಿದೆ. ನಾಡಿನ ಪ್ರಮುಖ ಬುಡಕಟ್ಟು ಸಮುದಾಯಗಳ ಬದುಕು-ಬವಣೆ ಅನಾವರಣಗೊಂಡಿದೆ. ಮೂಲ ನಿವಾಸಿಗಳ ನೆಲೆ, ಅವರ ಪರಿಸರವು ಸುಮಾರು ಐದು ಎಕರೆಯಷ್ಟು ಜಾಗೆಯಲ್ಲಿ ತೆರೆದುಕೊಂಡಿದೆ. ಇದು ಪ್ರವಾಸಿಗರಿಗೆ ಜಾನಪದ ಲೋಕದ ಮತ್ತೊಂದು ಆಕರ್ಷಣೆ.

ಗಿರಿಜನರಾದ ಜೇನು ಕುರುಬರು, ಗೊಂಡರು, ಕುಡಿಯರು-ಮಲೆ ಕುಡಿಯರು, ಹಾಲಕ್ಕಿ ಒಕ್ಕಲಿಗರು ಹಾಗೂ ಗೌಳಿಗರ ಬದುಕಿನ ಹಾಡಿ (ವಾಸ ಸ್ಥಳ), ಗುಡಿಸಲು, ಜೀವನ ಶೈಲಿ, ಕಸುಬು, ಮನರಂಜನಾ ಕಲೆಗಳು, ವಸ್ತ್ರ ವೈವಿಧ್ಯ, ಸಾಕುಪ್ರಾಣಿಗಳು, ಸುತ್ತಮುತ್ತಲಿನ ಪರಿಸರ... ಇವೆಲ್ಲವೂ ಗಿರಿಜನರ ಲೋಕದಲ್ಲಿ ಪಡಿಮೂಡಿವೆ. ಮನುಷ್ಯ ಮತ್ತು ಪ್ರಾಣಿ-ಪಕ್ಷಿಗಳ ಶಿಲ್ಪಕಲೆಗಳ ಕೆತ್ತನೆಯಲ್ಲಿ ಜೀವಂತಿಕೆ ಎದ್ದು ಕಾಣುತ್ತದೆ.

'ಪಶ್ಚಿಮಘಟ್ಟದ ಅರಣ್ಯದ ತಪ್ಪಲಿನಲ್ಲಿ ವಾಸಿಸುವ ಸಮುದಾಯಗಳನ್ನೇ ಮುಖ್ಯವಾಗಿ ಇಲ್ಲಿ ಚಿತ್ರಿಸಲಾಗಿದೆ. ಪ್ರತಿ ಮನೆಯ ಪ್ರವೇಶದ್ವಾರದಲ್ಲಿ ಆ ಸಮುದಾಯದ ಕುರಿತು ಮಾಹಿತಿ ಫಲಕವಿದೆ. ಅದನ್ನೊಮ್ಮೆ ಓದಿಕೊಂಡು ಒಳಗಡೆ ಹೋದರೆ ಬೇರೆಯದ್ದೇ ಲೋಕ ತೆರೆದುಕೊಳ್ಳುತ್ತದೆ. ಮನೆಯೊಳಗಿನ ಭಿತ್ತಿಯಲ್ಲಿ ನೇತಾಡುವ ಫೋಟೊಗಳು ಸಮುದಾಯದ ಜೀವನಶೈಲಿ ಹಾಗೂ ಬದುಕಿನ ಕಥೆಯನ್ನು ಹೇಳುತ್ತವೆ. ಅವರು ಬಳಸುವ ವಸ್ತುಗಳನ್ನು ಸಹ ಅಲ್ಲಿಡಲಾಗಿದೆ. ಹೊರಗಡೆ ಸಮುದಾಯಗಳ ಆರಾಧಿಸುವ ಬನವನ್ನು ನಿರ್ಮಿಸಲಾಗಿದೆ. ಇಡೀ ಪರಿಸರದಲ್ಲಿ ಮರ-ಗಿಡಗಳನ್ನು ಬೆಳೆಸಿ ಕಾಡಿನಂತೆಯೇ ಅಭಿವೃದ್ಧಿಪಡಿಸಲಾಗಿದೆ'-ಗಿರಿಜನ ಲೋಕದ ವಿಶೇಷಗಳನ್ನು ಜಾನಪದ ಲೋಕದ ಕ್ಯುರೇಟರ್ ಡಾ. ಯು.ಎಂ. ರವಿ ಹಂಚಿಕೊಳ್ಳುವುದು ಹೀಗೆ.



ಚಳಿ ಕಾಯಿಸಿಕೊಳ್ಳುತ್ತಿರುವ ಕುರುಬರ ಶಿಲ್ಪಗಳು



ರಾಮನಗರದ ಜಾನಪದ ಲೋಕದಲ್ಲಿರುವ ಗಿರಿಜನ ಲೋಕದ ಪ್ರವೇಶದ್ವಾರ



ಗಿರಿಜನ ಲೋಕದಲ್ಲಿ ಅಜ್ಜಿ-ಕಂದ

ಸುಮಾರು ಹದಿನೈದು ಎಕರೆಯಲ್ಲಿ ಹರಡಿಕೊಂಡಿರುವ ಜಾನಪದ ಲೋಕದಲ್ಲಿ ಬುಡಕಟ್ಟು ಗಿರಿಜನರ ಲೋಕವನ್ನು ಸೃಷ್ಟಿಸಬೇಕೆಂಬುದು ಜಾನಪದ ಲೋಕದ ಸಂಸ್ಥಾಪಕರಾದ ಎಚ್.ಎಲ್. ನಾಗೇಗೌಡ ಅವರ ಕನಸಾಗಿತ್ತು. ಇಲ್ಲಿಗೆ ಭೇಟಿ ನೀಡುವವರಿಗೆ ಬುಡಕಟ್ಟು ಸಮುದಾಯಗಳನ್ನು ಪರಿಚಯಿಸುವ ಇರಾದೆ ಹೊಂದಿದ್ದ ಅವರು, ಆ ನಿಟ್ಟಿನಲ್ಲಿ ಹೆಚ್ಚಿನ ಪರಿಶ್ರಮ ಹಾಕಿದ್ದರು.

ಕರ್ನಾಟಕ ಜಾನಪದ ಪರಿಷತ್ತಿನ ಹಿಂದಿನ ಅಧ್ಯಕ್ಷರಾಗಿದ್ದ ಟಿ. ತಿಮ್ಮೇಗೌಡ ಅವರ ಅವಧಿಯಲ್ಲಿ ಬಿಡುಗಡೆಯಾಗಿದ್ದ ₹2 ಕೋಟಿ ಅನುದಾನ ನಾಗೇಗೌಡರ ಕನಸಿನ ಸಾಕಾರಕ್ಕೆ ಮುನ್ನುಡಿ ಬರೆಯಿತು. ನಾಗೇಗೌಡರ ನಿಕಟವರ್ತಿಯೂ ಆಗಿದ್ದ ಜಾನಪದ ತಜ್ಞ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರ ಪರಿಲ್ಪನೆಯಲ್ಲಿ ಗಿರಿಜನ ಲೋಕ ನಿರ್ಮಾಣದ ನೀಲನಕ್ಷೆ ಸಿದ್ಧವಾಯಿತು. ಖ್ಯಾತ ಶಿಲ್ಪಕಲೆ ತಜ್ಞರಾದ ಶಿಗ್ಗಾವಿಯ ಡಾ. ಟಿ.ಬಿ. ಸೊಲಬಕ್ಕನವರ ಮಗ ಹರ್ಷ ಸೊಲಬಕ್ಕನವರ ನೇತೃತ್ವದ ತಂಡ ಗಿರಿಜನ ಲೋಕವನ್ನು ಸೃಷ್ಟಿಸಿತು.

'ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ನಾನು ಪ್ರಾಧ್ಯಾಪಕನಾಗಿದ್ದಾಗ, ಅಲ್ಲಿ ಸುಮಾರು ಐದು ಎಕರೆಯಲ್ಲಿ ಗಿರಿಸೀಮೆಯನ್ನು ನಿರ್ಮಾಣ ಮಾಡಿದ್ದೆ. ಅದನ್ನು ನೋಡಿ ನಾಗೇಗೌಡರು ಬೆರಗಾಗಿದ್ದರು. ಜಾನಪದ ಲೋಕದಲ್ಲೂ ಇಂತಹದ್ದೊಂದು ಆಗಬೇಕು ಎಂಬುದು ನನ್ನ ಕನಸು. ನೀನೇ ಅದನ್ನು ಮಾಡಬೇಕು ಎಂದು ಹೇಳಿದ್ದರು' ಎಂದು ಜಾನಪದ ಲೋಕದ ಆಡಳಿತ ಮಂಡಳಿಯ ಸದಸ್ಯ ಹಾಗೂ ನಾಡೋಜ ಎಚ್.ಎಲ್. ನಾಗೇಗೌಡ ಸಂಶೋಧನಾ ಕೇಂದ್ರದ ಶೈಕ್ಷಣಿಕ ನಿರ್ದೇಶಕರೂ ಆಗಿರುವ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಗಿರಿಜನ ಲೋಕದ ಪರಿಕಲ್ಪನೆ ಮೊಳಕೆಯೊಡೆದ ಬಗೆಯನ್ನು ಹಂಚಿಕೊಂಡರು.

ವಿಶ್ವ ಜಾನಪದ ದಿನಾಚರಣೆ ಆಕರ್ಷಣೆ

ಜಾನಪದ ಲೋಕದಲ್ಲಿ ಆಗಸ್ಟ್ 22ರಂದು ವಿಶ್ವ ಜಾನಪದ ದಿನಾಚರಣೆ ಕಾರ್ಯಕ್ರಮದಲ್ಲಿ 'ಗಿರಿಜನ ಲೋಕ'ವು ಪ್ರಮುಖ ಆಕರ್ಷಣೆಯಾಗಿದೆ. ಕೇಂದ್ರ ಪ್ರವಾಸೋದ್ಯಮ ಇಲಾಖೆ ಮತ್ತು ಕರ್ನಾಟಕ ಜಾನಪದ ಪರಿಷತ್ತು ಆಯೋಜಿಸಿರುವ ಕಾರ್ಯಕ್ರಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಹಾಲಕ್ಕಿ ಒಕ್ಕಲಿಗರ ಕುಣಿತ ಮತ್ತು ಗೊಂಡರ ನೃತ್ಯ ಪ್ರದರ್ಶನ ವಿಶೇಷವಾಗಿದೆ. ಜಾನಪದ ಲೋಕದ ಪ್ರವಾಸಿಗರ ಮಾಹಿತಿ ಪುಸ್ತಕವನ್ನು ಗಣ್ಯರು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಿದ್ದಾರೆ.

'ಗಿರಿಜನ ಲೋಕದಲ್ಲಿ ಸದ್ಯ ಐದು ಸಮುದಾಯಗಳಿಗೆ ಸಂಬಂಧಿಸಿದ ಕೆಲಸ ಪೂರ್ಣಗೊಂಡಿದೆ. ಸ್ಥಳೀಯ ಇರುಳಿಗರ ಗುಡಿಸಲು ಮತ್ತು ಕಾಡುಗೊಲ್ಲರ ದೈವ ಜುಂಜಪ್ಪನ ಗುಡಿಯನ್ನು ಸದ್ಯದಲ್ಲೇ ಇಲ್ಲಿ ನಿರ್ಮಿಸಲಾಗುವುದು. ಬುಡಕಟ್ಟು ಜನ ತಯಾರಿಸುವ ಕರಕುಶಲವಸ್ತುಗಳ ಮಾರಾಟ, ಬುಡಕಟ್ಟು ಶೈಲಿಯಲ್ಲಿ ಒಂದು ಕ್ಯಾಂಟೀನ್ ಆರಂಭಿಸಿ, ಅಲ್ಲಿ ದೇಸಿ ತಿನಿಸುಗಳು ಹಾಗೂ ದೇಸಿ ಪಾನೀಯಗಳು ಸಿಗುವಂತೆ ಮಾಡುವ ಆಲೋಚನೆ ಇದೆ' ಎಂದು ಬೋರಲಿಂಗಯ್ಯ ಕನಸು ತೆರೆದಿಟ್ಟರು.

ಕಾಡುಗೊಲ್ಲರು, ಸೋಲಿಗ, ಸಿದ್ಧಿ, ಇರುಳಿಗ ಹಾಗೂ ಕೊರಗ ಸಮುದಾಯಗಳ ಅನಾವರಣ ಇನ್ನೂ ಆಗಬೇಕಿದೆ. ಆರ್ಥಿಕ ಕೊರತೆಯಿಂದಾಗಿ ಆ ಕೆಲಸ ವಿಳಂಬವಾಗಿದೆ. ಈ ಯೋಜನೆಗಳಿಗೆ ಅಗತ್ಯವಿರುವ ಅನುದಾನ ಕೋರಿ, ಕೇಂದ್ರ ಬುಡಕಟ್ಟು ಸಚಿವಾಲಯಕ್ಕೆ ಪ್ರಸ್ತಾವ ಕಳಿಸಲು ಚಿಂತನೆ ನಡೆಸಿದ್ದು, ಸಂಸ್ಥೆಯಿಂದಲೇ ಅಲ್ಲೊಂದು ಬುಡಕಟ್ಟು ವೇದಿಕೆ ನಿರ್ಮಿಸುವ ಇರಾದೆಯನ್ನು ಜಾನಪದ ಲೋಕದ ಅಧ್ಯಕ್ಷ ಪ್ರೊ. ಹಿ.ಶಿ. ರಾಮಚಂದ್ರೇಗೌಡ ವ್ಯಕ್ತಪಡಿಸಿದರು.

ಜೀವಸತ್ವ ಉಣಿಸಿದ ಸಂಗೀತಗಾರರು

8ನೇ ಪುಟದಿಂದ...

ಈ ಸತ್ಯ ತಿಳಿದ ತಕ್ಷಣ ಜಯಶ್ರೀ ಅವರು ಎಚ್ಚೆತ್ತು ಕೊಂಡಿದ್ದಾರೆ. ತಾವು ಮತ್ತು ತಮ್ಮ ಶಿಷ್ಯಂದಿರು ಇಂತಹ ವಿಶೇಷ ಮಕ್ಕಳ ನೆರವನ್ನು ಪಡೆದು ಸಾಧನೆಯನ್ನು ಮಾಡಬೇಕು ಎಂದು ಅರಿತುಕೊಂಡಿದ್ದಾರೆ. ಈಗ ಅಂತಹ ಮಕ್ಕಳಿಗಾಗಿ ವಿಶೇಷ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ. ಆ ಮಕ್ಕಳ ಒಳಿತಿಗಾಗಿ ಸಾಕಷ್ಟು ದಾನ ಮಾಡಿದ್ದಾರೆ. ಆ ಮಕ್ಕಳ ಮುಂದೆ ತಿಂಗಳಿಗೊಮ್ಮೆ ಶಿಷ್ಯಂದಿರ ಜೊತೆಗೂಡಿ ಸಂಗೀತ ಹಾಡಿ, ಅವರ ಅಭಿಪ್ರಾಯ ಪಡೆಯುತ್ತಾರೆ. ಇದು ಅವರ ಕಲಿಕೆಗೆ ಸಾಕಷ್ಟು ಅನುಕೂಲವನ್ನು ಮಾಡಿಕೊಟ್ಟಿದೆ.

ಈ ಸನ್ನಿವೇಶ ದೊಡ್ಡದೇ ಆದ ಸಾಹಿತ್ಯ ಪಾಠವನ್ನು ನನಗೆ ಕಲಿಸಿತು. ನಾವು ಒಮ್ಮೆ ಪ್ರಸಿದ್ಧಿಗೆ ಬಂದ ಮೇಲೆ, ನಮ್ಮ ಬರವಣಿಗೆಯ ಕುರಿತು ನಮ್ಮ ಪರಿಚಿತರು, ಅಭಿಮಾನಿಗಳು ಹುಸಿಮೆಚ್ಚುಗೆಯನ್ನು ಹೇಳುತ್ತಲೇ ಹೋಗುತ್ತಾರೆ. ಆದರೆ ಕಹಿಸತ್ಯ ಹೇಳುವ ಗೊಡವೆಗೇ ಹೋಗುವುದಿಲ್ಲ. ಆದರೆ ಅಂತಹ ಕಹಿಸತ್ಯವನ್ನೂ ನುಡಿಯುವ ಪ್ರಾಮಾಣಿಕರು ಇದ್ದೇ ಇರುತ್ತಾರೆ. ಅಂತಹವರನ್ನು ಗುರುತಿಸಿಕೊಂಡು ಅವರ ನೆರವಿನಿಂದ ತಿದ್ದಿಕೊಳ್ಳುತ್ತಲೇ ಇರಬೇಕು. ಅವರು ಒಂದು ರೀತಿ ನಮ್ಮ ಗುರುಗಳಾಗಿರುತ್ತಾರೆ ಎನ್ನುವ ಸಂಗತಿ ನನಗೆ ಹೆಚ್ಚು ಸ್ಪಷ್ಟವಾಯಿತು.

ಇಷ್ಟೆಲ್ಲಾ ಹೇಳಿದ ಮೇಲೆ ನಮ್ಮ ಕನ್ನಡದವರೇ ಆದ ಪಂಡಿತ ಭೀಮಸೇನ ಜೋಷಿಯವರ ಬಗ್ಗೆ ಹೇಳದಿದ್ದರೆ ಹೇಗೆ? ಒಮ್ಮೆ ಅವರಿಗೆ ಮಂತ್ರಾಲಯದಲ್ಲಿ ಹಾಡಲು ಆಹ್ವಾನ ಬಂದಿತು. ಕಛೇರಿ ನಡೆಯುವ ದಿನಕ್ಕೆ ಒಂದು ವಾರ ಮೊದಲೇ ತಮ್ಮ ಸಂಗೀತಕ್ಕೆ ಸಾಥ್ ಕೊಡುವ ಪಟಾಲಂ ಕಟ್ಟಿಕೊಂಡು ಕಾರಿನಲ್ಲಿ ಹೊರಟುಬಿಟ್ಟರು. ಮಂತ್ರಾಲಯದ ದಾರಿಯಲ್ಲಿ ಸಿಗುವ ಅನೇಕ ಪ್ರಮುಖ ಹಳ್ಳಿಗಳಿಗೆ ಕಾರನ್ನು ಒಯ್ದು, ಅಲ್ಲಿಯ ಗೌಡರನ್ನು ಕಂಡು ಭೇಟಿಯಾಗಿ 'ನನ್ನ ಹೆಸರು ಭೀಮಸೇನ ಅಂತ. ಸಂಗೀತ ಹಾಡ್ತೀನಿ. ಸವಾಯಿ ಗಂಧರ್ವರ ಹತ್ತಿರ ಶಿಷ್ಯತ್ವ ಆಗೇದೆ. ನೀವು ಒಪ್ಪಿಗೆ ಕೊಟ್ಟರೆ ಈ ಸಂಜೆ ನಿಮ್ಮೂರಲ್ಲಿ ಕಛೇರಿ ಮಾಡ್ತೀನಿ. ನಿಮ್ಮ ಊರಿನ ಜನರ ಹತ್ತಿರ ಚಂದಾ ಎತ್ತಿ ಕೊಟ್ಟರೆ ನಮಗೆ ಉಪಕಾರ ಆಗ್ತದೆ' ಎಂದು ಬೇಡಿಕೊಳ್ಳುತ್ತಿದ್ದರು. ಬಹುತೇಕ ಊರಿನ ಗೌಡರು ಅದಕ್ಕೆ ಒಪ್ಪಿ ಕಛೇರಿ ಏರ್ಪಾಡು ಮಾಡುತ್ತಿದ್ದರು. ಆ ದಿನ ಅವರೆಲ್ಲರ ವಸತಿ ಮತ್ತು ಊಟೋಪಚಾರಗಳು ಆ ಹಳ್ಳಿಯಲ್ಲಿಯೇ ನಡೆದು ಹೋಗುತ್ತಿದ್ದವು. ದಾರಿಯ ಖರ್ಚಿಗೆ ಒಂದಿಷ್ಟು ಹಣ ಮಿಕ್ಕುತ್ತಿತ್ತು.

ಕನ್ನಡ ಪುಸ್ತಕ ಪ್ರಕಾಶಕ ನಾನು. ಯಾವ ಸಂಕೋಚವೂ ಇಲ್ಲದಂತೆ ನನ್ನ ಪುಸ್ತಕಗಳನ್ನೂ ನಾನೇ ಪ್ರಕಟಿಸಿಕೊಳ್ಳುತ್ತೇನೆ. ಹಿರಿಯರಾದ ಭೀಮಸೇನ ಜೋಷಿಯವರೆ ನಮ್ಮ ಪುಸ್ತಕಗಳ ಮಾರಾಟ ಮಾಡುವ ವಿಧಾನವನ್ನು ಕಲಿಸಿಕೊಟ್ಟಿದ್ದಾರಲ್ಲವೆ?


ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಣ್ಣ ಚಿಕ್ಕ ಶ್ರೀಕೃಷ್ಣ ಕಥೆಯ — ಗುಂಡನ ನೀರಾಟ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು




ಸಂಸ್ಕೃತಿ ಎಂ ಎಸ್
ಮೈಸೂರು



ಯಶವಂತ ಬಡಿಗೇರ
ಬಾಗಲಕೋಟೆ



ವಂಶಿಕಾ ಸಿ.ಗೌಡ
ಕೆ.ಆರ್.ನಗರ



ವರುಣ್ ಎಸ್.
ವಿಜಯನಗರ



ಶ್ವೇತಾ
ಗಬ್ಬೂರು, ರಾಯಚೂರು



ಲಕ್ಷ್ಮಿನಾರಾಯಣ. ಜಿ.
ರಾಯಚೂರು

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂರು ಅಕ್ಷರ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಇನ್ನೆರಡು ಅಕ್ಷರ ಆಯ್ಕೆ ಮಾಡಿ ತುಂಬಿ ಐದಕ್ಷರದ ಅರ್ಥಬದ್ಧ ಪದ ಮಾಡಿ.

1	ಜ		ನ		ನ
2	ಹ		ವ		ನ
3	ಹ		ವ		ನ
4	ಕ		ವ		ನ
5	ಕ		ನ		ನ

ಅಕ್ಷರ ಪಟ್ಟಿ				
ಲಾ	ರಿ	ದ	ರ್ಥ	ಯ
ಯ	ವಿ	ರ್ಷ	ಚ	ದ

ಗಣಿತದಲ್ಲಿ ಗರ್ದಿ ಗಮ್ಮತ್ತು

ವಿಚಿತ್ರ ಸಂಖ್ಯೆ: 381654729

ಇದೊಂದು ವಿಚಿತ್ರ ಸಂಖ್ಯೆ. ಈ ಸಂಖ್ಯೆಯನ್ನು ಮೊದಲು 9ರಿಂದ ಭಾಗಿಸಿ. ಪೂರ್ಣ ಭಾಗವಾಗುತ್ತದೆ. ನಂತರ ಕೊನೆಯಲ್ಲಿನ ಒಂದೊಂದು ಅಂಕಿ ಕಡಿಯುತ್ತ ಹೋಗಿ ಉಳಿಯುವ ಸಂಖ್ಯೆಗಳನ್ನು 8ರಿಂದ, 7ರಿಂದ, 6ರಿಂದ, 5ರಿಂದ, 4ರಿಂದ, 3ರಿಂದ, 2ರಿಂದ ಭಾಗಿಸುತ್ತ ಹೋದರೂ ಪೂರ್ಣ ಭಾಗ ಹೋಗುತ್ತದೆ. ಒಟ್ಟಿನಲ್ಲಿ ಇದೊಂದು ತುಂಡು ಮಾಡಿದರೂ ಮೊಂಡತನ ಬಿಡದ ಹಠಮಾರಿ ಸಂಖ್ಯೆ.

9) 381654729(
8) 38165472(
7) 3816547(
6) 381654(
5) 38165(
4) 3816(
3) 381(
2) 38(



ಭಾಗಿಸಿ ಖಾತ್ರಿ ಮಾಡಿಕೊಳ್ಳಿ

ಆಲ್ಫಾಬೆಟ್ ಗೇಮ್

ಇಲ್ಲಿ ಕೊಟ್ಟಿರುವ ಸುಳಿವಿಗೆ ತಕ್ಕಂತೆ ಉತ್ತರಿಸಿ. ಆದರೆ ಆ ಉತ್ತರ ಇಂಗ್ಲಿಷ್‌ನ 26 ಅಕ್ಷರಗಳಲ್ಲಿ ಎರಡು ಅಕ್ಷರಗಳೇ ಆಗಿರಬೇಕು.

	ಸುಳಿವು	ಉತ್ತರ	
1	ಒಂದು ಜಲಚರ ಜೀವಿ - (ಏಡಿ)	A	D
2	ಒಂದು ಪ್ರಶ್ನಾರ್ಥಕ ಪದ		
3	ಇಂಗ್ಲಿಷ್ ಉಚ್ಚಾರದಲ್ಲಿ ಒಂದು ಸಂಖ್ಯೆ		
4	ತಂಪು ಪದದ ವಿರುದ್ಧ ಪದ		
5	ಎಣಿಕೆಯಲ್ಲಿ ಮೊದಲ ಸ್ಥಾನ		
6	ಆರಿಸಿದ್ದು		
7	ಉಡಾಳ		
8	ಮಕ್ಕಳ ಒಂದು ಆಟಿಕೆ		
9	ಇಂಗ್ಲಿಷ್ ಉಚ್ಚಾರದಲ್ಲಿ ನಿಬಂಧ		
10	ಯುದ್ಧದಲ್ಲಿ ಬಳಸುತ್ತಿದ್ದ ಒಂದು ಆಯುಧ		
11	ನಿಂದನೆ		
12	ಇಂಗ್ಲಿಷ್ ಉಚ್ಚಾರದಲ್ಲಿ ಸುಲಭ		

ಪದಗೊಂಚಲು

ಇಲ್ಲಿ ಕೊಟ್ಟಿರುವ ಪದದಲ್ಲಿ ಆರಂಭದಿಂದ ಒಂದೊಂದೆ ಅಕ್ಷರ ತೆಗೆಯುತ್ತ ಹೋದರೂ ಅರ್ಥಬದ್ಧ ಪದಗಳೇ ಉಳಿಯುತ್ತದೆ.



ಅಂದಿನಾ ನಾಕು ಸುಮಗಳು
ದಿನಾ ನಾಕು ಸುಮಗಳು
ನಾನಾ ಕುಸುಮಗಳು
ನಾಕು ಸುಮಗಳು
ಕುಸುಮಗಳು
ಸುಮಗಳು
ಮಗಳು
ಗಳು

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಮದಾ | ಯಾತ | ಸರಿ
ಬಾರಿ | ಧನ | ಬಡ

ಅಕ್ಷರ ಪಟ್ಟಿ					
ಕೇ	ಆ	ಸ್ಸು	ವೆ	ಆ	ವ
ಅಂ	ಇಂ	ಸು	ತಾ	ಹಿಂ	ನೆ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಉಸುಳಿವು 2.ಲಗೋರಿಲ್ಲಾ 3.ಮಾಗಡಿಗೆ 4.ಅಂಬರಹ 5.ಕೂಕಣಿವೆ

ಅದಲು ಬದಲು...: 1.ದೂರುನೀಡು 2.ಜನನಮರಣ 3.ರಮಾಮನವಿ 4.ವಾಯುವಿಹಾರ

ಪದ-ಪರಿಚಯ: 1.ಕಡಿ 2.ಕಡು 3.ಕಡೆ 4.ಕಾಡು 5.ಕಾಡೆ 6.ಕಿಡಿ 7.ಕೀಡೆ 8.ಕುಡ 9.ಕುಡಿ 10.ಕೆಡು 11.ಕೇಡು 12.ಕೇಡಿ 13.ಕೊಡ 14.ಕೊಡು 15.ಕೋಡು 16.ಕೊಡೆ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಬೆಂಗಳೂರು	₹11300-14000
ಪುತ್ತೂರು	₹4500-7300
ತಿಪಟೂರು	₹6800-8910
ತುರುವೇಕೆರೆ	₹8900-8900

ಮುಂಬೈ ಧಾರಣೆ

ಶೇಂಗಾ

19–8–2023

ಜಾವಾ 70/80(ಹೊಸ)	13300-13400
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	12900-13000
ದಪ್ಪ ಗುಜರಾತ್(ಹೊಸ)	14200-14300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850(1860)
ಒಂದು ವಾರದ ಡೆಲಿವರಿ	1845(1855)
ಸೋಯಾ ಕಚ್ಚಾ	905(907)
ಪಾಮ್ ವಾರದ ಡೆಲಿವರಿ	850(853)
ಸೂರ್ಯಕಾಂತಿ ಎಣ್ಣೆ ಕಚ್ಚಾ	890(890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,175(58,350)
ಬೆಳ್ಳಿ ಕೆ.ಜಿ
70,300(70,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಅನ್‌ಲಿಮಿಟೆಡ್: ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಯಾಷನ್ ರಿಟೇಲ್ ಅನ್‌ಲಿಮಿಟೆಡ್ ಕಂಪನಿಯ 'ಸ್ವಾತಂತ್ರ್ಯೋತ್ಸವ ದಿನದ ಡಬಲ್ ಆಫರ್' ಕೊಡುಗೆಯು ಭಾನುವಾರ ಕೊನೆಗೊಳ್ಳುತ್ತಿದ್ದು, ಇದರ ಪ್ರಯೋಜನ ಪಡೆದುಕೊಳ್ಳುವಂತೆ ಕಂಪನಿಯು ಗ್ರಾಹಕರಿಗೆ ಹೇಳಿದೆ.

ಸದ್ಯ ನಡೆಯುತ್ತಿರುವ ಖರೀದಿ ಉತ್ಸವದಲ್ಲಿ ಗ್ರಾಹಕರು ತಮ್ಮ ಹಣಕ್ಕೆ ಹೆಚ್ಚಿನದ್ದನ್ನು ಪಡೆಯಬಹುದು. ಒಂದು ಖರೀದಿಸಿದರೆ ಒಂದು ಉಚಿತ ಮತ್ತು ₹ 3 ಸಾವಿರ ಮೌಲ್ಯದ ಖರೀದಿ ಮಾಡಿದರೆ ₹3 ಸಾವಿರದ ಖರೀದಿ ಉಚಿತ ಇರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	600

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-44500
ಹಳತು	46000-48000

ಕಾರ್ಕಳ

ಹೊಸತು	30000-44500

ಕುಂದಾಪುರ

ಹಳೆಚಾಲಿ	43500-47000
ಹೊಸಚಾಲಿ	37000-41500

ಪುತ್ತೂರು

ಕೋಕ	11000-25000
ಹೊಸತು	34000-44500

ಶಿರಸಿ

ಬೆಟ್ಟೆ	41609-42723
ಬಿಳಿಗೋಟು	35399-36399
ಚಾಲಿ	39199-43299
ರಾಶಿ	43699-49209

ಸೊರಬ

ಬಿಳಿಗೋಟು	30313-30699
ಚಾಲಿ	35399-37799
ಕೋಕ	28989-34099
ಗೊರಬಲು	35509-36009
ರಾಶಿ	37099-50099
ಸಿಪ್ಪೆಗೋಟು	21099-21099

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13500	13750	147.75ಸೆಂಟ್ಸ್
ಎಸಿ	---	6700	6700	
ಆರ್‌ಪಿ	---	10000	10000	ಲಂಡನ್
ಆರ್‌ಸಿ	---	234	5875	2544ಡಾಲರ್ಸ್

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟಾಂಡರ್ಡ್ ಚಿನ್ನ 10ಗ್ರಾಂ	₹60,180
ಒಡವೆ ಚಿನ್ನ 1ಗ್ರಾಂ	₹5,568
ಬೆಳ್ಳಿ ಕೆ.ಜಿಗೆ	₹72,400

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹475
12 ಮೊಟ್ಟೆಗೆ	₹65

ಮೈಸೂರು

100 ಮೊಟ್ಟೆಗೆ	₹477

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹141
ಆರ್‌ಎಸ್‌ಎಸ್-5	₹134
ಗುಡ್ ಲಾಟ್	₹120

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1840(1850)
ಸೋಯಾ (ರಿಫೈನ್ಡ್)	₹950(950)
ಸೂರ್ಯಕಾಂತಿ (ರಿಫೈನ್ಡ್)	₹960(960)
ಪಾಮೋಲಿನ್	₹852(855)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹330-558
ದ್ವಿತಳಿ (ಬಿ.ವಿ)	₹363-670

ದೇಶದಲ್ಲಿ ಪೂರೈಕೆ ಸುಧಾರಣೆ, ಬೆಲೆ ನಿಯಂತ್ರಣಕ್ಕೆ ಕೇಂದ್ರದ ಕ್ರಮ

ಈರುಳ್ಳಿ ರಫ್ತಿಗೆ ಶೇ 40ರಷ್ಟು ಸುಂಕ

ನವದೆಹಲಿ (ಪಿಟಿಐ): ದೇಶಿ ಮಾರುಕಟ್ಟೆಯಲ್ಲಿ ಈರುಳ್ಳಿ ಪೂರೈಕೆ ಸುಧಾರಿಸಲು ಮತ್ತು ಬೆಲೆ ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಈರುಳ್ಳಿ ರಫ್ತು ಮೇಲೆ ಶೇ 40ರಷ್ಟು ಸುಂಕವನ್ನು ವಿಧಿಸಿದೆ.

ರಫ್ತು ಸುಂಕವು ಡಿಸೆಂಬರ್ 31ರವರೆಗೆ ಜಾರಿಯಲ್ಲಿ ಇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಸರ್ಕಾರದ ಮಾಹಿತಿಯ ಪ್ರಕಾರ, ದೆಹಲಿಯಲ್ಲಿ ಶನಿವಾರ ಈರುಳ್ಳಿ ಚಿಲ್ಲರೆ ಮಾರಾಟ ದರ ಕೆ.ಜಿಗೆ ₹37ಕ್ಕೆ ತಲುಪಿದೆ. ಈರುಳ್ಳಿ ದರವು ಸೆಪ್ಟೆಂಬರ್‌ನಲ್ಲಿ ಏರಿಕೆ ಕಾಣಲಿದೆ ಎನ್ನುವ ವರದಿಗಳು ಬಂದಿರುವ ಹಿನ್ನೆಲೆಯಲ್ಲಿ ರಫ್ತು ಮೇಲೆ ಸುಂಕ ವಿಧಿಸಲಾಗಿದೆ.

ಏಪ್ರಿಲ್ 1 ರಿಂದ ಆಗಸ್ಟ್ 4ರವರೆಗಿನ ಅವಧಿಯಲ್ಲಿ ದೇಶದಿಂದ 9.75 ಲಕ್ಷ ಟನ್ ಈರುಳ್ಳಿ ರಫ್ತಾಗಿದೆ. ಮೌಲ್ಯದ ಲೆಕ್ಕದಲ್ಲಿ ಭಾರತದಿಂದ ಹೆಚ್ಚು ಈರುಳ್ಳಿ ಆಮದು ಮಾಡಿಕೊಳ್ಳುತ್ತಿರುವ ದೇಶಗಳ



ಸಾಲಿನಲ್ಲಿ ಬಾಂಗ್ಲಾದೇಶ, ಮಲೇಷ್ಯಾ ಮತ್ತು ಯುಎಇ ಮುಖ್ಯವಾಗಿವೆ.

ದೇಶಿ ಮಾರುಕಟ್ಟೆಯಲ್ಲಿ ಈರುಳ್ಳಿ ಲಭ್ಯತೆ ಹೆಚ್ಚಿಸಲು ಅದರಲ್ಲಿಯೂ ಮುಖ್ಯವಾಗಿ ಮುಂಬರುವ ಹಬ್ಬದ ಋತುವಿನಲ್ಲಿ ಈರುಳ್ಳಿ ಪೂರೈಕೆ ಸಾಕಷ್ಟು ಪ್ರಮಾಣದಲ್ಲಿ ಇರುವಂತೆ ಮಾಡುವ ಉದ್ದೇಶದಿಂದ ಶೇ 40ರಷ್ಟು ಆಮದು ಸುಂಕ ವಿಧಿಸಲಾಗಿದೆ ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಈಚಿನ ವರ್ಷಗಳಲ್ಲಿ ರಫ್ತು ತೀವ್ರವಾಗಿ ಹೆಚ್ಚಾಗುತ್ತಿರುವುದು ಗಮನಕ್ಕೆ ಬಂದಿದೆ ಎಂದೂ ಅವರು ಹೇಳಿದ್ದಾರೆ.

ರಫ್ತು ನಿರ್ಬಂಧಿಸಲು ಸರ್ಕಾರವು ಯಾವಾಗಲೂ 'ಕನಿಷ್ಠ ರಫ್ತು ದರ' ವಿಧಿಸುವ ಮಾರ್ಗ ಅನುಸರಿಸುತ್ತದೆ. ಹೀಗಿದ್ದರೂ ಇದೇ ಮೊದಲ ಬಾರಿಗೆ ಈ ವರ್ಷ ಈರುಳ್ಳಿ ರಫ್ತನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ರಫ್ತು ಸುಂಕ ವಿಧಿಸಲಾಗಿದೆ.

ಗ್ರಾಹಕ ವ್ಯವಹಾರಗಳ ಸಚಿವಾಲಯದ ಪ್ರಕಾರ, ದೇಶದಾದ್ಯಂತ ಈರುಳ್ಳಿಯ ಸರಾಸರಿ ಚಿಲ್ಲರೆ ಮಾರಾಟ ದರವು ಶನಿವಾರ ಕೆ.ಜಿಗೆ ₹30.72 ಇತ್ತು. ಕೆ.ಜಿಗೆ ಗರಿಷ್ಠ ₹ 63 ಮತ್ತು ಕನಿಷ್ಠ ₹10ರಷ್ಟು ಇತ್ತು.

ಮುಂಗಾರು ಅವಧಿಯಲ್ಲಿ ಈರುಳ್ಳಿ ಬಿತ್ತನೆ ಪ್ರಮಾಣ ಕಡಿಮೆ ಆಗಿದೆ ಎನ್ನುವ ವರದಿಯಿಂದಾಗಿ ಬೆಲೆ ಏರಿಕೆ ಕಾಣಲಾರಂಭಿಸಿದೆ. ಸಗಟು ದರ ಸೂಚ್ಯಂಕದ ಪ್ರಕಾರ ಜುಲೈನಲ್ಲಿ ಈರುಳ್ಳಿ ದರ ಶೇ 7.13ಕ್ಕೆ ಏರಿಕೆ ಕಂಡಿದೆ. ಜೂನ್‌ನಲ್ಲಿ ಶೇ (–) 4.31ರಷ್ಟು ಇತ್ತು.

ಹೊಸ ಸಹಕಾರ ನೀತಿ ಬಹುತೇಕ ಸಿದ್ಧ: ಸುರೇಶ್ ಪ್ರಭು

ಕೋಲ್ಕತ್ತ (ಪಿಟಿಐ): ಹೊಸ ಸಹಕಾರ ನೀತಿಯು ಬಹುತೇಕ ಸಿದ್ಧವಾಗಿದ್ದು, 47 ಸದಸ್ಯರ ಸಮಿತಿಯು ಕರಡು ನೀತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಿದೆ ಎಂದು ಸಮಿತಿಯ ಅಧ್ಯಕ್ಷ ಮತ್ತು ಮಾಜಿ ಕೇಂದ್ರ ಸಚಿವ ಸುರೇಶ್ ಪ್ರಭು ಶನಿವಾರ ತಿಳಿಸಿದ್ದಾರೆ.

ದೇಶದಲ್ಲಿ ಸಹಕಾರ ಚಳವಳಿ ಬಲಪಡಿಸುವ ಉದ್ದೇಶದಿಂದ ನೀತಿಯು ಸಿದ್ಧವಾಗುತ್ತಿದ್ದು, ಪ್ರಭು ಅವರು ರಾಷ್ಟ್ರ ಮಟ್ಟದ ಸಮಿತಿಯ ಮುಖ್ಯಸ್ಥ ಆಗಿರಲಿದ್ದಾರೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಕಳೆದ ವರ್ಷ ಘೋಷಿಸಿದ್ದರು.

ಸಮಿತಿಯು ಕರಡು ನೀತಿಯನ್ನು ಅಂತಿಮಗೊಳಿಸಿದ್ದು, ಅದನ್ನು ಸರ್ಕಾರಕ್ಕೆ ಸಲ್ಲಿಸುವ ಪ್ರಕ್ರಿಯೆ ಕೈಗೊಂಡಿದೆ. ನೀತಿ ಬಿಡುಗಡೆ ಮಾಡುವ ಮತ್ತು ಜಾರಿಗೊಳಿಸುವ ಕಡೆಗೆ ನಾವು ಗಮನ ಹರಿಸಬಹುದು ಎಂದು ಸಿಐಐ ಆಯೋಜಿಸಿದ್ದ ಕಾರ್ಯಕ್ರಮದ ಸಂದರ್ಭದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪ್ಲಾನ್‌ವ್ಯೂನಿಂದ ಬೆಂಗಳೂರಿನಲ್ಲಿ ನಾವೀನ್ಯ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲಾನ್‌ವ್ಯೂ ಕಂಪನಿಯು ಬೆಂಗಳೂರಿನಲ್ಲಿ ತನ್ನ ಹೊಸ 'ಕೇಪಬಿಲಿಟಿ ಆ್ಯಂಡ್ ಇನೊವೇಷನ್ ಸೆಂಟರ್' (ಸಿಐಸಿ) ಆರಂಭಿಸಿದೆ. ಕಂಪನಿಯು ಭಾರತದಲ್ಲಿ ತನ್ನ ವಹಿವಾಟನ್ನು ವಿಸ್ತರಿಸುವ ಉದ್ದೇಶಕ್ಕೆ ಇದು ನೆರವಾಗಲಿದೆ ಎಂದು ತಿಳಿಸಿದೆ.

ಈ ಕೇಂದ್ರವು ಹೊಸ ಉತ್ಪನ್ನಗಳು ಮತ್ತು ಗ್ರಾಹಕ ಸೇವೆಗಳತ್ತ ಗಮನ ಹರಿಸಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಷೇರುಪೇಟೆಯಲ್ಲಿ ಹೆಚ್ಚಿನ ಕುಸಿತ ತಡೆದ ದೇಶಿ ಸಾಂಸ್ಥಿಕ ಬಂಡವಾಳ ಹೂಡಿಕೆ


ಎಫ್‌ಪಿಐ: ₹10,921 ಕೋಟಿ ಹಿಂತೆಗೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಆಗಸ್ಟ್ ತಿಂಗಳಿನಲ್ಲಿ ಭಾರತದ ಮಾರುಕಟ್ಟೆಯಿಂದ ಬಂಡವಾಳ ಹಿಂದಕ್ಕೆ ಪಡೆಯಲು ಹೆಚ್ಚು ಗಮನ ಹರಿಸಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು ಆಗಸ್ಟ್ 1 ರಿಂದ 18ರವರೆಗೆ ನಡೆದಿರುವ ವಹಿವಾಟಿನಲ್ಲಿ ಭಾರತದ ಬಂಡವಾಳ ಮಾರುಕಟ್ಟೆಯಿಂದ ಒಟ್ಟು ₹10,921 ಕೋಟಿ ಹಿಂದಕ್ಕೆ ಪಡೆದಿದ್ದಾರೆ. ಈ ಅವಧಿಯಲ್ಲಿ 10 ದಿನಗಳಲ್ಲಿ ಷೇರುಗಳನ್ನು ಮಾರಾಟ ಮಾಡಿದ್ದು, ಮೂರು ದಿನ ಮಾತ್ರವೇ ಷೇರುಗಳನ್ನು ಖರೀದಿಸಿದ್ದಾರೆ ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು (ಕೋಟಿಗಳಲ್ಲಿ)



ಮುಖ್ಯಾಂಶಗಳು

- ದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರು ಖರೀದಿ
- ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕ ಅಂತ್ಯ

ಡಾಲರ್ ಮೌಲ್ಯ ವೃದ್ಧಿ ಆಗುತ್ತಿರುವುದು ಹಾಗೂ ಅಮೆರಿಕದ 10 ವರ್ಷದ ಬಾಂಡ್ ಗಳಿಕೆಯು ಶೇ 4.25ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇರುವುದರಿಂದ ಭಾರತದಂತಹ ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಲ್ಲಿ ಎಫ್‌ಪಿಐ ಒಳಹರಿವಿನ ಮೇಲೆ ಅಲ್ಪಾವಧಿಯಲ್ಲಿ ನಕಾರಾತ್ಮಕ ಪರಿಣಾಮ ಬೀರಲಿದೆ. ಮುಂದಿನ ಕೆಲವು ಸಮಯಗಳವರೆಗೆ ಇದೇ ಸ್ಥಿತಿಯು ಇರಲಿದ್ದು, ವಿದೇಶಿ ಬಂಡವಾಳ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುವುದು ಮುಂದುವರಿಸುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

ಬಂಡವಾಳ ಸರಕುಗಳು ಮತ್ತು ವಿದ್ಯುತ್ ವಲಯಗಳಿಗೆ ಸಂಬಂಧಿಸಿದ ಷೇರುಗಳ ಖರೀದಿಯನ್ನು ವಿದೇಶಿ ಹೂಡಿಕೆದಾರರು ಮುಂದುವರಿಸಿದ್ದಾರೆ. ಹಣಕಾಸು ವಲಯದ ಷೇರುಗಳನ್ನು ಮಾರಾಟ ಮಾಡಲು ಆರಂಭಿಸಿದ್ದಾರೆ. ಎಫ್‌ಪಿಐ ಮಾರಾಟ ಮಾಡುತ್ತಿದ್ದರೆ, ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ನಿರಂತರವಾಗಿ ಷೇರುಗಳನ್ನು ಖರೀದಿಸುತ್ತಿದ್ದಾರೆ. ಹೀಗಾಗಿ ದೇಶದ ಮಾರುಕಟ್ಟೆಯು ಹೆಚ್ಚಿನ ಕುಸಿತ ಕಾಣುವುದು ತಪ್ಪಿದೆ ಎಂದು ವಿಜಯಕುಮಾರ್ ತಿಳಿಸಿದ್ದಾರೆ.

ಕ್ಯಾರಟ್‌ಲೇನ್‌ನ ಶೇ 27.2ರಷ್ಟು ಷೇರು ಟೈಟಾನ್ ಸ್ವಾಧೀನಕ್ಕೆ

ನವದೆಹಲಿ (ಪಿಟಿಐ): ಚಿನ್ನಾಭರಣ ಕಂಪನಿ ಟೈಟಾನ್, ತನ್ನ ಅಂಗಸಂಸ್ಥೆ ಆಗಿರುವ ಕ್ಯಾರಟ್‌ಲೇನ್‌ನ ಶೇ 27.18ರಷ್ಟು ಷೇರನ್ನು ₹4,621 ಕೋಟಿಗೆ ಸ್ವಾಧೀನಪಡಿಸಿಕೊಳ್ಳುವ ಒಪ್ಪಂದ ಮಾಡಿಕೊಂಡಿದೆ. ಈ ಮೂಲಕ ತನ್ನ ಒಟ್ಟು ಷೇರುಪಾಲನ್ನು ಶೇ 98.28ಕ್ಕೆ ಹೆಚ್ಚಿಸಿಕೊಳ್ಳಲಿದೆ.

ಟಾಟಾ ಸಮೂಹದ ಒಡೆತನದ ಟೈಟಾನ್ ಕಂಪನಿಯು ಕ್ಯಾರಟ್‌ಲೇನ್ ಕಂಪನಿಯ ಸ್ಥಾಪರಾದ ಮಿಥುನ್ ಸಚೇತಿ ಮತ್ತು ಶ್ರೀನಿವಾಸ ಗೋಪಾಲನ್ ಮತ್ತು ಅವರ ಕುಟುಂಬದ ಸದಸ್ಯರ ಜೊತೆ ಷೇರು ಖರೀದಿ ಒಪ್ಪಂದ ಮಾಡಿಕೊಂಡಿದೆ. ಈ ಕುರಿತು ಎರಡು ಕಂಪನಿಗಳು ಜಂಟಿ ಹೇಳಿಕೆ ನೀಡಿವೆ.

ಅಕ್ಟೋಬರ್ 31ರ ಒಳಗಾಗಿ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯನ್ನು ಟೈಟಾನ್ ಹೊಂದಿದೆ. ಇದಕ್ಕಾಗಿ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಒಪ್ಪಿಗೆ ನೀಡಬೇಕಿದೆ.

ಕ್ಯಾರಟ್‌ಲೇನ್ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿ ಅಲ್ಲ. 2022-23ನೇ ಹಣಕಾಸು ವರ್ಷದಲ್ಲಿ ₹2,177 ಕೋಟಿಯಷ್ಟು ವಹಿವಾಟು ನಡೆಸಿದೆ.



ಉದ್ಯಮಿ ರತನ್ ಟಾಟಾ ಅವರಿಗೆ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿಗಳಾದ ಅಜಿತ್ ಪವಾರ್ ಮತ್ತು ದೇವೇಂದ್ರ ಫಡಣವೀಸ್ ಅವರು ಶನಿವಾರ 'ಉದ್ಯೋಗ ರತ್ನ' ಪ್ರಶಸ್ತಿ ಪ್ರದಾನ ಮಾಡಿದರು –ಪಿಟಿಐ ಚಿತ್ರ

ಎಂಬಿಬಿಎಸ್ ಸೀಟು: ಗರಿಷ್ಠ 150ರ ಮಿತಿ

2024–25ನೇ ಶೈಕ್ಷಣಿಕ ವರ್ಷ: ಹೊಸ ವೈದ್ಯಕೀಯ ಕಾಲೇಜಿಗೆ ಅನ್ವಯ

ನವದೆಹಲಿ (ಪಿಟಿಐ): 2024–25ನೇ ಶೈಕ್ಷಣಿಕ ವರ್ಷದಿಂದ ಆರಂಭವಾಗುವ ಹೊಸ ವೈದ್ಯಕೀಯ ಕಾಲೇಜುಗಳಲ್ಲಿ ಎಂಬಿಬಿಎಸ್ ಸೀಟುಗಳ ಮಿತಿಯನ್ನು ಗರಿಷ್ಠ 150ಕ್ಕೆ ನಿಗದಿಪಡಿಸಿ ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಹೊಸ ಮಾರ್ಗಸೂಚಿ ಪ್ರಕಟಿಸಿದೆ.

ಮುಂದಿನ ಶೈಕ್ಷಣಿಕ ವರ್ಷದಿಂದ ಸೀಟು ಹೆಚ್ಚಳದ ನಿರೀಕ್ಷೆಯಲ್ಲಿದ್ದ ವೈದ್ಯಕೀಯ ಕಾಲೇಜುಗಳ ಆಸೆಗೆ ಈ ಮಾರ್ಗಸೂಚಿಯು ತಣ್ಣೀರೆರಚಿದೆ.

'ರಾಜ್ಯಗಳಲ್ಲಿರುವ 10 ಲಕ್ಷ ಜನಸಂಖ್ಯೆಗೆ 100 ವೈದ್ಯಕೀಯ ಪದವಿ ಸೀಟುಗಳು' ಎಂಬ ಅನುಪಾತಕ್ಕೆ ಅನುಗುಣವಾಗಿ ಈ ಮಾನದಂಡ ರೂಪಿಸಲಾಗಿದೆ. ಹೊಸ ವೈದ್ಯಕೀಯ ಕಾಲೇಜುಗಳಲ್ಲಿನ ವೈದ್ಯಕೀಯ ಪದವಿ ಕೋರ್ಸ್, ಹೊಸ ವೈದ್ಯಕೀಯ ಕೋರ್ಸ್ ಆರಂಭ, ಹಾಲಿ ಇರುವ ಸೀಟುಗಳ ಹೆಚ್ಚಳ, ಮೌಲ್ಯಮಾಪನ ಮತ್ತು ಮೌಲ್ಯಾಂಕನ ನಿಯಮಗಳಿಗೆ ಸಂಬಂಧಿಸಿದಂತೆ ಆಗಸ್ಟ್ 16ರಂದು ಆಯೋಗ ಪ್ರಕಟಿಸಿರುವ ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ.

ಮಾರ್ಗಸೂಚಿಯಲ್ಲಿ ಏನಿದೆ?

- ಹೊಸ ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ಸುಸಜ್ಜಿತ ಆಸ್ಪತ್ರೆ ಇರಬೇಕು. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಇರಬೇಕು.
- ಆಸ್ಪತ್ರೆಯು ಕನಿಷ್ಠ 220 ಹಾಸಿಗೆ ಸಾಮರ್ಥ್ಯ ಹೊಂದಿರಬೇಕು. ಕಾಲೇಜು ಮತ್ತು ಆಸ್ಪತ್ರೆ ನಡುವೆ ವಿದ್ಯಾರ್ಥಿಗಳು, ವೈದ್ಯಕೀಯ ಸಿಬ್ಬಂದಿಯ ಪ್ರಯಾಣದ ಅಂತರ 30 ನಿಮಿಷಕ್ಕೂ ಹೆಚ್ಚಿರಬಾರದು
- ಸಹಾಯಕ ವೈದ್ಯರಿಗೆ ನೆರವಾಗುವಂತೆ ಕಾಲೇಜಿನ ವ್ಯಾಪ್ತಿಯಲ್ಲಿ ಗ್ರಾಮೀಣ ಆರೋಗ್ಯ ಕೇಂದ್ರಗಳು/ ಸಮುದಾಯ ಆರೋಗ್ಯ ಕೇಂದ್ರಗಳು, ನಗರ ಆರೋಗ್ಯ ಕೇಂದ್ರಗಳು ಇರಬೇಕು
- ಪ್ರತಿ ವೈದ್ಯಕೀಯ ಸಂಸ್ಥೆಯಲ್ಲೂ ವಿದ್ಯಾರ್ಥಿಗಳ ಕೌಶಲ ವೃದ್ಧಿಗೆ ಪೂರಕವಾಗುವಂತಹ ಸುಸಜ್ಜಿತ ಪ್ರಯೋಗಾಲಯ ಇರಬೇಕು

ಯಾವುದೇ ಕಾಲೇಜಿಗೆ ಹೆಚ್ಚುವರಿಯಾಗಿ ಅನುಮತಿಸಿದ ಕೋಟಾ ಸೀಟುಗಳು ಕೂಡ ಕಾಲೇಜಿಗೆ ಮಂಜೂರು ಮಾಡಿರುವ ಒಟ್ಟು ಸೀಟುಗಳ ಮಿತಿಯನ್ನು ಮೀರಬಾರದು ಎಂದು ಹೇಳಲಾಗಿದೆ. 2023–24ನೇ ಶೈಕ್ಷಣಿಕ ಸಾಲಿನಡಿ ಎಂಬಿಬಿಎಸ್ ಸೀಟುಗಳ ಹೆಚ್ಚಳಕ್ಕೆ ಅರ್ಜಿ ಸಲ್ಲಿಸಿರುವ ಕಾಲೇಜುಗಳಿಗೂ ಈ ಮಾರ್ಗಸೂಚಿ ಅನ್ವಯಿಸುತ್ತದೆ. ಈ ಹಿಂದಿನ ವರ್ಷದಲ್ಲಿ ಸಲ್ಲಿಸಿದ್ದ ಅರ್ಜಿಯ ಅನುಸಾರ (ಒಟ್ಟು 200 ಅಥವಾ 250) ಸೀಟುಗಳನ್ನು 2024–25ನೇ ಸಾಲಿನಡಿ ಹೆಚ್ಚಿಸುವಂತೆ ಮನವಿ ಮಾಡಬಹುದಾಗಿದೆ. ಆದರೆ, ಸೀಟು ಹೆಚ್ಚಳವಾಗುತ್ತದೆ ಎಂಬ ಯಾವುದೇ ಭರವಸೆ ಇಲ್ಲ ಎನ್ನಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಅನುಮತಿ ಪಡೆದಿರುವ ಹೊಸ ವೈದ್ಯಕೀಯ ಕಾಲೇಜುಗಳಿಗೆ ಮೊದಲ ಮೂರು ವರ್ಷಗಳಲ್ಲಿ ಅನುಕ್ರಮವಾಗಿ 50, 100 ಹಾಗೂ 150 ಸೀಟುಗಳ ಪ್ರವೇಶಾತಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಮಾರ್ಗಸೂಚಿ ಹೇಳಿದೆ.

ಆರ್‌ಟಿಐ ಸೆಕ್ಷನ್ 4ರ ಪಾಲನೆ ನಿಯಮಿತ ಪರಿಶೀಲನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) 2005ರ ಸೆಕ್ಷನ್ 4ರ ಅನ್ವಯ ಅಗತ್ಯ ಮಾಹಿತಿಗಳನ್ನು ಸಾರ್ವಜನಿಕ ಸಂಸ್ಥೆಗಳು ಪ್ರಕಟಿಸಬೇಕು ಹಾಗೂ ಇದು ಜಾರಿಯಾಗುವಂತೆ ನೋಡಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯರ ಪೀಠ, ಕಾಯ್ದೆಯು ಪರಿಣಾಮಕಾರಿಯಾಗಿ ಜಾರಿಗೊಳ್ಳುತ್ತಿದೆಯೇ ಎಂದು ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಮತ್ತು ರಾಜ್ಯಗಳ ಮಾಹಿತಿ ಆಯುಕ್ತರು ಕ್ರಮವಹಿಸಬೇಕು ಎಂದು ನಿರ್ದೇಶಿಸಿದೆ.

'ಮಾಹಿತಿ ಹಕ್ಕುದಾರರು' ಮತ್ತು 'ಕರ್ತವ್ಯ ನಿಭಾಯಿಸುವವರ' ನಡುವೆ ಆಡಳಿತಾತ್ಮಕ ಸಂಬಂಧ ಮತ್ತು ಉತ್ತರದಾಯಿತ್ವ ಇದ್ದಾಗ ಮಾತ್ರವೇ ಕಾಯ್ದೆಯ ಉದ್ದೇಶ ಮತ್ತು ಗುರಿ ಈಡೇರುವುದು ಸಾಧ್ಯ ಎಂಬುದು ನಮ್ಮ ಅಭಿಪ್ರಾಯ' ಎಂದು ಪೀಠ ಹೇಳಿತು.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ.ಪಾರ್ದಿವಾಲಾ ಅವರು ಪೀಠದ ಇತರ ಸದಸ್ಯರು. ಕಾಯ್ದೆಯ ಸೆಕ್ಷನ್ 4ರ ಕಡ್ಡಾಯ ಅನುಷ್ಠಾನ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ಕಡ್ಡಾಯ ನಿರ್ದೇಶನ ನೀಡಬೇಕು ಎಂದು ಕೋರಿ ಕಿಶನ್ ಚಂದ್ ಜೈನ್ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದರು.

ದಾಖಲೆಗಳ ಸಮರ್ಪಕ ನಿರ್ವಹಣೆ, ವರ್ಗೀಕರಣ, ಸಂಬಂಧಿತ ಸಂಸ್ಥೆಯ ಸಾಂಸ್ಥಿಕ ವ್ಯವಸ್ಥೆ, ಅಧಿಕಾರಿಗಳ ಮತ್ತು ಅವರ ಕಾರ್ಯಭಾರದ ವಿವರ, ವೇತನ ವ್ಯವಸ್ಥೆ, ಬಜೆಟ್ ಅನುದಾನ, ನೀತಿಗಳಿಗೆ ಸಂಬಂಧಿಸಿದ ವಿವರಗಳ ಪ್ರಕಟಣೆ ಇತ್ಯಾದಿ ಅಂಶಗಳನ್ನು ಪ್ರಕಟಿಸುವುದು ಕಾಯ್ದೆಯ ಸೆಕ್ಷನ್ 4ರ ಅನ್ವಯ ಕಡ್ಡಾಯವಾಗಿದೆ.

'ಇದರ ಅನುಷ್ಠಾನವನ್ನು ಕೇಂದ್ರ ಮಾಹಿತಿ ಆಯೋಗ ಹಾಗೂ ರಾಜ್ಯಗಳ ಮಾಹಿತಿ ಆಯುಕ್ತರು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು' ಎಂದು ನಿರ್ದೇಶಿಸುತ್ತಿದ್ದೇವೆ ಎಂದು ಪೀಠ ತಿಳಿಸಿತು.

'ನಮೋ–108': ಕಮಲದ ತಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಪರಿಷತ್ತಿಗೆ (ಸಿಎಸ್‌ಐಆರ್) ಸೇರಿದ ಪ್ರಯೋಗಾಲಯವು 108 ದಳಗಳನ್ನು ಹೊಂದಿದ ಕಮಲದ ಹೂವಿನ ತಳಿಯನ್ನು ಶನಿವಾರ ಅನಾವರಣಗೊಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಸೂಚಿಸುವ 'ನಮೋ–108' ಎಂದು ಈ ತಳಿಗೆ ನಾಮಕರಣ ಮಾಡಲಾಗಿದೆ.

ಇನ್ನೊಂದೆಡೆ, ದೇಶದ ಹಲವು ಸಂಶೋಧನಾ ಸಂಸ್ಥೆಗಳ ಸಸ್ಯವಿಜ್ಞಾನಿಗಳು ಈ ತಳಿಯ ಕುರಿತು ಪ್ರಶ್ನೆಗಳನ್ನು ಎತ್ತಿದ್ದಾರೆ.

'ಈ ಹೊಸ ತಳಿಯ ಕಮಲ 'ನಮೋ–108' ಪ್ರಧಾನಿ ಮೋದಿ ಅವರಿಗೆ ನೀಡಿರುವ ದೊಡ್ಡ ಉಡುಗೊರೆಯಾಗಿದೆ' ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

'ರಾಷ್ಟ್ರೀಯ ಸಸ್ಯವಿಜ್ಞಾನ ಸಂಶೋಧನಾ ಸಂಸ್ಥೆ' (ಎನ್‌ಬಿಆರ್‌ಐ) ಈ ಕಮಲದ ತಳಿಯನ್ನು ಅಭಿವೃದ್ಧಿ ಪಡಿಸಿದೆ. ಮಾರ್ಚ್‌ನಿಂದ ಡಿಸೆಂಬರ್ ವರೆಗೆ ಹೂ ಬಿಡುವ ಈ ತಳಿಯು ಪೌಷ್ಟಿಕಾಂಶದಿಂದ ತುಂಬಿದೆ. ಕಮಲದ ಹೂವು ಹಾಗೂ ಸಂಖ್ಯೆ 108ಕ್ಕೆ ಧಾರ್ಮಿಕ ಮಹತ್ವವೂ ಇದೆ' ಎಂದೂ ಸಿಂಗ್ ಹೇಳಿದ್ದಾರೆ.

ಹೊಸ ತಳಿಯ ಕಮಲದ ಕುರಿತು ಎನ್‌ಬಿಆರ್‌ಐನ ಹೇಳಿಕೆಗಳನ್ನು ಕೆಲ ಸಂಶೋಧಕರು ಪ್ರಶ್ನಿಸಿದ್ದಾರೆ. '108 ದಳಗಳುಳ್ಳ ಕಮಲದ ಹೂವಿನ ಅಭಿವೃದ್ಧಿಗಾಗಿ ತೆರಿಗೆದಾರರ ಹಣವನ್ನು ವ್ಯರ್ಥ ಮಾಡಿದ್ದೇಕೆ' ಎಂದಿದ್ದಾರೆ.

'ಈ ಸಂಶೋಧನೆಗೆ ಯಾವ ವೈಜ್ಞಾನಿಕ ಮಹತ್ವ ಇದೆ' ಎಂದು ಭಾರತೀಯ ವಿಜ್ಞಾನ, ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಸಸ್ಯವಿಜ್ಞಾನಿಯೊಬ್ಬರು ಪ್ರಶ್ನಿಸಿದ್ದಾರೆ.

ಐರ್ಲೆಂಡ್ ವಿರುದ್ಧ ಎರಡನೇ ಟಿ20 ಕ್ರಿಕೆಟ್ ಪಂದ್ಯ ಇಂದು

ಸರಣಿ ಕೈವಶದತ್ತ ಭಾರತ ಚಿತ್ತ

ಡಬ್ಲಿನ್, ಐರ್ಲೆಂಡ್ (ಪಿಟಿಐ): ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಐರ್ಲೆಂಡ್ ಎದುರಿನ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಫಿಟ್‌ನೆಸ್ ಮತ್ತು ನಾಯಕತ್ವದ ಪರೀಕ್ಷೆಗಳಲ್ಲಿ ಯಶಸ್ವಿಯಾದರು.

ಹನ್ನೊಂದು ತಿಂಗಳುಗಳ ನಂತರ ಕ್ರಿಕೆಟ್ ಕಣಕ್ಕೆ ಮರಳಿದ ಬೂಮ್ರಾ ತಮ್ಮ ಚೊಚ್ಚಲ ನಾಯಕತ್ವದ ಸರಣಿಯನ್ನು ಗೆಲ್ಲುವ ಹೊಸ್ತಿಲಲ್ಲಿದ್ದಾರೆ. ಭಾನುವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಜಯಿಸುವ ವಿಶ್ವಾಸ ಭಾರತಕ್ಕೆ ಇದೆ. ಮೂರು ಪಂದ್ಯಗಳ ಸರಣಿಯಲ್ಲಿ ಭಾರತವು 1–0ಯಿಂದ ಮುಂದಿದೆ.

ಶುಕ್ರವಾರ ನಡೆದ ಪ್ರಥಮ ಪಂದ್ಯದಲ್ಲಿ 139 ರನ್‌ಗಳಿಗೆ ಐರ್ಲೆಂಡ್ ಬಳಗವನ್ನು ಕಟ್ಟಿಹಾಕುವಲ್ಲಿ ಬೂಮ್ರಾ, ಪ್ರಸಿದ್ಧಕೃಷ್ಣ ಮತ್ತು ಸ್ಪಿನ್ನರ್ ರವಿ ಬಿಷ್ಣೋಯಿ ಯಶಸ್ವಿಯಾಗಿದ್ದರು. ಭಾರತದ ಇನಿಂಗ್ಸ್ ನಡೆಯುವ ಹೊತ್ತಿನಲ್ಲಿ ಮಳೆ ಸುರಿದ ಕಾರಣ ಡಕ್ವರ್ಥ್ ಲೂಯಿಸ್ ನಿಯಮ ಅನ್ವಯಿಸಲಾಯಿತು. ಬೂಮ್ರಾ ಬಳಗವು 2 ರನ್ ಅಂತರದಿಂದ ಜಯಿಸಿತು.


ಭಾರತ ತಂಡದ ನಾಯಕ ಜಸ್‌ಪ್ರೀತ್ ಬೂಮ್ರಾ ಮತ್ತು ಐರ್ಲೆಂಡ್ ನಾಯಕ ಪಾಲ್ ಸ್ಟರ್ಲಿಂಗ್ –ಪಿಟಿಐ ಚಿತ್ರ

ಯಶಸ್ವಿ ಜೈಸ್ವಾಲ್ ಮತ್ತು ಋತುರಾಜ್ ಗಾಯಕವಾಡ ಅವರು ಉತ್ತಮ ಆರಂಭ ನೀಡಿದರು. ಆದರೆ ಪೂರ್ಣ ಇನಿಂಗ್ಸ್ ನಡೆಯದ ಕಾರಣ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಸಾಮರ್ಥ್ಯ ಪರೀಕ್ಷೆಗೆ ಅವಕಾಶ ಸಿಗಲಿಲ್ಲ. ಆದ್ದರಿಂದ ಎರಡನೇ ಪಂದ್ಯದಲ್ಲಿ ರಿಂಕು ಸಿಂಗ್, ಶಿವಂ ದುಬೆ ಮತ್ತು ಸಂಜು ಸ್ಯಾಮ್ಸನ್ ಅವರಿಗೆ ಅವಕಾಶ ಸಿಗಬಹುದು. ಅಲ್ಲದೇ ಅವರ ಆಟದ ಮೇಲೆ ಆಯ್ಕೆಗಾರರ ಕಣ್ಣು ಇರುವುದು ನಿಶ್ಚಿತ.

ತಂಡದಲ್ಲಿರುವ ಮತ್ತೊಬ್ಬ ವಿಕೆಟ್‌ಕೀಪರ್ ಜಿತೇಶ್ ಶರ್ಮಾ ಅವರೂ ಅವಕಾಶಕ್ಕಾಗಿ ಕಾದಿದ್ದಾರೆ. ಬೌಲಿಂಗ್‌ನಲ್ಲಿ ಮೊದಲ ಪಂದ್ಯವಾಡಿದ ಅರ್ಷದೀಪ್ ಸಿಂಗ್ ಅವರಿಗೆ ವಿಶ್ರಾಂತಿ ಕೊಟ್ಟು ಮುಕೇಶ್ ಕುಮಾರ್ ಅಥವಾ ಆವೇಶ್ ಖಾನ್ ಅವರಲ್ಲಿ ಒಬ್ಬರಿಗೆ ಅವಕಾಶ ನೀಡುವ ಸಾಧ್ಯತೆಯೂ ಇದೆ.

ಆತಿಥೇಯ ತಂಡದಲ್ಲಿ ಮೊದಲ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದ ಬ್ಯಾರಿ ಮೆಕಾರ್ಥಿ ಮತ್ತು ಕರ್ಟಿಸ್ ಕ್ಯಾಂಫರ್ ಉತ್ತಮ ಬ್ಯಾಟಿಂಗ್ ಮಾಡಿದ್ದರು. ಉಳಿದವರು ನಿರಾಶೆ ಮೂಡಿಸಿದ್ದರು. ಸರಣಿ ಗೆಲುವಿನ ಅವಕಾಶ ಉಳಿಸಿಕೊಳ್ಳಬೇಕಾದರೆ ಐರ್ಲೆಂಡ್ ತಂಡವು ಈ ಪಂದ್ಯದಲ್ಲಿ ಜಯಿಸಲೇಬೇಕು. ಆದ್ದರಿಂದ ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಪಣಕ್ಕೊಡ್ಡುವ ಅನಿವಾರ್ಯತೆ ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಪೋರ್ಟ್ಸ್ 18

ಏಷ್ಯಾ ಕಪ್: ಆಯ್ಕೆ ಸಭೆಯಲ್ಲಿ ದ್ರಾವಿಡ್

ನವದೆಹಲಿ (ಪಿಟಿಐ): ಮುಂಬರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಗಾಗಿ ತಂಡವನ್ನು ಆಯ್ಕೆ ಮಾಡಲಾಗುತ್ತಿದೆ.

17 ಆಟಗಾರರನ್ನು ಆಯ್ಕೆ ಮಾಡಲಿರುವ ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿಯು ಸಭೆ ಸೇರಲಿದ್ದು ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಭಾಗವಹಿಸುವರು.

ಅಕ್ಟೋಬರ್–ನವೆಂಬರ್‌ನಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಟೂರ್ನಿಯ ಪೂರ್ವಭಾವಿ ಸಿದ್ಧತೆಯ ವೇದಿಕೆಯಾಗಿ ಏಷ್ಯಾ ಕಪ್ ಟೂರ್ನಿಯನ್ನು ಪರಿಗಣಿಸಲಾಗಿದೆ. ಆದ್ದರಿಂದ ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡದ ಆಯ್ಕೆಗೂ ಏಷ್ಯಾ ಕಪ್‌ನಲ್ಲಿ ಉತ್ತಮವಾಗಿ ಆಡುವವರ ಮೇಲೆ ಆಯ್ಕೆ ಸಮಿತಿ ಕಣ್ಣಿಟ್ಟಿದೆ ಎನ್ನಲಾಗಿದೆ.


ರಾಹುಲ್ ದ್ರಾವಿಡ್

‘ಡ್ರಾ’ ಪಂದ್ಯದಲ್ಲಿ ಪ್ರಜ್ಞಾನಂದ

ಬಾಕು (ಅಜರ್‌ಬೈಜಾನ್), (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ವಿಶ್ವಕಪ್ ಚೆಸ್ ಟೂರ್ನಿಯ ಸೆಮಿಫೈನಲ್‌ನ ಮೊದಲ ಪಂದ್ಯದಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ ಜೊತೆ ಪಾಯಿಂಟ್ ಹಂಚಿಕೊಂಡರು. ಸುದೀರ್ಘವಾಗಿ ನಡೆದ ಈ ಪಂದ್ಯದ 78ನೇ ನಡೆಯಲ್ಲಿ ಇಬ್ಬರೂ ‘ಡ್ರಾ’ಕ್ಕೆ ಸಹಿಹಾಕಿದರು.

ಹದಿಹರೆಯದ ಪ್ರಜ್ಞಾನಂದ ಅವರ ನಿರ್ಭಿಡೆಯ ಆಟ ಮತ್ತು ಇಟಲಿ ಮೂಲದ ಗ್ರ್ಯಾಂಡ್‌ಮಾಸ್ಟರ್ ಕರುವಾನ ಅವರ ಅನುಭವದ ನಡುವಣ ಸೆಣಸಾಟ ಎನಿಸಿರುವ ಈ ಪಂದ್ಯ ಕುತೂಹಲ ಕೆರಳಿಸಿದರೂ, ಯಾರೊಬ್ಬರೂ ನಿರ್ಣಾಯಕ ಮೇಲುಗೈ ಸಾಧಿಸಲಿಲ್ಲ. ಭಾನುವಾರ ನಡೆಯುವ ಎರಡನೇ ಪಂದ್ಯದಲ್ಲಿ ಚೆನ್ನೈನ ಪ್ರಜ್ಞಾನಂದ ಬಿಳಿ


ಪ್ರಜ್ಞಾನಂದ

ಕಾಯಿಗಳಲ್ಲಿ ಆಡುವ ಅನುಕೂಲ ಪಡೆದಿದ್ದಾರೆ.

ಪ್ರಜ್ಞಾನಂದ ಅವರು, ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ ಭಾರತದ ಎರಡನೇ ಆಟಗಾರ ಎನಿಸಿದ್ದಾರೆ. ಐದು ಬಾರಿಯ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಮೊದಲ ಆಟಗಾರ. ಹಾಲಿ ವಿಶ್ವ ಚಾಂಪಿಯನ್, ಚೀನಾದ ಡಿಂಗ್ ಲಾರೆನ್ ಅವರಿಗೆ ಸವಾಲು ಹಾಕುವ ಆಟಗಾರನನ್ನು ನಿರ್ಧರಿಸಲು ನಡೆಯಲಿರುವ ಕ್ಯಾಂಡಿಡೇಟ್ಸ್ ಟೂರ್ನಿಗೂ ಪ್ರಜ್ಞಾನಂದ ಅವರು ಅರ್ಹತೆ ಪಡೆದಿದ್ದಾರೆ.

ಕಾರ್ಲ್‌ಸನ್‌ಗೆ ಜಯ: ಇನ್ನೊಂದು ಸೆಮಿಫೈನಲ್‌ನ ಮೊದಲ ಪಂದ್ಯದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್, ಸ್ಥಳೀಯ ಆಟಗಾರ ನಿಜತ್ ಅಬಸೋವ್ ವಿರುದ್ಧ ಜಯಗಳಿಸಿ ಮಹತ್ವದ ಮುನ್ನಡೆ ಸಾಧಿಸಿದರು. ಕ್ಲಾಸಿಕಲ್ ಮಾದರಿಯ ಎರಡನೇ ಪಂದ್ಯ ಭಾನುವಾರ ನಡೆಯಲಿದೆ.

ಈಜು: ವಿದಿತ್, ತನಿಷಿ ದಾಖಲೆ

ಭುವನೇಶ್ವರ್ / ಬೆಂಗಳೂರು: ಕರ್ನಾಟಕದ ಈಜುಪಟುಗಳು ಭುವನೇಶ್ವರದ ಕಳಿಂಗಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆಯುತ್ತಿರುವ 39ನೇ ಸಬ್ ಜೂನಿಯರ್ ಮತ್ತು 49ನೇ ಜೂನಿಯರ್ ಅಕ್ವಾಟಿಕ್ ಚಂಪಿಯನ್‌ಷಿಪ್‌ನಲ್ಲಿ ಶನಿವಾರವೂ ಈಜುಕೊಳದಲ್ಲಿ ಸಂಭ್ರಮ ಅಲೆಯೆಬ್ಬಿಸಿದರು.

ಬಾಲಕಿಯರ 200 ಮೀ ಬಟರ್‌ಫ್ಲೈ ವಿಭಾಗದಲ್ಲಿ ಕರ್ನಾಟಕದ ತನಿಷಿ ಗುಪ್ತಾ ಮತ್ತು ಧೀನಿಧಿ ದೇಸಿಂಗು ದಾಖಲೆ ಬರೆದರು. ಮೊದಲ ಸ್ಥಾನ ಗಳಿಸಿದ ತನಿಷಿ (2ನಿ,21.45ಸೆ) ಹಾಗೂ ಎರಡನೇ ಸ್ಥಾನ ಪಡೆದ ದಿನಿಧಿ (2ನಿ,22.18ಸೆ) ನೂತನ ಕೂಟ ದಾಖಲೆ ಬರೆದರು.

ವಿದಿತ್ ಎಸ್. ಶಂಕರ್ ಅವರು ಬಾಲಕರ ಒಂದನೇ ಗುಂಪಿನ 100 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಉತ್ತಮ ಪಡಿಸಿಕೊಂಡರು. ಅವರು ಇಲ್ಲಿ 1ನಿಮಿಷ 04.26 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ತಮ್ಮ ಹಳೆಯ ದಾಖಲೆ (1ನಿ,05.04ಸೆ)ಯನ್ನು ಮೀರಿದರು.

ಇದೇ ಗುಂಪಿನ 200 ಮೀಟರ್ಸ್ ಬಟರ್‌ಫ್ಲೈ ವಿಭಾಗದಲ್ಲಿ ಎಸ್. ದರ್ಶನ್ (2ನಿ, 7.99ಸೆ) ಬೆಳ್ಳಿ ಪದಕ ಪಡೆದರು.

ಎರಡನೇ ಗುಂಪಿನ 200 ಮೀಟರ್ಸ್ ಬಟರ್‌ಫ್ಲೈನಲ್ಲಿ ಕರ್ನಾಟಕಕ್ಕೆ ಎರಡು ಪದಕಗಳು ಒಲಿದವು.

ಮೊದಲ ಚಿನ್ನ ಗೆದ್ದ ಮಾರ್ಟಿನ್

ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್: 20 ಕಿ.ಮೀ. ನಡಿಗೆ ಸ್ಪರ್ಧೆಯಲ್ಲಿ ಸಾಧನೆ

ಬುಡಾಪೆಸ್ಟ್ (ಎಎಫ್‌ಪಿ): ಸ್ಪೇನ್‌ನ ಅಲ್ವಾರೊ ಮಾರ್ಟಿನ್, ಪುರುಷರ 20 ಕಿ.ಮೀ. ರೇಸ್ ವಾಕ್ ಸ್ಪರ್ಧೆಯಲ್ಲಿ ಅಗ್ರಸ್ಥಾನ ಗಳಿಸಿ, ಶನಿವಾರ ಆರಂಭವಾದ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಚಿನ್ನ ಗೆದ್ದ ಗೌರವಕ್ಕೆ ಪಾತ್ರರಾದರು.

ಮೊದಲ ದಿನ ನಡೆದ ವಿವಿಧ ಸ್ಪರ್ಧೆಗಳ ಅರ್ಹತಾ ಸುತ್ತಿನಲ್ಲಿ ಗೆಲ್ಲುನ ನೆಚ್ಚಿನ ಸ್ಪರ್ಧಿಗಳು ನಿರೀಕ್ಷಿತ ಪ್ರದರ್ಶನ ನೀಡಿ ಮುಂದಿನ ಹಂತಕ್ಕೆ ತೇರ್ಗಡೆಗೊಂಡರು.

ಎರಡು ಬಾರಿಯ ಯುರೋಪಿಯನ್ ಚಾಂಪಿಯನ್ ಮಾರ್ಟಿನ್, ಹಂಗೆರಿ ರಾಜಧಾನಿಯ ಪ್ರಮುಖ ರಸ್ತೆಗಳಲ್ಲಿ ನಡೆದ ಈ ಸ್ಪರ್ಧೆಯನ್ನು 1 ಗಂಟೆ 17 ನಿಮಿಷ 32 ಸೆಕೆಂಡುಗಳಲ್ಲಿ ಪೂರೈಸಿದರು. ಮೊದಲ ಆರು ಸ್ಥಾನ ಪಡೆದವರಲ್ಲಿ ಐವರು ತಮ್ಮ ರಾಷ್ಟ್ರೀಯ ದಾಖಲೆಯನ್ನು ಮುರಿದಿದ್ದು ವಿಶೇಷ.

‘ಕಳೆದ (ಟೋಕಿಯೊ) ಒಲಿಂಪಿಕ್ ಕ್ರೀಡೆಯಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದೆ. ಕಂಚಿನ ಪದಕ ತಪ್ಪಿಸಿಕೊಂಡಿದ್ದು, ನಾನು ಹೆಚ್ಚು ಪರಿಶ್ರಮ ಹಾಕಲು ಪ್ರೇರಣೆ ಮೂಡಿಸಿತು’ ಎಂದು ಮಾರ್ಟಿನ್ ತಿಳಿಸಿದರು. ಮುಂದಿನ ಪ್ಯಾರಿಸ್ ಒಲಿಂಪಿಕ್ಸ್‌ಗೆ ಈ ಗೆಲುವು ಮಹತ್ವದ ಹೆಜ್ಜೆಯಾಗಲಿದೆ ಎಂದರು.

ಸ್ವೀಡನ್‌ನ ಪರ್ಸಿಯಸ್ ಕಾರ್ಲ್‌ಸ್ಟ್ರೋಮ್ (1:17.39) ಎರಡನೇ ಸ್ಥಾನ ಪಡೆದರೆ, ಬ್ರೆಜಿಲ್‌ನ ಕೈರೊ ಬೊನ್‌ಫಿನ್ (1:17.47) ಮೂರನೇ ಮತ್ತು ಕೆನಡಾದ ಇವಾನ್ ಡನ್ಫಿ (1:18.03) ನಾಲ್ಕನೇ ಸ್ಥಾನದಲ್ಲಿ ಸ್ಪರ್ಧೆಯನ್ನು ಮುಗಿಸಿದರು.


ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 20 ಕಿ.ಮೀ. ರೇಸ್‌ವಾಕ್ ಸ್ಪರ್ಧೆ ಗೆದ್ದ ಅಲ್ವಾರೊ ಮಾರ್ಟಿನ್ –ಎಎಫ್‌ಪಿ ಚಿತ್ರ

ಬಿರುಗಾಳಿಯಿಂದಾಗಿ ಈ ಸ್ಪರ್ಧೆ ಮತ್ತು ನ್ಯಾಷನಲ್ ಅಥ್ಲೆಟಿಕ್ಸ್ ಸೆಂಟರ್‌ನಲ್ಲಿ ಇತರ ಸ್ಪರ್ಧೆಗಳು ಎರಡು ಗಂಟೆ ತಡವಾಗಿ ಆರಂಭವಾದವು.

ಮಹಿಳೆಯರ 1,500 ಮೀ. ಓಟದಲ್ಲಿ ಡಚ್ (ನೆದರ್ಲೆಂಡ್ಸ್ ದೇಶದ) ಓಟಗಾರ್ತಿ ಸಿಫಾನ್ ಹಸನ್ ಅರ್ಹತಾ ಸುತ್ತಿನಲ್ಲಿ ತೇರ್ಗಡೆಯಾದರು. ಸಿಫಾನ್, ಟೋಕಿಯೊ ಒಲಿಂಪಿಕ್ಸ್‌ನ 5,000 ಮತ್ತು 10,000 ಮೀ. ಓಟದಲ್ಲಿ ಚಿನ್ನದ ಪದಕಗಳನ್ನು, 1,500 ಮೀ. ಓಟದಲ್ಲಿ ಕಂಚಿನ ಪದಕ ಗೆದ್ದು ಗಮನ ಸೆಳೆದಿದ್ದರು. ಇಲ್ಲೂ ಮೂರು ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಕೆನ್ಯಾದ ಫೇಯ್ತ್ ಕಿಪ್ಯೆಗೊನ್ ಕೂಡ 1,500 ಮೀ. ಓಟದ ಸೆಮಿಫೈನಲ್‌ಗೆ ಸ್ಥಾನ ಕಾದಿರಿಸಿದರು. ಫೈನಲ್ ಮಂಗಳವಾರ ನಡೆಯಲಿದೆ. ಈ ವರ್ಷ ಅಮೋಘ ಪ್ರದರ್ಶನ ನೀಡಿರುವ ಕೆನ್ಯಾದ ಓಟಗಾರ್ತಿ ಮೂರು ವಿಶ್ವದಾಖಲೆಗಳನ್ನು ಸ್ಥಾಪಿಸಿದ್ದಾರೆ.

ಪೋಲೆಂಡ್‌ನ ಖ್ಯಾತನಾಮ ಸ್ಪರ್ಧಿಗಳಾದ ಪಾವೆಲ್ ಫೈಡೆಕ್ ಮತ್ತು ವೊಯ್ಸಿಚ್ ನೊವಕಿ ಅವರು ಪುರುಷರ ಹ್ಯಾಮರ್ ಥ್ರೊ ಸ್ಪರ್ಧೆಯ ಅಂತಿಮ ಸುತ್ತಿಗೆ ಅರ್ಹತೆ ಪಡೆದರು. ಅವರು ಆರನೇ ಚಿನ್ನದ ಯತ್ನದಲ್ಲಿದ್ದಾರೆ. ಇಲ್ಲಿ ಅವರು ವಿಜೇತರಾದರೆ, ಒಂದೇ ಸ್ಪರ್ಧೆಯಲ್ಲಿ ಆರು ಚಿನ್ನ ಗೆದ್ದ ಪೋಲ್‌ವಾಲ್ಟ್ ಪಟು ಸೆರ್ಗೆಯಿ ಬೂಬ್ಕಾ ಅವರ ಸಾಧನೆಯನ್ನು (1983–97) ಸರಿಗಟ್ಟಲಿದ್ದಾರೆ. ಆದರೆ ಈ ಬಾರಿ ನೊವಿಕಿ ಫೆವರೀಟ್ ಆಗಿದ್ದಾರೆ.

ಸ್ಟೀಪಲ್ ಚೇಸ್: ಅವಿನಾಶ್ ಸಾಬ್ಳೆಗೆ ನಿರಾಸೆ

ಬುಡಾಪೆಸ್ಟ್ (ಪಿಟಿಐ): 3000 ಮೀ.ಸ್ಟೀಪಲ್ ಚೇಸ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಅವಿನಾಶ್ ಸಾಬ್ಳೆ, ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ಸ್‌ನ ಅಂತಿಮ ಸುತ್ತಿಗೆ ಅರ್ಹತೆ ಪಡೆಯಲು ವಿಫಲರಾದರು. ಶನಿವಾರ ನಡೆದ ಮೊದಲನೇ ಹೀಟ್ಸ್‌ನಲ್ಲಿ ಶನಿವಾರ ಏಳನೇ ಸ್ಥಾನದಲ್ಲಿ ಪೂರೈಸಿದ್ದು ನಿರಾಶಾದಾಯಕ ಎನಿಸಿತು.

ಈ ಕೂಟಕ್ಕಾಗಿ ಸಾಬ್ಳೆ ಅವರು ಹಲವು ತಿಂಗಳಿಂದ ವಿದೇಶದಲ್ಲಿ ತರಬೇತಿ ಪಡೆದಿದ್ದರು. ಈ ಪ್ರತಿಷ್ಠಿತ ಕೂಟಕ್ಕೆ ಸಜ್ಜಾಗಲು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಿಂದ ಅವರಿಗೆ ವಿನಾಯಿತಿಯನ್ನೂ ನೀಡಲಾಗಿತ್ತು. ಅವರು ಶನಿವಾರ 8ನಿ.22.24 ಸೆ.ಗಳಲ್ಲಿ ಓಟ ಮುಗಿಸಿದರು. ರಾಷ್ಟ್ರೀಯ ದಾಖಲೆ (8ನಿ.11.20 ಸೆ) ಅವರ ಹೆಸರಿನಲ್ಲಿದೆ. ಮೂರು ಹೀಟ್ಸ್‌ಗಳಲ್ಲಿ ಮೊದಲ ಐದು ಸ್ಥಾನ ಪಡೆದವರು ಫೈನಲ್‌ಗೆ ಅರ್ಹತೆ ಪಡೆಯುತ್ತಾರೆ.

ಸೈಕ್ಲಿಂಗ್: ಧನುಷ್, ನಿಥಿಲಾಗೆ ಪ್ರಶಸ್ತಿ

ಬೆಂಗಳೂರು: ಆತಿಥೇಯ ಬೆಂಗಳೂರು ಜಿಲ್ಲೆಯ ಧನುಷ್ ಪ್ರಶಾಂತ್ ಮತ್ತು ನಿಥಿಲಾ ದಾಸ್ ಅವರು ಶನಿವಾರ ಆರಂಭವಾದ 18ನೇ ರಾಜ್ಯ ಮೌಂಟೇನ್ ಬೈಕ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಡಬಲ್ ಸಾಧನೆ ಮಾಡಿದರು.

ಹೆಬ್ಬಾಳದ ಏಟ್ರಿಯಾ ಕಾಲೇಜಿನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ 14 ವರ್ಷದೊಳಗಿನವರ ಬಾಲಕರ 1 ಲ್ಯಾಪ್ ಟೈಂ ಟ್ರಯಲ್ಸ್ ಹಾಗೂ 1 ಲ್ಯಾಪ್ ಮಾಸ್ ಸ್ಟಾರ್ಟ್ ವಿಭಾಗಗಳಲ್ಲಿ ಧನುಷ್ ಪ್ರಶಸ್ತಿ ಪಡೆದರು.

ಫಲಿತಾಂಶಗಳು: ಬಾಲಕರು: 14 ವರ್ಷಗೊಳಗಿನವರು: 1 ಲ್ಯಾಪ್ ಟೈಂ ಟ್ರಯಲ್: ಧನುಷ್ ಪ್ರಶಾಂತ್ (ಬೆಂಗಳೂರು; 10ನಿ,10.09ಸೆ)–1, ಆಶಿಶ್ ಪೌಪು ಪೌಮ್ಯೆ (ಮೈಸೂರು)–2, ಆದಿತ್ಯ ಎಸ್ ಗುರವ (ಕ್ರೀಡಾ ನಿಲಯ, ಬೆಳಗಾವಿ)–3.

16 ವರ್ಷದೊಳಗಿನವರು: 1 ಲ್ಯಾಪ್ ಟೈಂ ಟ್ರಯಲ್: ಸವಿಯನ್ ಸಾಬು (ಬೆಂಗಳೂರು; 9ನಿ,43.80ಸೆ)–1, ಸಿ. ರುಚಿರ್ (ಮೈಸೂರು) –2, ರೆಹಾನ್ ರೋಷನ್ (ಬೆಂಗಳೂರು)–3.

18 ವರ್ಷದೊಳಗಿನವರು: 2 ಲ್ಯಾಪ್ ಟೈಂ ಟ್ರಯಲ್: ಸಮರ್ಪಣ್ ಜೈನ್ (ಮೈಸೂರು; 20ನಿ, 07.55ಸೆ)–1, ಎಸ್. ಧನಂಜಯ (ಮೈಸೂರು)–2, ಹನಮಂತ ಮರನೂರ (ಕ್ರೀಡಾ ನಿಲಯ, ವಿಜಯಪುರ)–3. 23 ವರ್ಷದೊಳಗಿನವರು: 3 ಲ್ಯಾಪ್ ಟೈಂ ಟ್ರಯಲ್: ಎಚ್.ಆರ್. ಲಕ್ಷ್ಮೀಶ (ಮೈಸೂರು; 30ನಿ, 39.61ಸೆ)–1, ಸಮರನ್ ಸುಬ್ಬಯ್ಯ (ಬೆಂಗಳೂರು)–2, ಎ. ಫರ್ದೀನ್ ಖಾನ್ (ಬೆಂಗಳೂರು)–3 14 ವರ್ಷದೊಳಗಿನವರು, 1 ಲ್ಯಾಪ್ ಮಾಸ್ ಸ್ಟಾರ್ಟ್: ಧನುಷ್ ಪ್ರಶಾಂತ್ (ಬೆಂಗಳೂರು; 9ನಿ,31.26ಸೆ)–1, ಆಶಿಶ್ (ಮೈಸೂರು)–2, ಕರೆಪ್ಪ ಹೆಗಡೆ (ಕ್ರೀಡಾ ನಿಲಯ; ಗದಗ)–3

ಪುರುಷರು: 3 ಲ್ಯಾಪ್ ಟೈಂ ಟ್ರಯಲ್: ಕೆ.ವಿ. ವೈಶಾಖ (ಮೈಸೂರು; 30ನಿ, 10.71ಸೆ)–1, ಡೆನಿಲ್ ಲೋಬೊ (ಬೆಂಗಳೂರು)–2, ಆರ್. ಜೀವನ್ (ತುಮಕೂರು)–3.

ಬಾಲಕಿಯರು: 1 ಲ್ಯಾಪ್ ಟೈಂ ಟ್ರಯಲ್ಸ್: ನಿಥಿಲಾ ದಾಸ್ (ಬೆಂಗಳೂರು; 12ನಿ, 25.05ಸೆ)–1, ಶ್ರೀಯಾ ಮಾಜಿಪಾಟೀಲ (ಬೆಂಗಳೂರು)–2, ಪೂರ್ವಿ ಶಿದವಗೋಳ (ಬಾಗಲಕೋಟೆ)–3.

16 ವರ್ಷದೊಳಗಿನವರು, 1 ಲ್ಯಾಪ್ ಟೈಂ ಟ್ರಯಲ್: ಕಿಯಾನ ಬರುವಾ (ಬೆಂಗಳೂರು)–1, ಎಸ್.ಎಸ್. ಪ್ರಣಿತಾ (ಕ್ರೀಡಾ ನಿಲಯ, ವಿಜಯಪುರ)–2, ಆರಾಧನಾ ಸಂತೋಷ್ (ಮೈಸೂರು)–3.

18 ವರ್ಷದೊಳಗಿನವರು, 1 ಲ್ಯಾಪ್ ಟೈಂ ಟ್ರಯಲ್: ನಾಗಸಿರಿ ಎಚ್.ಎನ್. (ಮೈಸೂರು; 12ನಿ,20.03ಸೆ)–1, ಕರೇನ್ ಮಾರ್ಷಲ್ (ಮೈಸೂರು)–2, ಪವಿತ್ರಾ ಕುರ್ತಕೋಟಿ (ಗದಗ)–3.

14 ವರ್ಷದೊಳಗಿನವರ: 1 ಲ್ಯಾಪ್ ಮಾಸ್ ಸ್ಟಾರ್ಟ್: ನಿಥಿಲಾ ದಾಸ್ (ಬೆಂಗಳೂರು)–1, ಶ್ರೀಯಾ ಮಾಜಿಪಾಟೀಲ (ಬೆಂಗಳೂರು)–2, ಪೂರ್ವಿ ಶಿದವಗೋಳ (ಕ್ರೀಡಾ ನಿಲಯ, ಬಾಗಲಕೋಟೆ)–3.

ಮಹಿಳೆಯರು: ಸ್ಟಾರ್ ನರ್ಜರಿ (ಬೆಂಗಳೂರು; 23ನಿ,46.09ಸೆ)–1, ಅಕ್ಷತಾ ಬಿರಾದಾರ (ಕ್ರೀಡಾ ನಿಲಯ, ವಿಜಯಪುರ)–2, ಆರತಿ ಭಾಟ (ವಿಜಯಪುರ)–3

ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ ಕೂಟಕ್ಕೆ ಯೋಗೇಂದ್ರ

ಬೆಂಗಳೂರು: ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿ ಎಂ.ಯೋಗೇಂದ್ರ ಅವರು ಫಿಲಿಪ್ಪೀನ್ಸ್‌ನಲ್ಲಿ ನವೆಂಬರ್ ತಿಂಗಳಲ್ಲಿ ನಡೆಯಲಿರುವ 21ನೇ ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ ಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ.


ಯೋಗೇಂದ್ರ

ಅವರು 2000 ಮೀ. ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಯೋಗೇಂದ್ರ ಅವರು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕೂಟಗಳಲ್ಲಿ ಹಲವು ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಆತಂಕ ವ್ಯಕ್ತಪಡಿಸಿ ಗೃಹ ಕಾರ್ಯದರ್ಶಿಗೆ ಪತ್ರ ಬರೆದ ಪತ್ನಿ ಬುಶ್ರಾ ಬೀಬಿ

‘ಜೈಲಿನಲ್ಲಿ ಇಮ್ರಾನ್‌ಗೆ ವಿಷ ಹಾಕುವ ಸಾಧ್ಯತೆ’

ಲಾಹೋರ್/ಕರಾಚಿ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಜೀವ ಇನ್ನೂ ಅಪಾಯದಲ್ಲಿದೆ. ಅಟಕ್ ಜೈಲಿನಲ್ಲಿ ಅವರಿಗೆ ವಿಷ ಹಾಕುವ ಆತಂಕ ಇದೆ ಎಂದು ಅವರ ಪತ್ನಿ ಬುಶ್ರಾ ಬೀಬಿ ಆರೋಪಿಸಿದ್ದಾರೆ.

ಪಂಜಾಬ್ ಗೃಹ ಕಾರ್ಯದರ್ಶಿಗೆ ಶನಿವಾರ ಪತ್ರ ಬರೆದಿರುವ ಬುಶ್ರಾ, ‘ಪತಿಯನ್ನು ಅಟಕ್ ಜೈಲಿನಿಂದ ರಾವಲ್ಪಿಂಡಿಯ ಅಡಿಯಾಲ ಕಾರಾಗೃಹಕ್ಕೆ ಸ್ಥಳಾಂತರಿಸಲು ನ್ಯಾಯಾಲಯವು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ. ಕಾನೂನು ಪ್ರಕಾರ ಅವರನ್ನು ಅಡಿಯಾಲ ಜೈಲಿಗೆ ವರ್ಗಾಯಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಇಮ್ರಾನ್ ಅವರ ಸಾಮಾಜಿಕ ಮತ್ತು ರಾಜಕೀಯ ಸ್ಥಾನಮಾನ ಪರಿಗಣಿಸಿ ಜೈಲಿನಲ್ಲಿ ‘ಬಿ ದರ್ಜೆ’ ಸೌಲಭ್ಯ ಒದಗಿಸುವಂತೆ ಅವರು ಒತ್ತಾಯಿಸಿದ್ದಾರೆ ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.


ಇಮ್ರಾನ್ ಖಾನ್

‘ಖಾನ್ ಮೇಲೆ ಎರಡು ಬಾರಿ ಹತ್ಯೆ ಪ್ರಯತ್ನಗಳು ನಡೆದಿವೆ. ಕೃತ್ಯದಲ್ಲಿ ಭಾಗಿ ಆಗಿರುವವರನ್ನು ಇನ್ನೂ ಬಂಧಿಸಿಲ್ಲ. ಅವರಿಗೆ ವಿಷ ಹಾಕಬಹುದು ಎಂಬ ಭಯವಿದೆ’ ಎಂದು ಬೀಬಿ ಆತಂಕ ವ್ಯಕ್ತಪಡಿಸಿದ್ದಾರೆ.

ಮನೆ ಆಹಾರ ಸೇವಿಸಲು ಹಾಗೂ ಜೈಲು ನಿಯಮ ಪ್ರಕಾರ ಖಾಸಗಿ ವೈದ್ಯರಿಂದ ವೈದ್ಯಕೀಯ ಪರೀಕ್ಷೆಗೆ ಒಳಗಾಗಲು ಅವಕಾಶ ನೀಡಬೇಕು. ಖಾನ್ ಅವರಿಗೆ ಉತ್ತಮ ಸೌಲಭ್ಯ ಏಕೆ ನಿರಾಕರಿಸಲಾಗಿದೆ ಎಂಬುದರ ಬಗ್ಗೆ ತನಿಖೆ ನಡೆಸಬೇಕೆಂದೂ ಅವರು ಒತ್ತಾಯಿಸಿದ್ದಾರೆ.

ಕೆಲ ದಿನಗಳ ಹಿಂದೆ ಬುಶ್ರಾ ಅವರು ಇಮ್ರಾನ್ ಅವರನ್ನು ಕಾರಾಗೃಹದಲ್ಲಿ ಅರ್ಧ ತಾಸು ಭೇಟಿಯಾಗಿದ್ದರು.

ತೋಷಖಾನಾ ಭ್ರಷ್ಟಾಚಾರ ಪ್ರಕರಣದಲ್ಲಿ ಇಮ್ರಾನ್‌ಗೆ ವಿಚಾರಣಾ ನ್ಯಾಯಾಲಯ ಮೂರು ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಮೆಹಮೂದ್ ಖುರೇಷಿ ಬಂಧನ

ಇಮ್ರಾನ್ ಖಾನ್ ಅವರ ಆಪ್ತ ಮತ್ತು ಪಾಕಿಸ್ತಾನದ ವಿರೋಧ ಪಕ್ಷದ ನಾಯಕ ಶಾ ಮೆಹಮೂದ್ ಖುರೇಷಿ ಅವರನ್ನು ಅಧಿಕಾರಿಗಳು ಬಂಧಿಸಿದ್ದಾರೆ ಎಂದು ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ ವಕ್ತಾರ ಜುಲ್ಫಿ ಬುಖಾರಿ ಶನಿವಾರ ಹೇಳಿದ್ದಾರೆ.

ಖುರೇಷಿ ಅವರು ರಾಷ್ಟ್ರದ ಚುನಾವಣೆ ವಿಳಂಬ ಮಾಡಿದರೆ ಅದನ್ನು ತಮ್ಮ ಪಕ್ಷ ನ್ಯಾಯಾಲಯದಲ್ಲಿ ಪ್ರಶ್ನಿಸಲಿದೆ ಎಂದು ಹೇಳಿಕೆ ನೀಡಿದ ಬೆನ್ನಲ್ಲೇ ಅವರ ಬಂಧನವಾಗಿದೆ. ಖುರೇಷಿ ಅವರು, ಇಮ್ರಾನ್ ನೇತೃತ್ವದ ಪಾಕಿಸ್ತಾನ ತೆಹ್ರೀಕ್-ಎ-ಇನ್ಸಾಫ್ ಪಕ್ಷದ ಉಪಾಧ್ಯಕ್ಷರೂ ಹೌದು. ಖುರೇಷಿ ತಾವು ಯಾವುದೇ ತಪ್ಪು ಮಾಡಿಲ್ಲ ಎಂದೂ ಪ್ರತಿಕ್ರಿಯೆ ನೀಡಿದ್ದಾರೆ.

ಪಾಕ್: 13 ಮಂದಿ ಉಗ್ರರ ಬಂಧನ

ಲಾಹೋರ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಪ್ರಮುಖ ಕಚೇರಿಗಳನ್ನು ಗುರಿಯಾಗಿಸಿಕೊಂಡು ಭಯೋತ್ಪಾದನಾ ಸಂಚು ರೂಪಿಸುತ್ತಿದ್ದ ಮೂವರು ಐಸಿಸ್ ಕಮಾಂಡರ್ ಸೇರಿ 13 ಉಗ್ರರನ್ನು ಪಾಕಿಸ್ತಾನದ ಕಾನೂನು ಜಾರಿ ಸಂಸ್ಥೆ ಬಂಧಿಸುವ ಮೂಲಕ ಸಂಭವನೀಯ ಅವಘಡ ತಪ್ಪಿಸಿದೆ.

ಬಂಧಿತರು ತೆಹ್ರಿಕ್–ಎ–ತಾಲಿಬಾನ್ ಪಾಕಿಸ್ತಾನ್, ದಾಯೆಶ್ (ಐಸಿಸ್), ಸಿಪಾಹ್-ಎ-ಸಹಾಬಾ ಪಾಕಿಸ್ತಾನ್ ಮತ್ತು ಅಲ್-ಕೈದಾ ಸಂಘಟನೆಗೆ ಸೇರಿದವರು. ಬಂಧಿತರಿಂದ ಸುಮಾರು 2,360 ಗ್ರಾಂ ಸ್ಫೋಟಕ, ಸಿಡಿಮದ್ದು, 11 ಡಿಟೋನೇಟರ್‌ಗಳು, ಪಿಸ್ತೂಲು ಮತ್ತು ಬುಲೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಳ್ಗಿಚ್ಚು: ಜನರ ಸ್ಥಳಾಂತರ

ಟೆನೆರಿಫ್ (ರಾಯಿಟರ್ಸ್): ಸ್ಪೇನ್‌ನ ಟೆನೆರಿಫ್ ದ್ವೀಪದ ಉತ್ತರದಲ್ಲಿ ಹಬ್ಬಿರುವ ಕಾಳ್ಗಿಚ್ಚು ನಿಯಂತ್ರಣಕ್ಕೆ ಬಾರದ ಕಾರಣ ಶನಿವಾರ ಬೆಳಿಗ್ಗೆ ಸಾವಿರಾರು ಜನರನ್ನು ಮುನ್ನೆಚ್ಚರಿಕೆ ಕ್ರಮವಾಗಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು.

ಬಿಸಿ ಮತ್ತು ಶುಷ್ಕ ವಾತಾವರಣದ ನಡುವೆ ಸ್ಪೇನ್‌ನ ಅತಿ ಎತ್ತರದ ಶಿಖರ ಮೌಂಟ್ ಟೀಡೆ ವೊಲ್ಕೊನೊದ ಸುತ್ತಲಿನ ರಾಷ್ಟ್ರೀಯ ಉದ್ಯಾನವನದ ಶಿಖರದಲ್ಲಿ ಬುಧವಾರ ಬೆಂಕಿ ಕಾಣಿಸಿಕೊಂಡಿತ್ತು.

ಚೆರ್ನಿವ್: ರಷ್ಯಾ ಕ್ಷಿಪಣಿ ದಾಳಿಗೆ ಏಳು ಸಾವು

ಸ್ಟಾಕ್‌ಹೋಮ್/ಕೀವ್ (ಎಎಫ್‌ಪಿ): ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸ್ವೀಡನ್‌ಗೆ ಭೇಟಿ ಕೊಟ್ಟಿರುವ ಬೆನ್ನಲ್ಲೇ ಶನಿವಾರ ನಸುಕಿನಲ್ಲಿ ಉಕ್ರೇನ್‌ನ ಪ್ರಮುಖ ನಗರ ಚೆರ್ನಿವ್ ಮೇಲೆ ರಷ್ಯಾ ಕ್ಷಿಪಣಿ ದಾಳಿ ನಡೆಸಿದೆ. ಈ ದಾಳಿಯಲ್ಲಿ ಆರು ವರ್ಷದ ಬಾಲಕಿ ಸೇರಿ 7 ನಾಗರಿಕರು ಮೃತಪಟ್ಟಿದ್ದು, ನೂರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಚೆರ್ನಿವ್ ಸೆಂಟ್ರಲ್ ಸ್ಕ್ವೇರ್‌ನಲ್ಲಿರುವ ರಂಗಮಂದಿರಕ್ಕೂ ಕ್ಷಿಪಣಿ ಅಪ್ಪಳಿಸಿದೆ. ಜನರು ಬೆಳಗಿನ ವಾಯು ವಿಹಾರ ನಡೆಸುತ್ತಿದ್ದಾಗ, ಕೆಲವರು ಚರ್ಚ್‌ನಲ್ಲಿ ಧಾರ್ಮಿಕ ದಿನ ಆಚರಿಸಲು ನಗರದ ಮುಖ್ಯ ಚೌಕದಲ್ಲಿ ಸೇರಿದ್ದಾಗ ದಾಳಿ ನಡೆದಿದೆ. ಇದು ಹೇಯ ಕೃತ್ಯ ಎಂದು ಉಕ್ರೇನ್‌ಗೆ ವಿಶ್ವಸಂಸ್ಥೆಯ ಮಾನವೀಯ ಸಮನ್ವಯಕಾರರಾದ ಡಿನಿಸೆ ಬ್ರೌನ್ ಖಂಡಿಸಿದ್ದಾರೆ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಉಕ್ರೇನ್ ಗಡಿಗೆ ಸಮೀಪದ ರೋಸ್ಟೊವ್-ಆನ್-ಡಾನ್ ನಗರದಲ್ಲಿ ತಮ್ಮ ಸೇನೆಯ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ, ಚರ್ಚಿಸಿದರು. ಇದೇ ವೇಳೆ ಉಕ್ರೇನ್‌ನಲ್ಲಿ ರಷ್ಯಾ ಸೇನೆಯ ಕಾರ್ಯಾಚರಣೆಗಳ ಉಸ್ತುವಾರಿ ಕಮಾಂಡರ್ ವ್ಯಾಲೆರಿ ಗೆರಾಸಿಮೊವ್ ಅವರನ್ನೂ ಭೇಟಿಯಾದರು ಎಂದು ಅವರ ಆಡಳಿತ ಕಚೇರಿ ಕ್ರೆಮ್ಲಿನ್ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಭಾರತ ಮೂಲದ ವ್ಯಕ್ತಿಗೆ 27 ವರ್ಷ ಜೈಲು ಶಿಕ್ಷೆ

ಹ್ಯೂಸ್ಟನ್(ಪಿಟಿಐ): ಕ್ಯಾನ್ಸರ್ ಸಂಬಂಧಿ ಪರೀಕ್ಷೆಗಳ ಹೆಸರಿನಲ್ಲಿ ವಂಚಿಸಿದ ಹಗರಣದಲ್ಲಿ ಪ್ರಯೋಗಾಲಯದ ಮಾಲೀಕ, ಭಾರತ ಮೂಲದ ಮಿನಾಲ್ ಪಟೇಲ್ (44) ಎಂಬಾತಗೆ ಅಮೆರಿಕ ನ್ಯಾಯಾಲಯ 27 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ.

ಮಿನಾಲ್ ಪಟೇಲ್ ಜಾರ್ಜಿಯಾದಲ್ಲಿರುವ ಲ್ಯಾಬ್ ಸೊಲೂಷನ್ಸ್ ಎಲ್‌ಎಲ್‌ಸಿ ಎಂಬ ಕಂಪನಿ ಮಾಲೀಕ. ಆರೋಗ್ಯ ಸೇವೆ ಒದಗಿಸುವ ‘ಮೆಡಿಕೇರ್’ ಯೋಜನೆಯಡಿ ಜೆನೆಟಿಕ್ ಪರೀಕ್ಷೆಗಳಿಗೆ ಸಂಬಂಧಿಸಿದ ₹ 3,850 ಕೋಟಿ ವಂಚನೆ ಹಗರಣದಲ್ಲಿ ಈ ಶಿಕ್ಷೆ ವಿಧಿಸಲಾಗಿದೆ.

ಅಗತ್ಯವಿಲ್ಲದಿದ್ದರೂ ರೋಗಿಗಳಿಗೆ ಕ್ಯಾನ್ಸರ್‌ಗೆ ಸಂಬಂಧಿಸಿದ ಜೆನೆಟಿಕ್ ಪರೀಕ್ಷೆಗಳನ್ನು ನಡೆಸುತ್ತಿದ್ದ ಮಿನಾಲ್, ಇದಕ್ಕಾಗಿ ಟೆಲಿಮೆಡಿಸಿನ್ ಕಂಪನಿಗಳು, ಕಾಲ್ ಸೆಂಟರ್‌ಗಳು ಹಾಗೂ ರೋಗಿಗಳ ದಲ್ಲಾಳಿಗಳೊಂದಿಗೆ ಕೈಜೋಡಿಸಿದ್ದ. 2016ರ ಜುಲೈನಿಂದ 2019ರ ಆಗಸ್ಟ್ ವರೆಗೆ ಮಿನಾಲ್ ಒಡೆತನದ ಕಂಪನಿಯು ₹3,850 ಕೋಟಿ ಮೊತ್ತದ ಕ್ಲೇಮುಗಳನ್ನು ಮೆಡಿಕೇರ್‌ಗೆ ಸಲ್ಲಿಸಿತ್ತು. ಈ ಪೈಕಿ, ಕಂಪನಿಗೆ ₹ 1,500 ಕೋಟಿ ಪಾವತಿಸಲಾಗಿತ್ತು.

ಮಿನಾಲ್‌ಗೆ ಸೇರಿದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ಆ. 25ರಂದು ನಡೆಯಲಿದೆ ಎಂದು ನ್ಯಾಯಾಂಗ ಇಲಾಖೆ ತಿಳಿಸಿದೆ.

ತೈವಾನ್ ಬಳಿ ಚೀನಾ ಸೇನೆ ತಾಲೀಮು

ಬೀಜಿಂಗ್ (ಎಎಫ್‌ಪಿ): ತೈವಾನ್ ಸುತ್ತಮುತ್ತ ವಾಯು ಮತ್ತು ಕಡಲ ಮಾರ್ಗದಲ್ಲಿ ಸೇನಾ ತಾಲೀಮು ನಡೆಸುವ ಮೂಲಕ ಚೀನಾ ಶನಿವಾರ ದ್ವೀಪ ರಾಷ್ಟ್ರಕ್ಕೆ ಸ್ಪಷ್ಟ ಕಟ್ಟೆಚ್ಚರಿಕೆ ನೀಡಿದೆ. ತೈವಾನ್‌ನ ಉಪಾಧ್ಯಕ್ಷರು ಅಮೆರಿಕಕ್ಕೆ ಭೇಟಿ ನೀಡಿದ್ದ ಹಿಂದೆಯೇ ಚೀನಾ ಈ ಸಂದೇಶ ರವಾನಿಸಿದೆ.

ದ್ವೀಪ ರಾಷ್ಟ್ರದ ಮೇಲೆ ಹಕ್ಕು ಸ್ಥಾಪಿಸುವ ಚೀನಾದ ನಡೆಯನ್ನು ಬಲವಾಗಿ ವಿರೋಧಿಸುವ ಹಾಗೂ ತೈವಾನ್ ಅಧ್ಯಕ್ಷ ಸ್ಥಾನದ ಮುಂಚೂಣಿಯಲ್ಲಿರುವ ವಿಲಿಯಮ್ ಲೈ ಅವರು ಪೆರುಗ್ವೆಗೆ ಭೇಟಿ ನೀಡುವ ಸಂದರ್ಭದಲ್ಲಿ ನ್ಯೂಯಾರ್ಕ್ ಮತ್ತು ಸ್ಯಾನ್‌ಫ್ರಾನ್ಸಿಸ್ಕೊಗೂ ಭೇಟಿ ನೀಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಚೀನಾ, ‘ಲೈ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ’ ಎಂದು ಆರೋಪಿಸಿತ್ತು.

ಚೀನಿ ನೌಕಾಪಡೆ ಮತ್ತು ವಾಯು ಪಡೆಯು ತೈವಾನ್‌ನ ಆಸುಪಾಸಿನಲ್ಲಿ ಶನಿವಾರ ತಾಲೀಮು ನಡೆಸಿದವು ಎಂದು ಸೇನಾ ವಕ್ತಾರರ ಹೇಳಿಕೆ ಉಲ್ಲೇಖಿಸಿ ಸರ್ಕಾರಿ ಮಾಧ್ಯಮ ಶಿನುವಾ ವರದಿ ಮಾಡಿದೆ.

ತೈವಾನ್‌ನ ವಾಯುಗಡಿಯನ್ನು 42 ಯುದ್ಧ ವಿಮಾನಗಳು ಪ್ರವೇಶಿಸಿದ್ದವು. ಅಲ್ಲದೆ, ಚೀನಾದ ಎಂಟು ನೌಕೆಗಳು ಜಲ ಗಡಿಯಲ್ಲಿ ಸಂಚರಿಸಿವೆ ಎಂದು ತೈವಾನ್ ರಕ್ಷಣಾ ಸಚಿವಾಲಯವು ಹೇಳಿಕೆ ನೀಡಿದೆ.

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ಮನ್ವಂತ್ ಕುಮಾರ್ ಮಿಂಚು

ಹುಬ್ಬಳ್ಳಿ ಟೈಗರ್ಸ್ ಅಜೇಯ ಓಟ


ಹುಬ್ಬಳ್ಳಿ ಟೈಗರ್ಸ್ ತಂಡದ ಮನ್ವಂತ್ ಕುಮಾರ್ (ಎಡ) ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಮೈಸೂರಿನ ಹುಡುಗ ಮನ್ವಂತ್ ಕುಮಾರ್ ಮತ್ತೊಮ್ಮೆ ತಮ್ಮ ಕೈಚಳಕ ಮೆರೆದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಹುಬ್ಬಳ್ಳಿ ಟೈಗರ್ಸ್ ತಂಡವು ಸತತ ಐದನೇ ಜಯ ಸಾಧಿಸಿತು. ಶನಿವಾರ ನಡೆದ ಪಂದ್ಯದಲ್ಲಿ ಪಂದ್ಯದಲ್ಲಿ ಮನ್ವಂತ್ (23ಕ್ಕೆ3) ಅಮೋಘ ಬೌಲಿಂಗ್ ಬಲದಿಂದ ಹುಬ್ಬಳ್ಳಿ ಟೈಗರ್ಸ್ ತಂಡವು 8 ವಿಕೆಟ್‌ಗಳಿಂದ ಶಿವಮೊಗ್ಗ ಲಯನ್ಸ್ ವಿರುದ್ಧ ಜಯಿಸಿತು.ಇದರೊಂದಿಗೆ ಒಟ್ಟು ಹತ್ತು ಅಂಕಗಳನ್ನು ಹುಬ್ಬಳ್ಳಿ ತಂಡವು ತನ್ನ ಬುಟ್ಟಿಗೆ ಹಾಕಿಕೊಂಡಿತು.

ಟಾಸ್ ಗೆದ್ದ ಹುಬ್ಬಳ್ಳಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮನ್ವಂತ್ ಅವರ ಪರಿಣಾಮಕಾರಿ ದಾಳಿಯ ಮುಂದೆ ಶಿವಮೊಗ್ಗ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 138 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಶಿವಮೊಗ್ಗ ತಂಡದ ಎಲ್ಲ ಅಗ್ರಕ್ರಮಾಂಕದ ಬ್ಯಾಟರ್‌ಗಳೂ ವೈಫಲ್ಯ ಅನುಭವಿಸಿದರು. ಆದರೆ, ಎಂಟನೇ ಕ್ರಮಾಂಕದ ಬ್ಯಾಟರ್ ಪ್ರಣವ್ ಭಾಟಿಯಾ 30 ಎಸೆತಗಳಲ್ಲಿ ಅಜೇಯ 46 ರನ್ ಗಳಿಸಿ ತಂಡದ ಗೌರವ ಉಳಿಸಿದರು.

ಗುರಿ ಬೆನ್ನಟ್ಟಿದ ಹುಬ್ಬಳ್ಳಿ ತಂಡಕ್ಕೆ ಲವನೀತ್ ಸಿಸೊಡಿಯಾ (69; 45ಎ, 4X10, 6X2) ಮತ್ತು ಮೊಹಮ್ಮದ್ ತಾಹ (37; 26ಎ, 4X3, 6X3) ಮೊದಲ ವಿಕೆಟ್ ಜೊತೆಯಾಟದಲ್ಲಿ 85 ರನ್ ಗಳಿಸಿದರು. ಇದರಿಂದಾಗಿ ತಂಡವು 16.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 139 ರನ್ ಗಳಿಸಿ ಗೆದ್ದಿತು.

ಇನ್ನೊಂದು ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ತಂಡ ಬೆಂಗಳೂರು ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರು: ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 138 (ಪ್ರಣವ್ ಭಾಟಿಯಾ ಔಟಾಗದೆ 46, ಎಸ್. ಶಿವರಾಜ್ 21, ರೋಹನ್ ನವೀನ್ 18, ರೋಹನ್ ಕದಂ 14, ಮನ್ವಂತ್ ಕುಮಾರ್ ಎಲ್. 23ಕ್ಕೆ3, ಪ್ರವೀಣ ದುಬೆ 15ಕ್ಕೆ2) ಹುಬ್ಬಳ್ಳಿ ಟೈಗರ್ಸ್: 16.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 139 (ಲವನೀತ್ ಸಿಸೊಡಿಯಾ 69, ಮೊಹಮ್ಮದ್ ತಾಹ 37, ನಾಗ ಭರತ್ ಔಟಾಗದೆ 23, ಪ್ರಣವ್ ಭಾಟಿಯಾ 27ಕ್ಕೆ1, ಶ್ರೇಯಸ್ ಗೋಪಾಲ್ 41ಕ್ಕೆ1) ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ 8 ವಿಕೆಟ್‌ಗಳ ಜಯ.

ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 185 (ಸಿ.ಎ. ಕಾರ್ತಿಕ್ 62, ತುಷಾರ್ ಸಿಂಗ್ 19, ಮನೋಜ್ ಬಾಂಢಗೆ 28, ಜೆ. ಸುಚಿತ್ ಔಟಾಗದೆ 31, ಶುಭಾಂಗ್ ಹೆಗಡೆ 23ಕ್ಕೆ4, ರಿಷಿ ಬೋಪಣ್ಣ 19ಕ್ಕೆ2) ಬೆಂಗಳೂರು ಬ್ಲಾಸ್ಟರ್ಸ್: 11.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 81 (ಜೆಸ್ವಂತ್ ಆಚಾರ್ಯ ಔಟಾಗದೆ 19, ಸೂರಜ್ ಅಹುಜಾ 31, ಸಿ.ಎ. ಕಾರ್ತಿಕ್ 16ಕ್ಕೆ2, ಜೆ. ಸುಚಿತ್ 8ಕ್ಕೆ2) ಫಲಿತಾಂಶ: ಮೈಸೂರು ವಾರಿಯರ್ಸ್‌ಗೆ 33 ರನ್ ಜಯ (ವಿಜೆಡಿ ಪದ್ಧತಿಯನ್ವಯ)

ಇಂದಿನ ಪಂದ್ಯಗಳು
ಮೈಸೂರು ವಾರಿಯರ್ಸ್–ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 1ರಿಂದ)
ಗುಲ್ಬರ್ಗ ಮಿಸ್ಟಿಕ್ಸ್–ಮಂಗಳೂರು ಡ್ರ್ಯಾಗನ್ಸ್ (ಸಂಜೆ 5.30)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್

ಫುಟ್‌ಬಾಲ್: ಸ್ವೀಡನ್‌ಗೆ 3ನೇ ಸ್ಥಾನ

ಬ್ರಿಸ್ಬೇನ್, ಆಸ್ಟ್ರೇಲಿಯಾ (ಎಎಫ್‌ಪಿ): ಆತಿಥೇಯ ಆಸ್ಟ್ರೇಲಿಯಾ ತಂಡವನ್ನು 2–0 ಗೋಲುಗಳಿಂದ ಮಣಿಸಿದ ಸ್ವೀಡನ್, ಫಿಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮೂರನೇ ಸ್ಥಾನ ತನ್ನದಾಗಿಸಿಕೊಂಡಿತು.

ಬ್ರಿಸ್ಬೇನ್ ಕ್ರೀಡಾಂಗಣದಲ್ಲಿ ಶನಿವಾರ ಸುಮಾರು 50 ಸಾವಿರ ಪ್ರೇಕ್ಷಕರ ಮುಂದೆ ನಡೆದ ಪಂದ್ಯದಲ್ಲಿ ಫ್ರಿಡೊಲಿನಾ ರಾಲ್ಫೊ (30ನೇ ನಿ.) ಮತ್ತು ಕೊಸೊವಾರೆ ಅಸ್ಲಾನಿ (62ನೇ ನಿ.) ಅವರು ಸ್ವೀಡನ್ ಪರ ಗೋಲು ಗಳಿಸಿದರು. ತವರು ನೆಲದಲ್ಲಿ ನಡೆದ ಟೂರ್ನಿಯಲ್ಲಿ ಕಂಚು ಗೆದ್ದು ಸ್ಮರಣೀಯ ಸಾಧನೆ ಮಾಡಬೇಕೆಂಬ ಆಸ್ಟ್ರೇಲಿಯಾದ ಕನಸು ಕೈಗೂಡಲಿಲ್ಲ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಸ್ವೀಡನ್ ತಂಡಕ್ಕೆ ವಿಶ್ವಕಪ್ ಟೂರ್ನಿಗಳಲ್ಲಿ ಒಟ್ಟಾರೆಯಾಗಿ ಲಭಿಸಿದ ನಾಲ್ಕನೇ ಕಂಚು ಇದು. ಈ ಹಿಂದೆ 1991, 2011 ಮತ್ತು 2019 ರಲ್ಲಿ ಮೂರನೇ ಸ್ಥಾನ ಗಳಿಸಿತ್ತು.

ಪ್ರಶಸ್ತಿಗೆ ಸ್ಪೇನ್– ಇಂಗ್ಲೆಂಡ್ ಸೆಣಸು: ಸಿಡ್ನಿಯಲ್ಲಿ ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಸ್ಪೇನ್ ಮತ್ತು ಇಂಗ್ಲೆಂಡ್ ತಂಡಗಳು ಸೆಣಸಾಟ ನಡೆಸಲಿದ್ದು, ಪ್ರಬಲ ಪೈಪೋಟಿ ನಿರೀಕ್ಷಿಸಲಾಗಿದೆ. ಈ ಪಂದ್ಯ ವೀಕ್ಷಿಸಲು ಸಿಡ್ನಿಯ 'ಸ್ಟೇಡಿಯಂ ಆಸ್ಟ್ರೇಲಿಯಾ'ದಲ್ಲಿ ಸುಮಾರು 75 ಸಾವಿರ ಪ್ರೇಕ್ಷಕರು ಸೇರಲಿದ್ದಾರೆ.

ಉಭಯ ತಂಡಗಳಿಗೂ ಇದು ಚೊಚ್ಚಲ ಫೈನಲ್ ಆಗಿದೆ. ಆದ್ದರಿಂದ ಭಾನುವಾರ ಯಾರೇ ಗೆದ್ದರೂ ಮಹಿಳಾ ಫುಟ್‌ಬಾಲ್‌ನ ಹೊಸ ಚಾಂಪಿಯನ್ ಎನಿಸಲಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಆರ್ಚರಿ: ಭಾರತಕ್ಕೆ ಎರಡು ಚಿನ್ನ

ಪ್ಯಾರಿಸ್ (ಪಿಟಿಐ): ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಆರ್ಚರಿ ಸ್ಟೇಜ್–4ರ ಕಾಂಪೌಂಡ್ ವಿಭಾಗದಲ್ಲಿ ಚಿನ್ನ ಗೆದ್ದುಕೊಂಡವು.

ಶನಿವಾರ ನಡೆದ ಪುರುಷರ ವಿಭಾಗದ ಫೈನಲ್‌ನಲ್ಲಿ ಅಭಿಷೇಕ್ ವರ್ಮಾ, ಓಜಸ್ ದೇವತಾಳೆ ಮತ್ತು ಪ್ರಥಮೇಶ್ ಜಾವಕರ್ ಅವರನ್ನೊಳಗೊಂಡ ಭಾರತ, 236– 232 ರಿಂದ ಅಮೆರಿಕ ತಂಡವನ್ನು ಮಣಿಸಿತು.

ನಾಲ್ಕನೇ ಶ್ರೇಯಾಂಕ ಹೊಂದಿದ್ದ ಭಾರತದ ಸ್ಪರ್ಧಿಗಳು ನಿಖರ ಪ್ರದರ್ಶನ ನೀಡುವಲ್ಲಿ ಯಶಸ್ವಿಯಾದರು. ಎರಡನೇ ಶ್ರೇಯಾಂಕದ ಅಮೆರಿಕ ತಂಡವನ್ನು ಕ್ರಿಸ್ ಶಾಫ್, ಜೇಮ್ಸ್ ಲುಟ್ಜ್ ಮತ್ತು ಸಾಯೆರ್ ಸುಲಿವನ್ ಅವರು ಪ್ರತಿನಿಧಿಸಿದ್ದರು.

ಜ್ಯೋತಿ ಸುರೇಖಾ ವೆನ್ನಂ, ಅದಿತಿ ಸ್ವಾಮಿ ಮತ್ತು ಪ್ರಣೀತ್ ಕೌರ್ ಅವರನ್ನೊಳಗೊಂಡ ಭಾರತ ಮಹಿಳಾ ತಂಡ, ಫೈನಲ್‌ನಲ್ಲಿ 234–233 ರಿಂದ ಮೆಕ್ಸಿಕೊ ವಿರುದ್ಧ ಗೆದ್ದಿತು.

ಭಾರತದ ಪುರುಷ ಮತ್ತು ಮಹಿಳೆಯರ ರಿಕರ್ವ್ ತಂಡಗಳು ಕಂಚಿನ ಪದಕ ಗೆದ್ದುಕೊಂಡವು.

ವಿಶ್ವಕಪ್: ಮ್ಯಾಸ್ಕಟ್‌ಗಳಿಗೆ ಹೆಸರಿಡಲು ಅವಕಾಶ

ಬೆಂಗಳೂರು: ಇದೇ ಅಕ್ಟೋಬರ್‌ನಲ್ಲಿ ಭಾರತದ ಆತಿಥ್ಯದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಮ್ಯಾಸ್ಕಟ್‌ಗಳನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಶನಿವಾರ ಬಿಡುಗಡೆ ಮಾಡಿದೆ. ಆದರೆ ಅವುಗಳಿಗೆ ಹೆಸರು ಇಟ್ಟಿಲ್ಲ!

ಈ ಬಾರಿಯ ಮ್ಯಾಸ್ಕಟ್‌ಗಳಿಗೆ ಹೆಸರಿಡುವ ಅವಕಾಶವನ್ನು ಕ್ರಿಕೆಟ್ ಅಭಿಮಾನಿಗಳಿಗೆ ನೀಡಲಾಗಿದೆ. ಗುರುಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮ್ಯಾಸ್ಕಟ್‌ಗಳನ್ನು 19 ವರ್ಷದೊಳಗಿನವರ ವಿಶ್ವಕಪ್ ವಿಜೇತ ಮಹಿಳಾ ತಂಡದ ನಾಯಕಿ ಶಫಾಲಿ ವರ್ಮಾ ಮತ್ತು ಪುರುಷರ ತಂಡದ ನಾಯಕ ಯಶ್ ಧುಳ್ ಅವರು ಅನಾವರಣಗೊಳಿಸಿದರು.

'ಮ್ಯಾಸ್ಕಟ್‌ಗಳನ್ನು ಅನಾವರಣ ಮಾಡಿರುವುದು ಅಪಾರ ಸಂತಸ ತಂದಿದೆ. ಎರಡೂ ಮ್ಯಾಸ್ಕಟ್‌ಗಳು ಲಿಂಗ ಸಮಾನತೆಯನ್ನು ಸಾರುತ್ತವೆ. ಇವತ್ತಿನ ನವಯುಗದಲ್ಲಿ ಪುರುಷ ಮತ್ತು ಮಹಿಳೆಯರು ಸಮಾನ ಸಮರ್ಥರು. ಅವರಿಬ್ಬರ ಕಾಣಿಕೆಯೂ ಜಾಗತಿಕ ಮಟ್ಟದ ಬೆಳವಣಿಗೆಗೆ ಮುಖ್ಯ'

ಮ್ಯಾಸ್ಕಟ್‌ಗಳ ವಿಡಿಯೊ ಕೂಡ ಇದೇ ಸಂದರ್ಭದಲ್ಲಿ ಬಿಡುಗಡೆ ಆಗಿದೆ. ಐಸಿಸಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರದರ್ಶಿತಗೊಂಡಿದೆ. ಆಗಸ್ಟ್ 27ರೊಳಗೆ ವೆಬ್‌ಸೈಟ್ https://www.cricketworldcup.com/mascots ಮೂಲಕ ಹೆಸರು ಸೂಚಿಸಬಹುದು ಎಂದು ಐಸಿಸಿ ಪ್ರಕಟಿಸಿದೆ.